ಪ್ರಜಾವಾಣಿ

ರಾಹುಲ್-ಕೊಹ್ಲಿ ಜೊತೆಯಾಟಕ್ಕೆ ಒಲಿದ ಜಯ

ಚೆನ್ನೈ: ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಅವರ ಶತಕದ ಜೊತೆಯಾಟದ ಬಲದಿಂದ ಭಾರತ ತಂಡವು ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಆಸ್ಟ್ರೇಲಿಯಾ ಎದುರು ಜಯಿಸಿತು.

165 ರನ್
ನಾಲ್ಕನೇ ವಿಕೆಟ್ ಜೊತೆಯಾಟ

ಸ್ಕೋರ್

ಆಸ್ಟ್ರೇಲಿಯಾ
199 (49.3 ಓವರ್‌ಗಳಲ್ಲಿ)
ರವೀಂದ್ರ ಜಡೇಜ **10-2-28-3**

ಭಾರತ
4ಕ್ಕೆ 201 (41.2 ಓವರ್‌ಗಳಲ್ಲಿ)

- ವಿರಾಟ್ ಕೊಹ್ಲಿ **85** (116ಎ, 4X6)
- ಕೆ.ಎಲ್. ರಾಹುಲ್ ಅಜೇಯ **97** (115ಎ, 4X8, 6X2)

ಬರ: ಬೆಂಗಳೂರಿಗೆ ಮರಳಿದ ಕೇಂದ್ರದ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಬರ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಲು 13 ಜಿಲ್ಲೆಗಳಲ್ಲಿ ಪ್ರವಾಸ ಪೂರ್ಣಗೊಳಿಸಿ-ರುವ ಕೇಂದ್ರ ಸರ್ಕಾರದ ಅಧಿಕಾರಿಗಳ ಮೂರು ತಂಡಗಳು ಭಾನುವಾರ ರಾತ್ರಿ ಬೆಂಗಳೂರಿಗೆ ವಾಪಸಾಗಿವೆ.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು, ಕೇಂದ್ರ ಕುಡಿಯುವ ನೀರು ಹಾಗೂ ಸ್ವಚ್ಛತಾ ಸಚಿವಾಲಯದ ಹೆಚ್ಚುವರಿ ಸಲಹೆಗಾರ ಡಿ. ರಾಜಶೇಖರ್ ಮತ್ತು ಕೇಂದ್ರ ಜಲ ಆಯೋಗದ ನಿರ್ದೇಶಕ ಅಶೋಕ್ ಕುಮಾರ್ ವಿ. ನೇತೃತ್ವದ ತಂಡಗಳು ಗುರುವಾರದಿಂದ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿದ್ದವು.

ರಾಜ್ಯದಲ್ಲಿ 195 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಈ ಪೈಕಿ ಹಲವು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿರುವ ಕೇಂದ್ರ ತಂಡಗಳು, ಮಳೆ ಕೊರತೆ, ಬೆಳೆಹಾನಿ ಕುರಿತು ಪರಿಶೀಲನೆ ನಡೆಸಿವೆ.

ಇಂದು ಸಭೆ: ಕೇಂದ್ರದ ಅಧಿಕಾರಿಗಳ ತಂಡಗಳು ಬರ ನಿರ್ವಹಣೆ ಕುರಿತ ಸಂಪುಟ ಉಪ ಸಮಿತಿ ಸದಸ್ಯರ ಜತೆ ಸೋಮವಾರ ಚರ್ಚಿಸಲಿವೆ. ಅಧ್ಯಯನದ ವೇಳೆ ತಮ್ಮ ಗಮನಕ್ಕೆ ಬಂದ ವಿಷಯಗಳನ್ನು ಅಧಿಕಾರಿಗಳು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯ ಸಂಪುಟ ಉಪ ಸಮಿತಿ ಜತೆಗೆ ವಿನಿಮಯ ಮಾಡಿಕೊಳ್ಳಲಿದ್ದಾರೆ.

ರಾಗಿಗುಡ್ಡ ಗಲಭೆ ಎಸ್‌ಐ ಸೇರಿ ನಾಲ್ವರ ಅಮಾನತು

ಶಿವಮೊಗ್ಗ: ಇಲ್ಲಿನ ರಾಗಿಗುಡ್ಡ ಪ್ರದೇಶದಲ್ಲಿ ಅ.1ರಂದು ಈದ್ ಮಿಲಾದ್ ಮೆರವಣಿಗೆ ವೇಳೆ ನಡೆದಿದ್ದ ಕೋಮು ಗಲಭೆಗೆ ಸಂಬಂಧಿಸಿ ಕರ್ತವ್ಯಲೋಪ ಆರೋಪದಡಿ ಒಬ್ಬರು ಇನ್‌ಸ್ಪೆಕ್ಟರ್ ಸೇರಿ ನಾಲ್ವರು ಪೊಲೀಸರನ್ನು ಭಾನುವಾರ ಅಮಾನತುಗೊಳಿಸಲಾಗಿದೆ.

ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಅಭಯ ಪ್ರಕಾಶ ಸೋಮನಾಳ, ಕಾನ್‌ಸ್ಟೆಬಲ್‌ಗಳಾದ ಕಾಶಿನಾಥ್, ರಂಗನಾಥ್ ಹಾಗೂ ಶಿವರಾಜ್ ಅವರನ್ನು ಪೂರ್ವ ವಲಯ ಐಜಿಪಿ ತ್ಯಾಗರಾಜನ್ ಅಮಾನತು ಮಾಡಿದ್ದಾರೆ. ಮೆರವಣಿಗೆಗೂ ಮುನ್ನ ಫ್ಲೆಕ್ಸ್ ವಿಚಾರದಲ್ಲಿ ಗಲಾಟೆ ನಡೆದಿತ್ತು. ಆಗ ಪೊಲೀಸ್ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದ್ದ ಆರೋಪ ಕೇಳಿಬಂದಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ಸಲ್ಲಿಸಿದ್ದ ವರದಿ ಆಧರಿಸಿ ಐಜಿಪಿ ಅಮಾನತುಗೊಳಿಸಿದ್ದಾರೆ.

ಇಂದು ಎರಡು ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಒಳನಾಡಿನ ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಯ ಒಂದೆರಡು ಕಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಎರಡೂ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಕರಾವಳಿಯ ಕೆಲವು ಸ್ಥಳಗಳು, ದಕ್ಷಿಣ ಒಳನಾಡಿನ ಕೆಲವೆಡೆ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಸಾಧಾರಣ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ವಿಜಯಪುರ, ಗದಗ, ರಾಯಚೂರು ಜಿಲ್ಲೆಯ ಒಂದೆರಡು ಕಡೆ ಗರಿಷ್ಠ ತಾಪಮಾನ ಸಾಮಾನ್ಯಕ್ಕಿಂತ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಂಭವವಿದೆ. ದಕ್ಷಿಣ ಒಳನಾಡಿನ ಮಂಡ್ಯ, ಮೈಸೂರು, ಶಿವಮೊಗ್ಗ, ಚಿತ್ರದುರ್ಗ ಹಾಗೂ ಕರಾವಳಿಯ ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಕಡೆ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು ನಗರದಲ್ಲಿ ಸ್ಥಿರಾಸ್ತಿ ದರ ಗಗನಮುಖಿ

ಬೆಂ.ಗ್ರಾಮಾಂತರ: ಆಸ್ತಿ ಖರೀದಿ ಹೆಚ್ಚಳ

• ಸ್ನೇಹಾ ರಮೇಶ್

ಬೆಂಗಳೂರು: ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳ ದರ ಗಗನಮುಖಿಯಾಗುತ್ತಿರುವುದರಿಂದ ಆಸ್ತಿ ಖರೀದಿದಾರರು ಬೆಂಗಳೂರು ಗ್ರಾಮಾಂತರದತ್ತ ಹೆಚ್ಚಿನ ಒಲವು ತೋರುತ್ತಿದ್ದಾರೆ. ನಗರಕ್ಕೆ ಹೋಲಿಸಿದರೆ ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ದರ ತುಸು ಕಡಿಮೆ ಇರುವುದರಿಂದ ಅಲ್ಲಿ ಕೆಲವು ವರ್ಷಗಳಿಂದ ಈಚೆಗೆ ಸ್ಥಿರಾಸ್ತಿಗಳ ನೋಂದಣಿ ಹೆಚ್ಚುತ್ತಿದೆ.

ಪ್ರಜಾವಾಣಿ ವಿಶೇಷ

'ಪ್ರಜಾವಾಣಿ'ಗೆ ಲಭ್ಯವಾಗಿರುವ ಅಂಕಿಅಂಶಗಳ ಪ್ರಕಾರ, 2019–20ರಿಂದ 2022–23ರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸ್ಥಿರಾಸ್ತಿಗಳ ಖರೀದಿ- ಮಾರಾಟಕ್ಕೆ ಸಂಬಂಧಿಸಿದ ದಸ್ತಾವೇಜುಗಳ ನೋಂದಣಿಯಲ್ಲಿ ಶೇಕಡ 128 ರಷ್ಟು ಏರಿಕೆಯಾಗಿದೆ. 2019–20ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ₹ 439.15 ಕೋಟಿ ನೋಂದಣಿ ಮತ್ತು ಮುದ್ರಾಂಕ ತೆರಿಗೆ ಸಂಗ್ರಹವಾಗಿತ್ತು. 2023–24ರ ಮೊದಲ ಆರು ತಿಂಗಳಲ್ಲೇ ₹ 385.13 ಕೋಟಿ ತೆರಿಗೆ ಸಂಗ್ರಹವಾಗಿದೆ.

'ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾರಣದಿಂದ ಹೆಚ್ಚು ಅಭಿವೃದ್ಧಿಯಾಗಿದೆ. ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ ಹಾದುಹೋಗುತ್ತಿರುವುದರಿಂದ ಹೊಸಕೋಟೆಯಲ್ಲೂ ಆಸ್ತಿ ಖರೀದಿಗೆ ಬೇಡಿಕೆ ಹೆಚ್ಚಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ಖರೀದಿಗೆ ಭಾರಿ ಬೇಡಿಕೆ ವ್ಯಕ್ತವಾಗುತ್ತಿದೆ' ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರತಿಷ್ಠಿತ ರಿಯಲ್ ಎಸ್ಟೇಟ್ ಕಂಪನಿಗಳು ಈ ಪ್ರದೇಶದಲ್ಲಿ ಬೃಹತ್ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿವೆ. ಬೃಹತ್ ಅಪಾರ್ಟ್‌ಮೆಂಟ್‌ಗಳು, 'ಗೇಟೆಡ್' ವಸತಿ ಪ್ರದೇಶಗಳು ಮತ್ತು ಉಪನಗರಗಳನ್ನು ನಿರ್ಮಿಸುತ್ತಿವೆ. ಕೈಗೆಟುಕುವ ದರ ಮತ್ತು ವೃತ್ತಿಯಲ್ಲಿ ಆಗಿರುವ ಬದಲಾವಣೆಗಳೂ ಬೆಂಗಳೂರು ಗ್ರಾಮಾಂತರದಲ್ಲಿ ಆಸ್ತಿ ಖರೀದಿಗೆ ಒಲವು ಹೆಚ್ಚಲು ಕಾರಣ ಎನ್ನುತ್ತಾರೆ ಖರೀದಿದಾರರು.

'ನಗರದಲ್ಲಿ ಉತ್ತಮವಾದ ಸ್ಥಿರಾಸ್ತಿ ಖರೀದಿಸುವುದು ದುಬಾರಿ ಆಗುತ್ತಿದೆ. ಅದೇ ದರಕ್ಕೆ ಬೆಂಗಳೂರು ಗ್ರಾಮಾಂತರದ ವ್ಯಾಪ್ತಿಯಲ್ಲಿ ಉತ್ತಮವಾದ ಆಸ್ತಿ ಖರೀದಿಸಲು ಅವಕಾಶಗಳಿವೆ. ಈ ಪ್ರದೇಶಗಳು ವೇಗವಾಗಿ ಅಭಿವೃದ್ಧಿ ಹೊಂದುತ್ತಿವೆ. ನಾನು ಮತ್ತು ಪತ್ನಿ ಇಬ್ಬರೂ ಹೆಚ್ಚಿನ ದಿನಗಳಲ್ಲಿ ಮನೆಯಿಂದಲೇ ಕೆಲಸ ಮಾಡುತ್ತೇವೆ (ವರ್ಕ್ ಫ್ರಮ್ ಹೋಂ). ಈ ಕಾರಣದಿಂದ ಈ ಪ್ರದೇಶದಲ್ಲೇ ಆಸ್ತಿ ಖರೀದಿಸುವುದು ಉತ್ತಮ ಎಂಬ ನಿರ್ಧಾರಕ್ಕೆ ಬಂದೆವು' ಎನ್ನುತ್ತಾರೆ ದೇವನಹಳ್ಳಿಯಲ್ಲಿ ಫ್ಲ್ಯಾಟ್ ಖರೀದಿಸಿರುವ ಸುಮಂತ್.

ಈ ತಾಲ್ಲೂಕುಗಳಲ್ಲಿ ಸ್ಥಿರಾಸ್ತಿಗಳ ದರವೂ ನಿರಂತರವಾಗಿ ಏರುಗತಿಯಲ್ಲಿದೆ. ದೇವನಹಳ್ಳಿ ತಾಲ್ಲೂಕಿನ ಹಲವೆಡೆ ಎರಡರಿಂದ ಮೂರು ವರ್ಷಗಳ ಅವಧಿಯಲ್ಲೇ ಆಸ್ತಿಗಳ ದರವು ದುಪ್ಪಟ್ಟಾಗಿರುವ ಉದಾಹರಣೆಗಳೂ ಇವೆ ಎನ್ನುತ್ತವೆ ಮೂಲಗಳು.

'ನಾಲ್ಕು ವರ್ಷಗಳಿಂದಲೂ ಬೆಂಗಳೂರು ಗ್ರಾಮಾಂತರದ ವ್ಯಾಪ್ತಿಯಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ವೇಗ ಪಡೆದಿವೆ. ಕೋವಿಡ್ ಅವಧಿಯಲ್ಲೇ ಈ ಭಾಗದಲ್ಲಿ ಸ್ಥಿರಾಸ್ತಿಗಳ ಖರೀದಿಯಲ್ಲಿ ಭಾರಿ ಏರಿಕೆ ಕಂಡುಬಂದಿತ್ತು. ಆ ಬಳಿಕ ಸ್ಥಿರಾಸ್ತಿಗಳ ದರವೂ ಏರುಗತಿಯಲ್ಲಿದೆ. ಕೆಲವು ಪ್ರಮುಖ ಪ್ರದೇಶಗಳಲ್ಲಿ ಪ್ರತಿ ಚದರ ಅಡಿಗೆ ₹ 4,000 ದರ ಇತ್ತು. ಈಗ ಅದು ₹ 7,500ಕ್ಕೆ ಏರಿಕೆಯಾಗಿದೆ' ಎಂದು ಹೊಸಕೋಟೆಯ ನ್ಯೂಪೋರ್ಟ್ ರಿಯಲ್ ಎಸ್ಟೇಟ್‌ನ ಮಾಲೀಕ ಮೊಹಮ್ಮದ್ ಶಫತ್ ತಿಳಿಸಿದರು.

ಪಂಚಾಯಿತಿಗಳ ಮೇಲೆ ಹೆಚ್ಚಿದ ಒತ್ತಡ

ಸ್ಥಿರಾಸ್ತಿಗಳ ಖರೀದಿ ಹೆಚ್ಚಿದ ಬೆನ್ನಲ್ಲೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಘನತ್ಯಾಜ್ಯ ವಿಲೇವಾರಿ, ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ಹಲವು ಸವಾಲುಗಳು ಎದುರಾಗಿವೆ.

'ಹೊಸಕೋಟೆ, ದೇವನಹಳ್ಳಿ ಸೇರಿದಂತೆ ವೇಗವಾಗಿ ನಗರೀಕರಣ ನಡೆಯುತ್ತಿರುವ ಪ್ರದೇಶಗಳಲ್ಲಿ ಗ್ರಾಮೀಣ ಸ್ಥಳೀಯ ಆಡಳಿತಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಕೆಲವೆಡೆ ಘನತ್ಯಾಜ್ಯ ವಿಲೇವಾರಿ ಸರಿಯಾಗಿ ಮಾಡುತ್ತಿಲ್ಲ. ರಸ್ತೆಗಳ ಬದಿಗಳಲ್ಲಿ ಘನತ್ಯಾಜ್ಯದ ರಾಶಿಗಳು ಕಂಡುಬರುತ್ತಿವೆ' ಎನ್ನುತ್ತಾರೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಅನುರಾಧಾ ಕೆ.ಎನ್.

ಕೆಲವು ಗ್ರಾಮ ಪಂಚಾಯಿತಿಗಳು ಘನತ್ಯಾಜ್ಯ ಸಂಗ್ರಹ ಮತ್ತು ವಿಂಗಡಣೆಗೆ ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ನೆರವು ಪಡೆಯುತ್ತಿವೆ. ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಕೆಲವು ಪಂಚಾಯಿತಿಗಳು ಯೋಜನೆ ರೂಪಿಸುತ್ತಿವೆ.

ನೃತ್ಯದ 'ಹಬ್ಬ'

ಮೈಸೂರು ದಸರಾ ಅಂಗವಾಗಿ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಭಾನುವಾರ ನಡೆದ 'ಯುವ ಸಂಭ್ರಮ' ಕಾರ್ಯಕ್ರಮದಲ್ಲಿ ಮಂಡ್ಯದ ರೋಟರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ನೃತ್ಯ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಮನು ಬಳಿಗಾರಗೆ 'ಶ್ರೀಚೆನ್ನರೇಣುಕ ಬಸವ' ಪ್ರಶಸ್ತಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ ಅವರಿಗೆ ತಾಲ್ಲೂಕಿನ ಹಾರಕೂಡ ಹಿರೇಮಠ ಸಂಸ್ಥಾನದ ಪ್ರಸಕ್ತ ಸಾಲಿನ 'ಶ್ರೀಚೆನ್ನರೇಣುಕಬಸವ ಪ್ರಶಸ್ತಿ' ಘೋಷಿಸಲಾಗಿದೆ.

ಪ್ರಶಸ್ತಿ ₹1 ಲಕ್ಷ ನಗದು, 20 ಗ್ರಾಂ ಚಿನ್ನದ ಪದಕ ಒಳಗೊಂಡಿದೆ. ಗದಗ ಜಿಲ್ಲೆಯವರಾದ ಮನು ಬಳಿಗಾರ ವಿವಿಧ ಪ್ರಕಾರದ ಸಾಹಿತ್ಯ ರಚಿಸಿದ್ದಾರೆ.

'ಅ.23ರಂದು ಮಠದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಪೀಠಾಧಿಪತಿ ಚನ್ನವೀರ ಶಿವಾಚಾರ್ಯರು ತಿಳಿಸಿದ್ದಾರೆ. 11 ವರ್ಷಗಳಿಂದ ಸಂಸ್ಥಾನವು ವಿವಿಧ ಕ್ಷೇತ್ರದ ಸಾಧಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.

ಛಾಯಾಗ್ರಹಣ ಸ್ಪರ್ಧೆ: ಪ್ರಕಾಶ ಕಂದಕೂರಗೆ ಪ್ರಶಸ್ತಿ

ಕೊಪ್ಪಳ: ಕೋಲ್ಕತ್ತದ 'ಸಿಟಿ ಆಫ್ ಜಾಯ್' 2ನೇ ಅಂತರರಾಷ್ಟ್ರೀಯ ಛಾಯಾಗ್ರಹಣ ಸ್ಪರ್ಧೆಯಲ್ಲಿ ಇಲ್ಲಿನ ಛಾಯಾಗ್ರಾಹಕ ಪ್ರಕಾಶ ಕಂದಕೂರ ಸೆರೆಹಿಡಿದಿದ್ದ ಗವಿಸಿದ್ಧೇಶ್ವರರ ಜಾತ್ರೆ ರಥೋತ್ಸವದ ಚಿತ್ರ 'ಫೋಟೊ ಟ್ರಾವೆಲ್' ವಿಭಾಗದಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದೆ.

ಇದೇ ಸ್ಪರ್ಧೆಯ ಮೊನೊಕ್ರೋಮ್ (ಕಪ್ಪು–ಬಿಳುಪು) ವಿಭಾಗದಲ್ಲಿ ಅವರ 'ಫ್ರೆಂಡ್‌ಷಿಪ್ ಶೀರ್ಷಿಕೆಯ ಮತ್ತೊಂದು ಚಿತ್ರಕ್ಕೂ 'ಸಿಟಿ ಆಫ್ ಜಾಯ್' ಕಂಚಿನ ಪದಕ ಲಭಿಸಿದೆ. ಫೊಟೋಗ್ರಫಿಕ್ ಸೊಸೈಟಿ ಆಫ್ ಅಮೆರಿಕ, ಗ್ಲೋಬಲ್ ಫೊಟೋಗ್ರಫಿಕ್ ಯೂನಿಯನ್, ಇಂಡಿಯಾ ಇಂಟರ್‌ನ್ಯಾಷನಲ್ ಗ್ರೂಪ್ ಮತ್ತು ಬೆಂಗಾಲ್ ಫೊಟೋಗ್ರಫಿ ಇನ್‌ಸ್ಟಿಟ್ಯೂಟ್ ಸಂಸ್ಥೆಗಳು ಸ್ಪರ್ಧೆ ಆಯೋಜಿಸಿದ್ದವು. 30 ದೇಶಗಳ 126 ಛಾಯಾಗ್ರಾಹಕರು ಭಾಗವಹಿಸಿದ್ದರು.

ಅಂತರರಾಷ್ಟ್ರೀಯ ಛಾಯಾಗ್ರಾಹಕರಾದ ಎಸ್.ಪಿ.ಮುಖರ್ಜಿ, ಅಭಿಜಿತ್, ಸುದೀಪ್ ರಾಯ್ ಚೌಧರಿ ತೀರ್ಪುಗಾರರಾಗಿದ್ದರು. ನ. 15ರ ಬಳಿಕ ಆನ್‌ಲೈನ್ ಗ್ಯಾಲರಿಯಲ್ಲಿ ಪ್ರಶಸ್ತಿ ವಿಜೇತ ಚಿತ್ರಗಳ ಪ್ರದರ್ಶನ ನಡೆಯಲಿದೆ.

ಶಿಕ್ಷಣ ಸಲಹಾ ಮಂಡಳಿಗೆ ಹೊಸರೂಪ: ಪ್ರಧಾನ್

ನವದೆಹಲಿ (ಪಿಟಿಐ): 'ಶಿಕ್ಷಣದ ನೀತಿ ನಿರ್ಧಾರಗಳ ಕುರಿತು ಸರ್ಕಾರಕ್ಕೆ ಸಲಹೆ ನೀಡುವ ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯನ್ನು (ಸಿಎಬಿಇ) ಪುನರ್ ರಚಿಸಲಾಗುವುದು' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಮೂರು ವರ್ಷಗಳಿಂದ ಸಿಎಬಿಇ ಸಭೆ ನಡೆಸದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಿಎಬಿಇ ಹಳೆಯದಾಗಿದ್ದು, ತುಂಬಾ ವಿಶಾಲ ಚೌಕಟ್ಟು ಹೊಂದಿದೆ. ಆದರೆ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಬೇಡಿಕೆಗಳು ತೀರಾ ಭಿನ್ನವಾಗಿವೆ. ಇಂದಿನ ದಿನಗಳಲ್ಲಿ ಉದ್ಯಮ ಸಂಪರ್ಕದ ಬಗೆಗಿನ ಮಾತುಗಳು ಕೇಳಿಬರುತ್ತಿವೆ. ಇವೆಲ್ಲವನ್ನೂ ಪರಿಗಣಿಸಿ, ಸಿಎಬಿಇಯನ್ನು ಪುನರ್ ರಚಿಸಲಾಗುವುದು' ಎಂದು ತಿಳಿಸಿದ್ದಾರೆ.

'ಕರ್ನಾಟಕ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳು ಕೇವಲ ರಾಜಕೀಯ ಕಾರಣಕ್ಕಾಗಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸುತ್ತಿಲ್ಲ' ಎಂದು ಅವರು ಟೀಕಿಸಿದ್ದಾರೆ.

ರಾಜಸ್ಥಾನದ ಕೋಟಾದಲ್ಲಿ ಸಂಭವಿಸಿದ ವಿದ್ಯಾರ್ಥಿಗಳ ಆತ್ಮಹತ್ಯೆ ಕುರಿತು ಪ್ರತಿಕ್ರಿಯಿಸಿದ ಪ್ರಧಾನ್ ಅವರು, 'ಇದು ತುಂಬಾ ಸೂಕ್ಷ್ಮ ವಿಷಯ. ಯಾವುದೇ ವಿದ್ಯಾರ್ಥಿ ಪ್ರಾಣ ಕಳೆದುಕೊಳ್ಳಬಾರದು. ವಿದ್ಯಾರ್ಥಿಗಳನ್ನು ಒತ್ತಡದಿಂದ ಮುಕ್ತವಾಗುವಂತೆ ಮಾಡಬೇಕಾದದ್ದು ನಮ್ಮೆಲ್ಲರ ಸಾಮೂಹಿಕ ಜವಾಬ್ದಾರಿ' ಎಂದು ಹೇಳಿದ್ದಾರೆ.

ಡಮ್ಮಿ ಕಾಲೇಜು ವಿಷಯ ಗಂಭೀರ: 'ಡಮ್ಮಿ ಕಾಲೇಜುಗಳ ಸಮಸ್ಯೆಯನ್ನು ಕಡೆಗಣಿಸಲಾಗುವುದಿಲ್ಲ. ಆ ಕುರಿತು ಗಂಭೀರವಾಗಿ ಚರ್ಚಿಸಬೇಕಾಗಿದೆ' ಎಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನೀಟ್ ಮತ್ತು ಜೆಇಇ ಆಕಾಂಕ್ಷಿಗಳು ತಮ್ಮ ತವರು ರಾಜ್ಯಗಳಲ್ಲಿನ ಕಾಲೇಜುಗಳಲ್ಲಿ ಪ್ರವೇಶ ಪಡೆದು ಕೋಚಿಂಗ್ ತರಗತಿಗಳಿಗೆ ಕೋಟಾಕ್ಕೆ ತೆರಳುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ವೈಯಕ್ತಿಕ ಬೆಳವಣಿಗೆಗಳ ಮೇಲೆ ಪರಿಣಾಮ ಬೀರುತ್ತಿದೆ ಮತ್ತು ಒತ್ತಡಕ್ಕೆ ಸಿಲುಕುತ್ತಿದ್ದಾರೆ ಎಂದು ಹಲವು ತಜ್ಞರು ಅಭಿಪ್ರಾಯಪಟ್ಟಿದ್ದರು.

'ವಿದೇಶಗಳಲ್ಲಿ ಐಐಟಿ ಕ್ಯಾಂಪಸ್'

'ದೆಹಲಿ ಮತ್ತು ಮದ್ರಾಸ್ ಐಐಟಿ ಕ್ಯಾಂಪಸ್‌ಗಳನ್ನು ವಿದೇಶಗಳಲ್ಲಿ ಸ್ಥಾಪಿಸುವ ಪ್ರಯತ್ನ ಪ್ರಗತಿಯಲ್ಲಿದೆ. ಈ ಕುರಿತು ಆಸಕ್ತಿವಹಿಸಿರುವ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಯುತ್ತಿದೆ' ಎಂದು ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

'ಈ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಖುದ್ದಾಗಿ ಮುತುವರ್ಜಿ ವಹಿಸಿದ್ದಾರೆ' ಎಂದಿದ್ದಾರೆ.

ವಿದೇಶಿ ವಿಶ್ವವಿದ್ಯಾಲಯಗಳಿಗೆ ಮಾರ್ಗಸೂಚಿ: 'ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಕ್ಯಾಂಪಸ್‌ಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಚರ್ಚಿಸಲಾಗುತ್ತಿದೆ. ಶೀಘ್ರದಲ್ಲೇ ಈ ಬಗ್ಗೆ ಮಾಹಿತಿ ನೀಡಲಾಗುವುದು' ಎಂದು ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರ ಕೊಡದ ಕೆಇಎ ಕ್ರಮಕ್ಕೆ ಅಭ್ಯರ್ಥಿಗಳ ಅಸಮಾಧಾನ

10 ವಿ.ವಿ ಇದ್ದರೂ ಇಲ್ಲ ಪರೀಕ್ಷಾ ಕೇಂದ್ರ

• ಕಿರಣ ನಾಯ್ಕನೂರ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಂಗೀತ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಸೇರಿದಂತೆ ಹಲವು ವಿಷಯಗಳಿಗೆ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಬೆಂಗಳೂರಿನಲ್ಲಿ ಮಾತ್ರ ನಡೆಸುತ್ತಿದೆ. ಈ ಭಾಗದಲ್ಲಿ ಪರೀಕ್ಷಾ ಕೇಂದ್ರ ಇಲ್ಲದಿರುವುದು ಕಲಬುರಗಿ, ಧಾರವಾಡ ವಿಭಾಗದ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರೂ ಸೇರಿದಂತೆ ಕೆ–ಸೆಟ್ ಅಭ್ಯರ್ಥಿಗಳ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಕಲಬುರಗಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, ಕೇಂದ್ರೀಯ ವಿಶ್ವವಿದ್ಯಾಲಯ, ಶರಣಬಸವ ವಿಶ್ವವಿದ್ಯಾಲಯ, ಖಾಜಾ ಬಂದಾ ನವಾಜ್ ವಿಶ್ವವಿದ್ಯಾಲಯಗಳಿವೆ. ವಿಜಯಪುರದಲ್ಲಿ ಅಕ್ಕಮಹಾದೇವಿ ಮಹಿಳಾ ವಿ.ವಿ, ಬಳ್ಳಾರಿಯಲ್ಲಿ ಶ್ರೀಕೃಷ್ಣ ದೇವರಾಯ ವಿ.ವಿ, ಬೆಳಗಾವಿಯಲ್ಲಿ ರಾಣಿ ಚನ್ನಮ್ಮ ವಿ.ವಿ, ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ ಕಾನೂನು ವಿ.ವಿ, ಹಾವೇರಿ ಸಮೀಪದ ಗೊಟಗೋಡಿಯಲ್ಲಿ ಜಾನಪದ ವಿ.ವಿ ಸೇರಿದಂತೆ ವಿವಿಧೆಡೆ ಸ್ನಾತಕೋತ್ತರ ಕೇಂದ್ರಗಳಿದ್ದರೂ ಪರೀಕ್ಷಾ ಕೇಂದ್ರ ಮಾಡಿಲ್ಲ.

ಭೂಗೋಳ ವಿಜ್ಞಾನ, ಪತ್ರಿಕೋದ್ಯಮ, ಸಂಗೀತ, ಪ್ರವಾಸೋದ್ಯಮ, ದೃಶ್ಯಕಲೆ, ಕಾನೂನು ಸೇರಿ 23 ವಿಷಯಗಳ ಸಾವಿರಾರು ವಿದ್ಯಾರ್ಥಿಗಳು ಬಳ್ಳಾರಿ, ಕಲಬುರಗಿ, ವಿಜಯಪುರ ಮತ್ತು ಧಾರವಾಡ ವಿಭಾಗಗಳ ವಿಶ್ವವಿದ್ಯಾಲಯಗಳಿಂದ ಪ್ರತಿ ವರ್ಷ ತೇರ್ಗಡೆಯಾಗುತ್ತಾರೆ. ಆದರೆ, ಈ ಯಾವ ವಿಭಾಗವನ್ನೂ ಕೆಇಎ ಪರೀಕ್ಷಾ ಕೇಂದ್ರಕ್ಕೆ ಪರಿಗಣಿಸಿಲ್ಲ.

'ನನ್ನ ವಿಷಯದ ಪರೀಕ್ಷಾ ಕೇಂದ್ರ ಬೆಂಗಳೂರಿನಲ್ಲಿ ಮಾತ್ರ ಇರುವುದರಿಂದ ಈ ವರ್ಷ ಪರೀಕ್ಷೆ ಕಟ್ಟಲೋ ಬೇಡವೋ ಎನ್ನುವ ಗೊಂದಲದಲ್ಲಿದ್ದೇನೆ. ನಮ್ಮ ಭಾಗ ಮೊದಲೇ ಶೈಕ್ಷಣಿಕವಾಗಿ ಹಿಂದುಳಿದಿದೆ. ಅಧಿಕಾರಿಗಳ ಇಂಥ ನಿರ್ಧಾರಗಳಿಂದ ಇನ್ನಷ್ಟು ಹಿನ್ನಡೆಯಾಗುತ್ತಿದೆ' ಎಂದು ಸ್ನಾತಕೋತ್ತರ ಪದವೀಧರ ಬೀರಣ್ಣ ಬೇಸರ ವ್ಯಕ್ತಪಡಿಸಿದರು.

'ಹಿಂದೆ ಮೈಸೂರು ವಿ.ವಿ ಕೆ–ಸೆಟ್ ಪರೀಕ್ಷೆ ನಡೆಸಿದಾಗ ರಾಜ್ಯದ ಎಲ್ಲ ವಿಭಾಗಗಳಲ್ಲೂ ಕೇಂದ್ರ ಮಾಡಿತ್ತು. ಒಂದು ವಿ.ವಿಗೆ ಸಾಧ್ಯವಾಗಿದ್ದು, ಸರ್ಕಾರದ ಸಂಸ್ಥೆಗೆ ಏಕೆ ಆಗುತ್ತಿಲ್ಲ' ಎಂಬುದು ಪ್ರಾಧ್ಯಾಪಕರೊಬ್ಬರ ಪ್ರಶ್ನೆ.

'ಬೆಂಗಳೂರಿಗೆ ಹೋಗಿ ಪರೀಕ್ಷೆ ಬರೆದು ಬರಲು ಸಮಯ, ಹಣ ಎರಡೂ ವ್ಯರ್ಥವಾಗುತ್ತದೆ. ನಮ್ಮ ಭಾಗದಲ್ಲೇ ಪರೀಕ್ಷಾ ಕೇಂದ್ರ ಮಾಡಿದ್ದರೆ ಎಲ್ಲ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತಿತ್ತು' ಎನ್ನುತ್ತಾರೆ ದೃಶ್ಯಕಲಾ ವಿಭಾಗದ ಅಭ್ಯರ್ಥಿ ಎಂ.ಸಿ.ಡೋಲೆ.

ಪರೀಕ್ಷೆಗೆ ಇನ್ನೂ ದಿನಗಳಿರುವುದರಿಂದ ಧಾರವಾಡ, ಕಲಬುರಗಿಗೆ ಕೇಂದ್ರಗಳನ್ನು ಕೊಡಬೇಕು. ಈಗ ಸಾಧ್ಯವಿಲ್ಲ ಎನ್ನುವುದಾದರೆ ಮುಂದಿನ ವರ್ಷವಾದರೂ ಪರೀಕ್ಷಾ ಕೇಂದ್ರ ನೀಡಲೇಬೇಕು ಎಂಬುದು ಅಭ್ಯರ್ಥಿ ಹಾಗೂ ಪ್ರಾಧ್ಯಾಪಕರ ಆಗ್ರಹ.

ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಬೆಂಗಳೂರಿಗೆ ಹೋಗಿ ಬರುವುದು ಹೊರೆಯಾಗುತ್ತದೆ. ಧಾರವಾಡದಲ್ಲಿ ಒಂದು ಪರೀಕ್ಷಾ ಕೇಂದ್ರ ಮಾಡಬೇಕು

ಪ್ರೊ.ಜೆ.ಎಂ. ಚಂದುನವರ
ಮುಖ್ಯಸ್ಥರು, ಪತ್ರಿಕೋದ್ಯಮ ವಿಭಾಗ, ಕರ್ನಾಟಕ ವಿ.ವಿ, ಧಾರವಾಡ

ಹಿಂದಿನ ಮೂರು ಕೆ–ಸೆಟ್‌ಗಳ ಅಂಕಿ–ಸಂಖ್ಯೆ ನೋಡಿ ನಿರ್ಧಾರಕ್ಕೆ ಬಂದಿದ್ದೇವೆ. ಐದು ಸಾವಿರಕ್ಕಿಂತ ಹೆಚ್ಚು ಅರ್ಜಿ ಸಲ್ಲಿಕೆಯಾದರೆ ಆ ಭಾಗದಲ್ಲೂ ಕೇಂದ್ರ ಮಾಡುತ್ತೇವೆ

ಎಸ್.ರಮ್ಯಾ, ಕಾರ್ಯನಿರ್ವಾಹಕ ನಿರ್ದೇಶಕಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸೋಮವಾರ, ಅಕ್ಟೋಬರ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 280 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮೂರು
ಪರೀಕ್ಷಾ
ಸೂತ್ರ
ಹೊಳೆದಿದ್ದು
ಹೇಗೆ?

ವಿದೇಶ ವಿದ್ಯಮಾನ
ಶಾಮನೂರು ಹೇಳಿಕೆ ಸತ್ಯ: ಶ್ರೀಶೈಲ ಶ್ರೀ 9

ನೆಲೆ ಕಳೆದುಕೊಂಡವರ ನೆಲೆ ಇರದವರ ಯುದ್ಧ
ಜಾತಿಗಣತಿಯಿಂದ ಜಾತಿ ದ್ವೇಷ: ಎಚ್‌ಡಿಕೆ 9

ನಾಲ್ಕು ದಶಕಗಳ ಬಳಿಕ ಅಧಿಕೃತವಾಗಿ ಯುದ್ಧ ಘೋಷಣೆ • ಸಂಘರ್ಷ ವ್ಯಾಪಕಗೊಳ್ಳುವ ಭೀತಿ

ಸಮರ ಸಾರಿದ ಇಸ್ರೇಲ್

ಟೆಲ್ ಅವೀವ್/ಪ್ಯಾರಿಸ್ (ಎಪಿ/ಎಎಫ್‌ಪಿ): ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ಹಮಾಸ್ ಬಂಡುಕೋರರು ಹಾಗೂ ಇಸ್ರೇಲ್ ಸೇನೆ ನಡುವೆ ಸಂಘರ್ಷ ಭಾನುವಾರವೂ ಮುಂದುವರಿದಿದೆ. ಇಸ್ರೇಲ್ ನಡೆಸಿದ ಪ್ರತಿದಾಳಿಯಲ್ಲಿ ಗಾಜಾದಲ್ಲಿನ ಕೆಲವು ಕಟ್ಟಡಗಳು ನೆಲಸಮವಾಗಿವೆ.

ಈ ನಡುವೆ ಇಸ್ರೇಲಿನ ಉತ್ತರ ಭಾಗದಲ್ಲಿ ಲೆಬನಾನ್‌ನ ಹಿಜ್ಬುಲ್ಲಾ ಬಂಡುಕೋರರು ಹಾಗೂ ಇಸ್ರೇಲ್ ಸೇನೆಯ ನಡುವೆ ಚಕಮಕಿ ನಡೆದಿದೆ. ಸಂಘರ್ಷವು ವ್ಯಾಪಕಗೊಳ್ಳುವ ಭೀತಿಯನ್ನು ಇದು ಹುಟ್ಟುಹಾಕಿದೆ.

ಹಮಾಸ್ ಬಂಡುಕೋರರು ನಡೆಸಿದ ದಾಳಿಗೆ ಇಸ್ರೇಲ್‌ನಲ್ಲಿ ಕನಿಷ್ಠ 600 ಮಂದಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಇಸ್ರೇಲ್‌ನಲ್ಲಿ ಈಚಿನ ದಶಕಗಳಲ್ಲಿ ಈ ಪ್ರಮಾಣದಲ್ಲಿ ಜನರ ಸಾವಿಗೆ ಕಾರಣವಾದ ಸಂಘರ್ಷ ಸೃಷ್ಟಿಯಾಗಿರಲಿಲ್ಲ. ಗಾಜಾದಲ್ಲಿ ಮುನ್ನೂರಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ.

ಬಂಡುಕೋರರು ಒತ್ತೆಯಾಳುಗಳನ್ನು ಗಾಜಾದ ಕಡೆ ಒಯ್ದಿದ್ದಾರೆ. ಒತ್ತೆಯಾಳುಗಳಲ್ಲಿ ಮಹಿಳೆಯರು, ಮಕ್ಕಳು, ವೃದ್ಧರು ಇದ್ದಾರೆ. ಇಸ್ರೇಲ್‌ನ ಸೆರೆಮನೆಗಳಲ್ಲಿ ಇರುವ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆಗೆ ಒತ್ತಡ ಹೇರಲು ಬಂಡುಕೋರರು ಇವರನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ.

ಈ ನಡುವೆ, ಇಸ್ರೇಲ್‌ಗೆ ಸೇನಾ ನೆರವು ಒದಗಿಸುವ ಬಗ್ಗೆಯೂ ಮಾತುಕತೆ ನಡೆದಿದೆ ಎಂದು ಅಮೆರಿಕದ ಶ್ವೇತಭವನದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬಂಡುಕೋರರ ದಾಳಿಗೆ ಇಸ್ರೇಲ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಬಲಿಯಾಗಿರುವುದು ಗುಪ್ತದಳದ ವೈಫಲ್ಯವನ್ನು ತೋರಿಸಿದೆ. ಗಾಜಾದಲ್ಲಿ ಏನೇ ಆದರೂ ಇಸ್ರೇಲ್‌ಗೆ ಗೊತ್ತಾಗುತ್ತದೆ ಎಂಬ ನಂಬಿಕೆಯನ್ನು ಈಗಿನ ಸಂಘರ್ಷವು ಸುಳ್ಳಾಗಿಸಿದೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ದೇಶವು ಬಂಡುಕೋರರ ವಿರುದ್ಧ ಸಮರ ಸಾರಿದೆ ಎಂದು ಶನಿವಾರವೇ ಹೇಳಿದ್ದರು. ನೆತನ್ಯಾಹು ನೇತೃತ್ವದ ಇಸ್ರೇಲ್ ಭದ್ರತಾ ಮಂಡಳಿಯು ಭಾನುವಾರ ಸಭೆ ಸೇರಿ, 'ದೇಶವು ಯುದ್ಧ ಸಾರಿದೆ' ಎಂಬ ಅಧಿಕೃತ ಘೋಷಣೆ ಹೊರಡಿಸಿದೆ.

ಭಾನುವಾರ ಹೊರಡಿಸಲಾದ ಈ ಘೋಷಣೆಯು 'ಗಮನಾರ್ಹ ಪ್ರಮಾಣದಲ್ಲಿ ಸೇನಾ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರ ನೀಡುತ್ತದೆ' ಎಂದು ನೆತನ್ಯಾಹು ಅವರ ಕಚೇರಿಯ ಹೇಳಿಕೆ ತಿಳಿಸಿದೆ. ಇಸ್ರೇಲ್ ಕಳೆದ ನಾಲ್ಕು ದಶಕಗಳಲ್ಲಿ ಲೆಬನಾನ್ ಮತ್ತು ಗಾಜಾದಲ್ಲಿ ಭಾರಿ ಪ್ರಮಾಣದ ಸೇನಾ ಕಾರ್ಯಾಚರಣೆಗಳನ್ನು ನಡೆಸಿದೆ. ಆದರೆ ಇವುಗಳಲ್ಲಿ ಯಾವುದನ್ನೂ ಅಧಿಕೃತವಾಗಿ 'ಯುದ್ಧ' ಎಂದು ಕರೆದಿರಲಿಲ್ಲ.

ಈಗ, ಇಸ್ರೇಲ್ ಭೂಸೇನೆಯ ಮೂಲಕವೂ ಗಾಜಾದ ಮೇಲೆ ದಾಳಿ ಶುರುಮಾಡಲಿದೆಯೇ ಎಂಬ ಪ್ರಶ್ನೆ ಇದೆ. ಹಮಾಸ್ ಬಂಡುಕೋರರು 'ಹಿಂದೆಂದೂ ಕಾಣದಂತಹ ಬೆಲೆ ತೆರಬೇಕಾಗುತ್ತದೆ' ಎಂದು ನೆತನ್ಯಾಹು ಅವರು ಎಚ್ಚರಿಸಿದ್ದಾರೆ.

ಇಸ್ರೇಲ್ ಪಡೆಗಳು ಭಾನುವಾರ ವೈಮಾನಿಕ ದಾಳಿ ನಡೆಸಿದ ಪರಿಣಾಮ ಗಾಜಾ ಪಟ್ಟಣದಲ್ಲಿ ಬಹುಮಹಡಿ ಕಟ್ಟಡ ಹೊತ್ತಿ ಉರಿಯಿತು – ಎಪಿ /ಪಿಟಿಐ ಚಿತ್ರ

ಹಿಜ್ಬುಲ್ಲಾದಿಂದಲೂ ದಾಳಿ

ಇರಾನ್ ಬೆಂಬಲ ಹೊಂದಿರುವ ಹಿಜ್ಬುಲ್ಲಾ ಬಂಡುಕೋರರು ಇಸ್ರೇಲ್‌ನತ್ತ ಭಾನುವಾರ ಡಜನ್ನು ಗಟ್ಟಲೆ ರಾಕೆಟ್ಟುಗಳನ್ನು ಬಳಸಿ ದಾಳಿ ನಡೆಸಿದ್ದಾರೆ. ಇದಕ್ಕೆ ಇಸ್ರೇಲ್ ಸೇನೆಯು ಡ್ರೋನ್ ಬಳಸಿ ಪ್ರತಿದಾಳಿ ನಡೆಸಿದೆ.

'ಗಾಜಾದಲ್ಲಿ ಪ್ರತಿಯೊಬ್ಬ ಭಯೋತ್ಪಾದಕ, ಪ್ರತಿಯೊಬ್ಬ ಕಮಾಂಡರ್ ಇಸ್ರೇಲ್ ದಾಳಿಗೆ ಗುರಿಯಾಗುತ್ತಾನೆ' ಎಂದು ಇಸ್ರೇಲ್ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 9

ಸಂಘರ್ಷ ತಡೆಗಟ್ಟಲು ಮಧ್ಯಪ್ರಾಚ್ಯದಲ್ಲಿ ರಾಜತಾಂತ್ರಿಕ ಪ್ರಯತ್ನಗಳು ನಡೆಯಬೇಕು. ಮಾತುಕತೆ ಮೂಲಕ ಶಾಂತಿ ಸಾಧಿಸಬಹುದು
ಆಂಟನಿಯೊ ಗುಟೆರಸ್
ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ

ದಾಳಿ ಸುದ್ದಿಯಿಂದ ಆಘಾತವಾಗಿದೆ. ಹಮಾಸ್ ಬಂಡುಕೋರರು ನಡೆಸಿರುವ ದಾಳಿ ಹೇಡಿತನದ್ದು ಮತ್ತು ನೀತಿಗೆಟ್ಟದ್ದು. ಸಂಕಷ್ಟದ ಸಂದರ್ಭದಲ್ಲಿ ಇಸ್ರೇಲ್ ಜತೆ ನಾವು ನಿಲ್ಲುತ್ತೇವೆ
ರಿಷಿ ಸುನಕ್, ಬ್ರಿಟನ್ ಪ್ರಧಾನಿ

ಇಸ್ರೇಲ್‌ಗೆ ಅಮೆರಿಕದ ಬೆಂಬಲ ಅಚಲ ಮತ್ತು ದೃಢವಾಗಿದೆ
ಜೋ ಬೈಡನ್, ಅಮೆರಿಕ ಅಧ್ಯಕ್ಷ

ಎರಡೂ ರಾಷ್ಟ್ರಗಳು ಘರ್ಷಣೆ ನಿಲ್ಲಿಸಿ ನಾಗರಿಕರನ್ನು ರಕ್ಷಿಸಬೇಕು ಹಾಗೂ ಶಾಂತಿ ಸ್ಥಾಪನೆಗೆ ಮುಂದಾಗಬೇಕು. ಪರಿಸ್ಥಿತಿ ಮತ್ತಷ್ಟು ಹದಗೆಡುವುದನ್ನು ತಡೆಯಬೇಕು
ವಿದೇಶಾಂಗ ಸಚಿವಾಲಯ, ಚೀನಾ

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ತಕ್ಷಣ ಕದನ ವಿರಾಮ ಘೋಷಿಸಬೇಕು. ಅಂತರರಾಷ್ಟ್ರೀಯ ಸಮುದಾಯದ ಸಹಕಾರದಿಂದ ಮಾತುಕತೆ ಮೂಲಕ ಶಾಂತಿ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು
ಮಾರಿಯಾ ಝುಖರೋವಾ
ವಿದೇಶಾಂಗ ಸಚಿವಾಲಯ ವಕ್ತಾರೆ, ರಷ್ಯಾ

ಇಸ್ರೇಲ್‌ನ ಅಧಿಕಾರಿಯೊಬ್ಬರು ನೀಡಿರುವ ಮಾಹಿತಿ ಪ್ರಕಾರ ಭದ್ರತಾ ಪಡೆಗಳು 400 ಬಂಡುಕೋರರನ್ನು ಹತ್ಯೆ ಮಾಡಿವೆ, ಹಲವರನ್ನು ಬಂಧಿಸಿವೆ. ಇಸ್ರೇಲ್ ಸೇನೆಯು ಅರೇಬಿಕ್ ಭಾಷೆಯಲ್ಲಿ ಎಚ್ಚರಿಕೆಯ ಸಂದೇಶ ರವಾನಿಸಿದ ನಂತರದಲ್ಲಿ ಗಾಜಾದಲ್ಲಿನ ಗಡಿ ಭಾಗಗಳ ಜನರು, ಇಸ್ರೇಲ್ ದಾಳಿಯಿಂದ ತಪ್ಪಿಸಿಕೊಳ್ಳಲು ಒಳ ಪ್ರದೇಶಗಳಿಗೆ ಪಲಾಯನ ಮಾಡಿದ್ದಾರೆ.

ಇಸ್ರೇಲ್‌ನ ನೆರೆಯ ರಾಷ್ಟ್ರ ಈಜಿಪ್ಟ್‌ನ ಅಲೆಕ್ಸಾಂಡ್ರಿಯಾದಲ್ಲಿ ಪೊಲೀಸ್ ಸಿಬ್ಬಂದಿಯೊಬ್ಬ ಇಸ್ರೇಲ್‌ನ ಇಬ್ಬರು ಪ್ರವಾಸಿಗರನ್ನು ಹತ್ಯೆ ಮಾಡಿದ್ದಾನೆ.

'ವರ್ಷಕ್ಕೆ ಎರಡು ಪರೀಕ್ಷೆ ಐಚ್ಛಿಕ'

ನವದೆಹಲಿ (ಪಿಟಿಐ): '10 ಮತ್ತು 12ನೇ ತರಗತಿಗಳಿಗೆ ವರ್ಷದಲ್ಲಿ ಎರಡು ಬಾರಿ ನಡೆಸಲಾಗುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹಾಜರಾಗುವುದು ಕಡ್ಡಾಯವಲ್ಲ. ಇದು ಐಚ್ಛಿಕವಾಗಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಷ್ಟಪಡಿಸಿದ್ದಾರೆ.

'ವಿದ್ಯಾರ್ಥಿಗಳ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಈ ವಿಧಾನ ಪರಿಚಯಿಸಲಾಗುತ್ತಿದೆ. ವಿದ್ಯಾರ್ಥಿಗಳು ವರ್ಷಕ್ಕೆ ಒಂದು ಬಾರಿ ಪರೀಕ್ಷೆ ಬರೆಯುವ ಬದಲು, ನೂತನ ಪಠ್ಯಕ್ರಮ ಚೌಕಟ್ಟಿನ (ಎನ್‌ಸಿಎಫ್) ಅನುಸಾರ ಎರಡು ಬಾರಿ ಪರೀಕ್ಷೆ ಬರೆಯಬಹುದು. ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ಜೆಇಇ ರೀತಿಯಲ್ಲಿ ವರ್ಷಕ್ಕೆ ಎರಡು ಬಾರಿ ನಡೆಯುವ ಪರೀಕ್ಷೆಗಳಿಗೆ ಹಾಜರಾಗಬಹುದು. ಎರಡು ಪರೀಕ್ಷೆಗಳ ಪೈಕಿ ಅತ್ಯುತ್ತಮ ಅಂಕ ಗಳಿಸಿದ ಪರೀಕ್ಷೆಯನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು. ಇದು ಸಂಪೂರ್ಣವಾಗಿ ಐಚ್ಛಿಕವಾಗಿದ್ದು, ಯಾವುದೇ ಒತ್ತಡ ಹೇರುವುದಿಲ್ಲ' ಎಂದು ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

'2024ರಿಂದಲೇ ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ನಡೆಸಲು ಪ್ರಯತ್ನಿಸುತ್ತೇವೆ. ಒಂದೇ ಬಾರಿ ನಡೆಸುವ ಪರೀಕ್ಷೆಯ ಭಯದಿಂದ ಉಂಟಾಗುವ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶ ಹೊಸ ವಿಧಾನದ್ದು. ವಿದ್ಯಾರ್ಥಿಗಳು ಸಹ ಈ ಹೊಸ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ' ಎಂದು ಪ್ರತಿಪಾದಿಸಿದ್ದಾರೆ.

ಶಿಕ್ಷಣ ಸಚಿವಾಲಯ ಆಗಸ್ಟ್‌ನಲ್ಲಿ ಎನ್‌ಸಿಎಫ್ ಘೋಷಿಸಿದ ಬಳಿಕ, ವರ್ಷದಲ್ಲಿ ಎರಡು ಬಾರಿ ಪರೀಕ್ಷೆಗಳನ್ನು ನಡೆಸಲು ನಿರ್ಧರಿಸಲಾಗಿತ್ತು.

ಮೃತರ ಸಂಖ್ಯೆ 14ಕ್ಕೆ ಏರಿಕೆ: ಅಪ್ಪ–ಮಗ ಬಂಧನ

ಪಟಾಕಿ ದುರಂತ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಬೆಲೆ ಪಟಾಕಿ ದುರಂತ ಕುರಿತಾದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು. 'ಈಗಾಗಲೇ ಘೋಷಿಸಿದಂತೆ, ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು. ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನೂ ಭರಿಸಲಾಗುವುದು' ಎಂದು ಅವರು ಹೇಳಿದರು.

ಪಟಾಕಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದ್ದು, ಬೆಂಕಿ ನಂದಿಸುವ ಕಾರ್ಯಾಚರಣೆ ಭಾನುವಾರ ಮಧ್ಯಾಹ್ನ ಅಂತ್ಯಗೊಂಡಿತು. ಶನಿವಾರ ಮಧ್ಯಾಹ್ನ ಹೊತ್ತಿಕೊಂಡಿದ್ದ ಬೆಂಕಿ ಭಾನುವಾರ ನಸುಕಿನವರೆಗೂ ಧಗ ಧಗಿಸಿತು. 13 ಮಂದಿಯ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಿದ್ದ ರಕ್ಷಣಾ ತಂಡದವರು, ಭಾನುವಾರ ಬೆಳಿಗ್ಗೆ 14ನೇ ಮೃತದೇಹವನ್ನು ಪತ್ತೆ ಮಾಡಿದರು.

ಅತ್ತಿಬೆಲೆಯ ಆಕ್ಸ್‌ಫರ್ಡ್ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಿ ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

ಅಪ್ಪ–ಮಗ ಬಂಧನ: ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆ ಮಾಲೀಕರಾದ ವಿ. ರಾಮಸ್ವಾಮಿ ರೆಡ್ಡಿ ಹಾಗೂ ಮಗ ನವೀನ್ ರೆಡ್ಡಿಯನ್ನು ಅತ್ತಿಬೆಲೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದಾಸ್ತಾನು ಮಳಿಗೆ ಕೆಲಸಗಾರ ತಮಿಳುನಾಡಿನ ಲೋಕೇಶ್ವರನ್ ಅವರು ದುರಂತದ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಸಾರ್ವಜನಿಕರ ಆಸ್ತಿಗೆ ನಷ್ಟ, ಬೆಂಕಿ ವಿಚಾರದಲ್ಲಿ ನಿರ್ಲಕ್ಷ್ಯ, ಸ್ಫೋಟಕಗಳ ವಿಚಾರದಲ್ಲಿ ನಿರ್ಲಕ್ಷ್ಯ, ಕೊಲೆಯಲ್ಲದ ನರಹತ್ಯೆ, ಜನರ ಜೀವಕ್ಕೆ ಕುತ್ತು ಆರೋಪ ಹಾಗೂ ಸ್ಫೋಟಕ ನಿಷೇಧ ಕಾಯ್ದೆಯಡಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ರಾಮಸ್ವಾಮಿ, ನವೀನ್, ಜಾಗದ ಮಾಲೀಕರಾದ ಎಚ್‌ಎಸ್‌ಆರ್ ಲೇಔಟ್‌ನ ಜಯಮ್ಮ ಹಾಗೂ ಮಗ ಅನಿಲ್ ರೆಡ್ಡಿ, ವ್ಯವಸ್ಥಾಪಕ ಲೋಕೇಶ್‌ನನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ರಾಮಸ್ವಾಮಿ–ನವೀನ್‌ನನ್ನು ಬಂಧಿಸಲಾಗಿದೆ. ಉಳಿದ ಮೂವರು ತಲೆಮರೆಸಿಕೊಂಡಿದ್ದಾರೆ' ಎಂದು ಕೇಂದ್ರ ವಲಯದ ಐಜಿಪಿ ರವಿಕಾಂತೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಪಟಾಕಿ ದುರಂತ ಸ್ಥಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅವಘಡದ ಬಗ್ಗೆ ವಿವರಿಸಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಜೊತೆಗಿದ್ದರು ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

'ಪಟಾಕಿ ದುರಂತ ತಡೆಯಲು ಹೊಸ ನೀತಿ'

'ಭವಿಷ್ಯದಲ್ಲಿ ಪಟಾಕಿ ದುರಂತ ನಡೆಯುವುದನ್ನು ತಡೆಯಲು ಹೊಸ ನೀತಿ ರೂಪಿಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೀಪಾವಳಿ ಹಬ್ಬ ಹತ್ತಿರವಿದ್ದು, ಹಲವು ಕಡೆ ಪಟಾಕಿಗಳನ್ನು ಸಂಗ್ರಹಿಸಿಡಲಾಗುತ್ತಿದೆ. ರಾಜ್ಯದಲ್ಲಿರುವ ಎಲ್ಲ ಪಟಾಕಿ ಗೋದಾಮುಗಳಿಗೆ ನೋಟಿಸ್ ನೀಡಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿ ಹಾಗೂ ಪೊಲೀಸರಿಗೆ ಸೂಚನೆ ನೀಡಲಾಗಿದೆ. ಗೋದಾಮುಗಳ ಸಮೀಕ್ಷೆ ಸಹ ನಡೆಸಲಾಗುವುದು' ಎಂದರು.

ಇನ್ನಷ್ಟು ಸುದ್ದಿಗಳು 8

ಅಫ್ಗಾನಿಸ್ತಾನದಲ್ಲಿ ಭೂಕಂಪ: 1,320 ಮನೆಗಳು ನೆಲಸಮ

2 ಸಾವಿರಕ್ಕೂ ಹೆಚ್ಚು ಸಾವು

ಇಸ್ಲಾಮಾಬಾದ್ (ಎಪಿ): ಪಶ್ಚಿಮ ಅಫ್ಗಾನಿಸ್ತಾನದಲ್ಲಿ ಸಂಭವಿಸಿದ ಸರಣಿ ಭೂಕಂಪಗಳಿಂದ ಮೃತಪಟ್ಟವರ ಸಂಖ್ಯೆ ಭಾನುವಾರ 2,060ಕ್ಕೆ ಏರಿದೆ. ಸಾವಿರಾರು ಜನ ಗಾಯಗೊಂಡಿದ್ದಾರೆ.

ಹಲವು ಗ್ರಾಮಗಳ ಹೆಚ್ಚಿನ ಕಟ್ಟಡಗಳು ನಾಶವಾಗಿದ್ದು, ಅವಶೇಷಗಳ ನಡುವೆ ಬದುಕುಳಿದವರಿಗಾಗಿ ಶೋಧ ಕಾರ್ಯವನ್ನು ರಕ್ಷಣಾ ಸಿಬ್ಬಂದಿ ಚುರುಕುಗೊಳಿಸಿದ್ದಾರೆ. ಎರಡು ದಶಕದಲ್ಲಿ ದೇಶವನ್ನು ಅಪ್ಪಳಿಸಿದ ಭೀಕರ ಭೂಕಂಪಗಳಲ್ಲಿ ಇದೂ ಒಂದಾಗಿದೆ. ಜಿಂದಾಜಾನ್ ಮತ್ತು ಘೋರಿಯನ್ ಜಿಲ್ಲೆಗಳಲ್ಲಿ ಒಟ್ಟು 12 ಗ್ರಾಮಗಳು ಸಂಪೂರ್ಣವಾಗಿ ನಾಶವಾಗಿವೆ. 1,320 ಮನೆಗಳು ನೆಲಸಮವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಮೂರು ಬಾರಿ ಭೂಕಂಪವಾಗಿತ್ತು. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆ 6.3, 5.9 ಮತ್ತು 5.5ರಷ್ಟು ದಾಖಲಾಗಿತ್ತು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಕ್ತಾರರು ತಿಳಿಸಿದ್ದಾರೆ.

ಭೂಕಂಪದ ಕೇಂದ್ರಬಿಂದುವನ್ನು ವಾಯವ್ಯ ನಗರ ಹೆರಾತ್‌ನಲ್ಲಿ ಗುರುತಿಸಲಾಗಿದೆ. ಭಾನುವಾರ ಬೆಳಿಗ್ಗೆ 7 ಗಂಟೆಗೆ ಹೆರಾತ್‌ನಲ್ಲಿ 4.1 ತೀವ್ರತೆಯಲ್ಲಿ ಭೂಮಿ ಕಂಪಿಸಿದೆ ಎಂದು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ಸಂಸ್ಥೆ ತಿಳಿಸಿದೆ.

ಬಹುತೇಕ ಮನೆಗಳು ಜಖಂಗೊಂಡಿವೆ. ವಾಸಕ್ಕೆ ಯೋಗ್ಯವಲ್ಲದ ಸ್ಥಿತಿ ತಲುಪಿವೆ. ಸಂತ್ರಸ್ತರು ರಸ್ತೆಗಳಲ್ಲಿಯೇ ರಾತ್ರಿಗಳನ್ನು ಕಳೆದಿದ್ದಾರೆ. ತಮ್ಮವರನ್ನು ಕಳೆದುಕೊಂಡ ಜನರ ನೋವು, ಆಕ್ರಂದನ ಮುಗಿಲು ಮುಟ್ಟಿದೆ. ಭೂಕಂಪ ಪೀಡಿತ ಪ್ರದೇಶಕ್ಕೆ ಬಟ್ಟೆಗಳು, ಕಂಬಳಿಗಳು ಮತ್ತು ಟಾರ್ಪಾಲ್‌ಗಳನ್ನು ಯುನಿಸೆಫ್ ಪೂರೈಸಿದೆ. ಹಲವು ದೇಶಗಳು ನೆರವಿನ ಭರವಸೆ ನೀಡಿವೆ.

'ಹಲವು ಗ್ರಾಮಗಳು ನಾಶವಾಗಿವೆ ಮತ್ತು ನೂರಾರು ನಾಗರಿಕರು ಅವಶೇಷಗಳ ಅಡಿ ಹೂತುಹೋಗಿದ್ದಾರೆ. ಕಟ್ಟಡಗಳ ಅವಶೇಷಗಳ ಅಡಿ ಹಲವರು ಸಿಲುಕಿರುವುದರಿಂದ ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ' ಎಂದು ಮಾಹಿತಿ ಮತ್ತು ಸಂಸ್ಕೃತಿ ಸಚಿವಾಲಯದ ವಕ್ತಾರ ಅಬ್ದುಲ್ ವಾಹಿದ್ ರಾಯನ್ ಭಾನುವಾರ ಹೇಳಿದ್ದಾರೆ.

ಭೂಮಿ ಕಂಪಿಸಿದ ಅನುಭವವಾಗುತ್ತಲೇ ಜನ ಮನೆಗಳಿಂದ ಹೊರಗೆ ಬಂದರು. ಮಣ್ಣು, ಇಟ್ಟಿಗೆ ಬಳಸಿ ನಿರ್ಮಿಸಿದ್ದ ಮನೆಗಳು ಭೂಕಂಪದಿಂದ ಕುಸಿದಿವೆ. ವಿವಿಧೆಡೆ ಅವಶೇಷಗಳ ಅಡಿ ಸಿಲುಕಿ, ಬದುಕುಳಿದವರ ರಕ್ಷಣೆಗೆ ಶೋಧ ಕಾರ್ಯ ನಡೆದಿದೆ. ಸೇನೆ ಹಾಗೂ ರೆಡ್ ಕ್ರೆಸೆಂಟ್ ಸಂಸ್ಥೆಗಳು ರಕ್ಷಣಾ ಕಾರ್ಯದಲ್ಲಿ ಕೈಜೋಡಿಸಿವೆ.

ಹೆರಾತ್ ಪ್ರಾಂತ್ಯದ ಜೆಂದಾಜಾನ್ ಜಿಲ್ಲೆಯಲ್ಲಿ ಅವಶೇಷಗಳ ಅಡಿ ಬದುಕುಳಿದವರಿಗಾಗಿ ಹುಡುಕಾಟ ಮುಂದುವರಿದಿದೆ ಪಿಟಿಐ/ಎಪಿ ಚಿತ್ರ

ವಿಶ್ವಕಪ್ ಕ್ರಿಕೆಟ್‌ನ ಎಲ್ಲಾ ಪಂದ್ಯಗಳ ನನ್ನ ಸಂಭಾವನೆಯನ್ನು ಭೂಕಂಪದಲ್ಲಿ ಬದುಕುಳಿದವರಿಗಾಗಿ ನೀಡುವೆ. ಶೀಘ್ರದಲ್ಲೇ ನಿಧಿ ಸಂಗ್ರಹ ಅಭಿಯಾನ ಪ್ರಾರಂಭಿಸಲಾಗುವುದು
ರಶೀದ್ ಖಾನ್, ಅಫ್ಗಾನಿಸ್ತಾನ ಕ್ರಿಕೆಟ್ ಆಟಗಾರ

ಒಳ ಪುಟ
ಜೀರಿಗೆ ಮೆಣಸಿಗೆ ದಾಖಲೆ ಬೆಲೆ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

₹ 2.5 ಕೋಟಿ ವೆಚ್ಚದ ಯೋಜನೆ • ಜೂನ್‌ನಲ್ಲಿ ಕಾಮಗಾರಿ ಆರಂಭ • ವ್ಯಾಪಾರ, ವಹಿವಾಟಿಗೆ ಪೆಟ್ಟು

ದುಃಸ್ಥಿತಿಯಲ್ಲಿ ಇಬ್ರಾಹಿಂ ಸಾಹೇಬ್ ಸ್ಟ್ರೀಟ್

• ಖಲೀಲಅಹ್ಮದ ಶೇಖ

ಶಿವಾಜಿನಗರದ ಇಬ್ರಾಹಿಂ ಸಾಹೇಬ್ ಸ್ಟ್ರೀಟ್ ಅಗೆದಿರುವುದು —ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಎತ್ತ ನೋಡಿದರತ್ತ ಅಗೆದಿರುವ ರಸ್ತೆ, ಅಲ್ಲಲ್ಲಿ ತೋಡಿರುವ ಗುಂಡಿಗಳು, ಬಟ್ಟೆ, ಅಲಂಕಾರಿಕ ವಸ್ತುಗಳ ಮೇಲೆ ಕುಳಿತಿರುವ ದೂಳನ್ನು ಸ್ವಚ್ಛಗೊಳಿಸುತ್ತಿರುವ ವ್ಯಾಪಾರಿಗಳು...

ಇದು ನಗರದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾಗಿರುವ ಇಬ್ರಾಹಿಂ ಸಾಹೇಬ್ ಸ್ಟ್ರೀಟ್‌ನ ದುಃಸ್ಥಿತಿ.

ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಟಸ್ಕರ್ ಟೌನ್‌ನ ಇಬ್ರಾಹಿಂ ಸಾಹೇಬ್ ಸ್ಟ್ರೀಟ್‌ನಲ್ಲಿ ₹2.5 ಕೋಟಿ ವೆಚ್ಚದಲ್ಲಿ ಕಾವೇರಿ ಪೈಪ್‌ಲೈನ್, ಮಳೆ ನೀರು ಚರಂಡಿ ಮತ್ತು ಪಾದಚಾರಿ ಮಾರ್ಗ ನಿರ್ಮಿಸಲಾಗುತ್ತಿದೆ. ಕಳೆದ ಜೂನ್ ತಿಂಗಳಲ್ಲಿ ಕಾಮಗಾರಿ ಆರಂಭವಾಗಿದೆ. ಅಂದು ಈ ರಸ್ತೆಯನ್ನು ಸಂಪೂರ್ಣವಾಗಿ ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ, ಇಲ್ಲಿನ ವ್ಯಾಪಾರ–ವಹಿವಾಟಿಗೆ ಪೆಟ್ಟು ಬಿದ್ದಿದೆ.

ಇಬ್ರಾಹಿಂ ಸಾಹೇಬ್ ಸ್ಟ್ರೀಟ್‌ನಲ್ಲಿ ಜವಳಿ, ಪಾದರಕ್ಷೆಗಳು, ಮಹಿಳೆಯರ ಅಲಂಕಾರಿಕ ವಸ್ತುಗಳ ಅಂಗಡಿಗಳಿವೆ. ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಇಲ್ಲಿ ವಾಹನಗಳಷ್ಟೇ ಅಲ್ಲ ಸಾರ್ವಜನಿಕರೂ ಓಡಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ, ವ್ಯಾಪಾರ ವಹಿವಾಟು ಸಂಪೂರ್ಣವಾಗಿ ಕುಸಿದಿದೆ. ವ್ಯಾಪಾರಿಗಳಿಗೆ ಅಂಗಡಿಗಳ ಬಾಡಿಗೆ ಕಟ್ಟಲು ಆಗುತ್ತಿಲ್ಲ.

‘ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ(ಬಿಬಿಎಂಪಿ) ಮತ್ತು ಬೆಂಗಳೂರು ಜಲಮಂಡಳಿ(ಬಿಡಬ್ಲ್ಯುಎಸ್‌ಎಸ್‌ಬಿ) ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ರಸ್ತೆಗಳಲ್ಲಿ ಗುಂಡಿಗಳಿರುವ ಕಾರಣ, ಹಲವು ಗ್ರಾಹಕರು ಮತ್ತು ವ್ಯಾಪಾರಿಗಳ ಬಿದ್ದು ಕಾಲು ಮುರಿದುಕೊಂಡಿದ್ದಾರೆ. ಮಳೆ ಬಂದರೆ ರಸ್ತೆಯಲ್ಲ ಕೆಸರು ಗದ್ದೆಯಾಗುತ್ತದೆ. ಪರಿಸ್ಥಿತಿ ಹೀಗಿರುವುದರಿಂದ ಇಲ್ಲಿಗೆ ಖರೀದಿಗೆ ಬರುವ ಗ್ರಾಹಕರ ಸಂಖ್ಯೆ ತೀರಾ ವಿರಳವಾಗಿದೆ. ಹಬ್ಬಗಳು ಸೇರಿದಂತೆ ವಾರಾಂತ್ಯದಲ್ಲಿ ಸಾವಿರಾರು ಗ್ರಾಹಕರನ್ನು ಸೆಳೆಯುತ್ತಿದ್ದ ಈ ಮಾರುಕಟ್ಟೆ ಐದು ತಿಂಗಳಿಂದ ದಯನೀಯ ಸ್ಥಿತಿಗೆ ತಲುಪಿದೆ. ಶೇ 60 ರಿಂದ 70ರಷ್ಟು ವ್ಯಾಪಾರ ಕಡಿಮೆಯಾಗಿದೆ’ ಎಂದು ವ್ಯಾಪಾರಿ ಪ್ರಭಾಕರ್ ಅಳಲು ತೋಡಿಕೊಂಡರು.

‘ಬಿಡಬ್ಲ್ಯುಎಸ್‌ಎಸ್‌ಬಿಯ ಈ ಅಭಿವೃದ್ಧಿ ಕಾಮಗಾರಿ ವಿಳಂಬವಾಗಿದೆ. ಮುಂದಿನ ಎರಡು ತಿಂಗಳ ಒಳಗೆ ಇಬ್ರಾಹಿಂ ಸಾಹೇಬ್ ಸ್ಟ್ರೀಟ್‌ನಲ್ಲಿ ಸುಸಜ್ಜಿತ ಪಾದಚಾರಿ ಮಾರ್ಗ, ಕಾಂಕ್ರೀಟ್ ರಸ್ತೆ ನಿರ್ಮಾಣವಾಗಲಿದೆ’ ಎಂದು ಶಿವಾಜಿನಗರ ವ್ಯಾಪ್ತಿಯ ಬಿಬಿಎಂಪಿ ಎಂಜಿನಿಯರ್ ತಿಳಿಸಿದರು.

ಇಬ್ರಾಹಿಂ ಸಾಹೇಬ್ ಸ್ಟ್ರೀಟ್ ದುಃಸ್ಥಿತಿ.

ಅಭಿಪ್ರಾಯಗಳು



ರಸ್ತೆ ಕಾಮಗಾರಿ ನಡೆಯುತ್ತಿರುವುದರಿಂದ ಪ್ರತಿನಿತ್ಯ ದೂಳಿನ ಸಮಸ್ಯೆ ಹೆಚ್ಚಾಗುತ್ತಿದೆ. ಇದರಿಂದ ಇಲ್ಲಿನ ವ್ಯಾಪಾರಿಗಳು ನಾನಾ ರೋಗಗಳಿಂದ ಬಳಲುತ್ತಿದ್ದಾರೆ

ಮಕ್ಬೂಲ್ ಖಾನ್, ವ್ಯಾಪಾರಿ



ಐದು ತಿಂಗಳಿಂದ ಕಾಮಗಾರಿ ನಡೆಯುತ್ತಿದೆ. ಕಾವೇರಿ ನೀರು ಪೂರೈಕೆ, ಮಳೆ ನೀರು ಚರಂಡಿಗೆ ಪೈಪ್ ಅಳವಡಿಸುವ ನೆಪ ಹೇಳಿ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಇದರಿಂದ ಇಬ್ರಾಹಿಂ ಸಾಹೇಬ್ ಸ್ಟ್ರೀಟ್‌ಗೆ ಗ್ರಾಹಕರೇ ಸುಳಿಯುತ್ತಿಲ್ಲ

ಚಂದ್ರಕಾಂತ, ವ್ಯಾಪಾರಿ

ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆ ಅಗೆದು ಹಾಗಿಯೇ ಬಿಡಲಾಗಿದೆ. ಇದರಿಂದ, ವ್ಯಾಪಾರಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಸ್ಥಳೀಯ ಶಾಸಕರು ನಮ್ಮ ಕಷ್ಟಗಳನ್ನು ಆಲಿಸುತ್ತಿಲ್ಲ. ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸಬೇಕು

ಮಹಮ್ಮದ್ ಸಾಧಿಕ್, ಬಟ್ಟೆ ವ್ಯಾಪಾರಿ

11–12ಕ್ಕೆ ‘ಪಾರಿಜಾತ’ ನಾಟಕ ಪ್ರದರ್ಶನ

ಬೆಂಗಳೂರು: ಸ್ಪಂದನಾ ಥಿಯೇಟರ್ ಪ್ರಸ್ತುತಪಡಿಸುತ್ತಿರುವ ‘ಪಾರಿಜಾತ’ ನಾಟಕವು ಇದೇ 11 ಮತ್ತು 12ರಂದು ಸಂಜೆ 7.30ಕ್ಕೆ ಜೆ.ಪಿ. ನಗರದಲ್ಲಿರುವ ರಂಗಶಂಕರದಲ್ಲಿ ಪ್ರದರ್ಶನ ಕಾಣಲಿದೆ.

ಕೆ.ವೈ. ನಾರಾಯಣಸ್ವಾಮಿ ಅವರು ರಚಿಸಿರುವ ಈ ನಾಟಕವನ್ನು ಬಿ. ಜಯಶ್ರೀ ನಿರ್ದೇಶಿಸಿದ್ದಾರೆ. ಪ್ರವೀಣ್ ಡಿ. ರಾವ್, ಸುಶೀಲ್ ಶರ್ಮಾ ಅವರ ಸಂಗೀತವಿದೆ. ಶಶಿಧರ್ ಅಡಪ, ಅರುಣ್ ಸಾಗರ್ ಅವರ ರಂಗಸಜ್ಜಿಕೆ, ಅರುಣ್ ಡಿ.ಟಿ. ಅವರ ಬೆಳಕಿನ ವಿನ್ಯಾಸದಲ್ಲಿ ಈ ನಾಟಕ ಮೂಡಿಬರಲಿದೆ. ಮಹಾಭಾರತದ ಘಟನೆ ಆಧಾರಿಸಿದ ನಾಟಕ ಇದಾಗಿದೆ.

‘ನಾಟಕದಲ್ಲಿ ರುಕ್ಮಿಣಿ–ಸತ್ಯಭಾಮಾರ ಕಲಹ ಪ್ರಸಂಗವನ್ನು ತುಸು ತಮಾಷೆಯ ಧಾಟಿಯಲ್ಲಿಯೇ ನಿರೂಪಿಸಲಾಗಿದೆ. ಇಲ್ಲಿ ರುಕ್ಮಿಣಿ, ಸತ್ಯಭಾಮಾ ಇಬ್ಬರೂ ಕೃಷ್ಣನನ್ನು ಪ್ರಶ್ನಿಸುವ ಪ್ರಸಂಗವೂ ಇದೆ. ಹಾಗೆಯೇ ನಾರದ–ಕೃಷ್ಣ ಮತ್ತು ಕೃಷ್ಣ–ರುಕ್ಮಿಣಿ–ಸತ್ಯಭಾಮಾರ ಸಂಭಾಷಣೆಗಳಲ್ಲಿ ಸರಳ ಸ್ನೇಹವಿದೆ. ಇಲ್ಲಿ ಕಲಾವಿದರೆ ಪಾತ್ರದಿಂದ ಹೊರಗೆ ನಿಂತು ಪಾತ್ರವನ್ನು ವಿಮರ್ಶೆ ಮಾಡುವ ಜನಪದರ ಶೈಲಿಯ ಪ್ರಭಾವ ಗಾಢವಾಗಿದೆ’ ಎಂದು ಹೇಳಿದ್ದಾರೆ.

ನಾಟಕದ ಟಿಕೆಟ್‌ಗಳು bookmyshow.com ನಲ್ಲಿ ಲಭ್ಯವಿದೆ.

ವನ್ಯಜೀವಿ ಛಾಯಾಚಿತ್ರ ಪ್ರದರ್ಶನ ಸಂಪನ್ನ

ಪ್ರಜಾವಾಣಿ ವಾರ್ತೆ

ಛಾಯಾಚಿತ್ರಗಳನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ವೀಕ್ಷಿಸಿದರು. ಎಂ.ಎನ್.ಜಯಕುಮಾರ್ ಇದ್ದಾರೆ.

ಬೆಂಗಳೂರು: ಅರಣ್ಯ ಇಲಾಖೆಯ ಸಹಯೋಗದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ ನಿವೃತ್ತ ಅರಣ್ಯಾಧಿಕಾರಿ ಎಂ.ಎನ್.ಜಯಕುಮಾರ್ ಅವರ ಏಕವ್ಯಕ್ತಿ ‘ವನ್ಯಜೀವಿ ಛಾಯಾಚಿತ್ರ’ ಪ್ರದರ್ಶನ ‘ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0’ ಭಾನುವಾರ ಸಂಪನ್ನವಾಯಿತು.

ವನ್ಯಜೀವಿ ಸಪ್ತಾಹದ ಭಾಗವಾಗಿ ಹಮ್ಮಿಕೊಂಡಿದ್ದ ಈ ಪ್ರದರ್ಶನಕ್ಕೆ ಸೆ.28ರಂದು ಚಾಲನೆ ನೀಡಲಾಗಿತ್ತು. ಪರಿಷತ್ತಿನ ನಾಲ್ಕು ಗ್ಯಾಲರಿಗಳಲ್ಲಿ 231 ವೈವಿಧ್ಯಮಯ ವನ್ಯಜೀವಿಗಳ ಛಾಯಾಚಿತ್ರಗಳು ಪ್ರದರ್ಶನಗೊಂಡವು. ಪ್ರತಿನಿತ್ಯ ನೂರಾರು ಮಂದಿ ಈ ಪ್ರದರ್ಶನವನ್ನು ಕಣ್ತುಂಬಿಕೊಂಡಿದ್ದಾರೆ.

ಅರಣ್ಯ ಇಲಾಖೆಯು ‘ಹಸಿರು ಯೋಧರು’ ಎಂದು ನಾಮಕರಣ ಮಾಡಿದ್ದ ಬಾಗಲಕೋಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ ಗೌಡ ಸಿ. ಪಾಟೀಲ, ಕಾರವಾರ ವಿಭಾಗದ ವಲಯ ಅರಣ್ಯಾಧಿಕಾರಿ ಪ್ರಮೋದ್ ಬಿ., ಹೊಸಕೋಟೆಯ ವಲಯ ಅರಣ್ಯಾಧಿಕಾರಿ ವಿದ್ಯಾ ಭಾರತಿ ಬಿ.ಪಿ., ಕುದುರೆಮುಖ ಉಪ ವಲಯ ಅರಣ್ಯಾಧಿಕಾರಿ ಫೈಜೂರ್‌ರೆಹಮಾನ್, ಬೆಂಗಳೂರಿನ ಅರಣ್ಯ ಭವನದ ಉಪವಲಯ ಅರಣ್ಯಾಧಿಕಾರಿ ಎಚ್.ಆರ್. ಚಿದಾನಂದ, ಅಣಶಿ ವಿಭಾಗದ ಉಪವಲಯ ಅರಣ್ಯಾಧಿಕಾರಿ ವಿದ್ಯಾ, ಮೈಸೂರು ವಿಭಾಗದ ಉಪವಲಯ ಅರಣ್ಯಾಧಿಕಾರಿ ರಂಜಿತಾ ಬಿ.ಕೆ. ಹಾಗೂ ಮುದ್ದೇಬಿಹಾಳದ ಬೀಟ್ ಫಾರೆಸ್ಟರ್ ಗುರಣ್ಣ ಎಚ್. ಮಡಗಿ ಅವರನ್ನು ಎಂ.ಎನ್. ಜಯಕುಮಾರ್ ಸನ್ಮಾನಿಸಿದರು.

‘ಈ ಪ್ರದರ್ಶನವು ಸಂಭ್ರಮಾಚರಣೆ ಮಾತ್ರ ಆಗಿರದೆ, ಪರಿಸರ ಸಂರಕ್ಷಣೆಗೆ ನೀಡುತ್ತಿರುವ ಕರೆಯಾಗಿದೆ. ಭೂಮಿ ಮೇಲಿನ ಜೀವವೈವಿಧ್ಯವನ್ನು ಕಾಪಾಡಲು ಪ್ರತಿಯೊಬ್ಬರೂ ಕಟಿಬದ್ಧರಾಗಬೇಕು. ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ನಾವು ಇಲಾಖೆ ಜತೆಗೆ ಕೈಜೋಡಿಸಬೇಕು’ ಎಂದು ಎಂ.ಎನ್. ಜಯಕುಮಾರ್ ಹೇಳಿದರು.

ಸುದ್ದಿ 2 ನಿಮಿಷ

ಕೆಲಸದಿಂದ ವಜಾ: ಕಚೇರಿಗೆ ಬೆಂಕಿ ಹಾಕಿದ ನೌಕರರು

ಬೆಂಗಳೂರು: ಕೆಲಸದಿಂದ ವಜಾಗೊಂಡಿದ್ದಕ್ಕೆ ಆಕ್ರೋಶಗೊಂಡ ಇಬ್ಬರು ನೌಕರರು, ಪೃಥ್ವಿ ಪಾರ್ಕ್ ಸ್ಕ್ವೇರ್ ರಿಯಲ್ ಎಸ್ಟೇಟ್ ಕಂಪನಿಗೆ ಬೆಂಕಿ ಹಾಕಿದ್ದು ಪೀಠೋಪಕರಣಗಳು ಸುಟ್ಟಿವೆ. ಆರೋಪಿಗಳ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಹುಲ್ ಪೂಜಾರಿ ಹಾಗೂ ಪೀಟರ್ ಜಾನ್ ಎಂಬುವರು ಕೆಲಸದಿಂದ ವಜಾಗೊಂಡಿದ್ದರು. ಇದೇ ಸಿಟ್ಟಿನಿಂದ ಸೆ.27ರಂದು ಕಚೇರಿಗೆ ಬಂದು ಯಾರೂ ಇಲ್ಲದ ವೇಳೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಇದರಿಂದ ₹11 ಲಕ್ಷ ಮೌಲ್ಯದ ಪೀಠೋಪಕರಣಗಳು ಭಸ್ಮವಾಗಿವೆ ಎಂದು ಮಾಲೀಕರು ದೂರು ನೀಡಿದ್ದಾರೆ.

‘ರಾಹುಲ್ ಹಾಗೂ ಜಾನ್ ಅವರು ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ನೀಡಿದ್ದ ಟಾರ್ಗೆಟ್ ತಲುಪದ ಕಾರಣಕ್ಕೆ ಅವರನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಅದಾದ ಮೇಲೆ ಸಂಬಳ ಪಾವತಿಸುವಂತೆ ಬೆದರಿಕೆ ಹಾಕಿದ್ದರು. ನಂತರ, ಬಂದು ಬೆಂಕಿ ಹಾಕಿದ್ದಾರೆ. ಇದರಿಂದ ಸ್ವಿಚ್ ಬೋರ್ಡ್ ಹಾಗೂ ಪೀಠೋಪಕರಣಗಳು ಭಸ್ಮವಾಗಿವೆ’ ಎಂದು ಕಂಪನಿ ಮಾಲೀಕರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಶೋಧ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರಮಪಟ್ಟರಷ್ಟೇ ಪ್ರತಿಫಲ: ಡಿಕೆಶಿ

ಬೆಂಗಳೂರು: ‘ಲಕ್ಷ್ಮೀ ಫೋಟೊಗೆ ಪೂಜೆ ಮಾಡಿದರೆ ಹಣ ಸಿಗಲ್ಲ, ಗಣಪತಿ ಫೋಟೊಗೆ ಪೂಜೆ ಮಾಡಿದರೆ ವಿಘ್ನ ನಿವಾರಣೆಯಾಗಲ್ಲ, ಸರಸ್ವತಿ ಫೋಟೊಗೆ ಪೂಜೆ ಮಾಡಿದರೆ ವಿದ್ಯೆ ಬರಲ್ಲ. ಶ್ರಮ ಪಟ್ಟರೆ ಮಾತ್ರ ಪ್ರತಿಫಲ ಸಿಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್‌ನಿಂದ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಿದ್ಯಾಭ್ಯಾಸದ ಸಮಯದಲ್ಲಿ ಓದಿಗೆ ಪ್ರಾಮುಖ್ಯ ನೀಡಿದರೆ ಭವಿಷ್ಯದ ಬದುಕು ಚೆನ್ನಾಗಿರುತ್ತದೆ. ಆಗ ಪೋಷಕರು ಖುಷಿಯಾಗಿರುತ್ತಾರೆ. ನಮ್ಮ ಮಕ್ಕಳು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡಬೇಕು. ಅದಕ್ಕಾಗಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದೇವೆ’ ಎಂದರು.

ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷ ಕೆ.ಎಂ. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಪಿಸಿಸಿ ಉಪಾಧ್ಯಕ್ಷ ಎಚ್‌ಎಂ. ರೇವಣ್ಣ, ಶಾಸಕರಾದ ಎಸ್.ಟಿ. ಸೋಮಶೇಖರ್, ಎಂ. ಕೃಷ್ಣಪ್ಪ ಮಾತನಾಡಿದರು.

ಸಂಸದ ತೇಜಸ್ವಿ ಸೂರ್ಯಗೆ ಎಚ್ಚರಿಕೆ ನೀಡಿದ ಸಾರಿಗೆ ಒಕ್ಕೂಟ

ಕಾರ್‌ಪೂಲಿಂಗ್ ಹೇಳಿಕೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಮೀರಿ ನಡೆಸುವ ಕಾರ್‌ಪೂಲಿಂಗ್ ವ್ಯವಸ್ಥೆಗೆ ಬೆಂಬಲವಾಗಿ ಹೇಳಿಕೆ ನೀಡಿರುವ ಸಂಸದ ತೇಜಸ್ವಿ ಸೂರ್ಯ ತಮ್ಮ ಹೇಳಿಕೆಯನ್ನು ಹಿಂಪಡೆಯದೇ ಇದ್ದರೆ ಅವರ (ಸಂಸದರ) ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಎಚ್ಚರಿಸಿದೆ.

‘ಆಟೊ, ಟ್ಯಾಕ್ಸಿ ಚಾಲನೆ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವ ಸುಮಾರು 11 ಲಕ್ಷ ಜನರ ಹೊಟ್ಟೆ ಮೇಲೆ ಹೊಡೆಯುವ ಕೆಲಸಕ್ಕೆ ಸಂಸದರು ಬೆಂಬಲ ನೀಡಿದ್ದಾರೆ. ಅವರು ಹೇಳಿಕೆ ನೀಡಿದ್ದು ಮಾತ್ರವಲ್ಲ, ಕಾರ್‌ಪೂಲಿಂಗ್ ಪರ ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದಾರೆ’ ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮಾ ಭಾನುವಾರ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ನಾಲ್ಕು ಜನ ಗೆಳೆಯರು ಒಂದೇ ಕಾರಲ್ಲಿ ಹೋಗುವುದು ಕಾರ್ ಪೂಲಿಂಗ್ ಆಗುವುದಿಲ್ಲ. ಕಾರ್‌ಪೂಲಿಂಗ್‌ನಲ್ಲಿ ಹೋಗುವವರು ‘ಫ್ಲಾಟ್ ಫಾರ್ಮ್ ರಿವಾರ್ಡ್’ ಎಂದು ಶುಲ್ಕ ಕಟ್ಟಬೇಕು. ಈ ಸೇವೆ ನೀಡುವವರು ಸಂಬಂಧಿಸಿದ ಕಂಪನಿಗೆ ಪ್ರತಿ ಟ್ರಿಪ್‌ಗೆ ಶೇ 7ರಷ್ಟು ಕಮಿಷನ್ ಪಾವತಿಸಬೇಕು ಎಂದು ವಿವರಿಸಿದರು.

‘ಬಿಳಿ ನಂಬರ್‌ಪ್ಲೇಟ್ ಇರುವ ವಾಹನಗಳನ್ನು ಬಾಡಿಗೆಗೆ ಬಳಸುವಂತಿಲ್ಲ. ವಾಣಿಜ್ಯ ಬಳಕೆಗಾಗಿ ಹೆಚ್ಚು ತೆರಿಗೆ ಕಟ್ಟಿರುವ ಹಳದಿ ನಂಬರ್‌ಪ್ಲೇಟ್ ಇರುವ ವಾಹನಗಳಷ್ಟೇ ಬಾಡಿಗೆ ನಡೆಸಬೇಕು. ಮೋಟಾರು ವಾಹನ ಕಾಯ್ದೆಯಲ್ಲಿ ಹೀಗೆಂದು ಸ್ಪಷ್ಟವಾಗಿದೆ. ಹಾಗಾಗಿ ಸರ್ಕಾರ ಬಿಳಿ ನಂಬರ್‌ಪ್ಲೇಟ್ ವಾಹನಗಳಲ್ಲಿ ಕಾರ್‌ಪೂಲಿಂಗ್ ಮಾಡಲು ಅನುಮತಿ ನೀಡಬಾರದು. ಅವರಿಗೆ ಅನುಮತಿ ನೀಡುವುದಿದ್ದರೆ, ನಮಗೂ ಬಿಳಿ ನಂಬರ್‌ಪ್ಲೇಟ್‌ನಲ್ಲಿ ಬಾಡಿಗೆ ಓಡಿಸಲು ಅನುಮತಿ ನೀಡಬೇಕು’ ಎಂದು ಆಗ್ರಹಿಸಿದರು.

‘ತೇಜಸ್ವಿ ಸೂರ್ಯ ಅವರ ಹೇಳಿಕೆಯನ್ನು ಮೋಹನದಾಸ್ ಪೈ ಬೆಂಬಲಿಸಿದ್ದಾರೆ. ಪೈ ಅವರು ಝೂಮ್ ಕಾರ್ಸ್, ಟ್ರಿಪ್ ಫ್ಯಾಕ್ಟ್ರಿ ಎಂಬ ಸಾರಿಗೆ ಕಂಪನಿಗಳಲ್ಲಿ ಪಾಲುದಾರರಾಗಿದ್ದಾರೆ. ವೈಯಕ್ತಿಕ ಬಳಕೆಯ ವಾಹನಗಳಲ್ಲಿ ಬಾಡಿಗೆ ಮಾಡುವುದನ್ನು ನಿಯಂತ್ರಿಸಬೇಕು ಎಂದು ಸಾರಿಗೆ ಒಕ್ಕೂಟ ಪ್ರತಿಭಟನೆ ನಡೆಸಿದ ಬಳಿಕ ಸರ್ಕಾರ ಕ್ರಮ ಕೈಗೊಂಡಿರುವುದರಿಂದ ಈ ಕಂಪನಿಗಳಿಗೆ ನಷ್ಟವಾಗಿದೆ. ಅದಕ್ಕಾಗಿ ಮೋಹನದಾಸ್ ಪೈ ಈ ರೀತಿ ಹೇಳಿಕೆ ನೀಡಿದ್ದಾರೆ’ ಎಂದು ಆರೋಪಿಸಿದರು.

‘ತೇಜಸ್ವಿ ಸೂರ್ಯ ಕ್ಷಮೆ ಕೇಳಿ ತಮ್ಮ ಹೇಳಿಕೆ, ಪತ್ರ ವಾಪಸ್ ಪಡೆಯಬೇಕು. ಇಲ್ಲದೇ ಇದ್ದರೆ ಅ.13ರಂದು ಸಂಸದರ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು. ಆಗಲೂ ಅವರಿಗೆ ತಮ್ಮ ತಪ್ಪು ಅರಿವಾಗದಿದ್ದರೆ ತೇಜಸ್ವಿ ಸೂರ್ಯ ಅವರು ನಗರದಲ್ಲಿ ಎಲ್ಲಿ ಕಂಡರೂ ಅವರಿಗೆ ಕಪ್ಪು ಬಟ್ಟೆ ಪ್ರದರ್ಶಿಸಲಾಗುವುದು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಾಠ ಕಲಿಸಲಾಗುವುದು’ ಎಂದು ಎಚ್ಚರಿಸಿದರು.

ವಿವಿಧ ಸಾರಿಗೆ ಸಂಘಗಳ ಅಧ್ಯಕ್ಷರು ಪದಾಧಿಕಾರಿಗಳು ಇದ್ದರು.

ಚಲನಚಿತ್ರ ನಟ ರಮೇಶ್ ಅರವಿಂದ್ ಅಭಿಮತ

‘ಲೇಖನಿ ಮನುಷ್ಯಗೆ ಸಿಕ್ಕ ಪ್ರಬಲ ಅಸ್ತ್ರ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಬಿಡುಗಡೆಯಾದ ಕೃತಿಗಳ ಪ್ರತಿಯನ್ನು ರಮೇಶ್ ಅರವಿಂದ್ ಅವರು ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್ ಅವರಿಗೆ ವಿತರಿಸಿದರು. ಜಗದೀಶ್ ಶರ್ಮ ಸಂಪ ಮತ್ತು ಗಂಗಾವತಿ ಪ್ರಾಣೇಶ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಲೇಖನಿ ಮನುಷ್ಯನಿಗೆ ಸಿಕ್ಕ ಅತ್ಯಂತ ಪ್ರಬಲ ಅಸ್ತ್ರವಾಗಿದೆ. ಇದರ ನೆರವಿನಿಂದ ಯುದ್ಧವನ್ನೂ ಮಾಡಿಸಬಹುದು, ಶಾಂತಿಯನ್ನೂ ಸ್ಥಾಪಿಸಬಹುದು’ ಎಂದು ಚಲನಚಿತ್ರ ನಟ ರಮೇಶ್ ಅರವಿಂದ್ ಅಭಿಪ್ರಾಯಪಟ್ಟರು.

ಸಾವಣ್ಣ ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ ‘ಸಾವಣ್ಣ ಅಕ್ಷರ ಆರಾಧನೆ’ ಕಾರ್ಯಕ್ರಮದಲ್ಲಿ ವಿವಿಧ ಲೇಖಕರ ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ಶಿಲಾಯುಗದಲ್ಲಿ ಕಲ್ಲುಗಳ ಆಯುಧವನ್ನು ಅನ್ವೇಷಿಸಿದ ಮಾನವ, ಬಳಿಕ ಕೊಡಲಿ, ಖಡ್ಗ ಸೇರಿ ವಿವಿಧ ಆಯುಧಗಳನ್ನು ಬಳಸಿದ. ಆದರೆ, ಎಲ್ಲಾ ಆಯುಧಗಳಿಗಿಂತ ಶ್ರೇಷ್ಠ ಆಯುಧ ಲೇಖನಿ. ಇದರ ನೆರವಿನಿಂದ ವ್ಯಕ್ತಿಯು ತನ್ನ ಉತ್ತಮ ಯೋಚನೆಗಳನ್ನು ದಾಖಲಿಸಿದಾಗ ಮಾತ್ರ ಅದನ್ನು ಮುಂದಿನ ಪೀಳಿಗೆಗೆ ತಲುಪಿಸಲು ಸಾಧ್ಯವಾಗುತ್ತದೆ. ಸಾವಿರಾರು ವರ್ಷಗಳ ಹಿಂದೆ ಮೂಡಿದ ಯೋಚನೆಗಳು ಈಗಲೂ ಪ್ರೇರೇಪಿಸುತ್ತಿವೆ ಅಂದರೆ ಅದಕ್ಕೆ ಬರವಣಿಗೆಯ ಶಕ್ತಿಯೇ ಮೂಲ ಕಾರಣ’ ಎಂದು ಪ್ರತಿಪಾದಿಸಿದರು.

ಲೇಖಕ ಗಂಗಾವತಿ ಪ್ರಾಣೇಶ್, ‘ಪುಸ್ತಕಗಳಲ್ಲಿ ನನ್ನ ಅನುಭವಗಳನ್ನು ಬರೆಯುತ್ತಿದ್ದೇನೆ. ವಯಸ್ಸಿನ ಕಾರಣ ನನಗೆ ಅಧ್ಯಾತ್ಮದ ಕಡೆ ಒಲವು ಜಾಸ್ತಿ ಆಗುತ್ತಿದೆ. ಸಾಹಿತ್ಯದಲ್ಲಿ ರಾಮಾಯಣ ಹಾಗೂ ಮಹಾಭಾರತ ಶಾಶ್ವತ ಸಾಹಿತ್ಯವಾದರೆ, ಹಳಗನ್ನಡ ಕೃತಿಗಳು ತೂಕದ ಸಾಹಿತ್ಯವಾಗಿದೆ. ತತ್ವ ಹೇಳಿದ ಪುಸ್ತಕಗಳನ್ನು ಇತ್ತೀಚೆಗೆ ಸುಡುತ್ತಿದ್ದಾರೆ. ಅದು ಸುಟ್ಟವನ ಸಂಸ್ಕಾರ ತೋರಿಸುತ್ತದೆ’ ಎಂದರು.

ಲೇಖಕ ಹಾಗೂ ಪತ್ರಕರ್ತ ಗಿರೀಶ್ ರಾವ್ ಹತ್ವಾರ್ (ಜೋಗಿ), ‘ಪ್ರಕಾಶಕರು ಹಣ ಹಾಗೂ ಸಮಯವನ್ನು ಹಾಕಿ, ಪುಸ್ತಕ ಹೊರತರುತ್ತಾರೆ. ಜನರು ಅದನ್ನು ಓದಿದಾಗಲೆ ಅದು ಪುಸ್ತಕ ಎನಿಸಿಕೊಳ್ಳುತ್ತದೆ. ಇಲ್ಲವಾದರೆ ಅದು ಖಾಲಿ ಕಾಗದವಾಗಲಿದೆ. ಪುಸ್ತಕಕ್ಕೆ ಸಾವಿಲ್ಲ. ಒಂದು ಪುಸ್ತಕ ಓದಲು ಪ್ರಾರಂಭಿಸಿದಾಗ ಇನ್ನೊಂದು ಪುಸ್ತಕ ಓದುವಂತೆ ಪ್ರೇರಣೆ ದೊರೆಯಲಿದೆ’ ಎಂದು ಹೇಳಿದರು.

ಕಣ್ಣಿಗೆ ಕಾಣುವ ದೇವರು ತಂದೆ ತಾಯಿಗಳು. ಮಕ್ಕಳು ನಮ್ಮನ್ನು ದೇವರ ರೀತಿ ನೋಡಲು ಕೆಲವು ತ್ಯಾಗಗಳನ್ನು ಮಾಡಬೇಕಾಗುತ್ತದೆ

ವಿರೂಪಾಕ್ಷ ದೇವರಮನೆ
ಲೇಖಕ

ಬದುಕು ಸುಂದರ ಆಗಲು ನಮ್ಮೊಳಗೆ ನಮ್ಮನ್ನು ಕಂಡುಕೊಳ್ಳಬೇಕು. ಪ್ರಯತ್ನದಿಂದ ಮಾತ್ರ ಬದುಕು ಸುಂದರ ಆಗುತ್ತದೆ. ಪ್ರಯತ್ನವೇ ಪರಮಾತ್ಮ

ರಂಗಸ್ವಾಮಿ ಮೂಕನಹಳ್ಳಿ
ಲೇಖಕ

ಬಿಡುಗಡೆಯಾದ ಪುಸ್ತಕಗಳು

ಪುಸ್ತಕ	ಲೇಖಕರು
• ನುಡಿ ಪಡಿ	:ಗಂಗಾವತಿ ಪ್ರಾಣೇಶ್
• ಬದುಕು ಸುಂದರ	: ರಂಗಸ್ವಾಮಿ ಮೂಕನಹಳ್ಳಿ
• ನೋಡಲು ಮರೆಯದಿರಿ, ಮರೆತು ನಿರಾಶರಾಗದಿರಿ	: ಶರಣು ಹುಲ್ಲೂರು
• ಕಣ್ಣಿಗೆ ಕಾಣುವ ದೇವರು	: ವಿರೂಪಾಕ್ಷ ದೇವರಮನೆ
• ಬಿಟ್ಟ ಜಾಗ ತುಂಬಿ	: ಶ್ವೇತಾ ಬಿ.ಸಿ.
• ಲೈಫ್ ಇಸ್ ಜಿಂಗಲಾಲ	: ವಸಂತ್ ಗಿಳಿಯಾರ್
• ಜಸ್ಟ್ ಒಂದು ಗಂಟೆ	: ಜಗದೀಶ್ ಶರ್ಮ ಸಂಪ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

The General Public are hereby notified that my Clients **Mr. SUKETU NARENDRABHAI SHAH,** son of Mr. Narendrabhai K. Shah, and **Mrs. DRUMA SHAH,** wife of Mr. Suketu Narendrabhai Shah, residing at Sanam, 33-A, Mahalaxmi Society, Paldi, Ahmedabad-380 007, are the absolute joint owners of the property described in the Schedule B and C hereunder.

It is further notified that the Original Sale deed dated 07.03.2017, executed by M/s. Sobha Limited represented by its Senior Vice President legal and land affairs Mr.Ashok Kumar. N. B. in favour Mr. Suketu Narendrabhai Shah, son of Mr. Narendrabhai K. Shah, registered as No.BNS-1-16116/2016-17, in Book I, stored in CD No.BNSD565, in the office of the Sub-registrar, Banasawadi, Bangalore, pertaining to the Schedule B and C property has been misplaced/lost.

It is hereby requested that the finder of the above said Original Sale deed dated 07.03.2017 pertaining to the Schedule B and C property may be handed over to the undersigned within **TEN DAYS** from the date of publication of this public notice, failing which it will be presumed that the Original Sale deed dated 07.03.2017 pertaining to the Schedule B and C property has been misplaced/lost and cannot be traceable. The General Public are hereby further notified not to deal in respect of the Schedule B and C property with any body including the finder/holder of the original Sale deed. In the event of anybody doing so, the same will not be binding on my clients.

SCHEDULE ‘A’ PROPERTY

All that piece and parcel of the residentially converted land bearing survey No.62/2 and 62/3 situated at Chokkanahalli Village, Yelahanka Hobli, Bangalore North Taluk, and survey No.7/1, 9/1, and 9/2, situated at Nagareshwara Nagenahalli Village, K. R. Puram Hobli, Bangalore East Taluk, presently bearing Municipal No. 40/7/1, 9/1, 9/2, 62/3, 62/2, totally measuring 36 acres 25 guntas (148,214.77 square meters) and 19 guntas of Kharab land and bounded on the: **East by :** Survey No.10 and 11 of Nagareshwara Nagenahalli Village; **West by :** Thanisandra Main Road; **North by :** Survey No.63, 61, 58, 57, 56 and 46 of Thanisandra Village; and **South by :** Thanisandra Village boundary, remaining portion of Survey No.7 and 8 of Nagareshwara Nagenahalli Village;

SCHEDULE - B - PROPERTY

An undivided **0.05% share, right, title and interest** in the Schedule A property, mentioned herein above, which works out to 50.94 square meters or 548.28 square feet,

SCHEDULE - C PROPERTY

All that Three Bedroom Residential Flat bearing **No.A-1141**, present BBMP Katha No.1258/40/7/1, 9/1, 9/2, 62/2, 62/3-311, A-1141, in the Fourteenth Floor of the Apartment building known as **“SOBHA CASA SERENITA”,** having a super built up area of about **167.33 square meters or 1801.10 square feet** (including proportionate share of common areas and club house) along with One car parking space in the restricted common area of Basement/Ground Floor in the residential complex known as **“SOBHA CITY”,** constructed in the Schedule A property.

A. NAGARAJA, Advocate,
No.6, KHB Buildings II Block, 13th Cross, Indiranagar II Stage,
Bangalore - 560 038. Ph: 9448067511.
Bangalore: Dated: 06.10.2023

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಬಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

RENTAL PROPERTIES

Accommodation Available

Commercial

SHOWROOM/OFFICE SPACE 1500Sqft-1st Floor, 2450Sqft-2nd Floor JAYANAGAR 4th Block WideRoad with Lift Power,Power-Backup Suitable Banks/Jewellery/ Retail Call-9901453477

RENT-PLUG & Play-30/50/80 Seater-IT/ITES/Office Space with Lift/Parking/ Power,Power-Backup on Kanakapura Road Near Sarakki, J.P.NAGAR Metro Station Call-9901453477

ಶ್ರೀ ಜ್ಯೋತಿಷ್ಯಾಲಯ



ಉಚಿತ ಭವಿಷ್ಯ
ಫೋನಿನ ಮೂಲಕ ಪರಿಹಾರ
ಸ್ತ್ರೀ ಪುರುಷ, ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಕೇರಳ ಹಾಗೂ ಕೊಳ್ಳೇಗಾಲದ ರುಂಡ ಮಾಲಿನಿ ಪೂಜಾ ಶಕ್ತಿಯಿಂದ
ಸಂಪರ್ಕಿಸಿ : ಪಂಡಿತ್ ಸುರೇಶ್ ಭಟ್
9686330981
ಕೆಲವೇ ದಿನದಲ್ಲಿ ಪರಿಹಾರ

4FLOOR COMMERCIAL Building For Rent Next to By-Pass on Hyd Main Rd Contact-9986670488/whatsapp

RENT: OFFICE Space 3000Sqft 1st Floor 12000Sqft 2nd Floor 18000Sqft Ground First Second & Third Floor Suitable-IT/ITES/Pharma/ Industries with Lift/Parking/ Power,Power-Backup on Kanakapura Road Near Sarakki, J.P.NAGAR Metro Station Call-9901453477

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

ಸೋಮವಾರ, ಅಕ್ಟೋಬರ್ 9, 2023 | ಬೆಂಗಳೂರು
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭರತನಾಟ್ಯ ನೃತ್ಯಗಾರ್ತಿ ಜಾನಕಿ ರಂಗರಾಜನ್ ಅವರು ತಿರುವನಂತಪುರದಲ್ಲಿ ಭರತನಾಟ್ಯ ಪ್ರದರ್ಶನ ಮಾಡಿದರು

ದುಃಸ್ಥಿತಿಯಲ್ಲಿ ಇಬ್ರಾಹಿಂ ಸಾಹೇಬ್ ಸ್ಟ್ರೀಟ್ 2
ಷೇರು ಮಾರಾಟಕ್ಕೆ 28 ಕಂಪನಿ ಸಜ್ಜು: ₹38 ಸಾವಿರ ಕೋಟಿ ಸಂಗ್ರಹದ ಗುರಿ
ಲಂಚದ ಆಸೆಗೆ ನಿಯಮ ಮೀರಿ ಎನ್‌ಒಸಿ 8
ವರ್ಷದ ಕೊನೆಗೆ ಐಪಿಒ ಸಂಭ್ರಮ 10

ಉದ್ಘಾಟನೆಗೂ ಮುನ್ನವೇ ಮಾಸಿದ ಕಟ್ಟಡ • ವಾಹನ ನಿಲುಗಡೆಗೆ ತೊಂದರೆ

ಪಾರ್ಕಿಂಗ್ ಕಟ್ಟಡ ಗೋದಾಮು!

• ಆದಿತ್ಯ ಕೆ.ಎ.

ಬೆಂಗಳೂರು: ನಗರದ ಹೃದಯಭಾಗದಲ್ಲಿ ವಾಹನಗಳ ಪಾರ್ಕಿಂಗ್ ಸಮಸ್ಯೆ ತಗ್ಗಿಸಲು ಸ್ವಾತಂತ್ರ್ಯ ಉದ್ಯಾನದಲ್ಲಿ ನಿರ್ಮಿಸಿರುವ ‘ಬಹುಮಹಡಿ ಪಾರ್ಕಿಂಗ್ ಕಟ್ಟಡ’ದ ಕಾಮಗಾರಿ ಪೂರ್ಣಗೊಂಡು ಒಂದೂವರೆ ವರ್ಷವೇ ಕಳೆದಿದ್ದರೂ ಅದು ಬಳಕೆಗೆ ಲಭ್ಯವಾಗಿಲ್ಲ. ಕಟ್ಟಡವು ಈಗ ಬಿಬಿಎಂಪಿಯ ಗೋದಾಮಾಗಿದೆ.

ಪಾರ್ಕಿಂಗ್ ಕಟ್ಟಡದ ಕೆಳ ಅಂತಸ್ತನ್ನು ಬಿಬಿಎಂಪಿ ದಾಸ್ತಾನು ಕೇಂದ್ರವಾಗಿ ಮಾಡಿಕೊಂಡಿದೆ. ಜಲ್ಲಿ ತುಂಬಿದ ನೂರಾರು ಚೀಲ ಗಳನ್ನು ಇಡಲಾಗಿದೆ. ಇವುಗಳನ್ನು ಹೊತ್ತೊಯ್ಯಲು ಟ್ರ್ಯಾಕ್ಟರ್‌ಗಳು ಬಂದು ಹೋಗುತ್ತಿವೆ. ‘ಬಿಬಿಎಂಪಿ ಅಧಿಕಾರಿಗಳು, ಗುತ್ತಿಗೆದಾರರ ಸೂಚನೆಯಂತೆ ಇಲ್ಲಿ ಚೀಲ ಇಟ್ಟಿದ್ದೇವೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಈ ಜಲ್ಲಿ ಬಳಕೆ ಮಾಡುತ್ತಿದ್ದೇವೆ’ ಎಂದು ಕಾರ್ಮಿಕರು ಹೇಳಿದರು.

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತ ಹಲವು ಪ್ರಮುಖ ಕಚೇರಿಗಳಿವೆ. ಜೊತೆಗೆ ದಟ್ಟಣೆ ಪ್ರದೇಶವು ಇದಾಗಿದೆ. ದೂರದ ಊರು ಹಾಗೂ ವಿವಿಧ ಬಡಾವಣೆಗಳಿಂದ ತಮ್ಮ ಕೆಲಸಕ್ಕೆ ಬಂದವರು ವಾಹನಗಳನ್ನು ನಿಲುಗಡೆ ಮಾಡಲು ಪರದಾಡುತ್ತಿದ್ದಾರೆ. ಪಾರ್ಕಿಂಗ್ ಸಮಸ್ಯೆ ನಿವಾರಿಸಲು 2017ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬಹುಮಹಡಿ ಪಾರ್ಕಿಂಗ್ ಕಟ್ಟಡ ನಿರ್ಮಿಸಲು ಮುಂದಾಗಿತ್ತು.

ನಗರದ ಹೃದಯ ಭಾಗದಲ್ಲಿ ಇತ್ತೀಚೆಗೆ ವಾಹನ ದಟ್ಟಣೆ ತೀವ್ರವಾಗಿದೆ. ರಾಜಭವನ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತ, ಕ್ವಿನ್ಸ್ ರಸ್ತೆ, ರಾಮಚಂದ್ರ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಕೆ.ಆರ್.ವೃತ್ತದಲ್ಲಿ ದಿನದ ಬಹುತೇಕ ಅವಧಿಯಲ್ಲಿ ವಾಹನಗಳು ಸಂಚರಿಸುತ್ತಲೇ ಇರುತ್ತವೆ. ಎಲ್ಲೂ ವಾಹನಗಳ ನಿಲುಗಡೆಗೆ ಅವಕಾಶ ಇಲ್ಲ.

ಸಿಟಿ ಸಿವಿಲ್ ಕೋರ್ಟ್, ವಿಧಾನಸೌಧ, ಹೈಕೋರ್ಟ್, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬುದ್ಧ ವಿಹಾರ, ರಾಜ್ಯ ಉನ್ನತ ಶಿಕ್ಷಣ ಪರಿಷತ್, ಸೆಂಟ್ರಲ್ ಕಾಲೇಜು, ಕೆಪಿಟಿಸಿಎಲ್ ಕಚೇರಿ, ಜಲಮಂಡಳಿ ಕಚೇರಿಗಳಿವೆ. ಅಲ್ಲಿಗೆ ನಿತ್ಯ ಖಾಸಗಿ ವಾಹನಗಳಲ್ಲಿ ಸಾವಿರಾರು ಜನರು ಬರುತ್ತಾರೆ. ಖಾಸಗಿ ವಾಹನಗಳಲ್ಲಿ ಬಂದವರಿಗೆ ವಾಹನ ನಿಲುಗಡೆಗೆ ಸ್ಥಳವೇ ಸಿಗುತ್ತಿಲ್ಲ. ಕಟ್ಟಡ ಬಳಕೆಗೆ ಲಭ್ಯವಾಗಿದ್ದರೆ ಇಲ್ಲಿ ವಾಹನ ನಿಲುಗಡೆ ಮಾಡಿ ತಮ್ಮ ಕೆಲಸಗಳಿಗೆ ತೆರಳಲು ಸಾಧ್ಯವಾಗುತ್ತಿತ್ತು ಎಂದು ಚಾಲಕರು ಹೇಳುತ್ತಾರೆ.

ಪಾರ್ಕಿಂಗ್ ಕಟ್ಟಡದ ಕೆಳ ಅಂತಸ್ತಿನಲ್ಲಿ ಬಿಬಿಎಂಪಿ ಗುತ್ತಿಗೆದಾರರು ದಾಸ್ತಾನು ಮಾಡಿರುವ ಡಾಂಬರ್ ಮಿಶ್ರಣ ಮಾಡಿದ ಜಲ್ಲಿ ಕಲ್ಲು ಸಾಗಣೆ ಮಾಡುತ್ತಿರುವ ಟ್ರ್ಯಾಕ್ಟರ್‌ಗಳು.

ಸ್ಥಳ ಹುಡುಕುವುದೇ ಸವಾಲು

ರಜೆಯ ದಿನಗಳನ್ನು ಹೊರತು ಪಡಿಸಿ ಉಳಿದ ಸಂದರ್ಭದಲ್ಲಿ ಮೈಸೂರು ಬ್ಯಾಂಕ್ ವೃತ್ತದ ಸುತ್ತಮುತ್ತ ವಾಹನ ನಿಲುಗಡೆಗೆ ಅವಕಾಶವೇ ಇಲ್ಲವಾಗಿದೆ. ಪಾರ್ಕಿಂಗ್ ಸ್ಥಳ ಹುಡುಕಿಕೊಂಡು ಸುತ್ತಬೇಕಿದೆ. ಆದಷ್ಟು ಬೇಗ ಕಟ್ಟಡವನ್ನು ಬಳಕೆಗೆ ಲಭ್ಯವಾಗುವಂತೆ ಮಾಡಬೇಕು.

ಗೋವಿಂದರಾಜ್, ಎಳನೀರು ವ್ಯಾಪಾರಿ

ಶುಲ್ಕ ಪಾವತಿಸಲು ಸಿದ್ಧ

ಮೊದಲು ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಿ. ಬೇಕಿದ್ದರೆ ಹಣ ಪಾವತಿಸುತ್ತೇವೆ. ರಸ್ತೆಬದಿಯಲ್ಲಿ ಟ್ಯಾಕ್ಸಿ ನಿಲುಗಡೆ ಮಾಡಿದರೆ ಪೊಲೀಸರು ದಂಡ ಹಾಕುತ್ತಾರೆ. ಫೋಟೊ ತೆಗೆದು ವೆಬ್‌ಗೆ ಅಪ್‌ಲೋಡ್ ಮಾಡುತ್ತಾರೆ.

ಹನುಮಂತಪ್ಪ, ಟ್ಯಾಕ್ಸಿ ಚಾಲಕ

ಕಟ್ಟಡದ ನಿರ್ವಹಣೆ ಸಂಬಂಧ ನಾಲ್ಕು ಬಾರಿ ಟೆಂಡರ್ ಕರೆಯಲಾಗಿತ್ತು. ಯಾರೂ ಪಾಲ್ಗೊಂಡಿರಲಿಲ್ಲ. ಬಿಡ್ಡಿಂಗ್ ಮೊತ್ತ ಕಡಿಮೆ ಮಾಡಿ ಮತ್ತೆ ಟೆಂಡರ್ ಕರೆಯುತ್ತೇವೆ.

ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ, ಬಿಬಿಎಂಪಿ

ಗುತ್ತಿಗೆದಾರರಿಗೆ ಹಣ ಬಾಕಿ ಉಳಿಸಿಕೊಂಡ ಬಿಬಿಎಂಪಿ

‘ಈ ಯೋಜನೆಗೆ ₹79.81 ಕೋಟಿ ಮಂಜೂರಾಗಿತ್ತು. ಒಂದೂವರೆ ವರ್ಷದ ಹಿಂದೆಯೇ ಕಾಮಗಾರಿ ಮುಗಿಸಿದ್ದೇವೆ. ಸ್ಥಳದಲ್ಲಿ ಬೃಹತ್ ಬಂಡೆಗಳಿದ್ದವು. ಅವುಗಳನ್ನು ತೆರವುಗೊಳಿಸಿ, ಕಾಮಗಾರಿ ನಡೆಸಿದ್ದೆವು. ವಾಹನ ಸವಾರರಿಗೆ ಅನುಕೂಲವಾಗಲಿ ಎಂದು ನಿಗದಿತ ಅವಧಿಗೂ ಮುನ್ನವೇ ಕಾಮಗಾರಿ ಮುಕ್ತಾಯ ಮಾಡಿದ್ದೆವು. ಆದರೆ, ಬಿಬಿಎಂಪಿ ಇನ್ನೂ ₹27 ಕೋಟಿ ಹಣ ಬಾಕಿ ಉಳಿಸಿಕೊಂಡಿದೆ’ ಎಂದು ಹೈದರಾಬಾದ್ ಮೂಲದ ಕೆಎಂಬಿ ಕಂಪನಿಯ ಯೋಜನಾ ನಿರ್ದೇಶಕ ವಿವೇಕ್ ತಿಳಿಸಿದರು.

‘ಕಟ್ಟಡದ ಹಸ್ತಾಂತರಕ್ಕೆ ಕಂಪನಿ ಸಿದ್ಧ ಇದೆ. ಆದರೆ, ಬಿಬಿಎಂಪಿ ಅಧಿಕಾರಿಗಳ ಮಾತ್ರ ಹಣ ಪಾವತಿಸಲು ವಿಳಂಬ ಮಾಡುತ್ತಿದ್ದಾರೆ. ಎಂಜಿನಿಯರಿಂಗ್ ವಿಭಾಗಕ್ಕೆ ಈಗ ಹೊಸ ಅಧಿಕಾರಿಗಳು ಬಂದಿದ್ದಾರೆ. ಹಿಂದಿನ ಬಿಬಿಎಂಪಿ ಅಧಿಕಾರಿಗಳು ಹಣ ಬಿಡುಗಡೆಗೆ ಅವಕಾಶ ನೀಡುತ್ತಿಲ್ಲ. ಹಣ ಪಾವತಿಸಿ ವಾಹನ ನಿಲುಗಡೆ ಕಟ್ಟಡವಿದೆ. ಬಿಬಿಎಂಪಿ ಅಧಿಕಾರಿಗಳ ಧೋರಣೆಯಿಂದ ಸರ್ಕಾರಕ್ಕೂ ನಷ್ಟವಾಗುತ್ತಿದೆ’ ಎಂದು ಹೇಳಿದರು.

ಹಾಳಾಗುತ್ತಿವೆ ಉಪಕರಣಗಳು...

ಕಟ್ಟಡ ಸುಂದರವಾಗಿ ನಿರ್ಮಾಣಗೊಂಡಿದೆ. ಏಕಕಾಲದಲ್ಲಿ 556 ಕಾರುಗಳು ಹಾಗೂ 445 ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡಲು ಸ್ಥಳಾವಕಾಶ ಇದೆ. ಕಟ್ಟಡದ ಚಾವಣಿಯಲ್ಲಿ ಸೋಲಾರ್‌ನಿಂದ 500 ಕಿಲೋವಾಟ್ ವಿದ್ಯುತ್ ಉತ್ಪಾದಿಸಲು ಚಾವಣಿಯಲ್ಲಿ ಪರಿಕರ ಅಳವಡಿಕೆ ಮಾಡಲಾಗಿದೆ. ಅದು ಯಾವುದೂ ಬಳಕೆಗೆ ಲಭ್ಯವಾಗುತ್ತಿಲ್ಲ. 1 ಲಕ್ಷ ಲೀಟರ್ ಮಳೆ ನೀರು ಸಂಗ್ರಹಿಸಲು ಯೋಜನೆ ರೂಪಿಸಲಾಗಿತ್ತು. ಅದೂ ಸಹ ಸಾಕಾರಗೊಂಡಿಲ್ಲ.

ನಗರದ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಡಾಂಬರ್ ಮಿಶ್ರಣ ಮಾಡಿದ ಜಲ್ಲಿ ಕಲ್ಲಿನ ಚೀಲಗಳು

ವಿಸ್ತರಿತ ನೇರಳೆ ಮಾರ್ಗದಲ್ಲಿ ರೈಲು ಸಂಚಾರ ಇಂದಿನಿಂದ

ಉದ್ಘಾಟನೆ ಇಲ್ಲದೇ ಮೆಟ್ರೊ ಆರಂಭಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಸ್ತರಿತ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆಗೆ ಕಾಯುತ್ತಿದ್ದ ಮೆಟ್ರೊ ನೇರಳೆ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಯಾವುದೇ ಉದ್ಘಾಟನಾ ಕಾರ್ಯಕ್ರಮ ಇಲ್ಲದೇ ಅ.9ರಂದು ಆರಂಭಗೊಳ್ಳಲಿದೆ.

ನೇರಳೆ ಮಾರ್ಗದಲ್ಲಿ ಬಾಕಿ ಉಳಿದಿದ್ದ ಬೈಯಪ್ಪನಹಳ್ಳಿ-ಕೆ.ಆರ್. ಪುರ ನಡುವೆ 2.10 ಕಿಲೋಮೀಟರ್ ಹಾಗೂ ಕೆಂಗೇರಿ-ಚಲ್ಲಘಟ್ಟದ ನಡುವೆ 2.05 ಕಿ.ಮೀ ಕಾಮಗಾರಿಗಳು ಜುಲೈನಲ್ಲಿ ಪೂರ್ಣಗೊಂಡಿದ್ದವು. ಬಳಿಕ ಒಂದು ತಿಂಗಳು ವಿವಿಧ ಪರೀಕ್ಷೆಗಳು ನಡೆದಿದ್ದವು. ಸೆಪ್ಟೆಂಬರ್‌ನಲ್ಲಿ ಮೆಟ್ರೊ ರೈಲು ಸುರಕ್ಷತಾ ಆಯುಕ್ತರು (ಸಿಎಂಆರ್‌ಎಸ್) ಪರಿಶೀಲನೆ ನಡೆಸಿ, ವರದಿ ನೀಡಿದ್ದರು. ಆದರೆ, ಉದ್ಘಾಟನೆಗೆ ದಿನ ನಿಗದಿಯಾಗಿರಲಿಲ್ಲ. ಆದರೆ ಬಿಎಂಆರ್‌ಸಿಎಲ್ ಅಧಿಕಾರಿಗಳು ‘ಸದ್ಯದಲ್ಲೇ ಉದ್ಘಾಟನೆಗೊಳ್ಳಲಿದೆ’ ಎಂದು ಮಾಹಿತಿ ನೀಡಿದ್ದರು.

‘ಯಾವ ಉದ್ಘಾಟನೆಗೂ ಕಾಯದೇ ಅ.9ರಂದೇ ರೈಲು ಸಂಚಾರ ಆರಂಭಿಸಿ’ ಎಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದ ಕಾರಣ ಸೋಮವಾರ ಮೆಟ್ರೊ ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ.

ಮೆಟ್ರೊ ರೈಲು

‘ಎಕ್ಸ್’ನಲ್ಲಿ ಸಂಸದರ ಪೋಸ್ಟ್: ‘ಜನರಿಗೆ ತೀರ ಅಗತ್ಯವಾಗಿರುವ ಮೆಟ್ರೊ ನೇರಳೆ ಮಾರ್ಗದ ಉದ್ಘಾಟನೆಗೆ ಕಾಯುವುದು ಬೇಡ. ಕೂಡಲೇ ಆರಂಭಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಸೂಚನೆ ನೀಡಿದ್ದಾರೆ’ ಎಂದು ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಸಂಸದ ಪಿ.ಸಿ. ಮೋಹನ್ ‘ಎಕ್ಸ್’ ಕಾರ್ಪ್‌ನಲ್ಲಿ ಭಾನುವಾರ ಬೆಳಿಗ್ಗೆ ಪೋಸ್ಟ್ ಮಾಡಿ ಚರ್ಚೆ ಹುಟ್ಟುಹಾಕಿದ್ದರು.

ರೈಲು ಸಂಚಾರ ಆರಂಭಿಸಲು ಕೇಂದ್ರ ಸರ್ಕಾರ, ರಾಜ್ಯ ನಗರಾಭಿವೃದ್ಧಿ ಇಲಾಖೆಗೆ ಬರೆದಿದ್ದ ಪತ್ರವನ್ನು ಮಧ್ಯಾಹ್ನ ಪೋಸ್ಟ್ ಮಾಡಿದ್ದರು. ಆದರೆ, ಮೆಟ್ರೊ ಚಾಲನೆಗೊಳ್ಳುವ ಬಗ್ಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ರಾತ್ರಿವರೆಗೆ ಖಚಿತ ಪಡಿಸದ ಕಾರಣ ಗೊಂದಲ ಉಂಟಾಗಿತ್ತು.

ಬೆಳಿಗ್ಗೆ 5ಕ್ಕೆ ಆರಂಭ: ಬೈಯಪ್ಪನಹಳ್ಳಿ-ಕೆ.ಆರ್.ಪುರ ಹಾಗೂ ಕೆಂಗೇರಿ-ಚಲ್ಲಘಟ್ಟದ ನಡುವೆ ಅ.9ರಂದು ಮೆಟ್ರೊ ರೈಲು ಬೆಳಿಗ್ಗೆ 5ಕ್ಕೆ ವಾಣಿಜ್ಯ ಸಂಚಾರ ಆರಂಭಗೊಳ್ಳಲಿದೆ. ರಾತ್ರಿ 10.45ಕ್ಕೆ ದಿನದ ಕೊನೇ ಮೆಟ್ರೊ ಸಂಚರಿಸಲಿದೆ.

ವಿಸ್ತರಿತ ಪ್ರದೇಶ ಸೇರಿ ಈಗ ನೇರಳೆ ಮಾರ್ಗವು ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ಚಲ್ಲಘಟ್ಟದವರೆಗೆ 43.49 ಕಿಲೋಮೀಟರ್ ಉದ್ದವಿರಲಿದೆ. ಒಟ್ಟು 37 ನಿಲ್ದಾಣಗಳಿವೆ.

ನೇರಳೆ ಮತ್ತು ಹಸಿರು ಮಾರ್ಗ ಸೇರಿ ಮೆಟ್ರೊ ಸಂಪರ್ಕ ಜಾಲವು 69.66 ಕಿ.ಮೀ. ಇದ್ದಿದ್ದು, 73.81 ಕಿ.ಮೀ.ಗೆ ವಿಸ್ತರಣೆಗೊಂಡಂತಾಗಲಿದ್ದು, 66 ನಿಲ್ದಾಣಗಳಿವೆ. ಮೆಟ್ರೊ ರೈಲಿನಲ್ಲಿ ನಿತ್ಯ ಸರಾಸರಿ 6.5 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದು, ಮುಂದೆ 7.5 ಲಕ್ಷಕ್ಕೆ ಹೆಚ್ಚಳವಾಗಬಹುದು ಎಂಬ ನಿರೀಕ್ಷೆ ಇದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಜನರ ಅನುಕೂಲಕ್ಕಾಗಿ ಮೆಟ್ರೊ ಸಂಚಾರ ಆರಂಭಿಸಲು ಕೇಂದ್ರ ಸರ್ಕಾರ ಸೂಚಿಸಿದೆ. ಮುಂದೆ ಪ್ರಧಾನಿ ಮೋದಿ ಅವರು ವರ್ಚುವಲ್ ಮೂಲಕ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ.

ಪಿ.ಸಿ. ಮೋಹನ್
ಸಂಸದ, ಬೆಂಗಳೂರು ಸೆಂಟ್ರಲ್ ಕ್ಷೇತ್ರ

ನಗರದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಸಂಜೆ ಹಾಗೂ ರಾತ್ರಿ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಸಂಜೆ ಮಳೆ ಅಬ್ಬರಿಸಿತು.

ಮಹಾದೇವಪುರ ಭಾಗದಲ್ಲಿ ಜೋರು ಮಳೆಯಾಗಿದ್ದು, ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿಯಿತು. ಕೆಳಸೇತುವೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು.

ಕಳೆದ ಕೆಲವು ದಿನಗಳಿಂದ ಮಳೆ ಇರಲಿಲ್ಲ. ಇದರಿಂದ ಉಷ್ಣಾಂಶ ಹೆಚ್ಚಳವಾಗಿತ್ತು.

ಜೋರು ಮಳೆ ಸುರಿದು ವಾತಾವರಣ ಸ್ವಲ್ಪ ತಂಪಾಯಿತು. ಯಲಹಂಕ ನ್ಯೂಟೌನ್, ಯಲಹಂಕ, ದೇವನಹಳ್ಳಿ ಭಾಗದಲ್ಲೂ ಮಳೆಯಾಗಿದೆ.

ಶವಾಗಾರದ ಎದುರು ಸಂಬಂಧಿಕರ ರೋದನ • ಮಾಲೀಕರ ಕರೆ ಸ್ವೀಕರಿಸದ ಕಾರ್ಮಿಕರು • ಮೃತದೇಹ ತೋರಿಸುವಂತೆ ಸಂಬಂಧಿಕರ ಪಟ್ಟು

ಪಟಾಕಿ ದುರಂತ: ವರ್ತಕರಲ್ಲಿ ಭಯ, ಮಳಿಗೆಗಳು ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ–ತಮಿಳುನಾಡು ಗಡಿಯಲ್ಲಿನ ಅತ್ತಿಬೆಲೆಯಲ್ಲಿ ಸಂಭವಿಸಿದ ಪಟಾಕಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದ್ದು ಘಟನೆಯಿಂದ ಸುತ್ತಮುತ್ತಲ ಪ್ರದೇಶದಲ್ಲಿ ಉಂಟಾಗಿರುವ ಆತಂಕ ಇನ್ನೂ ಮುಂದುವರಿದಿದೆ.

ಶ್ರೀಬಾಲಾಜಿ ಟ್ರೇಡರ್ಸ್ ಪಟಾಕಿ ಗೋದಾಮು ದುರಂತದಿಂದ ಭಯ ಪಡುತ್ತಿರುವ ಅತ್ತಿಬೆಲೆ ಹಾಗೂ ಸುತ್ತಮುತ್ತಲಿನ ವ್ಯಾಪಾರಿಗಳು, ಭಾನುವಾರ ತಮ್ಮ ಮಳಿಗೆಗಳನ್ನು ಬಂದ್ ಮಾಡಿದ್ದರು.

‘ಪ್ರತಿ ಭಾನುವಾರ ಪಟಾಕಿ ವ್ಯಾಪಾರ ಹೆಚ್ಚಿರುತ್ತಿತ್ತು. ಬೆಂಗಳೂರಿನ ಜನರು ಮಳಿಗೆಗೆ ಬಂದು ಪಟಾಕಿ ಖರೀದಿಸುತ್ತಿದ್ದರು. ಆದರೆ, ಭಾನುವಾರ ಎಲ್ಲ ಅಂಗಡಿಗಳನ್ನು ಬಂದ್ ಮಾಡಲಾಗಿದೆ’ ಎಂದು ಸ್ಥಳೀಯರು ಹೇಳಿದರು.

‘ದುರಂತದಿಂದ ಕಾರ್ಮಿಕರು ಹೆಚ್ಚು ಭಯಗೊಂಡಿದ್ದಾರೆ. ಭಾನುವಾರ ಯಾರೊಬ್ಬರೂ ಕೆಲಸದ ಸ್ಥಳಕ್ಕೆ ಬಂದಿಲ್ಲ. ಮಾಲೀಕರ ಕರೆಗಳನ್ನೂ ಸ್ವೀಕರಿಸಿಲ್ಲ’ ಎಂದರು.

‘ಗೋದಾಮಿನಲ್ಲಿ ಬಾಲಕಾರ್ಮಿಕರು’: ‘ಮೃತರಲ್ಲಿ ಬಾಲಕರು ಇದ್ದಾರೆ. ಗೋದಾಮು ಮಾಲೀಕ, ಬಾಲ ಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ಮಾಡಿಸುತ್ತಿದ್ದರು. ಈ ಬಗ್ಗೆಯೂ ಅವರ ವಿರುದ್ಧ ಕ್ರಮ ಜರುಗಿಸಲು ಚಿಂತನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಅಗ್ನಿಶಾಮಕ ದಳ ಹಾಗೂ ಪೊಲೀಸರು ಸೇರಿದಂತೆ 200ಕ್ಕೂ ಹೆಚ್ಚು ಸಿಬ್ಬಂದಿ ನಿರಂತರವಾಗಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ.

ಅತ್ತಿಬೆಲೆಯ ಆಕ್ಸ್‌ಫರ್ಡ್ ವೈದ್ಯಕೀಯ ಕಾಲೇಜಿನ ಶವಾಗಾರದ ಎದುರು ಆಂಬುಲೆನ್ಸ್ ಅಡ್ಡಗಟ್ಟಿ ಮೃತರ ಸಂಬಂಧಿಕರು ಭಾನುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಅಗ್ನಿಶಾಮಕ ದಳ ಕಾರ್ಯಾಚರಣೆ: ದುರಂತದ ಬಗ್ಗೆ ಮಾಹಿತಿ ಲಭ್ಯವಾಗುತ್ತಿದ್ದಂತೆ ಎಲೆಕ್ಟ್ರಾನಿಕ್ ಸಿಟಿ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಬಂದು ಕಾರ್ಯಾಚರಣೆ ಶುರು ಮಾಡಿದ್ದರು. ಪಟಾಕಿ ಸಿಡಿಯುತ್ತಿದ್ದರಿಂದ ಕಾರ್ಯಾಚರಣೆಗೆ ಅಡ್ಡಿಯಾಗಿತ್ತು. ಬೆಂಕಿಯ ತೀವ್ರತೆ ಹೆಚ್ಚಾಗಿದ್ದರಿಂದ 134 ಸಿಬ್ಬಂದಿ ಕಾರ್ಯಾಚರಣೆಗೆ ಇಳಿದಿದ್ದರು. 10 ವಾಹನಗಳ ಮೂಲಕ ಬೆಂಕಿ ನಂದಿಸಲಾಯಿತು’ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ಹೇಳಿದರು.

ಶನಿವಾರ ರಾತ್ರಿಯಿಂದಲೇ ಮೃತರ ಸಂಬಂಧಿಕರು ತಮಿಳುನಾಡಿನಿಂದ ತಂಡೋಪತಂಡವಾಗಿ ಆಕ್ಸ್‌ಫರ್ಡ್ ಆಸ್ಪತ್ರೆಗೆ ಬಂದಿದ್ದರು. ಆಸ್ಪತ್ರೆಯ ಎದುರಿನ ಶವಾಗಾರದ ಎದುರು ಅವರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

ಭಾನುವಾರ ಬೆಳಿಗ್ಗೆ ಮೃತದೇಹ ನೋಡಲು ಪೊಲೀಸರು ಅವಕಾಶ ನೀಡಲಿಲ್ಲ. ಸಿಟ್ಟಾದ ಸಂಬಂಧಿಕರು, ಮೃತದೇಹ ತೋರಿಸುವಂತೆ ಪಟ್ಟು ಹಿಡಿದರು. ನಂತರ, ಅವಕಾಶ ಕಲ್ಪಿಸಲಾಯಿತು. ಕುಟುಂಬದ ಸದಸ್ಯರನ್ನು ಒಬ್ಬರಬ್ಬರಾಗಿ ಕರೆದೊಯ್ದು ಮೃತದೇಹಗಳನ್ನು ತೋರಿಸಲಾಯಿತು.

ಮೃತದೇಹ ನೋಡಿ ಹೊರಗೆ ಬಂದ ಸಂಬಂಧಿಕರು ಆಸ್ಪತ್ರೆ ಆವರಣದಲ್ಲಿ ರೋದಿಸಿದರು. ಮೃತರ ತಾಯಂದಿರು, ಮಕ್ಕಳನ್ನು ನೆನೆದು ಆವರಣದಲ್ಲಿ ಹೊರಳಾಡಿ ಅತ್ತರು. ಈ ದೃಶ್ಯ ಮನಕಲುಕುವಂತಿತ್ತು.

ತಮಿಳುನಾಡಿನ ಅಧಿಕಾರಿಗಳು ಭೇಟಿ: ಘಟನಾ ಸ್ಥಳಕ್ಕೆ ಕೃಷ್ಣಗಿರಿ ಜಿಲ್ಲಾಧಿಕಾರಿ ಕೆ.ಎಂ. ಸರಾಯು ಸೇರಿದಂತೆ ತಮಿಳುನಾಡಿನ ಹಲವು ಅಧಿಕಾರಿಗಳು ಹಾಗೂ ರಾಜಕೀಯ ಮುಖಂಡರು ಸ್ಥಳಕ್ಕೆ ಬಂದಿದ್ದರು.

ಮೃತರು ಹಾಗೂ ಅವರ ಕುಟುಂಬದವರನ್ನು ಸಮಾಧಾನಪಡಿಸಿದರು. ಅವರ ಎದುರು ಅಳಲು ತೋಡಿಕೊಂಡ ಮಹಿಳೆಯರು, ‘ಸಣ್ಣ ವಯಸ್ಸಿನಲ್ಲೇ ಅವರು ಶವಾಗಾರದಲ್ಲಿ ಮಲಗಿದ್ದಾರೆ. ನಮ್ಮ ಮಕ್ಕಳನ್ನು ತಂದುಕೊಡಿ’ ಎಂದು ಗೋಗರೆದರು. ಇದನ್ನು ನೋಡಿದ್ದ ಅಧಿಕಾರಿಗಳ ಕಣ್ಣಲ್ಲೂ ನೀರು ತುಂಬಿಕೊಂಡಿತ್ತು.

‘ಮೊದಲಿಗೆ ಸಿಡಿದಿದ್ದು 120, 220 ಶಾಟ್ಸ್ ಪಟಾಕಿ’

ಬೆಂಗಳೂರು: ‘ಕಂಟೇನರ್‌ನಲ್ಲಿ ತರಲಾಗಿದ್ದ ಪಟಾಕಿ ಬಾಕ್ಸ್‌ಗಳನ್ನು ಒಂದೊಂದಾಗಿ ಮಳಿಗೆಯೊಳಗೆ ಕೊಂಡೊಯ್ಯುತ್ತಿದ್ದೆವು. ಶನಿವಾರ ಮಧ್ಯಾಹ್ನ 3.15ರ ಸುಮಾರಿಗೆ, 120 ಹಾಗೂ 220 ಶಾಟ್ಸ್ (ಮೇಲಕ್ಕೆ ಚಿಮ್ಮುವ ಸಿಡಿಮದ್ದು) ಪಟಾಕಿ ಬಾಕ್ಸ್‌ಗಳಲ್ಲಿ ಕಿಡಿ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿತು’

ಪಟಾಕಿ ದುರಂತದಿಂದ ಪಾರಾಗಿರುವ ಕೆಲಸಗಾರ ಲೋಕೇಶ್ವರನ್ ಘಟನೆ ಬಗ್ಗೆ ಪೊಲೀಸರಿಗೆ ಎರಡು ಪುಟಗಳ ಹೇಳಿಕೆ ನೀಡಿದ್ದಾರೆ.

‘ಧರ್ಮಪುರಿ ಜಿಲ್ಲೆಯ ಅರೂರ್ ತಾಲ್ಲೂಕಿನ ಟಿ. ಅಮ್ಮಾಪಟ್ಟೈ ಗ್ರಾಮದ ನಾನು ಹಾಗೂ ಸಂಬಂಧಿಕರು ಕಳೆದ ವರ್ಷ ಅತ್ತಿಬೆಲೆಗೆ ಬಂದು ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡಿದ್ದೆವು. ಕೆಲ ದಿನಗಳ ಹಿಂದೆ ಕರೆ ಮಾಡಿದ್ದ ನವೀನ್ ರೆಡ್ಡಿ, ಅಂಗಡಿಗೆ ಕೆಲಸಕ್ಕೆ ಬರುವಂತೆ ಹೇಳಿದ್ದರು. ನಾವು 10 ಮಂದಿ, ವಾರದ ಹಿಂದೆಯಷ್ಟೇ ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆಗೆ ಬಂದಿದ್ದೆವು.’

‘ವಾಣಿಯಾಂಬಾಡಿಯಿಂದ 12 ಮಂದಿ, ಕಲ್ಲುಕುರ್ಚಿಯಿಂದ 5 ಮಂದಿ ಸಹ ಮಳಿಗೆಗೆ ಬಂದಿದ್ದರು. ಪಟಾಕಿ ಮಳಿಗೆ ಎದುರಿನ ಕೊಠಡಿಯಲ್ಲಿ ಎಲ್ಲರೂ ಉಳಿದುಕೊಂಡಿದ್ದೆವು. ನಮಗೆ ದಿನಕ್ಕೆ ₹ 600 – ₹ 700 ಕೂಲಿ ಕೊಡುತ್ತಿದ್ದರು.’

‘ಅ. 7ರಂದು ಮಧ್ಯಾಹ್ನ ಎಲ್ಲರೂ ಊಟ ಮಾಡಿಕೊಂಡು ವಾಪಸು ಮಳಿಗೆಗೆ ಬಂದಿದ್ದೆವು. ಕಂಟೇನರ್‌ನಲ್ಲಿದ್ದ ಪಟಾಕಿ ಬಾಕ್ಸ್‌ಗಳನ್ನು ಇಳಿಸುತ್ತಿದ್ದೆವು. ಶಾಟ್ಸ್ ಪಟಾಕಿ ಬಾಕ್ಸ್‌ಗಳಲ್ಲಿ ಕಿಡಿ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿತ್ತು. ನವೀನ್ ರೆಡ್ಡಿ ಕುಳಿತಿದ್ದ ಸ್ಥಳದಲ್ಲಿ ಮೊದಲಿಗೆ ಬೆಂಕಿ ತಾಗಿ, ಕೈಗೆ ಸುಟ್ಟ ಗಾಯವಾಯಿತು. ಅವರು ಹೊರಗೆ ಓಡಿಹೋದರು.’

‘ಬಾಗಿಲು ಬಳಿಯಿದ್ದ ಎಲ್ಲ ಪಟಾಕಿ ಬಾಕ್ಸ್‌ಗಳಿಗೂ ಬೆಂಕಿ ತಗುಲಿತ್ತು. ಪಟಾಕಿಗಳು ಸಿಡಿಯಲಾರಂಭಿಸಿದ್ದವು. ಬೆಂಕಿಯ ಕೆನ್ನಾಲಗೆ ಹೆಚ್ಚಾಗಿತ್ತು. ನಾನು, ಜೊತೆಗಿದ್ದ ಕಾರ್ಮಿಕ ಭೀಮರಾವ್ ಜೀ ಹಾಗೂ ಕೆಲ ಮಹಿಳೆಯರು ಹೊರಗೆ ಓಡಿಬಂದೆವು. ನನ್ನ ಸಂಬಂಧಿಕರು ಹಾಗೂ ಇತರರು ಒಳಗಡೆ ಸಿಲುಕಿದ್ದರು. ಭಾರವಾದ ಪಟಾಕಿ ಬಾಕ್ಸ್‌ಗಳನ್ನು ಮಳಿಗೆಯಲ್ಲಿ ಎಲ್ಲೆಂದರಲ್ಲಿ ಇರಿಸಿದ್ದರಿಂದ ಅವರೆಲ್ಲರೂ ಹೊರಗೆ ಬರಲು ಆಗಲಿಲ್ಲ. ಅಷ್ಟರಲ್ಲೇ ಗೋದಾಮಿನ ಎಲ್ಲ ಭಾಗಕ್ಕೂ ಬೆಂಕಿ ಆವರಿಸಿತ್ತು.’

‘ಸ್ಥಳಕ್ಕೆ ಬಂದ ರಕ್ಷಣಾ ಸಿಬ್ಬಂದಿ, ಗೋದಾಮಿನಲ್ಲಿದ್ದ ನಾಲ್ವರನ್ನು ರಕ್ಷಿಸಿದರು. ಉಳಿದವರು ಒಳಗೆಯೇ ಸಿಲುಕಿ ಸಜೀವ ದಹನವಾದರು. ಸ್ಫೋಟ ಆಗುವ ಸಾಧ್ಯತೆ ಇರುವುದು ಗೊತ್ತಿದ್ದರೂ ಮಾಲೀಕರು ನಿರ್ಲಕ್ಷ್ಯ ವಹಿಸಿದ್ದರು. ನಮಗೆ ಯಾವುದೇ ತರಬೇತಿ ನೀಡಿರಲಿಲ್ಲ. ಬೆಂಕಿ ನಂದಿಸುವ ಯಾವುದೇ ಉಪಕರಣವಿರಲಿಲ್ಲ. ಜೊತೆಗೆ, ಮಳಿಗೆಗೆ ತುರ್ತು ಬಾಗಿಲುಗಳೂ ಇರಲಿಲ್ಲ’ ಎಂದು ಲೋಕೇಶ್ವರನ್ ಹೇಳಿದ್ದಾರೆ.

ಮೃತರ ಸಂಬಂಧಿಕರ ಆಕ್ರಂದನ ಆಕ್ಸ್‌ಫರ್ಡ್ ಆಸ್ಪತ್ರೆ ಎದುರು ಮುಗಿಲು ಮುಟ್ಟಿತ್ತು

ಕೇಂದ್ರ ತಂಡದಿಂದ ಬರ ಅಧ್ಯಯನ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನಲ್ಲಿ ಮಳೆಯ ಕೊರತೆಯಿಂದ ಎದುರಾಗಿರುವ ಬರ ಪರಿಸ್ಥಿತಿಯನ್ನು ಕೇಂದ್ರ ಜಲ ಆಯೋಗದ ನಿರ್ದೇಶಕರ ನೇತೃತ್ವದ ಅಧಿಕಾರಿಗಳ ತಂಡವು ಭಾನುವಾರ ಪರಿಶೀಲಿಸಿತು. ಹುಲ್ಲರಿವೆ ಗ್ರಾಮದ ಜಮೀನಿನಲ್ಲಿ ರಾಗಿ ಬೆಳೆ ಹಾನಿಯಾಗಿರುವುದನ್ನು ಅಧಿಕಾರಿಗಳು ವೀಕ್ಷಿಸಿದರು.

ಮಳೆ ಇಲ್ಲದೆ, ತೆನೆ ಬರದ ರಾಗಿ ಬೆಳೆ ಕುರಿತು ರೈತರು ಅಳಲು ತೋಡಿಕೊಂಡರು. ಅಂತರ್ಜಲ ಬತ್ತಿರುವ ಕಾರಣ, ಸಾವಿರ ಅಡಿ ಕೊರೆದರೂ ಕೊಳವೆ ಬಾವಿಯಲ್ಲಿ ನೀರಿಲ್ಲ ಎಂದೂ ವಿವರಿಸಿದರು. ರಾಗಿ ಬೆಳೆಗೆ ಬಿತ್ತನೆ, ರಸಗೊಬ್ಬರ ಸೇರಿ ಎಕರೆಗೆ ಸಾವಿರಾರು ರೂಪಾಯಿ ಹಣ ಖರ್ಚು ಮಾಡಲಾಗಿದೆ. ಮಳೆ ಇಲ್ಲದೆ ಬೆಳೆ ಹಾನಿ ಆಗಿರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂದು ರೈತರು ಸಮಸ್ಯೆ ವಿವರಿಸಿದರು.

ಜಿಲ್ಲೆಯಲ್ಲಿ ಮಳೆ ಕೊರತೆಯಿಂದ 49,559 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ವಾಸ್ತವದಲ್ಲಿ ಕೃಷಿ, ತೋಟಗಾರಿಕೆ ಸೇರಿ ಅಪಾರ ಬೆಳೆ ಹಾನಿಯಾಗಿದ್ದು ನಷ್ಟದ ಪ್ರಮಾಣ ₹85 ಕೋಟಿ ಎಂದು ಅಂದಾಜಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಶಿವಶಂಕರ ಎನ್. ತಿಳಿಸಿದರು.

ತ್ಯಾಮಗೊಂಡ್ಲು ಹೋಬಳಿಯ ಶಿರಗನಹಳ್ಳಿ ರೈತರೊಬ್ಬರ ಹೊಲದಲ್ಲಿ ರಾಗಿ ಬೆಳೆ ವೀಕ್ಷಿಸಿದ ಕೇಂದ್ರ ಬರ ಅಧ್ಯಯನ ತಂಡ.

ಕಾವೇರಿ: ಆತ್ಮಹತ್ಯೆ ಅಣಕು ಪ್ರದರ್ಶನ

ಕರ್ನಾಟಕ ಜಲಸಂರಕ್ಷಣಾ ಸಮಿತಿಯ ನಿಯೋಗ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಮೂಲಕ ಸರ್ಕಾರ ರಾಜ್ಯದ ರೈತರನ್ನು ಆತ್ಮಹತ್ಯೆಗೆ ದೂಡುತ್ತಿದೆ ಎಂದು ಆರೋಪಿಸಿ ಕರ್ನಾಟಕ ಜಲಸಂರಕ್ಷಣಾ ಸಮಿತಿಯ ಸದಸ್ಯರು ಭಾನುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಆತ್ಮಹತ್ಯೆಯ ಅಣಕು’ ಪ್ರದರ್ಶನ ನಡೆಸಿ ಪ್ರತಿಭಟಿಸಿದರು.

ಸಮಿತಿಯ ರಾಜ್ಯ ಸಂಚಾಲಕ ಕುರುಬೂರು ಶಾಂತಕುಮಾರ್, ‘ತಮಿಳುನಾಡಿಗೆ ಪ್ರತಿನಿತ್ಯ 3 ಸಾವಿರ ಕ್ಯೂಸೆಕ್ ಕಾವೇರಿ ನದಿ ನೀರನ್ನು ಹರಿಸಬೇಕೆಂಬ ಕಾವೇರಿ ನೀರು ನಿರ್ವಹಣಾ ಮಂಡಳಿಯ ಅವೈಜ್ಞಾನಿಕ ಆದೇಶದಿಂದ ಕರ್ನಾಟಕದ ರೈತರಿಗೆ ಸಂಕಷ್ಟ ಎದುರಾಗಿದೆ. ಇದೇ 9 ಮತ್ತು 10ರಂದು ಸಮಿತಿಯ ನಿಯೋಗವು ದೆಹಲಿಗೆ ತೆರಳಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡಲಿದೆ. ರಾಷ್ಟ್ರಪತಿ ಭೇಟಿಗೆ ಸಮಯ ಕೇಳಲಾಗಿದ್ದು, ಅನುಮತಿ ದೊರೆತರೆ ಭೇಟಿ ಮಾಡಲಾಗುವುದು’ ಎಂದು ಮಾಹಿತಿ ನೀಡಿದರು.

‘ಕೇಂದ್ರ ಬರ ಅಧ್ಯಯನ ತಂಡ ಕೆಲವು ಜಿಲ್ಲೆಗಳಲ್ಲಿ ಕಾಟಾಚಾರಕ್ಕೆ ಬರ ವೀಕ್ಷಣೆ ಮಾಡುತ್ತಿದೆ. ರೈತರ ಸಂಕಷ್ಟಗಳನ್ನು ಕೇಳುತ್ತಿಲ್ಲ. ರಾಜ್ಯದ 195 ತಾಲ್ಲೂಕುಗಳಲ್ಲಿ ಬರ ಎದುರಾಗಿದ್ದು, ಸುಮಾರು 40 ಲಕ್ಷ ಹೆಕ್ಟರ್‌ನಲ್ಲಿ ₹30 ಸಾವಿರ ಕೋಟಿ ನಷ್ಟವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭಿಕ್ಷೆಯ ರೂಪದಲ್ಲಿ ಪರಿಹಾರ ನೀಡುತ್ತಿವೆ’ ಎಂದು ದೂರಿದರು.

ಮೊಬೈಲ್ ಪಾವತಿ ಆ್ಯಪ್ ಜಾಗದಲ್ಲಿ 'ಮಧ್ಯವರ್ತಿ'ಗಳು ಪ್ರತ್ಯಕ್ಷ ● ಮೊಬೈಲ್ ಪರಿಶೀಲಿಸಲು ಸಿಬ್ಬಂದಿ ಸಲಹೆ

ಬಿಎಂಟಿಸಿ: ಲಂಚಕ್ಕೆ ಹಳೆ ಮಾರ್ಗ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಲಂಚ ಪಡೆದ ಬಿಎಂಟಿಸಿ ಅಧಿಕಾರಿಗಳು ಸಿಕ್ಕಿಬೀಳುತ್ತಿದ್ದಂತೆ, ಮಧ್ಯವರ್ತಿಗಳ ಮೂಲಕ ಹಣ ಪಡೆಯುವ ಹಳೆ ಮಾರ್ಗ ಮತ್ತೆ ಚಾಲ್ತಿಗೆ ಬಂದಿದೆ.

ಎಲ್ಲ ಘಟಕಗಳ ನಿರ್ವಾಹಕರ ಮೊಬೈಲ್‌ಗಳನ್ನು, ಅದಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದರೆ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗುತ್ತದೆ ಎಂದು ಬಿಎಂಟಿಸಿಯ ಕೆಲವು ಸಿಬ್ಬಂದಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಬಿಎಂಟಿಸಿ 33ನೇ ಘಟಕದಲ್ಲಿ ಸಿಬ್ಬಂದಿಯಿಂದ ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಅಧಿಕಾರಿಗಳು ಲಂಚ ಪಡೆದಿದ್ದರು. ಈ ಬಗ್ಗೆ ದೂರು ದಾಖಲಾಗಿದ್ದರಿಂದ ಬಿಎಂಟಿಸಿ ಸಹಾಯಕ ಭದ್ರತಾ ಹಾಗೂ ಜಾಗೃತಾಧಿಕಾರಿ ಸಿ.ಕೆ. ರಮ್ಯಾ ನೇತೃತ್ವದಲ್ಲಿ ತನಿಖೆ ನಡೆದಿತ್ತು. ₹ 4.25 ಲಕ್ಷ ಲಂಚ ಪಡೆದಿರುವುದು ಸಾಬೀತಾಗಿರುವುದಾಗಿ ಅವರು ವರದಿ ನೀಡಿದ್ದರು. ಈ ವರದಿಯ ಅನ್ವಯ ಡಿಪೊ ಮ್ಯಾನೇಜರ್, ಇನ್‌ಸ್ಪೆಕ್ಟರ್, ಸಂಚಾರ ನಿಯಂತ್ರಕ, ಹಾಜರಾತಿ ನಿರ್ವಾಹಕ ಸೇರಿದಂತೆ 7 ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಅಮಾನತು ಮಾಡಲಾಗಿತ್ತು. ಈ ರೀತಿಯ ಲಂಚ ಪ್ರಕರಣಗಳು ಎಲ್ಲ ಕಡೆಗಳಲ್ಲಿ ನಡೆಯುತ್ತಿವೆ ಎಂದು ದೂರಿದ್ದಾರೆ.

'ನಾನು ಕೆಲಸ ಮಾಡುವ 21ನೇ ಡಿಪೊದಲ್ಲಿ ಈಗಿರುವ ಹೊಸ ಮ್ಯಾನೇಜರ್ ಬಿಟ್ಟು, ಹಿಂದಿನ ಎಲ್ಲರೂ ಲಂಚ ಪಡೆಯುತ್ತಿದ್ದರು. ಡಿಪೊ ಮ್ಯಾನೇಜರ್ ಮಾತ್ರವಲ್ಲ, ವಿಭಾಗೀಯ ನಿಯಂತ್ರಕರವರೆಗೂ ಇದರ ಕಬಂಧಬಾಹು ಚಾಚಿದೆ' ಎಂದು ಹೆಸರು ಹೇಳಲು ಇಚ್ಛಿಸದ ಸಿಬ್ಬಂದಿ ಹೇಳಿದರು.

'ತಿಂಗಳು ಮಾಮೂಲಿ ಕೊಡಬೇಕು. ಇಲ್ಲದಿದ್ದರೆ ಕಿರುಕುಳ ನೀಡುತ್ತಾರೆ. 33ನೇ ಡಿಪೊದಲ್ಲಿ ಹಗರಣ ಬಯಲಾದ ಮೇಲೆ ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಲಂಚ ಪಡೆಯುವುದು ಕಡಿಮೆಯಾಗಿದೆ. ಆದರೆ, ಯಾವುದೋ ಹೋಟೆಲ್ ಅಥವಾ ಅಂಗಡಿ ಎದುರು ಹಣ ನೀಡಲು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಅಲ್ಲಿ ಅವರ ಪರವಾಗಿ ಇನ್ಯಾರನ್ನೋ ಕಳುಹಿಸಿ ಹಣ ಸಂಗ್ರಹಿಸುತ್ತಿದ್ದಾರೆ' ಎಂದು 20ನೇ ಡಿಪೊದಲ್ಲಿ ಕೆಲಸ ಮಾಡುವ ಸಿಬ್ಬಂದಿ ಭ್ರಷ್ಟಾಚಾರದ ಮತ್ತೊಂದು ಆಯಾಮವನ್ನು ಬಿಚ್ಚಿಟ್ಟರು.

'ಬಿಎಂಟಿಸಿ ವ್ಯಾಪ್ತಿಯಲ್ಲಿ 51 ಡಿಪೊ ಹಾಗೂ ನಾಲ್ಕು ಕಾರ್ಯಾಗಾರಗಳಿವೆ. ಎಲ್ಲ ಕಡೆಗಳಲ್ಲಿ ಈ ರೀತಿಯ ಲಂಚ ಪ್ರಕ್ರಿಯೆಗಳು ನಡೆಯುತ್ತಿವೆ. ಪ್ರತಿ ಡಿಪೊ ಮತ್ತು ಕಾರ್ಯಾಗಾರದಲ್ಲಿರುವ ನಿರ್ವಾಹಕರು, ಹಾಜರಾತಿ ನಿರ್ವಾಹಕರು ಸಹಿತ ಪ್ರಮುಖ ಅಧಿಕಾರಿಗಳ ಮೊಬೈಲ್ ಫೋನ್‌ಗಳನ್ನು ಪರಿಶೀಲಿಸಬೇಕು. ಕನಿಷ್ಠ 2023ರ ಜನವರಿ 1ರಿಂದ ಇಲ್ಲಿವರೆಗಿನ ಹಣ ವರ್ಗಾವಣೆಗಳನ್ನಾದರೂ ಪರಿಶೀಲಿಸಬೇಕು. ಆಗ ಸಿಬ್ಬಂದಿಯ ಖಾತೆಯಿಂದ ಅಧಿಕಾರಿಗಳ ಖಾತೆಗೆ ಎಷ್ಟು ಹಣ ವರ್ಗಾವಣೆಯಾಗಿದೆ ಎಂಬುದು ಪತ್ತೆಯಾಗಲಿದೆ' ಎಂದು ರಾಜ್ಯ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಅಧ್ಯಕ್ಷ ಎಚ್.ಡಿ. ರೇವಪ್ಪ ಒತ್ತಾಯಿಸಿದರು.

'ನಾನು ಯೂನಿಯನ್‌ನಲ್ಲಿ ಇರುವುದರಿಂದ ಲಂಚ ಪ್ರಕರಣ ಬಯಲಿಗೆಳೆಯಲು ಸಾಧ್ಯವಾಯಿತು. ಘಟಕ 33ರಲ್ಲಿ ನಡೆದ ಲಂಚ ಪ್ರಕರಣ ದಾಖಲೆಗಳ ಸಹಿತ ಬಹಿರಂಗಗೊಂಡಿತು. ಇದೇ ರೀತಿ ಎಲ್ಲ ಡಿಪೊಗಳಲ್ಲಿ ಲಂಚ ಮೇರೆ ಮೀರಿದೆ. ಆದರೆ, ಸಿಬ್ಬಂದಿ ದೂರು ನೀಡಲು ಹೆದರುತ್ತಿದ್ದಾರೆ. ಇದನ್ನೇ ಮಾದರಿಯಾಗಿಟ್ಟುಕೊಂಡು ಎಲ್ಲ ಘಟಕಗಳಲ್ಲಿ ಭದ್ರತಾ ಹಾಗೂ ಜಾಗೃತಾಧಿಕಾರಿಗಳು ತನಿಖೆ ನಡೆಸಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷರೂ ಆಗಿರುವ ಬಿಎಂಟಿಸಿ ಚಾಲಕ ಎಚ್.ಆರ್. ಜಗದೀಶ್ ಆಗ್ರಹಿಸಿದರು.

ಭ್ರಷ್ಟಾಚಾರ ಶೂನ್ಯಕ್ಕೆ ತರಲು ಪ್ರಯತ್ನ

ಬಿಎಂಟಿಸಿಯಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ವ್ಯವಸ್ಥಾಪಕ ನಿರ್ದೇಶಕರು ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುತ್ತಿದ್ದಾರೆ. ಹಾಗಾಗಿಯೇ ಲಂಚ ತೆಗೆದುಕೊಳ್ಳುತ್ತಿರುವವರು ಸಿಕ್ಕಿಬೀಳುತ್ತಿದ್ದಾರೆ. ಹಿಂದೆ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿತ್ತು. ಸಾಧ್ಯವಾದಷ್ಟು ನಿಯಂತ್ರಿಸಲಾಗಿದೆ. ಶೂನ್ಯಕ್ಕೆ ತರಬೇಕು ಎಂಬ ಉದ್ದೇಶವಿದೆ. ಯಾರೇ ಲಂಚ ತೆಗೆದುಕೊಂಡರೂ ದೂರು ನೀಡಿದರೆ ಕ್ರಮ ಕೈಗೊಳ್ಳುವುದು ಸುಲಭವಾಗುತ್ತದೆ.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಜಾಗೃತದಳವು ಎಲ್ಲ ಡಿಪೊಗಳಲ್ಲಿ ತನಿಖೆ ಕೈಗೆತ್ತಿಕೊಳ್ಳಬೇಕು. ಭ್ರಷ್ಟಾಚಾರದ ವಿರುದ್ಧ ನಮ್ಮ ಯೂನಿಯನ್‌ನ ಹೋರಾಟ ನಿರಂತರವಾಗಿರಲಿದೆ.

ಎಚ್.ಆರ್. ಜಗದೀಶ್, ಅಧ್ಯಕ್ಷ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ

ಬಿಎಂಟಿಸಿಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಬೇಕು. ಪ್ರಮುಖ ಅಧಿಕಾರಿಗಳ ಬ್ಯಾಂಕ್ ಖಾತೆಗಳಿಗೆ ಯಾರಿಂದ ಹಣ ಬಂದಿದೆ ಎಂಬುದನ್ನು ತನಿಖೆ ಮಾಡಬೇಕು.

ಎಚ್.ಡಿ. ರೇವಪ್ಪ, ಅಧ್ಯಕ್ಷ, ರಾಜ್ಯ ಸಾರಿಗೆ ನಿಗಮಗಳ ನೌಕರರ ಫೆಡರೇಷನ್

ಯಾವುದಕ್ಕೆಲ್ಲ ಲಂಚ ?

- ಹೆಚ್ಚು ಜನ ಓಡಾಟದ ರೂಟ್ ಹಾಕಿಸಿಕೊಳ್ಳಲು
- ನಿಗದಿತ ಅವಧಿ ಮೀರಿದ(ಒ.ಟಿ) ಕೆಲಸ ನೀಡಲು
- ದೈನಂದಿನ ರಜೆ ತೆಗೆದುಕೊಳ್ಳಲು
- ಹೆಚ್ಚುವರಿ ರಜೆ ಪಡೆಯಲು

ಪ್ರಜಾವಾಣಿ 75
www.prajavani.net

ಪ್ರಜಾವಾಣಿ ಸಂಪಾದಕೀಯ ಪುಟದ ನಿರಂತರ ಓದುಗಳು ನಾನು

76 ಲಕ್ಷಕ್ಕೂ ಹೆಚ್ಚು ಓದುಗರನ್ನು ಹೊಂದಿರುವ, ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆ ಪ್ರಜಾವಾಣಿ. ಶಿಕ್ಷಣ, ಭೂಮಿಕಾ, ಸಿನಿಮಾ ಮುಂತಾದ ವೈವಿಧ್ಯಮಯ ಪುರವಣಿಗಳೊಂದಿಗೆ ಮನೆಮಂದಿಗೆಲ್ಲ ಸಲ್ಲುವ ಸಾತ್ವಿಕ ಪತ್ರಿಕೆ.

Source: TR, IRS 2019,Q4

Follow us on @prajavani

Total readership 76.42 lacs*

ನಗರದ ವಿಜಯನಗರದ ಪಾಲಿಕೆ ಸೌಧದಲ್ಲಿ ಭಾನುವಾರ ಅಮೂಲ್ಯ ಪುಸ್ತಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಎರೆನೆತ್ತಿ' ಪುಸ್ತಕವನ್ನು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. (ಎಡದಿಂದ) ಕೃತಿ ಲೇಖಕ ಎಸ್. ಗಂಗಾಧರಯ್ಯ, ವಿಮರ್ಶಕ ಸುಭಾಷ್ ರಾಜಮಾನೆ ಮತ್ತು ಲೇಖಕಿ ಅನುಪಮ ಪ್ರಸಾದ್ ಇದ್ದಾರೆ –ಪ್ರಜಾವಾಣಿ ಚಿತ್ರ

ಕಾನೂನು ಸುವ್ಯವಸ್ಥೆಗೆ ಧಕ್ಕೆ, ಆತ್ಮಹತ್ಯೆಗೆ ಯತ್ನ ಆರೋಪದ ಅಡಿ ಪ್ರಕರಣ

ಪುನೀತ್ ಕೆರೆಹಳ್ಳಿ ವಿರುದ್ಧ ಮತ್ತೆ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ರಕ್ಷಣಾ ಪಡೆ ಸಂಘಟನೆ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ವಿರುದ್ಧ ಉಪ್ಪಾರಪೇಟೆ ಹಾಗೂ ವಿ.ವಿ ಪುರಂ ಪೊಲೀಸ್ ಠಾಣೆಯಲ್ಲಿ ಮತ್ತೆ ಎರಡು ಎಫ್‌ಐಆರ್‌ಗಳು ದಾಖಲಾಗಿವೆ.

ಆತ್ಮಹತ್ಯೆಗೆ ಯತ್ನ ಆರೋಪದ ಅಡಿ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೆ, ಕಾನೂನು ವ್ಯವಸ್ಥೆಗೆ ಧಕ್ಕೆ ಆರೋಪದ ಅಡಿ ವಿ.ವಿ.ಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುನೀತ್ ವಿರುದ್ಧ ಬೆಂಗಳೂರಿನ ಚಾಮರಾಜಪೇಟೆ, ವಿಜಯನಗರ ಜಿಲ್ಲೆಯ ಹಂಪಿ ಟೂರಿಸಂ ಪೊಲೀಸ್ ಠಾಣೆ, ರಾಮನಗರ ಜಿಲ್ಲೆಯ ಸಾತನೂರು ಸೇರಿ ರಾಜ್ಯದ ಹಲವು ಠಾಣೆಗಳಲ್ಲಿ ದೊಂಬಿ, ಕೊಲೆ, ಹಲ್ಲೆ, ಪ್ರಾಣ ಬೆದರಿಕೆ ಆರೋಪದ ಅಡಿ ಪ್ರಕರಣಗಳು ದಾಖಲಾಗಿದ್ದವು.

ಚಾಮರಾಜಪೇಟೆ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ವರದಿ ಆಧರಿಸಿ, ಪುನೀತ್ ಕೆರೆಹಳ್ಳಿ ಹೆಸರನ್ನು ರೌಡಿಪಟ್ಟಿಗೆ ಈ ಹಿಂದೆ ಸೇರ್ಪಡೆ ಮಾಡಲಾಗಿತ್ತು. ಅದಾದ ಮೇಲೆ ಪುನೀತ್ ಅವರನ್ನು ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಅವರು ಇತ್ತೀಚೆಗೆ ಬಿಡುಗಡೆಯಾಗಿದ್ದರು.

'ತಮ್ಮ ವಿರುದ್ಧ ರೌಡಿಪಟ್ಟಿ ತೆರೆದಿರುವುದಕ್ಕೆ ರಾಜ್ಯ ಸರ್ಕಾರ ಸ್ಪಷ್ಟೀಕರಣ ನೀಡಬೇಕು ಎಂದು ಆಗ್ರಹಿಸಿ, ಸ್ವಾತಂತ್ರ್ಯ ಉದ್ಯಾನದಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆಸ್ಪತ್ರೆಯಲ್ಲಿರುವ ಅವರು ಆಹಾರ ಹಾಗೂ ನೀರು ಸೇವಿಸುವುದಿಲ್ಲ. ಸರ್ಕಾರ ಸ್ಪಷ್ಟನೆ ನೀಡುವ ತನಕ ಹೀಗೆಯೇ ಇರುತ್ತೇನೆ. ಬೇಕಿದ್ದರೆ ನನ್ನ ಪ್ರಾಣ ಹೋಗಲಿ ಎಂದು ಹೇಳುತ್ತಿದ್ದಾರೆ. ಚಿಕಿತ್ಸೆ ಸಹ ಪಡೆದುಕೊಳ್ಳುತ್ತಿಲ್ಲ. ಹೀಗಾಗಿ, ಆತ್ಮಹತ್ಯೆಗೆ ಯತ್ನ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಅ.7ರಂದು ಆಸ್ಪತ್ರೆಗೆ ಭೇಟಿ ನೀಡಿದ್ದ ಹಿಂದೂ ಸಂಘಟನೆ ಹಾಗೂ ಬಿಜೆಪಿ ಕಾರ್ಯಕರ್ತರ ಎದುರು ಸರ್ಕಾರಿ ಬಸ್‌ಗೆ ಬೆಂಕಿ ಹಚ್ಚುತ್ತೇನೆ. ವಿಧಾನಸೌಧಕ್ಕೆ ಕಲ್ಲು ಹೊಡೆಯುತ್ತೇನೆ ಎಂದು ಹೇಳಿಕೆ ನೀಡಿದ್ದು ಅದನ್ನು ಆಧರಿಸಿ ವಿ.ವಿ ಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ದ್ವಿಚಕ್ರ ವಾಹನ ಕಳ್ಳತನ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಸ್ತೆಬದಿಯಲ್ಲಿ ಸಾರ್ವಜನಿಕರು ನಿಲುಗಡೆ ಮಾಡುತ್ತಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ರಾಜರಾಜೇಶ್ವರಿ ನಗರದ ಚನ್ನಸಂದ್ರಲೇಔಟ್ ನಿವಾಸಿ ಮಂಜುನಾಥ್ ಅಲಿಯಾಸ್ ಮಂಜು ಬಂಧಿತ ಆರೋಪಿ. ಕೆಂಗೇರಿಯ ಕೋಟೆ ಬೀದಿಯ ಮಾರಮ್ಮ ದೇವಸ್ಥಾನದ ಬಳಿ ನಿಲುಗಡೆ ಮಾಡಿದ್ದ ಬೈಕ್ ಕಳ್ಳತನವಾಗಿದೆ ಎಂದು ನಾರಾಯಣ ಮೂರ್ತಿ ಎಂಬುವರು ದೂರು ನೀಡಿದ್ದರು. ದೂರು ಆಧರಿಸಿ, ತನಿಖೆ ಕೈಗೊಂಡಾಗ ಆರೋಪಿ ಮಂಜು ಸರಣಿ ಕಳ್ಳತನ ನಡೆಸಿರುವುದು ಗೊತ್ತಾಗಿದೆ.

'ಆರೋಪಿಯಿಂದ ₹1.14 ಲಕ್ಷ ಮೌಲ್ಯದ ಮೂರು ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಕಾರ್ಯಾಗಾರದಲ್ಲಿ ಪಾಲ್ಗೊಂಡ ಶಿಕ್ಷಕರು ಹಾಗೂ ಅಧಿಕಾರಿಗಳು

'ವೈದ್ಯ ಸೇವೆ ಉನ್ನತ ಮಟ್ಟಕ್ಕೇರಬೇಕು'

63ನೇ ರಾಷ್ಟ್ರೀಯ ಆರೋಗ್ಯ ಸಮಾವೇಶದಲ್ಲಿ ರಾಜ್ಯಪಾಲರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ರೋಗಿಯ ಯೋಗಕ್ಷೇಮ ವೈದ್ಯರ ಕೈಯಲ್ಲಿ ಇರುತ್ತದೆ. ಆದ್ದರಿಂದ ವೈದ್ಯಕೀಯ ಸೇವೆಯನ್ನು ಉನ್ನತಮಟ್ಟಕ್ಕೇರಿಸಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿ (ಎನ್‌ಎಂಎಸ್) ಸಹಯೋಗದಲ್ಲಿ ರಾಮಯ್ಯ ವೈದ್ಯಕೀಯ ಕಾಲೇಜು ನಗರದಲ್ಲಿ ಆಯೋಜಿಸಿದ 63ನೇ ರಾಷ್ಟ್ರೀಯ ಆರೋಗ್ಯ ಸಮಾವೇಶದಲ್ಲಿ ಪದವಿ ಪ್ರದಾನ ಮಾಡಿ, ಮಾತನಾಡಿದರು.

'ವೈದ್ಯರು ಮಾನವೀಯ ಸೇವೆಯಲ್ಲಿ ತನ್ಮಯರಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಯಾವುದೇ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಲು ಸಾಮೂಹಿಕ ಪ್ರಯತ್ನ ಮತ್ತು ಸಹಕಾರ ಮುಖ್ಯ' ಎಂದು ತಿಳಿಸಿದರು.

ಕೇಂದ್ರ ಆರೋಗ್ಯ ರಾಜ್ಯ ಖಾತೆ ಸಚಿವ ಎಸ್.ಪಿ.ಸಿಂಗ್ ಬಘೇಲ್, 'ಈ ಸಮಾವೇಶವು ಮೌಲ್ಯಯುತ ವೈಜ್ಞಾನಿಕ ಜ್ಞಾನದ ಅಮೂಲ್ಯವಾದ ಸಂಗ್ರಹವಾಗಿದೆ. ಈ ಜ್ಞಾನವು ರಾಷ್ಟ್ರ ಮತ್ತು ಸಂಸ್ಥೆಯ ಪ್ರಗತಿಗೆ ಫಲ ನೀಡುತ್ತದೆ' ಎಂದು ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್, 'ಭಾರತವು ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿದೆ. ಇದಕ್ಕೆ ಉತ್ತಮ ಉದಾಹರಣೆ ಚಂದ್ರಯಾನ ಮತ್ತು ಕೋವಿಡ್ ಲಸಿಕೆಯ ಯಶೋಗಾಥೆ' ಎಂದು ತಿಳಿಸಿದರು.

ಸಮಾವೇಶದಲ್ಲಿ ಎನ್‌ಎಂಎಸ್ ವಾರ್ಷಿಕ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬಿಡುಗಡೆ ಮಾಡಿದರು. ಎಂ.ಆರ್. ಜಯರಾಮ್, ಎಸ್.ಪಿ. ಸಿಂಗ್ ಬಘೇಲ್, ಡಾ.ಒ.ಪಿ. ಖರ್‌ಬಂದ, ಎನ್‌ಎಂಎಸ್ ಅಧ್ಯಕ್ಷ ಡಾ.ಶಿವ್ ಕೆ. ಸರಿನ್, ಕಾರ್ಯದರ್ಶಿ ಡಾ.ಉಮೇಶ್ ಕಪಿಲ್ ಇದ್ದಾರೆ.

ಗೋಕುಲ ಶಿಕ್ಷಣ ಫೌಂಡೇಷನ್ ಮುಖ್ಯಸ್ಥ ಮತ್ತು ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್. ಜಯರಾಮ್, ಉಪಕುಲಪತಿ ಡಾ.ಒ.ಪಿ. ಖರ್‌ಬಂದ, ರಾಮಯ್ಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಶಾಲಿನಿ ನೂಯಿ, ಎನ್‌ಎಂಎಸ್ ಅಧ್ಯಕ್ಷ ಡಾ.ಶಿವ್ ಕೆ. ಸರಿನ್, ಕಾರ್ಯದರ್ಶಿ ಡಾ. ಉಮೇಶ್ ಕಪಿಲ್ ಇದ್ದರು.

ಗಣೇಶ ಮೂರ್ತಿ ವಿಸರ್ಜನೆ: ವ್ಯಕ್ತಿ ಕೊಲೆ

ಬೆಂಗಳೂರು: ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ, ಗಣೇಶ ಮೂರ್ತಿ ವಿಸರ್ಜನೆಯ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ವ್ಯಕ್ತಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಶ್ರೀನಿವಾಸ್ ಕೊಲೆಯಾದ ವ್ಯಕ್ತಿ. ರಾಮಾಂಜನೇಯ ದೇವಸ್ಥಾನದ ಎದುರಿನ ರಸ್ತೆಯಲ್ಲಿ ಗಣೇಶ ಮೂರ್ತಿಯ ವಿಸರ್ಜನೆಯ ಮೆರವಣಿಗೆ ನಡೆಯುತ್ತಿತ್ತು. ಆಗ ಡಾನ್ಸ್ ಮಾಡುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದೆ. ಮತ್ತೊಂದು ಗುಂಪು ಶ್ರೀನಿವಾಸ್ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿಕ್ಷಕರ ಕೌಶಲ ವೃದ್ಧಿಗೆ ತರಬೇತಿ

ಬೆಂಗಳೂರು: ರಾಮನಗರದ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯು (ಡಯಟ್) ಬಾಷ್ ಇಂಡಿಯಾ ಪ್ರತಿಷ್ಠಾನ ಹಾಗೂ ಕೇರಿಂಗ್ ವಿತ್ ಕಲರ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ 60ಕ್ಕೂ ಅಧಿಕ ಶಿಕ್ಷಕರಿಗೆ ಕೌಶಲ ವೃದ್ಧಿಗೆ ಸಂಬಂಧಿಸಿದಂತೆ ಅಗತ್ಯ ತರಬೇತಿ ನೀಡಲಾಯಿತು.

ಕಗ್ಗಲಿಪುರದ ಫೈರ್ ಪ್ಲೈಸ್ ಇಂಟರ್ ಕಲ್ಚರಲ್ ಸೆಂಟರ್‌ನಲ್ಲಿ ಶನಿವಾರ ನಡೆದ ಕಾರ್ಯಾಗಾರದಲ್ಲಿ ಸರ್ಕಾರಿ ಶಾಲೆಗಳಿಂದ ಆಯ್ಕೆಯಾದ 30 ಮತ್ತು ಅನುದಾನಿತ ಶಾಲೆಗಳಿಂದ ಆಯ್ಕೆಯಾದ 34 ಶಿಕ್ಷಕರು ಭಾಗಿಯಾಗಿದ್ದರು. ಡಯಟ್‌ನ ಅಧಿಕಾರಿಗಳು ಪಾಲ್ಗೊಂಡಿದ್ದರು. 'ಭವಿಷ್ಯದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು' ಎಂದು ಶಿಕ್ಷಕರಿಗೆ ತಜ್ಞರು ಸಲಹೆ ನೀಡಿದರು.

ಮನ್‌ಮುಲ್ ಡೇರಿಯಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ತಾಲ್ಲೂಕಿನ ಗೆಜ್ಜಲಗೆರೆಯ ಮನ್‌ಮುಲ್‌ನ ಮೆಗಾಡೇರಿ ಘಟಕದಲ್ಲಿ ಭಾನುವಾರ ನಸುಕಿನಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಲಕ್ಷಾಂತರ ಮೌಲ್ಯದ ಹಾನಿ ಸಂಭವಿಸಿದೆ. 7 ಮಂದಿ ನೌಕರರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಬೆಂಕಿಯಿಂದ ದಟ್ಟ ಹೊಗೆ ಆವರಿಸಿತ್ತು. ಕರ್ತವ್ಯದಲ್ಲಿದ್ದ ಐವರು ಸಿಬ್ಬಂದಿ ಕಟ್ಟಡ ಗಾಜುಗಳನ್ನು ಒಡೆದು ಹೊರಬಂದು ಅಪಾಯದಿಂದ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು. ಡೇರಿಯ ಮೊದಲ ಅಂತಸ್ತಿನಲ್ಲಿರುವ ನಂದಿನಿ ಸಿಹಿ ಉತ್ಪನ್ನ ಪ್ಯಾಕಿಂಗ್ ಘಟಕದಲ್ಲಿ ಬೆಳಿಗ್ಗೆ 7.15ರ ಸುಮಾರಿಗೆ ವಿದ್ಯುತ್ ಶಾರ್ಟ್‌ಸರ್ಕೀಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ಕೆಲವು ಯಂತ್ರೋಪಕರಣಗಳು ಹಾಗೂ ವಸ್ತುಗಳು ಸುಟ್ಟು ಕರಕಲಾಗಿವೆ.

ಗೋದಾಮಿನಲ್ಲಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ತುಪ್ಪ, ಬೆಣ್ಣೆ ಮೊದಲಾದವುಗಳಿಗೆ ಹಾನಿಯಾಗಿಲ್ಲ. ಮನ್‌ಮುಲ್ ನೌಕರರ ಸಮಯಪ್ರಜ್ಞೆಯಿಂದಾಗಿ ಹೆಚ್ಚಿನ ಹಾನಿ ತಪ್ಪಿದೆ. ಒಬ್ಬರು ಫೈರ್‌ಮನ್, ಮನ್‌ಮುಲ್‌ನ 7 ಮಂದಿ ನೌಕರರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರು ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಮಂಡ್ಯ, ಶ್ರೀರಂಗಪಟ್ಟಣ, ಮೈಸೂರು ಮತ್ತು ಮದ್ದೂರಿನಿಂದ 6 ಅಗ್ನಿಶಾಮಕ ವಾಹನಗಳಲ್ಲಿ ಬಂದ ಸಿಬ್ಬಂದಿ 3 ತಾಸು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಅಮೋನಿಯಂ ಸಿಲಿಂಡರ್‌ಗಳು ಹಾಗೂ ಮತ್ತಿತರ ಘಟಕಗಳಿಗೆ ಬೆಂಕಿ ತಗುಲದಂತೆ ನೋಡಿಕೊಂಡರು.

The Founder Chairman, President, Members - Board of Management, Faculties, Staff and Students of

RAJARAJESWARI DENTAL COLLEGE & HOSPITAL
BENGALURU, KARNATAKA

NAAC Accredited | ROYAL COLLEGE OF PHYSICIANS AND SURGEONS OF GLASGOW | SLMC | ISO | IAO

Cordially invite you to the

27th Graduation Ceremony

Date: 9th October 2023 | Time: 11:00AM

Venue: A.C.S Convention Centre, Kambipura, Mysore Road, Bengaluru - 560 074.



Chief Guest
His Royal Highness
Sri. Yaduveer Krishnadatta Chamaraja Wadiyar
Mahararaja of Mysore

Presided by

Dr. A.C. Shanmugam
B.A. LLB, FIMSA, FRCPS (Glasgow, UK)
Founder Chairman
RajaRajeswari Group of Institutions
Bengaluru.

Distingushed Guest

Sri. A.C.S Arun Kumar
B.Tech (Hons)., LMISTE., LMCSI., MIEEE, MCSI, MISTE, CEng (India)
President
RajaRajeswari Group of Institutions
Bengaluru.

Smt. S. Lalitha Lakshmi, Chairperson
Moogambigai Charitable & Educational Trust

Web: www.rrdch.org

NBTC National Blood Transfusion Council | ಕರ್ನಾಟಕ ಸರ್ಕಾರ | KSAPS | VISIONARY SERVICE

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಹಾಗೂ
ಕರ್ನಾಟಕ ರಾಜ್ಯ ರಕ್ತಚಾಲನ ಪರಿಷತ್
ಇವರುಗಳ ಸಂಯುಕ್ತ ಆಶ್ರಯದಲ್ಲಿ



ರಾಜ್ಯ ಮಟ್ಟದ
ರಾಷ್ಟ್ರೀಯ ಸ್ವಯಂಪ್ರೇರಿತ
ರಕ್ತದಾನ ದಿನಾಚಾರಣೆ
2023

Slogan :
Give Blood, Give Plasma,
Share Life, Share Often

ಘೋಷವಾಕ್ಯ:
ರಕ್ತ ನೀಡಿ, ಪ್ಲಾಸ್ಮ ನೀಡಿ,
ಜೀವನ ಹಂಚಿಕೊಳ್ಳಿ,
ಹೆಚ್ಚಾಗಿ ಹಂಚಿಕೊಳ್ಳಿ

ಶ್ರೀ ದಿನೇಶ್ ಗುಂಡೂರಾವ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅಸ್ಪತ್ರೆಯಲ್ಲಿ ಒಳರೋಗಿಗಳ ಆರೋಗ್ಯ ವಿಚಾರಿಸುತ್ತಿರುವುದು.

REMEMBER! AT 18,
YOU DONATE BLOOD,
TO KEEP SOME ALIVE

ಇ-ರಕ್ತಕೋಶ್ ಜಾಲತಾಣದಿಂದ
ಕರ್ನಾಟಕ ರಾಜ್ಯಾದ್ಯಂತ ಎಲ್ಲಾ
ರಕ್ತ ಕೇಂದ್ರಗಳಲ್ಲಿ ರಕ್ತದಾನ ಮಾಡಲು ಹಾಗೂ
ರಕ್ತದ ಲಭ್ಯತೆ ಬಗ್ಗೆ ಮಾಹಿತಿ ಪಡೆಯಬಹುದು.
https://www.eraktkosh.in

AIDS Helpline 1097 | www.ksaps.karnataka.gov.in | Download the NACO AIDS App | GET IT ON Google Play | KarSAPS

ಅವೈಜ್ಞಾನಿಕ ಕಾಮಗಾರಿ • ಮಳೆ ಬಂದರೆ ಹೊಳೆಯಂತೆ ನೀರು • ವಾಹನ ಸವಾರರಿಗೆ ತಪ್ಪದ ನಿತ್ಯದ ಗೋಳು

ಓಕಳಿಪುರ ರೈಲ್ವೆ ಕೆಳಸೇತುವೆ: ದಟ್ಟಣೆ ಫಜೀತಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಮೆಜೆಸ್ಟಿಕ್ ರೈಲ್ವೆ ನಿಲ್ದಾಣಕ್ಕೆ ಹೊಂದಿಕೊಂಡಿರುವ ಓಕಳಿಪುರ ಕೆಳಸೇತುವೆ ಹಾಗೂ ಸುತ್ತಮುತ್ತ ನಿತ್ಯವೂ ವಿಪರೀತ ದಟ್ಟಣೆ ಉಂಟಾಗುತ್ತಿದ್ದು, ಈ ಮಾರ್ಗದಲ್ಲಿ ಸಂಚರಿಸುವ ಜನ ಫಜೀತಿ ಅನುಭವಿಸುತ್ತಿದ್ದಾರೆ.

ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವ ಬಹುತೇಕ ವಾಹನಗಳು, ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆ ಹಾಗೂ ಓಕಳಿಪುರ ರಸ್ತೆ ಮೂಲಕ ಮೆಜೆಸ್ಟಿಕ್–ಗಾಂಧಿನಗರಕ್ಕೆ ಪ್ರವೇಶಿಸುತ್ತವೆ. ಇದೇ ಮಾರ್ಗದಲ್ಲಿರುವ ಓಕಳಿಪುರ ಕೆಳ ಸೇತುವೆ ಕಿರಿದಾಗಿರುವುದರಿಂದ, ವಾಹನಗಳ ವೇಗ ಕಡಿಮೆಯಾಗಿ ದಟ್ಟಣೆಗೆ ಕಾರಣವಾಗುತ್ತಿದೆ. ಕೆಳ ಸೇತುವೆ ರಸ್ತೆಗೆ ಹೊಂದಿಕೊಂಡಿರುವ ಶೇಷಾದ್ರಿಪುರ ರೈಲ್ವೆ ಸಮಾನಾಂತರ ರಸ್ತೆಯಲ್ಲೂ ದಟ್ಟಣೆ ಕಂಡುಬರುತ್ತಿದೆ.

ಬೆಂಗಳೂರು ಪಶ್ಚಿಮ ಭಾಗದಲ್ಲಿರುವ ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಮಾಗಡಿ ರಸ್ತೆ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತಲಿನ ಬಹುತೇಕ ನಿವಾಸಿಗಳು, ನಿತ್ಯದ ಕೆಲಸ ಹಾಗೂ ಮಾರುಕಟ್ಟೆಗೆ ಹೋಗಿ ಬರಲು ಓಕಳಿಪುರ ಕೆಳಸೇತುವೆ ಬಳಸುತ್ತಿದ್ದಾರೆ.

ಅವೈಜ್ಞಾನಿಕ ಕಾಮಗಾರಿ: ಓಕಳಿಪುರ ರಸ್ತೆಯಲ್ಲಿ ಹಲವು ವರ್ಷಗಳಿಂದ ದಟ್ಟಣೆ ಸಮಸ್ಯೆಯಿತ್ತು. ರೈಲ್ವೆ ನಿಲ್ದಾಣಕ್ಕೆ ಹೊಂದಿಕೊಂಡಿರುವ ರಸ್ತೆಯಾಗಿರುವ ಕಾರಣ, ವಾಹನಗಳ ಓಡಾಟ ಹೆಚ್ಚಾಗಿತ್ತು. ಇದಕ್ಕೆ ಪರಿಹಾರವಾಗಿ ಓಕಳಿಪುರ ರಸ್ತೆ ವಿಸ್ತರಿಸಿ, ಮೇಲ್ಸೇತುವೆಗಳನ್ನೂ ನಿರ್ಮಿಸಲಾಯಿತು. ಆದರೆ, ಕಾಮಗಾರಿಯ ವಿನ್ಯಾಸವೇ ಅವೈಜ್ಞಾನಿಕವಾಗಿದ್ದು, ದಟ್ಟಣೆ ಹೆಚ್ಚಲು ಕಾರಣವಾಗುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ.

‘ಮುಖ್ಯರಸ್ತೆಗಳನ್ನು ವಿಸ್ತರಿಸಲಾಗಿದೆ. ಆದರೆ, ಕೆಳ ಸೇತುವೆ ಮಾತ್ರ ಮೊದಲಿನ ರೀತಿಯಲ್ಲೇ ಇದೆ. ವಿಸ್ತರಿಸಿರುವ ರಸ್ತೆಯಲ್ಲಿ ಬರುವ ವಾಹನಗಳು, ಕೆಳಸೇತುವೆ ಬಳಿ ಗುಂಪು ಸೇರುತ್ತವೆ. ಒಂದೊಂದೇ ವಾಹನಗಳು ಕೆಳಸೇತುವೆ ದಾಟಬೇಕಾದ ಸ್ಥಿತಿ ಇದೆ. ದಟ್ಟಣೆ ಸಮಸ್ಯೆ ನಿತ್ಯದ ಗೋಳಾಗಿದೆ’ ಎಂದು ಓಕಳಿಪುರ ರಸ್ತೆಯ ವ್ಯಾಪಾರಿ ತನ್ವೀರ್ ಹೇಳಿದರು.

ರಾಜಾಜಿನಗರದ ನಿವಾಸಿ ಆರ್. ನಾರಾಯಣ್, ‘ಕೆಳಸೇತುವೆ, ಶೇಷಾದ್ರಿಪುರ ರೈಲ್ವೆ ಸಮನಾಂತರ ರಸ್ತೆ ಹಾಗೂ ಸುತ್ತಮುತ್ತ ನಿತ್ಯವೂ ದಟ್ಟಣೆ ಉಂಟಾಗುತ್ತದೆ. ಈ ರಸ್ತೆ ದಾಟಲು 15 ನಿಮಿಷದಿಂದ 30 ನಿಮಿಷ ಬೇಕು. ದಟ್ಟಣೆಯಲ್ಲಿ ಸಿಲುಕಿದರೆ ವಾಹನಗಳ ಹೊಗೆ ಕುಡಿಯುತ್ತ ನಿಲ್ಲಬೇಕು. ಆರೋಗ್ಯ ಸಮಸ್ಯೆಯೂ ಆಗುತ್ತಿದೆ’ ಎಂದು ಅವರು ಅಳಲು ತೋಡಿಕೊಂಡರು.

‘ರೈಲ್ವೆ ನಿಲ್ದಾಣದಿಂದ (8ನೇ ಪ್ಲಾಟ್‌ಫಾರಂ) ಹೊರಬಂದು ಮೆಜೆಸ್ಟಿಕ್ ಹೋಗುವವರಿಗೂ ಪ್ರತ್ಯೇಕ ಮೇಲ್ಸೇತುವೆ ನಿರ್ಮಿಸಲಾಗಿದೆ. ಈ ಮೇಲ್ಸೇತುವೆಯಿಂದ ಬರುವವರು ಸಹ ಕೆಳಸೇತುವೆ ಮೂಲಕ ಮುಂದಕ್ಕೆ ಹೋಗಬೇಕಿದೆ. ಮುಖ್ಯರಸ್ತೆ ಹಾಗೂ ಮೇಲ್ಸೇತುವೆ ವಾಹನಗಳು, ಕೆಳಸೇತುವೆ ಎದುರು ಬಂದು ಸಾಲುಗಟ್ಟಿ ನಿಂತು ನಿಧಾನವಾಗಿ ಚಲಿಸುತ್ತಿವೆ’ ಎಂದು ಹೇಳಿದರು.

ಮಳೆ ಬಂದರೆ ನೀರು: ‘ಮಳೆ ಬಂದಾಗ ರೈಲ್ವೆ ಕೆಳಸೇತುವೆಯಲ್ಲಿ ನೀರು ಹೊಳೆಯಂತೆ ಹರಿಯುತ್ತದೆ. ಕೆಳ ಸೇತುವೆಯ ನೆಲದಡಿ ಎರಡು ಕಾಲುವೆಗಳಿದ್ದು, ಅಲ್ಲಿಯೂ ನೀರು ಇರುತ್ತದೆ. ನೀರು ನಿಂತ ಸಂದರ್ಭದಲ್ಲಂತೂ ವಾಹನಗಳ ದಟ್ಟಣೆ ಹೆಚ್ಚಿರುತ್ತದೆ’ ಎಂದು ಸ್ಥಳೀಯರು ದೂರಿದರು.

‘ನೀರು ಹರಿಯುವುದನ್ನು ಸಂಪೂರ್ಣವಾಗಿ ತಡೆಯಲು ಇದುವರೆಗೂ ಆಗಿಲ್ಲ. ತಾತ್ಕಾಲಿಕ ದುರಸ್ತಿ ಮಾತ್ರ ಮಾಡಲಾಗುತ್ತಿದ್ದು, ಇದರಿಂದ ಶಾಶ್ವತ ಪರಿಹಾರ ಸಿಕ್ಕಿಲ್ಲ’ ಎಂದು ಹೇಳಿದರು.

ನಗರದ ಓಕಳಿಪುರ ಮುಖ್ಯ ರಸ್ತೆಯಲ್ಲಿ ಉಂಟಾಗಿರುವ ವಾಹನಗಳ ದಟ್ಟಣೆ

ಸಂಚಾರ ತ್ರಾಸ ಜನರ ಪ್ರಯಾಸ

ನಗರದ ಓಕಳಿಪುರ ಕೆಳಸೇತುವೆಗೆ ಹೊಂದಿಕೊಂಡಿರುವ ರಸ್ತೆಯಲ್ಲಿ ಉಂಟಾಗಿರುವ ದಟ್ಟಣೆಯಲ್ಲಿ ವಾಹನಗಳ ಸಾಲು –ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

‘ನಿರ್ಬಂಧವಿದ್ದರೂ ಬಸ್, ಭಾರಿ ವಾಹನ ಸಂಚಾರ’

‘ಬಸ್‌ಗಳು ಹಾಗೂ ಭಾರಿ ವಾಹನಗಳು ಕೆಳಸೇತುವೆಯಲ್ಲಿ ಸಂಚರಿಸದಂತೆ ನಿರ್ಬಂಧಿಸಲಾಗಿದೆ. ಈ ಬಗ್ಗೆ ಫಲಕ ಪ್ರದರ್ಶಿಸಲಾಗಿದೆ. ಇದಕ್ಕೆ ಕ್ಯಾರೆ ಎನ್ನದ ಹಲವು ಚಾಲಕರು, ಕೆಳಸೇತುವೆಯೊಳಗೆ ನುಗ್ಗುತ್ತಿದ್ದಾರೆ’ ಎಂದು ಸ್ಥಳೀಯರು ದೂರಿದರು.

‘ಶೇಷಾದ್ರಿಪುರ ರೈಲ್ವೆ ಸಮನಾಂತರ ರಸ್ತೆ ಮೂಲಕ ಸಂಚರಿಸಿ, ಮೆಜೆಸ್ಟಿಕ್‌ನತ್ತ ಹೋಗಲು ಬಸ್ ಚಾಲಕರಿಗೆ ಸೂಚಿಸಲಾಗಿದೆ. ಆದರೆ, ಬೇಗನೇ ಮೆಜೆಸ್ಟಿಕ್ ನಿಲ್ದಾಣ ತಲುಪಬೇಕೆಂದು ಚಾಲಕರು ಕೆಳಸೇತುವೆಯಲ್ಲೇ ಬಸ್ ಕೊಂಡೊಯ್ಯುತ್ತಿದ್ದಾರೆ. ಸ್ಥಳದಲ್ಲಿ ಪೊಲೀಸರು ಇದ್ದರೂ ವಾಹನ ತಡೆಯುವುದಿಲ್ಲ’ ಎಂದು ಆರೋಪಿಸಿದರು.

ದಟ್ಟಣೆ: ನಿಮ್ಮ ಸಂಕಷ್ಟ ಹೇಳಿ

ನಗರದ ರಸ್ತೆಗಳಲ್ಲಿನ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ ‘ಸಂಚಾರ ತ್ರಾಸ, ಜನರ ಪ್ರಯಾಸ’ ಸರಣಿ ವರದಿಯನ್ನು ‘ಪ್ರಜಾವಾಣಿ’ ಪ್ರಕಟಿಸುತ್ತಿದೆ. ದಟ್ಟಣೆಯಿಂದಾಗಿರುವ ಸಮಸ್ಯೆ, ಪ್ರಯಾಸವನ್ನು 50 ಪದಗಳಲ್ಲಿ ಬರೆದು ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ವಿಳಾಸ ಇರಲಿ.

ವಾಟ್ಸ್‌ಆ್ಯಪ್: **96060 38256**

ಸುದ್ದಿ 2 ನಿಮಿಷ

ಕಾಂಗ್ರೆಸ್ ಸೋಲಿಸುವುದೇ ನಮ್ಮ ಗುರಿ: ಸಿ.ಪಿ. ಯೋಗೇಶ್ವರ್

ಚನ್ನಪಟ್ಟಣ (ರಾಮನಗರ): ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ನೇತೃತ್ವದೊಂದಿಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸುವುದೇ ನಮ್ಮ ಗುರಿ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಬಿಜೆಪಿ ಸಭೆ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್‌ನ ನಡುವಣ ಕಿತ್ತಾಟದ ಲಾಭವನ್ನು ಕಾಂಗ್ರೆಸ್ ಪಡೆದುಕೊಂಡಿದೆ. ಲೋಕಸಭೆ ಚುನಾವಣೆಯಲ್ಲಿ ಆ ತಪ್ಪು ಆಗಬಾರದು. ಅದಕ್ಕಾಗಿ, ಮೈತ್ರಿ ಅನಿವಾರ್ಯವಾಗಿದೆ’ ಎಂದರು.

‘ಹೊಂದಾಣಿಕೆ ಎಂಬುದು ತಾಳ್ಮೆಯಿಂದ ಪರಸ್ಪರ ಒಂದಾಗಿ ಎಲ್ಲರ ಮನಸ್ಸನ್ನು ಒಗ್ಗೂಡಿಸುವುದು. ಆ ನಿಟ್ಟಿನಲ್ಲಿ ಪಕ್ಷದ ಕಾರ್ಯಕರ್ತರ ಮತ್ತು ಮುಖಂಡರ ಸಭೆ ನಡೆಸಿ, ರಾಷ್ಟ್ರೀಯ ನಾಯಕರ ನಿರ್ಧಾರ ಹಾಗೂ ಮೈತ್ರಿಯ ಅನಿವಾರ್ಯತೆ ಕುರಿತು ಕಾರ್ಯಕರ್ತರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ’ ಎಂದು ತಿಳಿಸಿದರು.

ರಾಜ್ಯಮಟ್ಟದ ವಿಪ್ರ ವ್ಯಾಪಾರ, ವಾಣಿಜ್ಯೋದ್ಯಮಿಗಳ ಸಮಾವೇಶ

ಬೆಂಗಳೂರು: ಯುವಕರು, ಮಹಿಳೆಯರು ಉದ್ಯಮಿಗಳಾಗಬೇಕು. ಬೇರೆಯವರಿಗೆ ಉದ್ಯೋಗ ನೀಡುವವರಾಗಬೇಕು ಎಂಬ ಬಗ್ಗೆ ರಾಜ್ಯ ಮಟ್ಟದ ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶದಲ್ಲಿ ವಿಸ್ತೃತ ಚರ್ಚೆ ನಡೆಯಿತು.

ಉದ್ಯಮ ಆರಂಭಿಸುವ ಹುಮ್ಮಸ್ಸು, ಉದ್ಯಮವನ್ನು ಅಭಿವೃದ್ಧಿಯತ್ತ ಒಯ್ಯುವ ಚಾಕಚಕ್ಯತೆ ಹೇಗಿರಬೇಕೆಂಬ ಬಗ್ಗೆ ಅತಿಥಿಗಳು ಸಲಹೆ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಸಿ.ಕೆ. ರಾಮಮೂರ್ತಿ, ‘ಸಿಎಡಿ-ಇಎನ್‌ಸಿಇ 90’ ಸಂಸ್ಥಾಪಕ ಚೇತನ್‌ರಾಮ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಪಿ.ಸಿ.ರಾವ್, ರೂಪ ಶಾಸ್ತ್ರಿ ಮಾತನಾಡಿದರು.

ಉದ್ಯಮಿಗಳಾದ ರಘು ಚಂದ್ರಶೇಖರಯ್ಯ, ಯಜ್ಞ ನಾರಾಯಣ ಕಮ್ಮಜೆ, ಪ್ರದೀಪ್ ಪೈ, ಶಕುಂತಲಾ ಅಯ್ಯರ್, ಸುಜಾತಾ ಓಜಾ, ಎಂ.ವಿ. ಸತ್ಯನಾರಾಯಣ ಅವರಿಗೆ ‘ವಿಪ್ರ ವಾಣಿಜ್ಯ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕವಿ ಎಚ್.ಎಸ್. ವೆಂಕಟೇಶ ಮೂರ್ತಿ ಹೇಳಿಕೆ

‘ಪ್ರಶಸ್ತಿ ಆಯ್ಕೆಯಲ್ಲಿ ವಿಶ್ವಾಸಾರ್ಹತೆ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಶಸ್ತಿಗಾಗಿ ಸಾಧಕರನ್ನು ಆಯ್ಕೆ ಮಾಡುವಾಗ ರಾಜಕೀಯ ನುಸುಳಬಾರದು, ವಿಶ್ವಾಸಾರ್ಹತೆ ಉಳಿಸಿಕೊಳ್ಳಬೇಕು’ ಎಂದು ಕವಿ ಎಚ್.ಎಸ್. ವೆಂಕಟೇಶ ಮೂರ್ತಿ ಹೇಳಿದರು.

ಜನಶಕ್ತಿ ಕೇಂದ್ರ ಮತ್ತು ನರಹಳ್ಳಿ ಪ್ರತಿಷ್ಠಾನ, ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಚ.ಹ.ರಘುನಾಥ ಅವರಿಗೆ ‘ನರಹಳ್ಳಿ ಪ್ರಶಸ್ತಿ’ ಹಾಗೂ ಗಿರೀಶ್‌ರಾವ್ ಹತ್ವಾರ್ (ಜೋಗಿ) ಅವರಿಗೆ ‘ನರಹಳ್ಳಿ ದಶಮಾನ ಪುರಸ್ಕಾರ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಬರಹಗಾರರಿಗೆ ಸಾಹಿತಿಗಳೇ ಪ್ರಶಸ್ತಿ ಪ್ರದಾನ ಮಾಡುತ್ತಿರುವುದರಿಂದ ನರಹಳ್ಳಿ ಪ್ರತಿಷ್ಠಾನದ ಪ್ರಶಸ್ತಿಯು ಬಹಳ ವಿಶೇಷ ಹಾಗೂ ಮುಖ್ಯ ಎನಿಸುತ್ತದೆ. 10 ವರ್ಷಗಳಿಂದ ಪ್ರತಿಷ್ಠಾನ ಈ ಪ್ರಶಸ್ತಿ ಪ್ರದಾನ ಮಾಡುತ್ತಿದೆ. ಔಪಚಾರಿಕವಾಗಿ ಈ ಪ್ರಶಸ್ತಿ ಕೊಡುತ್ತಿಲ್ಲ. ಅದರ ಹಿಂದೆ ಸಾಕಷ್ಟು ಪ್ರೀತಿ, ವ್ಯಾಸಂಗ ಹಾಗೂ ಅಧ್ಯಯನವಿದೆ’ ಎಂದು ಅಭಿಪ್ರಾಯಪಟ್ಟರು.

ಪುರಸ್ಕಾರ ಸ್ವೀಕರಿಸಿ ಮಾತನಾಡಿದ ಜೋಗಿ, ‘ನನ್ನ ಬರವಣಿಗೆಯನ್ನು ಮೊದಲು ಗುರುತಿಸಿದವರು ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು. ಚೆನ್ನಾಗಿ ಬರೆಯುತ್ತಿದ್ದೀಯಾ ಎಂದು ಹೇಳಿ ಪ್ರೋತ್ಸಾಹಿಸಿದ್ದರು. ಅದೇ ನನಗೆ ಮೊದಲ ಪ್ರಶಸ್ತಿ’ ಎಂದರು.

ಸಾಹಿತಿ ಚಂದ್ರಶೇಖರ ಕಂಬಾರ, ಪ್ರತಿಷ್ಠಾನದ ಕಾರ್ಯದರ್ಶಿ ಆನಂದರಾಮ ಉಪಾಧ್ಯಾಯ ಇದ್ದರು.

ನಗರದಲ್ಲಿ ಭಾನುವಾರ ಪತ್ರಕರ್ತರಾದ ಚ.ಹ. ರಘುನಾಥ ಅವರಿಗೆ ‘ನರಹಳ್ಳಿ ಪ್ರಶಸ್ತಿ’ ಮತ್ತು ಗಿರೀಶ್‌ರಾವ್ ಹತ್ವಾರ್ (ಜೋಗಿ) ಅವರಿಗೆ ‘ನರಹಳ್ಳಿ ದಶಮಾನ ಪುರಸ್ಕಾರ’ ಪ್ರದಾನ ಮಾಡಿ ಗೌರವಿಸಲಾಯಿತು. ಸಾಹಿತಿ ಚಂದ್ರಶೇಖರ ಕಂಬಾರ, ಬಿ.ಆರ್. ಲಕ್ಷ್ಮಣರಾವ್, ಕವಿ ಎಚ್.ಎಸ್.ವೆಂಕಟೇಶ ಮೂರ್ತಿ, ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಪತ್ನಿ ರಜನಿ ನರಹಳ್ಳಿ ಮತ್ತು ಪುತ್ರಿ ಸ್ನೇಹಾ ನರಹಳ್ಳಿ ಮತ್ತು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಇದ್ದರು. ಪ್ರಜಾವಾಣಿ ಚಿತ್ರ

ಟೋಲ್ ಸಿಬ್ಬಂದಿಗೆ ಬಾಡಿ ಕ್ಯಾಮೆರಾ ಕಡ್ಡಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆದ್ದಾರಿಗಳಲ್ಲಿ ಬಳಕೆದಾರರ ಶುಲ್ಕ ಪಾವತಿ ವೇಳೆ ಸಂಭವಿಸುವ ಘರ್ಷಣೆ ತಡೆಯುವ ನಿಟ್ಟಿನಲ್ಲಿ ಮುಂಜಾಗ್ರತೆಯಾಗಿ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಇರುವ ಸಿಬ್ಬಂದಿಯು ಕಡ್ಡಾಯವಾಗಿ ಬಾಡಿ ವೋರ್ನ್ ಕ್ಯಾಮೆರಾಗಳನ್ನು ಬಳಸಬೇಕು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಸೂಚಿಸಿದೆ.

ವಾಹನ ಚಾಲಕರು ಶುಲ್ಕ ಪಾವತಿ ವೇಳೆ ಸಂಭವಿಸುವ ಘರ್ಷಣೆ ಅಥವಾ ವಿವಾದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು, ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಪ್ರಕಟಿಸಿದೆ.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಹೃದಯ ಮತ್ತು ಶ್ವಾಸಕೋಶಕ್ಕೆ ಸಂಬಂಧಿಸಿದ ತರಬೇತಿ (ಸಿಪಿಆರ್): ಅತಿಥಿಗಳು: ಎಂ.ಎನ್. ಅನುಚೇತ್, ಡಾ. ರಂಜನ್ ಶೆಟ್ಟಿ, ಆಯೋಜನೆ: ಮಣಿಪಾಲ್ ಆಸ್ಪತ್ರೆ, ಸ್ಥಳ: ಸಂಚಾರ ಕಮಿಷನರ್ ಕಚೇರಿ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಅತಿಥಿಗಳು: ವೂಡೇ ಪಿ. ಕೃಷ್ಣ, ಬಿ.ಎಂ. ದೇವರಾಜಪ್ಪ, ಎನ್.ಸಿ.ಇಂದಿರಾ, ಸಂತೋಷ್ ಡಿ., ರಾಜೇಶ್ ಇ.ಬಿ., ಆಯೋಜನೆ ಮತ್ತು ಸ್ಥಳ: ಕಾವೇರಿ ಬಿ.ಇಡಿ ಕಾಲೇಜು, ಸಹಕಾರನಗರ, ಬೆಳಿಗ್ಗೆ 10

ಎನ್‌ಎಸ್‌ಎಸ್ ದಿನಾಚರಣೆ: ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಶ್ರೀನಿವಾಸ್ ಸಿ., ಸುನಿತಾ ಎಂ., ಸುಂದರ್ ರಾಜ್ ಅರಸ್, ಸತೀಶ್ ಗೌಡ ಎನ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿ ಆವರಣ, ಬೆಳಿಗ್ಗೆ 10.30

ಎಂ.ಎಚ್. ನಾಗರಾಜು ಅವರ ‘ಸಾಧನೆಯ ಶಿಖರ ಮೂರ್ತಿನಾಯಕ್’ ಪುಸ್ತಕ ಬಿಡುಗಡೆ: ಜಿ. ಪರಮೇಶ್ವರ್, ಉದ್ಘಾಟನೆ: ರುದ್ರಪ್ಪ ಲಮಾಣಿ, ಅತಿಥಿಗಳು: ದಿನೇಶ್ ಗುಂಡೂರಾವ್, ಬಿ.ಟಿ. ಲಲಿತಾ ನಾಯಕ್, ಕೆ.ಎಸ್. ಸಿದ್ಧಲಿಂಗಪ್ಪ, ಉಪಸ್ಥಿತಿ: ಎಂ.ಎನ್. ನರಸಿಂಹಮೂರ್ತಿ ನಾಯಕ್, ಎಚ್. ನಿಂಗಪ್ಪ, ಪುಸ್ತಕದ ಕುರಿತು: ಎಲ್. ಎನ್. ಮುಕುಂದರಾಜ್, ಆಯೋಜನೆ: ಮೂರ್ತಿನಾಯಕ್ ಸ್ನೇಹ ಬಳಗ, ಸ್ಥಳ: ಸಾಮ್ರಾಟ್ ಹೋಟೆಲ್‌ನ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

‘ಸಂಯುಕ್ತ ಹೋರಾಟ ಕರ್ನಾಟಕ’ದ ರಾಜ್ಯ ಸಮಾವೇಶ: ಅತಿಥಿಗಳು: ವಿಜು ಕೃಷ್ಣನ್, ಆರ್. ವೆಂಕಯ್ಯ, ಅವತಾರ್ ಮೆಹ್ಮಾ, ಬಡಗಲಪುರ ನಾಗೇಂದ್ರ, ಜಿ.ಸಿ. ಬಯ್ಯಾರೆಡ್ಡಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಭವನ, ಅರಮನೆ ರಸ್ತೆ, ಬೆಳಿಗ್ಗೆ 11.30

ತ್ರೈವಾರ್ಷಿಕ ಯೋಜನಾ ಪಟ್ಟಿ ಬಿಡುಗಡೆ, ಕನ್ನಡ ತಂತ್ರಾಂಶ ಅನುಷ್ಠಾನ ಮತ್ತು ಸಂಪರ್ಕ ಭಾಷಾ ಗಣಕ ಶಿಬಿರಗಳ ಉದ್ಘಾಟನೆ: ಲೀಲಾದೇವಿ ಆರ್. ಪ್ರಸಾದ್, ಅತಿಥಿಗಳು: ಬಿ.ಕೆ. ಶಿವರಾಂ, ಅಧ್ಯಕ್ಷತೆ: ಎಂ.ಬಿ. ಜಯರಾಂ, ಬೈರಮಂಗಲ ರಾಮೇಗೌಡ, ಆರ್.ಎ.ಪ್ರಸಾದ್, ಆಯೋಜನೆ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ಸ್ಥಳ: ಡಾ. ರಾಜ್‌ಕುಮಾರ್ ತಾಂತ್ರಿಕ ಕುಟೀರ, ಕನ್ನಡ ಗಣಕ ತರಬೇತಿ ಕೇಂದ್ರ, ಮಲ್ಲೇಶ್ವರ, ಬೆಳಿಗ್ಗೆ 11.40

ರೀಸರ್ಚ್ ಸಮ್ಮಿಟ್: ಅತಿಥಿಗಳು: ಗೋವಿಂದನ್ ರಂಗರಾಜನ್, ವೆಂಕಟೇಶ್ ಸರ್ವಸಿದ್ಧಿ, ಸುರೇಶ್ ಬಲೂಟಗಿ, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಸಿ.ವಿ. ರಾಮನ್ ರಸ್ತೆ, ಮಧ್ಯಾಹ್ನ 2.30

ಕಥಕ್ ನೃತ್ಯ ಪ್ರದರ್ಶನ: ಪ್ರಸ್ತುತಿ: ಮೋನಿಶಾ ಐಸಿರಿ ಗೌಡ, ಆಯೋಜನೆ: ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ಸೇವಾಸದನ, ಸಂಜೆ 6

ಮಾಸಿಕ ಸಮಾವೇಶ, ಅಂಚಿನ ಮನೆ ಗುರುಸಿದ್ಧಪ್ಪ ಭಾವಿಹಾಳ ಸ್ಮರಣಾರ್ಥ ದತ್ತಿ ಕಾರ್ಯಕ್ರಮ: ಅತಿಥಿಗಳು: ಆರ್. ಕೆ. ರಾಜು, ಮೀನಾಕ್ಷಿ ದುಬೆ, ನರೇಂದ್ರ ಮೋಹನ್ ದುಬೆ, ಯೋಗೇಶ್ ದುಬೆ, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ ಮತ್ತು ಸ್ಥಳ: ವೀರಶೈವ ಸಮಾಜ ಸದಾಶಿವನಗರ, ಸಂಜೆ 6.30

ಪ್ರವಚನ ವಾಹಿನಿ: ‘ಪಿತೃ ಕಲ್ಪ’ ಕುರಿತು ಉಪನ್ಯಾಸ: ಕೃಷ್ಣರಾಜಭಟ್ ಕುಟ್ವಾಡಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಲಡಾಕ್: ನ್ಯಾಷನಲ್ ಕಾನ್ಫರೆನ್ಸ್, ‘ಕೈ’ ಮೇಲುಗೈ

ಕಾರ್ಗಿಲ್ (ಲಡಾಕ್) (ಪಿಟಿಐ): ಲಡಾಕ್‌ನ ಗುಡ್ಡಗಾಡು ಪ್ರದೇಶ ಅಭಿವೃದ್ಧಿ ಸ್ವಾಯತ್ತ ಮಂಡಳಿಗೆ (ಎಲ್‌ಎಎಚ್‌ಡಿಸಿ–ಕಾರ್ಗಿಲ್) ನಡೆದ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಎನ್.ಸಿ) ಹಾಗೂ ಕಾಂಗ್ರೆಸ್ ಒಟ್ಟು 22 ಸ್ಥಾನಗಳಲ್ಲಿ ಜಯಭೇರಿ ಬಾರಿಸಿವೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿಯಾದ ನಂತರ, ಲಡಾಕ್ ಅನ್ನು ಕೇಂದ್ರಾಡಳಿತ ಪ್ರದೇಶವಾಗಿ ರಚಿಸಿದ ಬಳಿಕ ನಡೆದ ಮೊದಲ ಚುನಾವಣೆ ಇದಾಗಿದೆ.

ಮಂಡಳಿಯ ಸದಸ್ಯರ ಬಲ ಒಟ್ಟು 30. ಈ ಪೈಕಿ ಆಡಳಿತ ವಿಭಾಗದಿಂದ ನಾಲ್ವರನ್ನು ನಾಮನಿರ್ದೇಶನ ಮಾಡಲಾಗುತ್ತದೆ. ಉಳಿದ 26 ಸ್ಥಾನಗಳಿಗೆ ಅ. 4ರಂದು ಚುನಾವಣೆ ನಡೆದಿತ್ತು.

ನ್ಯಾಷನಲ್ ಕಾನ್ಫರೆನ್ಸ್ 12 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಾಂಗ್ರೆಸ್ 10 ಸ್ಥಾನಗಳಲ್ಲಿ ವಿಜಯ ಪತಾಕೆ ಹಾರಿಸಿದೆ. ಬಿಜೆಪಿ ಎರಡು ಸ್ಥಾನಕ್ಕಷ್ಟೇ ತೃಪ್ತಿಪಟ್ಟಿದೆ. ಇಬ್ಬರು ಪಕ್ಷೇತರರು ಜಯಗಳಿಸಿದ್ದಾರೆ.

ಒಟ್ಟು 95,388 ಮತದಾರರ ಪೈಕಿ 74,026 ಮಂದಿ ಮತ ಚಲಾಯಿಸುವ ಮೂಲಕ ಶೇ 77.61ರಷ್ಟು ಮತದಾನವಾಗಿತ್ತು. ಮಂಡಳಿಯ ಅಧ್ಯಕ್ಷರಾಗಿದ್ದ ನ್ಯಾಷನಲ್ ಕಾನ್ಫರೆನ್ಸ್‌ನ ಫಿರೋಜ್ ಅಹ್ಮದ್ ಖಾನ್ ಅವರ ಐದು ವರ್ಷದ ಅಧಿಕಾರಾವಧಿಯು ಈಗಾಗಲೇ ಪೂರ್ಣಗೊಂಡಿದೆ. ಅ. 11ರೊಳಗೆ ಹೊಸ ಮಂಡಳಿ ಅಸ್ತಿತ್ವಕ್ಕೆ ಬರಲಿದೆ.

ಚುನಾವಣಾ ಪೂರ್ವದಲ್ಲಿ ಎನ್.ಸಿ ಮತ್ತು ಕಾಂಗ್ರೆಸ್ ಮೈತ್ರಿ ಘೋಷಿಸಿದ್ದವು. ಆದರೆ, ಪ್ರತ್ಯೇಕವಾಗಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು.

ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಒಂದು ಸ್ಥಾನದಲ್ಲಷ್ಟೇ ಗೆದ್ದಿತ್ತು. ಆದರೆ, ಪಿಡಿಪಿಯ ಇಬ್ಬರು ಸದಸ್ಯರು ಕಮಲ ಪಾಳೆಯಕ್ಕೆ ಸೇರಿದ್ದರಿಂದ ಪಕ್ಷದ ಸದಸ್ಯರ ಬಲ ಮೂರಕ್ಕೇರಿತ್ತು. ಈ ಬಾರಿ 17 ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು.

ಕುಂದು ಕೊರತೆ

ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು

‘ರಸ್ತೆ ದುರಸ್ತಿಗೊಳಿಸಿ’

ಕೆಂಬತ್ತಹಳ್ಳಿ ಜಿಬಿಸಿ ಎಂಪ್ಲಾಯ್ ಬಡಾವಣೆಯ ಎಲ್ಲ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿವೆ. ಈ ಭಾಗದ ಎಲ್ಲ ರಸ್ತೆಗಳಿಗೆ ಹತ್ತಾರು ವರ್ಷಗಳ ಹಿಂದೆ ಡಾಂಬರ್ ಹಾಕಲಾಗಿದೆ. ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಇದರಿಂದ, ಹಲವಾರು ಅಪಘಾತಗಳು ಸಂಭವಿಸಿವೆ. ರಸ್ತೆಯಲ್ಲಿ ಮಕ್ಕಳು, ವೃದ್ಧರು, ಮಹಿಳೆಯರು ಓಡಾಡುವುದು ಕಷ್ಟವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ರಸ್ತೆಗಳನ್ನು ದುರಸ್ತಿ ಮಾಡುವುದರ ಮೂಲಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಗೋಪಿನಾಥ್ ಭಟ್, ಸ್ಥಳೀಯ ನಿವಾಸಿ

‘ಪಾದಚಾರಿಮಾರ್ಗ ದುರಸ್ತಿಪಡಿಸಿ’

ಮೈಸೂರು ರಸ್ತೆಯ ಸಿರ್ಸಿ ವೃತ್ತದ ಮುಖ್ಯರಸ್ತೆಯ ಪಕ್ಕದಲ್ಲಿರುವ ಪಾದಚಾರಿಮಾರ್ಗಕ್ಕೆ ಅಳವಡಿಸಿದ್ದ ಕಲ್ಲುಗಳನ್ನು ತೆರವುಗೊಳಿಸಲಾಗಿದೆ. ಇದರಿಂದ, ಜನರು ಜೀವಭಯದಲ್ಲಿ ಮುಖ್ಯರಸ್ತೆಯ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪಾದಚಾರಿಮಾರ್ಗ ಚರಂಡಿಯಾಗಿ ಮಾರ್ಪಟ್ಟಿದ್ದು, ಗಬ್ಬೆದ್ದು ನಾರುತ್ತಿದೆ. ಬಿಬಿಎಂಪಿ ಕೂಡಲೇ ಈ ಪಾದಚಾರಿ ಮಾರ್ಗ ದುರಸ್ತಿ ಕೆಲಸ ಕೈಗೊಳ್ಳಬೇಕು.

ಸುರೇಶ್, ಸ್ಥಳೀಯ ನಿವಾಸಿ

‘ಫೀಡರ್ ಬಸ್ ವ್ಯವಸ್ಥೆ ಕಲ್ಪಿಸಿ’

ಮಂತ್ರಿ ಸ್ಕ್ವೇರ್ ಮೆಟ್ರೊ ನಿಲ್ದಾಣದಿಂದ (ಸಂಪಿಗೆ ರಸ್ತೆ) ಶೇಷಾದ್ರಿಪುರ, ನೆಹರೂ ವೃತ್ತ, ಶಿವಾನಂದ ವೃತ್ತ, ರೇಸ್‌ಕೋರ್ಸ್–ಶಿವಾಜಿನಗರ ಹಾಗೂ ಮಂತ್ರಿ ಸ್ಕ್ವೇರ್ ಮೆಟ್ರೊ ನಿಲ್ದಾಣದಿಂದ ಮಲ್ಲೇಶ್ವರ, ಶೇಷಾದ್ರಿಪುರ, ಶಿವನಂದ ವೃತ್ತ ಕುಮಾರಪಾರ್ಕ್ ರಸ್ತೆ, ಮೇಕ್ರಿ ವೃತ್ತ, ಯಶವಂತಪುರ ಮಾರ್ಗವಾಗಿ ಬಿಎಂಟಿಸಿ ಫೀಡರ್ ಬಸ್‌ಗಳ ವ್ಯವಸ್ಥೆ ಮಾಡಬೇಕು. ಮೆಟ್ರೊದಿಂದ ಬಂದಿಳಿಯುವ ಪ್ರಯಾಣಿಕರಿಗೆ ಆಟೊದವರ ಕಾಟ ಹೆಚ್ಚಾಗಿದೆ. ಕರೆದಲ್ಲಿಗೆ ಬರುವುದಿಲ್ಲ. ಬಂದರೂ ದುಬಾರಿ ದರ ಕೇಳುತ್ತಾರೆ. ಇದರಿಂದ ಪ್ರಯಾಣಿಕರಿಗೆ ನಿತ್ಯ ಕಿರಿಕಿರಿಯಾಗಿದೆ. ಸಂಚಾರ ಪೊಲೀಸರು ಹಾಗೂ ಬಿಎಂಟಿಸಿ ಅಧಿಕಾರಿಗಳು ಜಂಟಿಯಾಗಿ ಚರ್ಚಿಸಿ, ಪ್ರಯಾಣಿಕರಿಗೆ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು. ಜತೆಗೆ ಮಂತ್ರಿಸ್ಕ್ವೇರ್ ಬಳಿ ಪ್ರಿಪೇಡ್ ಸೇವೆಯನ್ನು ಕಡ್ಡಾಯವಾಗಿ ನಾಗರಿಕರಿಗೆ ಒದಗಿಸಲು ಪೊಲೀಸರು ಕ್ರಮ ಕೈಗೊಳ್ಳಬೇಕು.

ಸಿ ಜಯಕುಮಾರ್, ಹೈಗ್ರೌಂಡ್ಸ್

‘ಭಾರಿ ದೂಳು ನಿವಾಸಿಗಳಿಗೆ ಗೋಳು’

ಕೆಂಗೇರಿಯಿಂದ ಕೋಣನಕುಂಟೆ ಕ್ರಾಸ್‌ಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ವಿಸ್ತರಣಾ ಕಾಮಗಾರಿ ನಾಲ್ಕು ತಿಂಗಳುಗಳಿಂದ ಸ್ಥಗಿತಗೊಳಿಸಲಾಗಿದೆ. ಮಣ್ಣಿನ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅನನುಕೂಲವಾಗಿದೆ. ಕೆಂಗೇರಿಯಿಂದ 1 ಕಿ.ಮೀ ದೂರದಲ್ಲಿರುವ ಸುಣಕಲ್ಲುಪಾಳ್ಯದ ಹತ್ತಿರ ಒಂದು ವರ್ಷದಿಂದ ರಸ್ತೆ ವಿಸ್ತರಣೆ ಕೆಲಸ ನಡೆಯುತ್ತಿದೆ. ಈ ರಸ್ತೆಯಲ್ಲಿ ಹರಡಿರುವ ರಾಶಿ ರಾಶಿ ಜಲ್ಲಿಕಲ್ಲಿನಿಂದ ಪ್ರತಿದಿನ ಭಾರಿ ಪ್ರಮಾಣದ ದೂಳು ಏಳುತ್ತಿದೆ. ಸುತ್ತಲಿನ ನಿವಾಸಿಗಳಲ್ಲಿ ಹಲವಾರು ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಕೆಂಗೇರಿಯಿಂದ ಎಲೆಕ್ಟ್ರಾನಿಕ್ ಸಿಟಿಗೆ ಮತ್ತು ಬನಶಂಕರಿಗೆ ತೆರಳುವ ನೂರಕ್ಕೂ ಹೆಚ್ಚು ಬಸ್‌ಗಳು ಪ್ರತಿದಿನ ಈ ಮಾರ್ಗದಲ್ಲಿ ಸಂಚರಿಸುತ್ತಿವೆ. ದ್ವಿಚಕ್ರ ಸವಾರರು ಜೀವ ಭಯದಲ್ಲಿ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಶಶಾಂಕ್ ಮುದೂರಿ, ಸುಣಕಲ್ ಪಾಳ್ಯ



‘ರಸ್ತೆ ಸರಿಪಡಿಸಿ’

ಮಾಗಡಿರಸ್ತೆಯ ಮೆಟ್ರೊ ನಿಲ್ದಾಣದ ಮುಂಭಾಗದ ರಸ್ತೆ ಕಿತ್ತು ಹೋಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ. ಆದರೆ, ಈ ರಸ್ತೆ ತುಂಬಾ ಗುಂಡಿಗಳೇ ರಾರಾಜಿಸುತ್ತಿವೆ. ಇದರಿಂದ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದು, ವಾಹನದಟ್ಟಣೆ ಸೇರಿ ಅಪಘಾತಗಳು ಸಂಭವಿಸುವ ಅಪಾಯವಿದೆ. ಸ್ಥಳೀಯ ಜನಪ್ರತಿನಿಧಿಗಳು ಈ ರಸ್ತೆಯನ್ನು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು. ಬಿಬಿಎಂಪಿ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಉಮಾಶಂಕರಬಾಬು
ಸ್ಥಳೀಯ ನಿವಾಸಿ

‘ರಸ್ತೆಯಲ್ಲಿನ ಕಸ ತೆರವುಗೊಳಿಸಿ’

ಬಿಬಿಎಂಪಿ ವ್ಯಾಪ್ತಿಯ ಆಜಾದ್‌ನಗರದ 141ನೇ ವಾರ್ಡ್‌ನ ವಾಲ್ಮೀಕಿನಗರದ 2 ನೇ ಮುಖ್ಯರಸ್ತೆಯಲ್ಲಿ ಪ್ರತಿನಿತ್ಯ ಕಸ ಹಾಕಲಾಗುತ್ತಿದೆ. ರಾತ್ರಿ ಸಮಯದಲ್ಲಿ ವಾಹನಗಳ ಮೂಲಕ ಬಂದು ಕಸವನ್ನು ರಸ್ತೆಯ ಮೇಲೆ ಎಸೆದು ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇದರ ಪಕ್ಕದಲ್ಲಿ ದೇವಸ್ಥಾನ, ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು, ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ. ಈ ಭಾಗದಲ್ಲಿ ಪ್ರತಿದಿನ ಕಸ ಸಂಗ್ರಹಿಸುವ ವಾಹನಗಳು ಸಂಚರಿಸುವಂತೆ ಕ್ರಮಕೈಗೊಳ್ಳಬೇಕು. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದರು ಪ್ರಯೋಜನವಾಗಿಲ್ಲ.

ಸುಧಾಕರ್ ಕೆ., ವಾಲ್ಮೀಕಿನಗರದ ನಿವಾಸಿ

ಮೂರು ಪರೀಕ್ಷಾ ಸೂತ್ರ ಹೊಳೆದಿದ್ದು ಹೇಗೆ?

ಎಸ್. ಸಂಪತ್

ಪರೀಕ್ಷೆಗಳ ಸುಧಾರಣೆ, ಫಲಿತಾಂಶ ಹೆಚ್ಚಳ ಸೇರಿದಂತೆ 'ವಿದ್ಯಾರ್ಥಿಸ್ನೇಹಿ' ಪರೀಕ್ಷೆಗಳನ್ನು ನಡೆಸಲು ಏನೇನು ಮಾಡಬೇಕು, ಉನ್ನತ ಶಿಕ್ಷಣಕ್ಕೆ ಹೆಚ್ಚಿನ ವಿದ್ಯಾರ್ಥಿಗಳು ಹೋಗುವಂತೆ ಮಾಡಲು ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಹಲವು ಬಾರಿ ಚರ್ಚೆಗಳು ನಡೆದಿವೆ.

'ತ್ರಿ' ಪರೀಕ್ಷಾ ಸೂತ್ರ ಮೊಳಕೆ ಹೊಡೆದದ್ದು ಹೇಗೆ ಎಂಬುದರ ಕುರಿತು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ನಿರ್ದೇಶಕ ಎಚ್.ಎನ್. ಗೋಪಾಲಕೃಷ್ಣ ಮಾಹಿತಿ ನೀಡಿದ್ದಾರೆ.

ಪರೀಕ್ಷೆಗಳ ಸುಧಾರಣೆ, ಫಲಿತಾಂಶ ಹೆಚ್ಚಳ ಸೇರಿದಂತೆ 'ವಿದ್ಯಾರ್ಥಿಸ್ನೇಹಿ' ಪರೀಕ್ಷೆಗಳನ್ನು ನಡೆಸಲು ಏನೇನು ಮಾಡಬೇಕು, ಉನ್ನತ ಶಿಕ್ಷಣಕ್ಕೆ ಹೆಚ್ಚಿನ ವಿದ್ಯಾರ್ಥಿಗಳು ಹೋಗುವಂತೆ ಮಾಡಲು ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಎಂಬ ಚರ್ಚೆಗಳು ಮಂಡಳಿಯ ಅಧ್ಯಕ್ಷ ಆರ್. ರಾಮಚಂದ್ರನ್ ಅವರ ನೇತೃತ್ವದಲ್ಲಿ ಆಗಾಗ ನಡೆಯುತ್ತಿತ್ತು. ಈ ರೀತಿ ಚರ್ಚಿಸುವಾಗ ಈ ಬಾರಿ ದ್ವಿತೀಯ ಪಿಯುಗೆ ಎರಡನೇ ಪೂರಕ ಪರೀಕ್ಷೆ ನಡೆಸಿದರೆ ಹೇಗೆ ಎಂಬ ಚಿಂತನೆ ಮೂಡಿತು. ಅದನ್ನು ಸಾಕಾರ ಮಾಡಿದೆವು. ಪರೀಕ್ಷೆ ಬರೆದ 1.19 ಲಕ್ಷ ವಿದ್ಯಾರ್ಥಿಗಳ ಪೈಕಿ 41,961 (ಶೇ 35.21)ರಷ್ಟು ವಿದ್ಯಾರ್ಥಿಗಳು ಪಾಸಾದರು. ಇದು ನಮ್ಮ ಉತ್ಸಾಹವನ್ನು ಹೆಚ್ಚಿಸಿತು. ಈ ಪೈಕಿ ಶೇ 43.55ರಷ್ಟು ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದ್ದರು. ಇವರಲ್ಲಿ ಎಂಟು ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಗಮನ ಸೆಳೆದರು. ಇದು ಅವರ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಿಸುವ ಕನಸನ್ನು ನನಸು ಮಾಡಲು ಸಹಕಾರ ಮಾಡಿತು. ಇದು ನಮ್ಮ ವಿಶ್ವಾಸವನ್ನು ಇಮ್ಮಡಿಗೊಳಿಸಿದ್ದರ ಜತೆಗೆ ಹೊಸ ದಿಕ್ಕಿನತ್ತ ಯೋಚಿಸಲು ದಾರಿ ಮಾಡಿಕೊಟ್ಟಿತು.

ವರ್ಷಕ್ಕೆ ಎರಡು ಪೂರಕ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದನ್ನು ಮನಗಂಡು, ಪ್ರತಿ ವರ್ಷ ಹೀಗೇ ಮಾಡಿದರೆ ಹೇಗೆ ಎಂಬ ವಿಚಾರ ಮಂಡಳಿ ಮತ್ತು ಇಲಾಖೆಗೆ ಬಂದಿತು. ಆಗ ನಡೆದ ಚರ್ಚೆ ಸಂದರ್ಭದಲ್ಲಿ ಪೂರಕ ಪರೀಕ್ಷೆ ಬದಲಿಗೆ ವರ್ಷಕ್ಕೆ ಮೂರು ಪರೀಕ್ಷೆಗಳನ್ನು ವಾರ್ಷಿಕ ಪರೀಕ್ಷೆಯಂತೆಯೇ ನಡೆಸಿದರೆ ಹೇಗೆ ಎಂಬ ಯೋಚನೆ ಬಂದಿತು. ಅದರ ಸಾಧಕ- ಬಾಧಕಗಳ ಬಗ್ಗೆ ವಿಚಾರ, ವಿಮರ್ಶೆ ಮಾಡಿದ ಬಳಿಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಾರ್ಷಿಕ ಪರೀಕ್ಷೆ 1, 2 ಮತ್ತು 3 ಎಂದು ಮೂರು ಪರೀಕ್ಷೆಗಳನ್ನು ನಡೆಸುವ ನಿರ್ಧಾರ ಪ್ರಕಟಿಸಿದರು.

ಈ ಕುರಿತು ನಡೆಯುತ್ತಿದ್ದ ಚರ್ಚೆಗಳ ಸಂದರ್ಭದಲ್ಲಿ ನಾವು ಇತರ ರಾಜ್ಯಗಳ ಪರೀಕ್ಷಾ ಮಂಡಳಿಗಳು, ಸಿಬಿಎಸ್‌ಇ ಮತ್ತು ಐಸಿಎಸ್‌ಇ ನಡೆಸುವ ಪರೀಕ್ಷೆಗಳನ್ನು ಪರಿಶೀಲಿಸಿದ್ದೆವು. ಎಲ್ಲೂ ವರ್ಷಕ್ಕೆ ಮೂರು ಪರೀಕ್ಷೆಗಳನ್ನು ನಡೆಸುವ ವಿಧಾನ ಅಳವಡಿಕೆಯಲ್ಲಿಲ್ಲ. ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಈ ಮಾದರಿಯನ್ನು ಅಳವಡಿಸಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಬೇರೆ ಯಾವುದೇ ರಾಜ್ಯಗಳ ಮಂಡಳಿಗಳು ನಮ್ಮ ಈ ವಿಧಾನ ಅಳವಡಿಸಿಕೊಂಡರೆ ಅದು 'ಕರ್ನಾಟಕ ಮಾದರಿ' ಎಂದು ಕರೆಸಿಕೊಳ್ಳಬಹುದು ಎನ್ನುತ್ತಾರೆ ಗೋಪಾಲಕೃಷ್ಣ.

ಏನೆಲ್ಲ ನಿಯಮಗಳಿವೆ?

- ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ವಾರ್ಷಿಕ ಹಾಜರಾತಿ ಶೇ 75ರಷ್ಟು ಕಡ್ಡಾಯ. ಇಷ್ಟು ಹಾಜರಾತಿ ಇಲ್ಲದಿದ್ದರೆ ಪರೀಕ್ಷೆ ಬರೆಯಲು ಅರ್ಹತೆ ಇರುವುದಿಲ್ಲ.
- ಮೊದಲ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಹೊಸಬರು ಮತ್ತು ಖಾಸಗಿ ಅಭ್ಯರ್ಥಿಗಳು ಎಲ್ಲ ವಿಷಯಗಳಲ್ಲಿ ಪರೀಕ್ಷೆ–1 ಬರೆಯುವುದು ಕಡ್ಡಾಯ. ನೇರವಾಗಿ ಪರೀಕ್ಷೆ–2 ಮತ್ತು ಪರೀಕ್ಷೆ–3 ಬರೆಯಲು ಅವಕಾಶ ಇರುವುದಿಲ್ಲ.
- ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವ ಸಲುವಾಗಿ ಒಂದು ಬಾರಿ ಮಾತ್ರ ನಿಗದಿತ ಶುಲ್ಕ ವಿಧಿಸಲಾಗುತ್ತದೆ. ಎರಡನೇ ಬಾರಿ ಶುಲ್ಕ ಪಡೆಯುವಂತಿಲ್ಲ.
- ಪರೀಕ್ಷೆ–1ರಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ 2 ಮತ್ತು 3ನೇ ಪರೀಕ್ಷೆ ತೆಗೆದುಕೊಳ್ಳಲು ಆಸಕ್ತಿ ಇಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಲಾಗುತ್ತದೆ.
- ವಿದ್ಯಾರ್ಥಿಗಳ ಅಂಕಗಳನ್ನು ಪಡೆಯುವ ಸಲುವಾಗಿ ನ್ಯಾಷನಲ್ ಅಕಾಡೆಮಿಕ್ ಡೆಪಾಸಿಟರಿ (ಎನ್‌ಎಡಿ) ಡಿಜಿ ಲಾಕರ್ ವ್ಯವಸ್ಥೆಯಲ್ಲಿ ಆಯಾ ಪರೀಕ್ಷೆಗಳು ಮುಗಿದ ನಂತರ ಅಪ್ಲೋಡ್ ಮಾಡಲಾಗುತ್ತದೆ.
- ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ ಮರು ಪ್ರಯತ್ನಿಸುವವರಿಗೆ ಹಾಲಿ ವ್ಯವಸ್ಥೆ ಮುಂದುವರಿಯುತ್ತದೆ. ಅವರಿಗೆ ಪ್ರಯತ್ನಗಳ ವಿಷಯದಲ್ಲಿ ಯಾವುದೇ ಮಿತಿ ಇರುವುದಿಲ್ಲ.
- ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವ ಸಂಬಂಧ ಎಲ್ಲ ಉಪ ನಿರ್ದೇಶಕರು ಅಗತ್ಯ ತನಿಖಾ ತಂಡಗಳನ್ನು ರಚಿಸಿ, ಪ್ರತಿ ಕಾಲೇಜಿಗೂ ಭೇಟಿ ನೀಡಿ, ಹಾಜರಾದವರ, ಗೈರಾದವರ ಮತ್ತು ನೋಂದಣಿಯಾದ ವಿದ್ಯಾರ್ಥಿಗಳ ಮಾಹಿತಿಯನ್ನು ಪರಿಶೀಲಿಸುತ್ತಾರೆ.

ಶಿಕ್ಷಕರಿಗೆ ಹೊರೆ

ಶಿಕ್ಷಣ ಇಲಾಖೆಯಲ್ಲಿ ಬೋಧಕರಿಗೆ, ವಿದ್ಯಾರ್ಥಿಗಳಿಗೆ ದಸರಾ, ಬೇಸಿಗೆ ರಜೆ ಇರುತ್ತದೆ. ವಾರ್ಷಿಕ ಪರೀಕ್ಷೆಯ ಬಳಿಕ ಬೇಸಿಗೆ ರಜೆ ನಿಗದಿಯಾಗಿರುತ್ತದೆ. ಆದರೆ ಈ ಬಾರಿಯಿಂದ ವಾರ್ಷಿಕ ಮೂರು ಪರೀಕ್ಷೆ ನಡೆಸುವುದರಿಂದ ರಜೆ ಸಿಗುತ್ತದೆಯೇ ಎಂಬ ಆತಂಕ ಬೋಧಕರನ್ನು ಕಾಡುತ್ತಿದೆ. ಮಾರ್ಚ್‌ನಿಂದ ಜೂನ್ ಅಂತ್ಯದವರೆಗೆ ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಪ್ರಕಟ ಕಾರ್ಯಗಳಲ್ಲಿಯೇ ನಿರತರಾಗಬೇಕಾಗುತ್ತದೆ. ಹೀಗಿರುವಾಗ ರಜೆ ಎಲ್ಲಿ ಸಿಗುತ್ತದೆ ಎಂಬುದು ಬೋಧಕರ ಅಳಲು. ಮೂರು, ಮೂರು ಪರೀಕ್ಷೆಗಳನ್ನು ಮಾಡಲೇಬೇಕು ಎಂದಾದರೆ ಇತರ ಇಲಾಖೆಗಳಂತೆ ಶಿಕ್ಷಣ ಇಲಾಖೆಯನ್ನೂ ರಜೆರಹಿತ ಇಲಾಖೆ ಎಂದು ಘೋಷಿಸಿ, ಇತರ ಇಲಾಖಾ ಸಿಬ್ಬಂದಿಗೆ ಇರುವ ಸವಲತ್ತುಗಳನ್ನೂ ಬೋಧಕರಿಗೂ ವಿಸ್ತರಿಸಬೇಕು ಎಂಬುದು ಬೋಧಕರ ಸಂಘಗಳ ಮನವಿ.

ಇಸವಿ ನೆನಪಿಟ್ಟುಕೊಳ್ಳುವುದು ಹೇಗೆ?

1. ನಾನು ಬಿ.ಎ ಪ್ರಥಮ ವರ್ಷದಲ್ಲಿ ಓದುತ್ತಿದ್ದೇನೆ. ಎಷ್ಟು ಪ್ರಯತ್ನ ಮಾಡಿದರೂ ಇತಿಹಾಸ ವಿಷಯದಲ್ಲಿ ಇಸವಿಗಳ ನೆನಪು ಉಳಿಯುತ್ತಿಲ್ಲ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಭೂಗೋಳಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳಬೇಕು. ಕನ್ನಡ ಮಾಧ್ಯಮದಲ್ಲಿ ಓದಿರುವುದರಿಂದ, ಇಂಗ್ಲಿಷ್ ಕಲಿಕೆ ಕಷ್ಟವಾಗುತ್ತಿದೆ. ಇಂಗ್ಲಿಷ್ ಕಲಿಯಲು ಸಲಹೆ ಕೇಳಬಯಸುತ್ತೇನೆ. ಯುಪಿಎಸ್‌ಸಿ ತಯಾರಿಗಾಗಿ ಪುಸ್ತಕಗಳ ಪಟ್ಟಿ ನೀಡಿ.

ಸುಮನ್ ಪಿ., ಚಿತ್ರದುರ್ಗ.

ಇತಿಹಾಸದ ಪ್ರಮುಖ ಘಟನೆಗಳನ್ನು ಮತ್ತು ವರ್ಷಗಳನ್ನು ಸಾಮಾನ್ಯ ರೀತಿಯಲ್ಲಿ ಓದಿದರೆ, ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟದ ಕೆಲಸ. ಆದರೆ, ಇತಿಹಾಸದ ಅಧ್ಯಾಯಗಳನ್ನು ಆಸಕ್ತಿಯಿಂದ ಕಥಾರೂಪದಲ್ಲಿ ಓದುತ್ತಾ, ಘಟನೆಗಳನ್ನು ಕಾಲಾನುಕ್ರಮದಂತೆ, ಮನಸ್ಸಿನಲ್ಲಿ ಮರುಸೃಷ್ಟಿ ಮಾಡಿಕೊಂಡು ಓದಿದರೆ, ನೆನಪಿನಲ್ಲಿಟ್ಟುಕೊಳ್ಳುವುದು ಕಷ್ಟದ ಕೆಲಸವಲ್ಲ. ಇತಿಹಾಸದ ಸಾಕ್ಷ್ಯಚಿತ್ರಗಳನ್ನು ಮತ್ತು ವಿಡಿಯೊಗಳನ್ನು ವೀಕ್ಷಿಸಿ. ಓದುತ್ತಿರುವಾಗ ಟಿಪ್ಪಣಿಯನ್ನು ಬರೆದುಕೊಂಡು, ಘಟನೆಗಳ ಶೀರ್ಷಿಕೆಗಳನ್ನು ಮತ್ತು ಇಸವಿಗಳನ್ನು ಹೈಲೈಟ್ ಮಾಡಿಕೊಳ್ಳುವುದರಿಂದ, ಜ್ಞಾಪಕ ಶಕ್ತಿ ಹೆಚ್ಚುತ್ತದೆ. ಯುಪಿಎಸ್‌ಸಿ ಪರೀಕ್ಷೆಯ ಪಠ್ಯಕ್ರಮವನ್ನು ಅರ್ಥೈಸಿಕೊಂಡು, ಅನೇಕ ಮೂಲಗಳಿಂದ ಆಯ್ದ ಅಧ್ಯಯನ ಸಾಮಗ್ರಿಯನ್ನು ಸಿದ್ಧಪಡಿಸಿಕೊಳ್ಳಬೇಕು. ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳ ಮಾಹಿತಿಗಾಗಿ ಗಮನಿಸಿ:https://iasbaba.com/geography-strategy-2/ ಇಂಗ್ಲಿಷ್ ಕಲಿಕೆಗೆ ಸಹಾಯವಾಗಬಹುದಾದ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=NoFcIQAFDCA



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

2. ನಾನು ಅಂತಿಮ ವರ್ಷದ ಬಿ.ಟೆಕ್ ಮಾಡುತ್ತಿದ್ದು ಮುಂದಿನ ವರ್ಷ ಕೆಲಸ ಸಿಗುವುದೇ ಎಂಬ ಯೋಚನೆಯಾಗಿದೆ. ಹಾಗಾಗಿ, ವೃತ್ತಿಯ ದೃಷ್ಟಿಯಿಂದ ಎಂಟೆಕ್ ಮಾಡುವುದೇ ಅಥವಾ ಎಂಬಿಎ ಮಾಡುವುದು ಒಳ್ಳೆಯದೇ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನೀವು ಬಿ.ಟೆಕ್ ಯಾವ ವಿಭಾಗದಲ್ಲಿ ಮಾಡುತ್ತಿದ್ದೀರಿ ಎಂದು ತಿಳಿಸಿಲ್ಲ. ನಿಮ್ಮ ಆಸಕ್ತಿ, ಅಭಿರುಚಿ ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ ಯಾವ ಕ್ಷೇತ್ರದಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳಬೇಕೆಂದು ನಿರ್ಧರಿಸಿ.

ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯಿದ್ದಲ್ಲಿ ಎಂಟೆಕ್ ಮಾಡಬಹುದು; ಮ್ಯಾನೇಜ್‌ಮೆಂಟ್ ಕ್ಷೇತ್ರ ಅಥವಾ ಅನುಭವದ ನಂತರ ಸ್ವಂತ ಉದ್ದಿಮೆಯನ್ನು ಮಾಡುವ ಆಸಕ್ತಿಯಿದ್ದರೆ ಎಂಬಿಎ ಮಾಡಬಹುದು. ಎಂಬಿಎ ಕೋರ್ಸಿನಲ್ಲಿ ವೃತ್ತಿಗೂ, ಜೀವನಕ್ಕೂ ಅಗತ್ಯವಾದ ಅನೇಕ ಮೂಲಭೂತ ತತ್ವಗಳ, ಮೌಲ್ಯಗಳ ಕಲಿಕೆಯಾಗುವುದರಿಂದ, ವೃತ್ತಿ ಮತ್ತು ಖಾಸಗಿ ಜೀವನಗಳೆರಡರಲ್ಲೂ ಯಶಸ್ಸನ್ನು ಸಾಧಿಸಲು ಅನುಕೂಲವಾಗುತ್ತದೆ. ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=1TcHjPKJ1gw

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

3. ನಾನೀಗ ದ್ವಿತೀಯ ಪಿಯುಸಿ ಮಾಡುತ್ತಿದ್ದು, ಮುಂದೆ ಏನು ಮಾಡುವುದೆಂದು ಯೋಚಿಸುತ್ತಿದ್ದೇನೆ. ಆದ್ದರಿಂದ, ವೃತ್ತಿ ಯೋಜನೆ ಎಂದರೇನು? ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಆಸಕ್ತಿ, ಒಲವು, ಪ್ರತಿಭೆ, ಕೌಶಲಗಳನ್ನು ಗುರುತಿಸಿ, ಸ್ವಯಂ- ಮೌಲ್ಯಮಾಪನ ಮಾಡಬೇಕು. ನಂತರ, ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳನ್ನು ಗುರುತಿಸಿ, ಯಾವ ವೃತ್ತಿ ಸರಿಹೊಂದಬಹುದು ಎಂದು ಅಂದಾಜು ಮಾಡಿ, ದೀರ್ಘಾವಧಿಯಲ್ಲೂ ಆ ವೃತ್ತಿಗೆ ಬೇಡಿಕೆ ಇರುತ್ತದೆಯೇ ಎಂದು ಖಚಿತಪಡಿಸಿಕೊಳ್ಳಿ. ವೃತ್ತಿಯ ಮತ್ತು ವೈಯಕ್ತಿಕ ಬದುಕಿನ ಧ್ಯೇಯಗಳನ್ನು ನಿಶ್ಚಯಿಸಿ, ಶಿಕ್ಷಣದ ವಿವಿಧ ಹಂತಗಳ ಅವಶ್ಯಕತೆಗಳನ್ನು ತೀರ್ಮಾನಿಸಿ. ಅವಶ್ಯಕತೆಗಳಿಗೆ ತಕ್ಕಂತೆ ಮಾಡಬೇಕಾದ ಕೋರ್ಸ್‌ಗಳು, ಪ್ರವೇಶ ಪರೀಕ್ಷೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗುರುತಿಸಿ. ಅಲ್ಪಾವಧಿ ಮತ್ತು ದೀರ್ಘಾವಧಿ ಮೈಲಿಗಲ್ಲುಗಳೊಂದಿಗೆ, ವೃತ್ತಿ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸಿ. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

ವಿದ್ಯಾರ್ಥಿ ವೇತನ ಕೈಪಿಡಿ

ಇನ್ಫೋಸೆಪ್ಟ್ಸ್ ಇನ್ನೊವೇಟ್ ಫಾರ್ ಇಂಪ್ಯಾಕ್ಟ್

ವಿವರ: ಕಂಪ್ಯೂಟರ್ ವಿಜ್ಞಾನ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಎಂಜಿನಿಯರಿಂಗ್ ಕೋರ್ಸ್ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳಿಗಾಗಿ ಈ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಅರ್ಹತೆ: ಕಂಪ್ಯೂಟರ್ ಎಂಜಿನಿಯರಿಂಗ್, ಮಾಹಿತಿ ತಂತ್ರಜ್ಞಾನ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮಷೀನ್ ಲರ್ನಿಂಗ್ ಮತ್ತು ಡೇಟಾ ಸೈನ್ಸ್ ಅಂಡ್ ಅನಾಲಿಟಿಕ್ಸ್‌ನಂತಹ ಕ್ಷೇತ್ರಗಳಲ್ಲಿ ಎಂಜಿನಿಯರಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. 10 ಮತ್ತು 12ನೇ ತರಗತಿ ಪರೀಕ್ಷೆಯಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹6 ಲಕ್ಷ ಮೀರಬಾರದು. ಬೆಂಗಳೂರು, ನಾಗ್ಪುರ, ಪುಣೆ, ಚೆನ್ನೈ ನಗರಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ವರ್ಷಕ್ಕೆ ₹50 ಸಾವಿರ
ಅರ್ಜಿ ಸಲ್ಲಿಸಲು ಕೊನೆ ದಿನ: 22-10-2023
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/INFO1

ಸಂತೂರ್ ಸಹಾಯ

ವಿವರ: ಸಂತೂರ್ ಸ್ಕಾಲರ್‌ಶಿಪ್ 2023-24, ಆಂಧ್ರ ಪ್ರದೇಶ, ಕರ್ನಾಟಕ, ತೆಲಂಗಾಣ ಅಥವಾ ಛತ್ತೀಸ್‌ಗಢ ರಾಜ್ಯಗಳ ಅನನುಕೂಲ ಪರಿಸ್ಥಿತಿಯ ಹಿನ್ನೆಲೆಯಿರುವ ಯುವತಿಯರಿಗೆ ಶಿಕ್ಷಣವನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ.

ಅರ್ಹತೆ: ಸ್ಥಳೀಯ ಸರ್ಕಾರಿ ಶಾಲೆಯಲ್ಲಿ 10ನೇ ತರಗತಿ ಉತ್ತೀರ್ಣರಾಗಿರಬೇಕು. 2022-23ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆ/ಜೂನಿಯರ್ ಕಾಲೇಜಿನಿಂದ 12ನೇ ತರಗತಿ ಉತ್ತೀರ್ಣರಾಗಿರಬೇಕು. 2023-24 ರಿಂದ ಪೂರ್ಣ ಸಮಯದ ಪದವಿ ಕೋರ್ಸ್‌ಗೆ ಸೇರಿಕೊಂಡಿರಬೇಕು.

ಆರ್ಥಿಕ ಸಹಾಯ: ವಾರ್ಷಿಕ ₹ 24,000
ಅರ್ಜಿ ಸಲ್ಲಿಸುವ ವಿಧಾನ: 15-10-2023
ಹೆಚ್ಚಿನ ಮಾಹಿತಿಗೆ: Short Url: www.b4s.in/praja/SWS6

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

52) ಬಕ್ಸಾರ್ ಕದನದ ಕುರಿತು ವಿವರವಾಗಿ ಬರೆಯಿರಿ.

ಉತ್ತರ: ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು. ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು. ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು. ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕ ಮುಕ್ತ ಎಂದು ಘೋಷಿಸಿದನು. ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸಿ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು. ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು. ಬ್ರಿಟಿಷರಿಗೆ ನವಾಬನನ್ನು ವಿರೋಧಿಸಲು ಇದಿಷ್ಟೇ ಸಾಕಿತ್ತು. ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು. ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು. ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು. ಈ ನಿಟ್ಟಿನಲ್ಲಿ ಮುಂದುವರಿದ ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜ್-ಉದ್-ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಪರಿಣಾಮವಾಗಿ, ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು. ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು. ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು..

ಬಹುಆಯ್ಕೆ ಪ್ರಶ್ನೆಗಳು

1) ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ....ನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು.
ಎ) ಅರ್ಜುನದೇವ ಬಿ) ಫರೂಕ್ ಸಿಯಾರ್
ಸಿ) ಅಕ್ಬರ್-2 ಡಿ) ಅನ್ವರುದ್ದೀನ

2) 1741ರ ಆಗಸ್ಟ್ 10ರಂದು ....ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು.
ಎ) ಕೊಳಚ್ಚಲ್ ಬಿ) ಕಾಯಂ ಕುಳಂ
ಸಿ) ತಿರುವಾಂಕೂರು ಡಿ) ಕೊಚ್ಚಿನ್

3) ಬ್ರಿಟಿಷ್ ಭಾರತದ ಸೃಷ್ಟಿಗೆ ಕಾರಣನಾದ ಪ್ರಥಮ ಅಧಿಕಾರಿ ರಾಬರ್ಟ್ ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ....ನಾಗಿ ಸೇವೆಗೆ ಸೇರಿದ್ದನು.
ಎ) ಸೇನಾಧಿಕಾರಿಯಾಗಿ ಬಿ) ಕಾರುಕೂನ
ಸಿ) ದಿವಾನ ಡಿ) ಮೇಲಿನ ಯಾವುದೂ ಅಲ್ಲ

4) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?
ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಗಾಮ ಡಿ) ಮೇಲಿನ ಯಾರೂ ಅಲ್ಲ

5) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್ ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?
ಎ) 1734 ಬಿ) 1526
ಸಿ) 1764 ಡಿ) 1943

6) 1741ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿ ಕೊಟ್ಟಾರಕರ ಸಂಸ್ಥಾನವನ್ನು ಮುಂದಿಟ್ಟುಕೊಂಡು ....ಮೇಲೆ ಯುದ್ಧವನ್ನು ಸಾರಿತು. ಡಚ್ಚರ ಜೊತೆಗೆ ಸ್ಥಳೀಯ ಸಂಸ್ಥಾನಗಳೂ ಸೇರಿಕೊಂಡಿದ್ದರು. ಆದರೆ ಮಾರ್ತಾಂಡ ವರ್ಮನ ಸೈನ್ಯ ಆ ದಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿತು.
ಎ) ಕಣ್ಣಾನೂರು ಬಿ) ತಿರುವಾಂಕೂರಿನ
ಸಿ) ಕೊಳಚ್ಚಲ್‌ನ ಡಿ) ಮೇಲಿನ ಯಾವುದೂ ಅಲ್ಲ

7) ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು .... ನಡುವಿನ ಸಂಘರ್ಷವು 1754ರವರೆಗೆ ನಡೆಯಿತು.
ಎ) ಡಚ್ಚರ ಬಿ) ಬ್ರಿಟಿಷರ
ಸಿ) ಪೋರ್ಚುಗೀಸರ ಡಿ) ಡ್ಯಾನಿಷರು

8) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು.
ಎ) ವೆನ್ನಿಸ್ ಬಿ) ವ್ಯಾಟಿಕನ್
ಸಿ) ಕಾನ್‌ಸ್ಟಾಂಟಿನೋಪಲ್ ಡಿ) ಕಾಬೂಲ್

9) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಎಲ್ಲಿಗೆ ಬಂದು ತಲುಪಿದನು.?
ಎ) ತಿರುವನಂತಪುರ ಬಿ) ಕಾಪ್ಪಡ್
ಸಿ) ಕೊಚ್ಚಿನ್ ಡಿ) ಮೇಲಿನ ಯಾವುದೂ ಅಲ್ಲ

10) ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy) ಯನ್ನು ಯಾರು ಜಾರಿಗೆ ತಂದನು?
ಎ) ವಾಸ್ಕೋಡಗಾಮ ಬಿ) ಆಲ್ಫೋನ್ಸೊ-ಡಿ-ಅಲ್ಬುಕರ್ಕ್
ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ

11) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಎ) ರಾಮ ವರ್ಮಾ ಬಿ) ಮಾರ್ತಾಂಡ ವರ್ಮ
ಸಿ) ಅನಂತ ವರ್ಮಾ ಡಿ) ಮೇಲಿನ ಯಾರೂ ಅಲ್ಲ

ಉತ್ತರ: 1)ಡಿ 2)ಎ 3)ಬಿ 4)ಎ 5)ಸಿ 6)ಬಿ 7)ಬಿ 8)ಸಿ 9)ಬಿ 10) ಡಿ 11)ಬಿ

I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.
1) ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು.......
2) 17ನೇ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು ....ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
3) ಮೊದಲನೇ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು ....ರ ನಡುವೆ ನಡೆಯಿತು.
4) ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ....
5) ಪ್ಲಾಸಿ ಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವ ವಹಿಸಿದ್ದವನು...
ಉತ್ತರ:- 1) ರಾಬರ್ಟ್ ಕ್ಲೈವ್ 2) ಇಟಲಿ 3) ಫ್ರೆಂಚ್ 4) ಸರ್‌ಐರ್‌ಕೂಟ್ 5) ರಾಬರ್ಟ್ ಕ್ಲೈವ್

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC CHEMISTRY

Types of Solutions

12. Explain why on addition of 1 mole of NaCl to 1 litre of water, the boiling point of water increases, while addition of 1 mole of methyl alcohol to one litre of water decreases its boiling point

Ans:- Sodium chloride (NaCl) is a non-volatile solute. When added to water taken in a beaker, the solute occupies some surface area. As a result, the vapour pressure decreases and the boiling point of solution increases. On the other hand, methyl alcohol is more volatile than water. The addition of methyl alcohol to water increases the total vapour pressure of the solution. The boiling point of the solution decreases.

13) **Components of a binary mixture of two liquids A and B were separated by distillation. After some time separation of components stopped and the composition of the vapour phase became the same as that of the liquid phase. Both the components started coming in the distillate. Explain why this happened.**

Ans:: When the composition of a binary mixture of two liquids A and B in the liquid state and in the vapour phase is the same, the mixture is known as an azeotropic mixture. In any azeotropic mixture, liquids are boils at the same temperature without undergoing any change in composition.

14) When two perfect solutions with volume V each are combined, What is the volume of the solution as a result?

Ans:- 2V (When two perfect solutions are mixed, there is no change in volume.)

15) What is an example of camphor in N2 gas?

Ans:- Solid in gas solution

Solid in gaseous solution is an example of camphor in N2 gas. Gaseous solution refers to a solution in which the solvent is gaseous. Other gaseous solutions include air (O2 + N2), iodine vapors in air, humidity in air, and so on.

16) What type of furnace is used (1) Calcination (2) Smelting

Ans:- Calcination - Reverberatory furnace
Smelting - Blast furnace

17) What happens when a solute crystal is added to a supersaturated solution?

Ans:- The solute precipitates out of the solution

Solute particles leave the solution and form a crystalline precipitate when a solute crystal is added to a supersaturated solution.

18) Concentration terms such as mass percentage, ppm, mole fraction and molality are independent of temperature; however molarity is a function of temperature. Explain.

Ans:- By definition, molarity takes into account the volume of the solution which changes with change in temperature. All other terms, for expressing the concentration of a solution involve the mass of the solvent which is not influenced by the temperature.

19) What is the significance of Henry's Law constant K_H?

Ans:- Henry's Law constant (K_H) helps in comparing the relative solubilities of different gases in the same solvent (e.g. water). In general, lesser the value of K_H, more is the solubility of a gas.

20) Why are aquatic species more comfortable in cold water in comparison to warm water?

Ans:- For breathing, aquatic species need oxygen. In general the solubility of a gas in water or any other solvent decreases with the rise in temperature. Therefore, oxygen is more soluble in cold water than in warm water. As a result, aquatic species feel more comfortable in cold water compared to warm water.

21) Why is vapour pressure of an aqueous solution of glucose lower than that of water?

Ans:- Evaporation of liquid is a surface phenomenon. More the surface area available, more is the evaporation of the liquid. Now glucose is a non-volatile solute. It occupies certain surface area of water. This means evaporation of water from the surface gets reduced and its vapour presence also gets lowered.

22) How does sprinkling of salt help in clearing the snow covered roads in hilly areas? Explain the phenomenon involved in the process.

Ans:- The phenomenon involved in the melting of snow in snow covered roads is the depression in freezing point which is caused by the addition of non-volatile impurities to a liquid. Addition of salt (sodium chloride) lowers the freezing point temperature of water and thus, helps in the melting of snow.

23) How can the hard calcium carbonate layer of the egg be removed without damaging its semipermeable membrane? Can this egg be inserted into a bottle with a narrow neck without distorting its shape? Explain the process involved.

Ans:- The hard layer of egg white in colour, consists of calcium carbonate.

It can be removed by placing the egg in dilute hydrochloric acid for sometime. It dissolves calcium carbonate, leaving behind the egg without damaging its soft semipermeable membrane. The size of the egg can be reduced or it shrinks by placing in saline water (contains NaCl) for sometime. The fluid from the egg slowly escapes and passes into saline water which is at higher osmotic pressure (hypertonic in nature). Now, the egg with reduced size can be inserted in a bottle with narrow neck. If the bottle contains water, the egg will regain its original shape and size due to osmosis of water (hypotonic) through the semipermeable membrane.



❦ ಸುಭಾಷಿತ ❦

ತನ್ನ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿರುವವನಿಗೆ ಜಗತ್ತು ಎಂದೂ ಬೇಸರದ್ದಾಗಿ ಕಾಣುವುದಿಲ್ಲ.

-ಮಹಾತ್ಮ ಗಾಂಧಿ

ಏಷ್ಯನ್ ಕ್ರೀಡಾಕೂಟದಲ್ಲಿ ಸಾಧನೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಪ್ರೇರಣೆ

ಭಾರತದ ಕ್ರೀಡಾಪಟುಗಳು ಚೀನಾದ ಹಾಂಗ್‌ಝೌನಲ್ಲಿ ನಡೆದ ಹತ್ತೊಂಬತ್ತನೇ ಏಷ್ಯನ್ ಕ್ರೀಡಾಕೂಟದಲ್ಲಿ ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದರು. ಇದೇ ಮೊದಲ ಬಾರಿಗೆ ಭಾರತವು ಒಟ್ಟು 107 ಪದಕಗಳನ್ನು ಗೆದ್ದು ದಾಖಲೆ ನಿರ್ಮಿಸಿತು. ಇದರಲ್ಲಿ 28 ಚಿನ್ನ, 38 ಬೆಳ್ಳಿ ಹಾಗೂ 41 ಕಂಚಿನ ಪದಕಗಳು ಸೇರಿವೆ. ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನೂ ಪಡೆಯಿತು. ಕ್ರೀಡಾಕ್ಷೇತ್ರದಲ್ಲೂ ಬಲಾಢ್ಯ ಆಗಿರುವ ಚೀನಾದಲ್ಲಿ ಕಳೆದ ಎರಡು ವಾರಗಳ ಅವಧಿಯಲ್ಲಿ ತ್ರಿವರ್ಣ ಧ್ವಜ ಪ್ರತಿದಿನವೂ ಅರಳುವಂತೆ ಮಾಡಿದ್ದು ಭಾರತೀಯರ ಅಮೋಘ ಸಾಧನೆಯೇ ಸರಿ. 2018ರಲ್ಲಿ ಜಕಾರ್ತದಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಗಳಿಸಿದ್ದ 70 ಪದಕಗಳೇ ಭಾರತದ ಶ್ರೇಷ್ಠ ಸಾಧನೆಯಾಗಿತ್ತು. ಈ ಬಾರಿ ಭಾರತ ತಂಡದಲ್ಲಿ 655 ಅಥ್ಲೀಟ್‌ಗಳಿದ್ದರು. ಅವರಲ್ಲಿ ಹದಿನಾರು ವರ್ಷದ ಸ್ಕ್ವಾಷ್ ಆಟಗಾರ್ತಿ ಅನಾಹತ್ ಸಿಂಗ್ ಅತ್ಯಂತ ಕಿರಿಯ ವಯಸ್ಸಿನವರಾಗಿದ್ದರು. ಟೆನಿಸ್ ತಾರೆ 43 ವರ್ಷದ ರೋಹನ್ ಬೋಪಣ್ಣ ಅತಿ ಹಿರಿಯ ವಯಸ್ಸಿನ ಕ್ರೀಡಾಪಟುವಾಗಿದ್ದರು. ಇಂತಹ ಯುವ ಮತ್ತು ಅನುಭವಿ ಕ್ರೀಡಾಪಟುಗಳ ಮಿಶ್ರಣವು ಭಾರತದ ಸಾಧನೆಗೆ ಕಾರಣವಾಯಿತು. ಹೋದ ವರ್ಷವೇ ನಡೆಯಬೇಕಿದ್ದ ಕೂಟವನ್ನು ಕೋವಿಡ್‌ನಿಂದಾಗಿ ಮುಂದೂಡಲಾಗಿತ್ತು. ಅದರಿಂದ ಲಭಿಸಿದ ಸಮಯವೂ ಕ್ರೀಡಾಪಟುಗಳ ಸಿದ್ಧತೆಗೆ ಅನುಕೂಲ ಮಾಡಿಕೊಟ್ಟಿತು. ಕ್ರೀಡಾಪಟುಗಳಿಗೆ ವಿದೇಶಿ ತರಬೇತುದಾರರ ಮಾರ್ಗದರ್ಶನವೂ ಸಿಗುತ್ತಿದೆ. ಆಧುನಿಕ ತಂತ್ರಜ್ಞಾನ, ಕ್ರೀಡಾವೈದ್ಯಕೀಯ ಮತ್ತು ಮಾನಸಿಕ ತಜ್ಞರ ನೆರವು ಸಿಗುತ್ತಿರುವುದು ಕೂಡ ಕ್ರೀಡಾಪಟುಗಳ ಸಾಮರ್ಥ್ಯ ಹೆಚ್ಚಿಸುತ್ತಿದೆ. ಆದರೂ ಭಾರತದಂತಹ ಬೃಹತ್ ರಾಷ್ಟ್ರಕ್ಕೆ ಇಷ್ಟು ಸಾಧನೆ ಸಾಕೇ ಎಂಬ ಪ್ರಶ್ನೆಯೂ ಕಾಡದಿರದು. ಆದರೆ, ಕ್ರಿಕೆಟ್ ಆಟವನ್ನು ಆರಾಧಿಸುವ ದೇಶದಲ್ಲಿ ಬೇರೆ ಕ್ರೀಡೆಗಳೂ ಈ ಮಟ್ಟದ ಸಾಧನೆ ಮಾಡುತ್ತಿರುವುದು ಶುಭಸೂಚಕ. ಈ ಹಿಂದೆ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳಲ್ಲಿ ಪದಕ ಜಯಿಸುತ್ತಿದ್ದವರು ಬೆರಳೆಣಿಕೆಯಷ್ಟಿದ್ದರು. ಆದರೆ ಈ ಕೂಟದಲ್ಲಿ ಇದೊಂದೇ ವಿಭಾಗದಿಂದ 29 ಪದಕಗಳು ಲಭಿಸಿವೆ. ಅದರಲ್ಲಿ ಆರು ಚಿನ್ನ ಇರುವುದು ವಿಶೇಷ. ಜಕಾರ್ತ ಏಷ್ಯಾ ಕ್ರೀಡಾಕೂಟ, 2020ರ ಟೋಕಿಯೊ ಒಲಿಂಪಿಕ್ಸ್ ಮತ್ತು ಈಚೆಗೆ ವಿಶ್ವ ಅಥ್ಲೆಟಿಕ್ ಕೂಟದ ಜಾವೆಲಿನ್ ಥ್ರೋನಲ್ಲಿ ಚಿನ್ನ ಜಯಿಸಿದ್ದ ನೀರಜ್ ಚೋಪ್ರಾ ಇಲ್ಲಿ ಮತ್ತೊಮ್ಮೆ ಬಂಗಾರ ಗೆದ್ದರು. ಅವರ ನಿರಂತರ ಸಾಧನೆಯು ಯುವ ಅಥ್ಲೀಟ್‌ಗಳಿಗೆ ಪ್ರೇರಣೆಯಾಗಿದೆ. ಈ ವಿಭಾಗದಲ್ಲಿಯೇ ಕಿಶೋರ್ ಜೇನಾ ಅವರು ಬೆಳ್ಳಿ ಜಯಿಸಿದರೆ, ಮಹಿಳೆಯರಲ್ಲಿ ಅನ್ನು ರಾಣಿ ಸ್ವರ್ಣ ಗೆದ್ದರು. ಈ ಬಾರಿ ಟ್ರ್ಯಾಕ್ ಸ್ಪರ್ಧೆಗಳಲ್ಲಿ ಮಿಂಚಿದ ಪಾರುಲ್ ಚೌಧರಿ, ಜ್ಯೋತಿ ಯರ್ರಾಜಿ, ಹರ್ಮಿಲನ್ ಬೇನ್ಸ್, ತಜೀಂದರ್ ಪಾಲ್ ಸಿಂಗ್ ತೂರ್, ಮುರಳಿ ಶ್ರೀಶಂಕರ್ ಮತ್ತು ಅವಿನಾಶ್ ಸಾಬ್ಳೆ ಅವರ ಸಾಧನೆಯೂ ಗಮನಾರ್ಹ.

ಕೆಲವು ಅಡೆತಡೆಗಳ ನಡುವೆಯೂ ಭಾರತವು ಪದಕ ಗಳಿಕೆಯಲ್ಲಿ ಮೂರಂಕಿ ಸಾಧನೆ ಮಾಡಿರುವುದು ವಿಶೇಷ

ಆರ್ಚರಿಯಲ್ಲಿ ಓಜಸ್ ದೇವತಾಳೆ ಹಾಗೂ ಜ್ಯೋತಿ ಸುರೇಖಾ ವೆನ್ನಂ ಚಿನ್ನದ ಹ್ಯಾಟ್ರಿಕ್ ಸಾಧನೆ ಮಾಡಿದರು. ಬಲಾಢ್ಯ ದಕ್ಷಿಣ ಕೊರಿಯಾದ ಸವಾಲು ಮೆಟ್ಟಿ ನಿಂತರು. ಶೂಟಿಂಗ್‌ನಲ್ಲಿಯೂ ಚೀನಾದ ಪ್ರಾಬಲ್ಯವನ್ನು ಮುರಿಯುವಲ್ಲಿ ಭಾರತ ಸ್ಪರ್ಧಿಗಳು ಯಶಸ್ವಿಯಾದರು. ಬ್ಯಾಡ್ಮಿಂಟನ್‌ನಲ್ಲಿ ಇದೇ ಮೊದಲ ಬಾರಿಗೆ ಭಾರತಕ್ಕೆ ಪುರುಷರ ಡಬಲ್ಸ್‌ನಲ್ಲಿ ಚಿನ್ನ ಒಲಿಯಲು ಚಿರಾಗ್ ಶೆಟ್ಟಿ, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೋಡಿ ಕಾರಣವಾಯಿತು. ಸಿಂಗಲ್ಸ್‌ನಲ್ಲಿ ಎಚ್‌.ಎಸ್. ಪ್ರಣಯ್ ಕಂಚು ಪಡೆದರು. ಕಬಡ್ಡಿಯಲ್ಲಿ ಮಹಿಳೆಯರ ಮತ್ತು ಪುರುಷರ ತಂಡಗಳು ಸ್ವರ್ಣ ಜಯಿಸಿದವು. ಹಾಕಿ ತಂಡಗಳೂ ಮಿಂಚಿದವು. ರೋಯಿಂಗ್, ಸೇಲಿಂಗ್, ಈಕ್ವೆಸ್ಟ್ರಿಯನ್, ಸ್ಕ್ವಾಷ್, ಬ್ರಿಜ್, ಗಾಲ್ಫ್, ಸ್ಕೇಟಿಂಗ್, ವುಷು, ಕೆನೊಯಿಂಗ್ ಮತ್ತು ಸೆಪಕ್ ಟಕ್ರಾದಂತಹ ಕ್ರೀಡೆಗಳಲ್ಲಿಯೂ ಈ ಬಾರಿ ಪದಕ ಒಲಿದಿರುವುದು ವಿಶೇಷ. ಈ ಆಟಗಳು ಭಾರತದಲ್ಲಿ ಇನ್ನೂ ಬೇರೂರಿಲ್ಲ. ಕ್ರಿಕೆಟ್‌ನಲ್ಲಿಯೂ ಎರಡು ಚಿನ್ನ ಒಲಿದವು. ಆದರೆ, ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಮತ್ತು ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ನಿರಾಶೆ ಮೂಡಿಸಿದರು. ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು ಅವರು ತೊಡೆಯ ಸ್ನಾಯುಸೆಳೆತದಿಂದ ಪದಕ ತಪ್ಪಿಸಿಕೊಂಡರು. ಆದರೂ ಭಾರತವು ಶತಕದ ಗುರಿ ತಲುಪಲು ಸಮಸ್ಯೆಯಾಗಲಿಲ್ಲ. ಇಷ್ಟಾದರೂ ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳಷ್ಟು ಎತ್ತರಕ್ಕೇರಲು ಭಾರತ ಇನ್ನೂ ಬಹುದೂರ ಸಾಗಬೇಕಿದೆ. ಈ ಬಾರಿಯೂ ಪದಕ ಗಳಿಕೆಯಲ್ಲಿ ಚೀನಾ ಪಾರಮ್ಯ ಮುಂದುವರಿಸಿತು. ಕೂಟದ ಉದ್ಘಾಟನೆ ಸಮಾರಂಭದಲ್ಲಿ ಆತಿಥೇಯರು ಅತ್ಯಾಧುನಿಕ ತಂತ್ರಜ್ಞಾನದ ಚಮತ್ಕಾರಗಳನ್ನು ತೋರಿಸಿ ಅಚ್ಚರಿ ಮೂಡಿಸಿದ್ದರು. ಆದರೆ ಕ್ರೀಡೆಗಳ ಆಯೋಜನೆಯಲ್ಲಿ ಕೆಲವು ತಾಂತ್ರಿಕ ಲೋಪಗಳು ಕಂಡುಬಂದವು. ಜಾವೆಲಿನ್ ಥ್ರೋನಲ್ಲಿ ಚೋಪ್ರಾ ಅವರು ಮಾಡಿದ ಮೊದಲ ಎಸೆತದ ಫಲಿತಾಂಶವನ್ನು ದಾಖಲಿಸುವಲ್ಲಿ ತಾಂತ್ರಿಕ ಸಿಬ್ಬಂದಿ ವಿಫಲವಾಯಿತು. ಇದರಿಂದಾಗಿ ನೀರಜ್ ಅವರ ಥ್ರೋ ವ್ಯರ್ಥವಾಯಿತು. ಓಟದ ಸ್ಪರ್ಧೆಗಳಲ್ಲಿ, ಪುರುಷರ ಕಬಡ್ಡಿ ಫೈನಲ್‌ನಲ್ಲಿಯೂ ಇಂತಹುದೇ ಲೋಪಗಳು ವಿವಾದಕ್ಕೆ ಕಾರಣವಾದವು. ಅರುಣಾಚಲಪ್ರದೇಶ ಗಡಿ ವಿವಾದದ ಹಿನ್ನೆಲೆಯಲ್ಲಿ ಭಾರತದ ಮೂವರು ವುಷು ಸ್ಪರ್ಧಿಗಳಿಗೆ ಚೀನಾ ವೀಸಾ ನೀಡಿರಲಿಲ್ಲ. ಆದರೆ, ಈ ಅಡೆತಡೆಗಳನ್ನು ದಾಟಿದ ಭಾರತವು ಪದಕ ಗಳಿಕೆಯಲ್ಲಿ ಮೂರಂಕಿ ಸಾಧನೆ ಮಾಡಿದೆ. ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಸಿದ್ಧವಾಗಲು ಇದು ಸ್ಫೂರ್ತಿಯಾಗಲಿದೆ.

ದಿನದ ಟ್ವೀಟ್

ಮೃಗೀಯ ವರ್ತನೆ

ಇದು ಯುದ್ಧ ಅಲ್ಲ, ಮೃಗೀಯ ವರ್ತನೆ. ನಾಗರಿಕರ ಮೇಲೆ ಎಸಗಿದ ದುಷ್ಕೃತ್ಯದಿಂದಾಗಿ, ಪ್ಯಾಲೆಸ್ಟೀನಿಯನ್ನರು ಹೊಂದಿದ್ದ ಎಲ್ಲ ಅನುಕಂಪವನ್ನೂ ಕಳೆದುಕೊಂಡಿದ್ದಾರೆ.

ಜವಾಹರ್ ಸರ್ಕಾರ್, ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್

ಕಿಡಿನುಡಿ

ಈ ಬಾರಿಯ ವಿಶ್ವಕಪ್ ಕ್ರಿಕೆಟ್ ಟಿಕೆಟ್ ಮಾರಾಟ ಪ್ರಕ್ರಿಯೆಯನ್ನು ತನಿಖೆಗೆ ಒಳಪಡಿಸಿದರೆ ಅದೊಂದು ದೊಡ್ಡ ಹಗರಣ ಎಂಬುದು ಗೊತ್ತಾಗಲಿದೆ! ಟಿಕೆಟ್‌ಗಳು ಎಲ್ಲ ಕಡೆ ಮಾರಾಟ ಆಗಿಹೋಗಿವೆ ಎಂದು ಹೇಳಲಾಗುತ್ತಿದೆ. ಆದರೆ ಕ್ರೀಡಾಂಗಣ ಮಾತ್ರ ಭರ್ತಿಯಾಗದಿರುವುದನ್ನು ಟಿ.ವಿ.ಯಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಯಾರು ಹೊಣೆ?

ಪ್ರಶಾಂತ್ ಕುಮಾರ್, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 9-10-1998

● ಗುಂಟೂರು ಬಳಿ ರೈಲು ಹಳಿ ತಪ್ಪಿ 11 ಸಾವು

ವಿಜಯವಾಡ, ಅ. 8- ನರಸಾಪುರ- ಹೈದರಾಬಾದ್ ಎಕ್ಸ್‌ಪ್ರೆಸ್ ರೈಲಿನ ಎಂಜಿನ್ ಮತ್ತು ಬೋಗಿಗಳು ಗುರುವಾರ ಮುಂಜಾನೆ ದಕ್ಷಿಣ ಮಧ್ಯ ರೈಲ್ವೆಯ ವಿಜಯವಾಡ ವಿಭಾಗದ ಸೆತ್ತೆನಪಲ್ಲಿ ಸಮೀಪ ಹಳಿ ತಪ್ಪಿ ಸಂಭವಿಸಿದ ದುರಂತದಲ್ಲಿ 11 ಮಂದಿ ಮೃತಪಟ್ಟು, 26ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡ ಎಲ್ಲರನ್ನೂ ಗುಂಟೂರು ಜಿಲ್ಲಾ ಕೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ಅವರಲ್ಲಿ 15 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

● ಕಾಡುಗಳ್ಳರ ವಿರುದ್ಧ ಗೂಂಡಾ ಕಾಯ್ದೆ

ಮಡಿಕೇರಿ, ಅ. 8- ಗಡಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಮರ ಕಡಿಯುವ ಮತ್ತು ಇತರ ಅಕ್ರಮ ದಂಧೆಯಲ್ಲಿ ತೊಡಗಿದವರ ವಿರುದ್ಧ ಕರ್ನಾಟಕ ಗೂಂಡಾ ಕಾಯ್ದೆ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಅರಣ್ಯ ಸಚಿವ ಡಿ. ಮಂಜುನಾಥ್ ಹಾಗೂ ಕಾನೂನು ಸಚಿವ ಎಂ.ಸಿ. ನಾಣಯ್ಯ ಇಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 9-10-1973

● ನ.1ರಿಂದ ನಮ್ಮ ರಾಜ್ಯ ಕರ್ನಾಟಕ

ನವದೆಹಲಿ, ಅ. 8- ನಮ್ಮ ರಾಜ್ಯದ ಹೆಸರು ಇನ್ನು 'ಕರ್ನಾಟಕ'. ಕನ್ನಡಿಗರ ಬಹುದಿನದ ಈ ಅಭೀಷ್ಟೆ ಇದೀಗ ಈಡೇರಲಿದೆ. ನವೆಂಬರ್ ಮೊದಲ ದಿನದಿಂದ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಅಧಿಕೃತವಾಗಿ ಬದಲಾಯಿಸಲಾಗುವುದು.

ಕೇಂದ್ರ ಗೃಹ ಖಾತೆ ಇಂದು ಹೊರಡಿಸಿದ ಪ್ರಕಟಣೆಯಿಂದ ಈ ಅಂಶ ತಿಳಿದು ಬಂದಿದೆ.

ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸುವ ಬಗೆಗೆ ರಾಜ್ಯದ ವಿಧಾನಮಂಡಲ ಈಗಾಗಲೇ ಒಪ್ಪಿಗೆ ನೀಡಿದೆ. ಆದರೆ, ಕೇಂದ್ರದ ಅಂಗೀಕಾರ ಮುದ್ರೆ ಬೀಳುವುದು ಸ್ವಲ್ಪ ತಡ ಆಯಿತು. ಈ ವರ್ಷದ ರಾಜ್ಯೋತ್ಸವ ದಿನ ಸಮೀಪಿಸುತ್ತಿದ್ದಂತೆ ಕನ್ನಡಿಗರಲ್ಲಿ ಸ್ವಲ್ಪ ಆತಂಕ ಕಾಣಿಸಿತ್ತು. ಇದೀಗ ಕನ್ನಡಿಗರಿಗೆ ಸಂತಸ ತರುವ ಸುದ್ದಿ ಹೊರಬಿದ್ದಿದೆ.

● ಈಜಿಪ್ಟ್, ಸಿರಿಯಾ ಸೇನೆಗಳ ಪಲಾಯನ

ಟೆಲ್‌ಅವೀವ್, ಅ. 8- ಮುನ್ನಡೆಯುತ್ತಿರುವ ಇಸ್ರೇಲಿ ಪಡೆಗಳು ಭೀಕರ ಹೋರಾಟದಲ್ಲಿ ಸಿರಿಯಾ ಪಡೆಗಳನ್ನು ಇಂದು ಹಿಮ್ಮೆಟ್ಟಿಸಿ ಸಿರಿಯಾ ಪ್ರದೇಶಕ್ಕೆ ಕಾಲಿಟ್ಟವು.

ಅಲ್ಲದೆ ಸೂಯೆಜ್ ಕಾಲುವೆ ಕಡೆಗೆ ಈಜಿಪ್ಟ್ ಪಡೆಗಳನ್ನು ಇಸ್ರೇಲ್ ಸೈನ್ಯ ಓಡಿಸಿತು ಎಂದು ಇಸ್ರೇಲಿನ ಸೇನೆಯ ದಂಡನಾಯಕರು ಪ್ರಕಟಿಸಿದ್ದಾರೆ.

ಪಶ್ಚಿಮ ಏಷ್ಯಾ ಸಮರದ ಮೂರನೆಯ ದಿನವಾದ ಇಂದು ಈಜಿಪ್ಟ್- ಸಿರಿಯಾಗಳ ವಿರುದ್ಧ ಇಸ್ರೇಲ್ ಆಕ್ರಮಣಕಾರಿ ಕ್ರಮ ಕೈಗೊಂಡಿತೆಂದು ಲೆಫ್ಟಿನಂಟ್ ಜನರಲ್ ಡೇವಿಡ್ ಎಲ್ಜಾರ ಅವರು ತಿಳಿಸಿದರು.

ಕೆಲವು ಜಾತಿಗಳಿಗೆ ಐಡೆಂಟಿಟಿ ಕುರಿತ ಅಭದ್ರತೆ ತೀವ್ರಗೊಂಡಿರುವುದು ಸ್ಪಷ್ಟ

ಜಾತಿಗಣತಿ ಮತ್ತು ಅಸ್ಮಿತೆಯ ರಾಜಕಾರಣ

ವಿಶ್ಲೇಷಣೆ

ಪ್ರೊ. ಮುಜಾಫ್ಫರ್ ಅಸ್ಸಾದಿ

ಬಿಹಾರದ ನಿತೀಶ್ ಕುಮಾರ್ ನೇತೃತ್ವದ ಸರ್ಕಾರವು ರಾಜ್ಯದ ಜಾತಿ ಜನಗಣತಿಯನ್ನು ಪ್ರಕಟಿಸಿದ ಕಾರಣದಿಂದ, ದೇಶದ ರಾಜಕಾರಣದ ಸಂರಚನೆ ಮತ್ತು ಚೌಕಟ್ಟುಗಳು ಬದಲಾಗುವ ಸಾಧ್ಯತೆ ಇದೆ. ಜಾತಿಯು ಭಾರತದ ವಾಸ್ತವ. ಅದು ಐಡೆಂಟಿಟಿಯ ಬಹುಮುಖ್ಯ ಸಂಗತಿಯಾಗಿ, ಶಕ್ತಿಯ ರೂಪಕವಾಗಿ, ಸಂಘರ್ಷದ ಕುರುಹಾಗಿ, ಶೋಷಣೆಯ ಕೇಂದ್ರಬಿಂದುವಾಗಿ, ಅಸಮಾನ ಭಾರತದ ಬಹುದೊಡ್ಡ ರೂಪಕವಾಗಿದೆ. ಅದನ್ನು ಬಿಟ್ಟು ಭಾರತವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ.

ಜನಗಣತಿಯೇ ಕೆಲವು ಜಾತಿಗಳನ್ನು ಹುಟ್ಟುಹಾಕಿದ್ದನ್ನು 1871ರಿಂದ ಆರಂಭಗೊಂಡ ಸಾರ್ವತ್ರಿಕ ಜನಗಣತಿಗಳು ನಮಗೆ ತಿಳಿಸುತ್ತವೆ. ಜನಗಣತಿದಾರರು ಅಕ್ಷರಗಳನ್ನು ತಪ್ಪಾಗಿ ನಮೂದಿಸುವ ಮೂಲಕ ಹೊಸ ಜಾತಿಗಳನ್ನು, ಅಸ್ಪಷ್ಟ ಜಾತಿಗಳನ್ನು, ಸಮುದಾಯಗಳನ್ನು ಹುಟ್ಟುಹಾಕಿದ್ದು ಅಷ್ಟೇ ಸತ್ಯ. ಜನಗಣತಿಯು ಅಗಾಧ ಪ್ರಮಾಣದ ಮಾಹಿತಿಗಳನ್ನು ನೀಡುತ್ತಾ ದೇಶದ ಜಾತಿಗಳನ್ನು ವರ್ಗೀಕರಿಸುತ್ತಾ ಹೋಯಿತು. ಅದು ಜಾತಿಗಳೊಳಗೆ ಉಪಜಾತಿಗಳನ್ನು ಸೃಷ್ಟಿಸಿತು, ಕ್ರಿಮಿನಲ್ ಟ್ರೈಬ್‌ಗಳು, ಅಲೆಮಾರಿ, ಅರೆಅಲೆಮಾರಿ, ಏಷ್ಯಾಟಿಕ್ ಮತ್ತು ಏಷ್ಯಾಟಿಕೇತರ ಜಾತಿಗಳೆಂದು ವಿಭಜಿಸಿತು, ವರ್ಣಸಂಕರದಾಚೆ ಇರುವ ಕಸುಬು ಆಧಾರಿತ ಜಾತಿಗಳನ್ನು ಗುರುತಿಸಿತು. ಬಹಳ ಮುಖ್ಯವಾಗಿ, ಜಾತಿಯನ್ನು ಆರ್ಯನ್ನರ ಕೊಡುಗೆ ಎಂದು ಮತ್ತೆ ಮತ್ತೆ ವಾದಿಸುತ್ತಾ, ಅದು ಪ್ರಧಾನ ಸಂಕಥನವಾಗಿ ರೂಪುಗೊಳ್ಳುವಂತೆ ನೋಡಿಕೊಂಡಿತು.

ವಸಾಹತುಶಾಹಿಯು ವಿವಿಧ ಮತಧರ್ಮಗಳಲ್ಲಿ- ಸಿಖ್ಖರು, ಬೌದ್ಧರು, ಕ್ರೈಸ್ತರು, ಜೈನರು ಮತ್ತು ಮುಸಲ್ಮಾನರು- ಜಾತಿಗಳ ಅಸ್ತಿತ್ವವನ್ನು ಗುರುತಿಸಿ ದಾಖಲಿಸಿತ್ತು. ವಿರೋಧಾಭಾಸವೆಂದರೆ, ಈ ಮತಗಳಲ್ಲಿ ಜಾತಿಯ ಚೌಕಟ್ಟುಗಳು ಎಷ್ಟೇ ಗಟ್ಟಿಯಾಗಿದ್ದರೂ ಕೆಲವು ಸಂದರ್ಭಗಳಲ್ಲಿ ಅವು ತಮ್ಮ ಸಂರಚನೆ ಮತ್ತು ಚಲನಶೀಲತೆಯಲ್ಲಿ ಹಿಂದೂ ಜಾತಿಗಳಿಗಿಂತ ವಿಭಿನ್ನವಾಗಿದ್ದವು. ಅವುಗಳಲ್ಲಿ ಕಟ್ಟುನಿಟ್ಟಿನ ಶ್ರೇಣೀಕೃತ ವ್ಯವಸ್ಥೆ ಇರಲಿಲ್ಲ. ಕೆಳವರ್ಗಗಳು ಮತಾಂತರಗೊಂಡ ಕೂಡಲೇ ಮೇಲ್ವರ್ಗಗಳ ಸ್ಥಾನಮಾನವನ್ನು ಪಡೆಯಬಹುದಿತ್ತು. ಒಟ್ಟಾರೆಯಾಗಿ, ಹೊಸ ಮತಗಳು ತಕ್ಕಮಟ್ಟಿಗೆ ಚಲನಶೀಲತೆಗೆ ಅವಕಾಶವನ್ನು ನೀಡುತ್ತಿದ್ದವು. ವಾಸ್ತವವಾಗಿ, ಮತಾಂತರಗೊಂಡ ಸಮುದಾಯಗಳು ಅಸ್ಪಷ್ಟ ಜಾತಿಗಳನ್ನು, ಸಮನ್ವಯ ಸಂಸ್ಕೃತಿಗಳನ್ನು, ಪರ್ಯಾಯ ಪಂಥಗಳನ್ನು ಹುಟ್ಟುಹಾಕಿದ್ದವು. ವಿವಿಧ ಹಿಂದೂ ಜಾತಿಗಳೊಂದಿಗಿನ ದೀರ್ಘಕಾಲದ ಒಡನಾಟ, ಸಾಂಸ್ಕೃತಿಕ ಅನುಸಂಧಾನ, ಮುಖಾಮುಖಿಯು ಬುಡಕಟ್ಟುಗಳನ್ನು ಹಿಂದೂ ಜಾತಿಯನ್ನಾಗಿಸಿದವು. ಇದನ್ನು ಕ್ಷತ್ರಿಯೀಕರಣ, ರಜಪೂತೀಕರಣ ಎಂದೆಲ್ಲಾ ಕರೆಯುವುದು ವಾಡಿಕೆ. ಇದು 'ಸಂಸ್ಕೃತಾನುಕರಣ' ಎಂಬ ಎಂ.ಎನ್.ಶ್ರೀನಿವಾಸ್ ಅವರ ಶಬ್ದಾವಳಿಗೆ ಪರ್ಯಾಯವಾಗಿ ವಸಾಹತುಶಾಹಿ ಹುಟ್ಟುಹಾಕಿದ ಪರಿಕಲ್ಪನೆ.

ವಾಸ್ತವವಾಗಿ, ಜಾತಿಯ ಜನಗಣತಿ ವಿವಿಧ ಜಾತಿಗಳಿಗೆ ಹೊಸ ಅಸ್ಮಿತೆಯನ್ನು, ಸಂಘಟನಾ ಶಕ್ತಿಯನ್ನು, ಹೊಸ ಕಲ್ಪಿತ ಇತಿಹಾಸವನ್ನು ಕಟ್ಟುವಲ್ಲಿ, ಸಾಂಸ್ಕೃತಿಕ ಚಹರೆಗಳನ್ನು ದಾಖಲಿಸುವಲ್ಲಿ ಸಹಕರಿಸಿದ್ದೂ ಇದೆ. ಅದೇ ಸುಮಾರಿಗೆ ಜನಗಣತಿಯು ಬೈನರಿಗಳನ್ನು (ದ್ವಂದ್ವಾತ್ಮಕ ಅವಳಿ) ಕೂಡ ನಿರ್ಮಿಸಿತ್ತು: ಬಲಾಢ್ಯ-ಬಲಹೀನ, ಬಹುಸಂಖ್ಯಾತ-ಅಲ್ಪಸಂಖ್ಯಾತ, ಹಿಂದುಳಿದ-ಮುಂದುವರಿದ, ಮೇಲರಿಮೆಯ-ಕೀಳರಿಮೆಯ, ಯಜಮಾನಿಕೆಯ-ಅಂಚಿನ... ಇಂತಹ ಬೈನರಿಗಳು ವಸಾಹತುಶಾಹಿ ಕಾಲದಲ್ಲಿ ಹೊಸ ಹೊಸ ಸಂಕಥನಗಳಿಗೆ ದಾರಿ ಮಾಡಿಕೊಟ್ಟಿದ್ದವು. ಅವುಗಳಲ್ಲಿ ಬಹುಮುಖ್ಯ ಎನಿಸುವುದು ಹಿಂದುಳಿದ ವರ್ಗಗಳ ಕುರಿತಾದದ್ದು. ಅದೆಂದರೆ, ಹಿಂದುಳಿದ ವರ್ಗಗಳನ್ನು ಹೇಗೆ ಗುರುತಿಸುವುದು, ರಾಜಕೀಯ ಅಧಿಕಾರದಲ್ಲಿ, ಶೈಕ್ಷಣಿಕ ಪಾಲುದಾರಿಕೆಯಲ್ಲಿ ಅವುಗಳಿಗೆ ಎಷ್ಟು ಪ್ರಮಾಣದ ಅವಕಾಶ ನೀಡಬೇಕು ಎಂಬಂತಹ ವಿಷಯಗಳೇ ಆಗಿವೆ.

ವಸಾಹತುಶಾಹಿಯು ರಾಜಕಾರಣದ ಅಸ್ಮಿತೆಗೆ ಒಂದು ಮಹತ್ತರವಾದ ಕೊಡುಗೆಯನ್ನು ನೀಡಿದೆ. ಅದು, ಸಂಖ್ಯಾಧಾರಿತವಾಗಿ ಜಾತಿಗಳನ್ನು ದಾಖಲಿಸುವಾಗ, ಕೆಲ ಜಾತಿಗಳು ಅತ್ಯಂತ ಕನಿಷ್ಠ ಸಂಖ್ಯೆಯಲ್ಲಿದ್ದರೂ ಅವುಗಳನ್ನು ತನ್ನ ಪಟ್ಟಿಯಲ್ಲಿ ದಾಖಲಿಸಿತ್ತು. ದುರಂತವೆಂದರೆ, ಈ ರೀತಿಯ ದಾಖಲಿಸುವಿಕೆ ಮುಂದೆ ನಿಂತುಹೋಯಿತು. ಇದರಿಂದ, ಚಿಕ್ಕಪುಟ್ಟ ಜಾತಿಗಳು ಅಸ್ತಿತ್ವದಲ್ಲಿದ್ದರೂ ಐತಿಹಾಸಿಕವಾಗಿ ಸರ್ಕಾರಿ ಪಟ್ಟಿಯಿಂದ ಕಣ್ಮರೆಯಾದವು. ಹತ್ತು ಹಲವು ಆಯೋಗಗಳ ಪಟ್ಟಿಗಳೊಳಗೆ ಅವು ಸೇರ್ಪಡೆಯಾಗಲಿಲ್ಲ. ಇಂದಿಗೂ ಅದೇ ಸ್ಥಿತಿ ಮುಂದುವರಿದಿದೆ. ಈಗಲೂ ಹಲವು ಜಾತಿಗಳು ತಮ್ಮ ಅಸ್ಮಿತೆಯನ್ನು ದಾಖಲಿಸಲು ಪರಿತಪಿಸುತ್ತಿವೆ. ಅದೇನೇಇದ್ದರೂ 1931ರಲ್ಲಿ ಜಾತಿಯ ಜನಗಣತಿ ನಿಂತುಹೋಯಿತು. ಅದರರ್ಥ, ಜಾತಿ ವಿಷಯ ಮುಗಿದ ಅಧ್ಯಾಯವಾಯಿತು ಎಂದೇ? ವಾಸ್ತವವೆಂದರೆ, ಜಾತಿಯು ಭಾರತದ ಸಾಮಾಜಿಕ ಸಂರಚನೆಯ ಜೀವಂತಿಕೆಯಾಗಿ, ಬೈನರಿಗಳು, ಅಸ್ಮಿತೆಯ ಕುರುಹಾಗಿ ಉಳಿದುಬಿಟ್ಟಿತ್ತು. ಹೀಗಾಗಿಯೇ ವಿವಿಧ ರಾಜ್ಯಗಳಲ್ಲಿ ಮತ್ತೆ ಮತ್ತೆ ಜಾತಿ ಆಧಾರಿತ ಜನಗಣತಿಗೆ ಬೇಡಿಕೆ ಬಂದಿರುವುದು.

ಕರ್ನಾಟಕದಲ್ಲಿ ಎಚ್.ಕಾಂತರಾಜ ನೇತೃತ್ವದ ಆಯೋಗವು ಎಲ್ಲ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ದಾಖಲಿಸಿ, ವರದಿ ಸಿದ್ಧಪಡಿಸಿದೆ. ಈ ನಡುವೆ ಕೆಲವು ಜಾತಿಗಳಿಗೆ ಅದರಲ್ಲೂ ಬಲಾಢ್ಯ ಜಾತಿಗಳಿಗೆ ಐಡೆಂಟಿಟಿ ಕುರಿತ ಅಭದ್ರತೆ ತೀವ್ರಗೊಂಡಿರುವುದು ಸ್ಪಷ್ಟ. ಜಾತಿಗಳ ಪ್ರಮಾಣ ಮತ್ತು ಸಂಖ್ಯೆಯನ್ನು ಸಾರ್ವಜನಿಕಗೊಳಿಸಿದರೆ, ಬಲಾಢ್ಯ ಜಾತಿಗಳು ತಮ್ಮ ಸಾಮಾಜಿಕ, ರಾಜಕೀಯದ ಯಜಮಾನಿಕೆಯನ್ನು ಕಳೆದುಕೊಳ್ಳಬಹುದು ಎಂಬ ಭಯ ಇಲ್ಲದೆ. ಇದೇ ಸ್ಥಿತಿ ಅಖಿಲ ಭಾರತ ಮಟ್ಟದಲ್ಲೂ ಪ್ರತಿಧ್ವನಿಸಿದರೆ ಅಚ್ಚರಿಪಡಬೇಕಾಗಿಲ್ಲ. ವಾಸ್ತವದಲ್ಲಿ, ಮತ್ತೊಮ್ಮೆ ಜಾತಿ ಜನಗಣತಿಯನ್ನು ಆರಂಭಿಸಿದರೆ ಆಗುವ ರಾಜಕೀಯ- ಸಾಮಾಜಿಕ ಪಲ್ಲಟ ಮತ್ತು ಸಂರಚನೆಯ ಬದಲಾವಣೆಯನ್ನು ಊಹಿಸಲು ಅಸಾಧ್ಯ. ಬೈನರಿಗಳು, ಕಥನಗಳು, ಅಧಿಕಾರ ಸ್ಥಾನಮಾನ ಬದಲಾಗಬಹುದು. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ನಡವಳಿಕೆ ಹೇಗಿರಬಹುದು? ಆ ವರ್ಗಗಳ ಜನರು ಬಹುಸಂಖ್ಯಾತ ವರ್ಗವಾಗಿ (ಮೆಜಾರಿಟೇರಿಯನಿಸಂ) ಬಲಾಢ್ಯ ಜಾತಿಗಳ ಇನ್ನೊಂದು ರೂಪಕ ಆಗುತ್ತಾರೆಯೇ? ಹಿಂದುಳಿದ- ವಂಚಿತ ಆದರೆ ಬಹುಸಂಖ್ಯಾತರೆಂದು ಗುರುತಿಸಲ್ಪಡುತ್ತಾರೆಯೇ? ಕಣ್ಮರೆಯಾಗಿ ಹೋಗಿರುವ ನೂರಾರು ಜಾತಿಗಳಿಗೆ, ಉಪಜಾತಿಗಳಿಗೆ ರಾಜಕೀಯ ಅಸ್ಮಿತೆ ನೀಡಬಲ್ಲರೇ ಎಂಬಂತಹ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ.

ಹಿಂದುಳಿದ ವರ್ಗವೆಂಬ ಪರಿಕಲ್ಪನೆಯ ಮೇಲೆ ಈ ಹಿಂದೆ ಬಹಳಷ್ಟು ಚರ್ಚೆಗಳು ನಡೆದಿವೆ. ಚಿಂತಕ ಜಾನ್ ರಾಲ್ಸ್, 'ಎಲ್ಲಾ ಪ್ರಜೆಗಳಿಗೆ ನ್ಯಾಯ ಸಮ್ಮತವಾದ, ಅದರಲ್ಲೂ ಶಿಕ್ಷಣ, ಸರ್ಕಾರಿ ಉದ್ಯೋಗ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಕಲ್ಪಿಸುವುದೇ ನ್ಯಾಯ' ಎಂದು ಹೇಳುತ್ತಾರೆ. ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರ ಪ್ರಕಾರ, ಸಾಮಾಜಿಕ ನ್ಯಾಯವು ಸಮುದಾಯಗಳ ಪರಿಕಲ್ಪನೆಯಲ್ಲಿ ಹುದುಗಿದೆ. ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಹಿಂದುಳಿದ ವರ್ಗಗಳನ್ನು ವಿಶ್ಲೇಷಿಸಿದರೆ, ಈ ವರ್ಗಗಳು ಸದಾ ವಂಚಿತ ಸಮುದಾಯಗಳೆಂದು ಥಟ್ಟೆಂದು ನಿರ್ಧರಿಸಬಹುದು. ವಾಸ್ತವವಾಗಿ ಗೊಂದಲವಿರುವುದು ಸರ್ಕಾರದ ಅಥವಾ ವಿವಿಧ ಆಯೋಗಗಳು ಬಳಸಿದ ಮಾನದಂಡಗಳಲ್ಲಿ. ಅವು ಕಾಲಕಾಲಕ್ಕೆ, ಆಯಾ ಆಯೋಗಕ್ಕೆ ತಕ್ಕಂತೆ ಬದಲಾಗುತ್ತಾ ಹೋದವು. ಇದಕ್ಕೆ ಕರ್ನಾಟಕವೂ ಅಪವಾದವಾಗಿಲ್ಲ. 1919ರ ಲೆಸ್ಲಿ ಮಿಲ್ಲರ್ ಸಮಿತಿಯ ಶಿಫಾರಸಿನಿಂದ ಕಾಂತರಾಜ ಆಯೋಗದ ತನಕ, ಕಾಕಾ ಕಾಲೇಕರ್ ಅವರಿಂದ ಮಂಡಲ್ ಆಯೋಗದತನಕದ ವರದಿಗಳನ್ನು ಅವಲೋಕಿಸಿದಾಗ, ಈ ಮಾನದಂಡಗಳು ಬದಲಾಗುತ್ತಾ ಹೋದದ್ದು ಸ್ಪಷ್ಟವಾಗುತ್ತದೆ.

ಭಾರತದ ಎಲ್ಲಾ ರಾಜ್ಯಗಳಲ್ಲಿ ಹರಿದು ಹಂಚಿಹೋಗಿರುವ ಹಿಂದುಳಿದ ವರ್ಗಗಳ ರಾಜಕಾರಣ ಇದೇ ಕಾರಣಕ್ಕೆ ವಿವಿಧ ರೂಪಗಳನ್ನು ಪಡೆಯುತ್ತದೆ. ಬದಲಾದ ಸನ್ನಿವೇಶದಲ್ಲಿ, ಕೆಲವು ಹಿಂದುಳಿದ ವರ್ಗಗಳು ಹೊಸ ಅಸ್ಮಿತೆಯ ಬೇಡಿಕೆಯನ್ನು ಮುಂದಿಟ್ಟಿರುವುದು ಇದೇ ಕಾರಣಕ್ಕಾಗಿ. ಕೆಲವು ಜಾತಿಗಳು ಹಿಂದುಳಿಯುವಿಕೆಯ ಪಟ್ಟಿಯಿಂದ 'ಅತಿ ಹಿಂದುಳಿಯುವಿಕೆ'ಗೆ ತವಕಿಸಿದ್ದು, ಮೀಸಲಾತಿಯಲ್ಲಿ ಹೆಚ್ಚುವರಿ ಪ್ರಮಾಣದ ಬೇಡಿಕೆಯನ್ನು ಇಟ್ಟಿರುವುದು ಮತ್ತು ದೇಶದ ವಿವಿಧೆಡೆ ಜಾತಿಯ ಜನಗಣತಿಗೆ ಒತ್ತಾಯಿಸಿದ್ದನ್ನೆಲ್ಲ ಈ ಆಧಾರದಲ್ಲಿ ನೋಡಬೇಕು. ಇದು, ಮಂಡಲೋತ್ತರ ಕಾಲದ ಹೊಸ ಐಡೆಂಟಿಟಿ ಅಥವಾ ಅಸ್ಮಿತೆ ರಾಜಕಾರಣಕ್ಕೆ ಮುನ್ಸೂಚನೆಯನ್ನು ನೀಡುತ್ತದೆ.

ಚುರುಮುರಿ

ಶತಕಗಳ ಕಾಲವಿದು!

• ಸುಮಂಗಲಾ

ಬೆಕ್ಕಣ್ಣ 'ಹೇ... ನೋಡಿಲ್ಲಿ... ಶತಕ ದಾಟಿತು' ಎಂದು ಕುಣಿಯುತ್ತ ಖುಷಿಯಿಂದ ಕೂಗಿತು.

'ನಿನಗೆ ಯಾವಾಗಿಂದ ಕ್ರಿಕೆಟ್ ಹುಚ್ಚು ಹಿಡಿಯಿತಲೇ?'

'ಯಾಕಮ್ಮಾ... ಕ್ರಿಕೆಟ್ಟನಾಗೆ ಮಾತ್ರ ನಮ್ಮವರು ಶತಕ ಬಾರಿಸೂದು ಅಂತ ಮಾಡಿಯೇನ್? ನೀವು ಭಾರತೀಯ ಶ್ರೀಸಾಮಾನ್ಯರು ಮದ್ಲು ಕ್ರಿಕೆಟ್ ಹುಚ್ಚಿನಿಂದ ಹೊರಗೆ ಬರ್ರಿ' ಎಂದು ನನ್ನ ಮೂತಿಗೆ ತಿವಿದ ಬೆಕ್ಕಣ್ಣ, 'ಏಷ್ಯನ್ ಗೇಮ್ಸ್ ನಡೆದಾವು, ಅದರ ಖಬರ್ರೈತೇನ್ ನಿನಗ? ಈ ಸಲ ನಮ್ಮವರು ತಗಂಡ ಒಟ್ಟು ಪದಕಗಳ ಸಂಖ್ಯೆ ಶತಕ ದಾಟಿತು' ಎಂದಿತು.

'ಹೌದು ಮತ್ತ... ನಮ್ ಮಧ್ಯಮವರ್ಗದ ತಂದಿತಾಯಿಗಳು ತಮ್ಮ ಮಕ್ಕಳು ಆಟ ಆಡತಾರ ಅಂದ್ರ ಜಿಂದಗಿ ವೇಸ್ಟ್ ಅಂತ ಕೊರಗತಾರ. ಅಂತಾದ್ರಾಗೆ ಇದ್ ಎಷ್ಟ್ ಸ್ಫೂರ್ತಿಯ ವಿಚಾರ ಹೌದಿಲ್ಲೋ' ಎಂದೆ ನಾನೂ ಖುಷಿಯಿಂದ.

'ಅದೇ ಮತ್ತ... ನಮ್ಮ ಮೋದಿಮಾಮಾರು ಆಟಗಾರರಿಗೆ ಎಷ್ಟ್ ಸ್ಫೂರ್ತಿ ತುಂಬ್ಯಾರ! ಅವರು ಪ್ರಧಾನಿಯಾದಾಗಿಂದ ವರ್ಷದಿಂದ ವರ್ಷಕ್ಕೆ ಪದಕಗಳ ಸಂಖ್ಯೆ ಏರಿಕೋತ ಹೋಗಿ, ಈಗ ಶತಕ ದಾಟಿತು' ಎಂದು ಮೋದಿಮಾಮನೇ ಪದಕ ಗೆದ್ದಂತೆ ಸಂಭ್ರಮದಲ್ಲಿ ವದರಿತು.

'ಶತಕ ದಾಟಿದ್ದು ಅದೊಂದೇ ಅಲ್ಲಲೇ... ತಮಗ ಬ್ಯಾಡಾದ ಪತ್ರಕರ್ತರ ಮ್ಯಾಗೆ ಇ.ಡಿ. ದಾಳಿ ನಡೆಸತಾರಲ್ಲ, ಅದೂ ಈಗ ಶತಕ ದಾಟಿರಬಹುದು' ಎಂದೆ.

'ನೀ ಎಲ್ಲಿಂದ ಎಲ್ಲಿಗಾರೆ ಸಂಬಂಧ ಕಲ್ಪಿಸಬ್ಯಾಡ. ಹೊಗೆ ಇಲ್ಲದೆ ಬೆಂಕಿ ಏಳಂಗಿಲ್ಲ. ಅನುಮಾನ ಇದ್ದವರ ಮ್ಯಾಗೆ ಇ.ಡಿ. ದಾಳಿ ಮಾಡತಾರ, ಅದರಾಗೆ ತಪ್ಪೇನ್ ಐತಿ?' ಬೆಕ್ಕಣ್ಣ ಗುರುಗುಟ್ಟಿತು.

'ಈ ಅನುಮಾನ ಯಾವಾಗಲೂ ಪ್ರಶ್ನೆ ಮಾಡೋವರ ಮ್ಯಾಗೆ, ವಿರೋಧ ಪಕ್ಷದವರ ಮ್ಯಾಗೆ ಎದಕ್ಕ ಏಳತೈತಿ?'

'ಹೌದು ಮತ್ತ... ಆಡಳಿತ ಪಕ್ಷದವರು, ಗುಣಗಾನ ಮಾಡೋ ಮಾಧ್ಯಮಗಳು ಯಾವತ್ತಿದ್ದರೂ ಕಮಲಕ್ಕನ ಮನೆಯವರ ಕಣ್ಮಣಿಗಳೇ ಅಲ್ಲೇನು' ಬೆಕ್ಕಣ್ಣ ಹೆಹ್ಹೆಗುಟ್ಟಿತು.

ಸಂಗತ

ಶಿಕ್ಷಣ ವ್ಯವಸ್ಥೆ: ಆತ್ಮಾವಲೋಕನದ ಸಮಯ

ಮಕ್ಕಳ ಪಠ್ಯಕ್ರಮದಲ್ಲಿ ಭಾಷೆಯನ್ನು ಕಡೆಗಣಿಸಿ ಇನ್ನೇನನ್ನೇ ಕೊಟ್ಟರೂ ಹರಿದ ಬಾಳೆಲೆಯಲ್ಲಿ ಮೃಷ್ಟಾನ್ನ ಬಡಿಸಿದಂತಾದೀತು

• ಆರತಿ ಪಟ್ರಮೆ

ಸರ್ಕಾರಗಳನ್ನು ನಡೆಸುವವರು ಬದಲಾಗುತ್ತಾ ಬಂದಂತೆ, ಪ್ರಾಥಮಿಕ, ಪ್ರೌಢಶಾಲಾ ಪಠ್ಯವನ್ನು ತಮಗೆ ಬೇಕಾದಂತೆ ಬದಲಾಯಿಸಿದರು. ಆ ಕುರಿತು ನೂರಾರು ಚರ್ಚೆಗಳು ನಡೆದವು. ಮಕ್ಕಳಿಗೆ ಆ ವಯಸ್ಸಿನಲ್ಲಿ ಕೊಡಬೇಕಾದುದನ್ನು ಕೊಡಬೇಕೇ ವಿನಾ ಯಾವುದೇ 'ಇಸಂ'ಗಳಿಗೆ ಅವರನ್ನು ಕಟ್ಟಿಹಾಕುವ ಪ್ರಯತ್ನ ಮಾಡಬೇಕಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಅದರ ಜತೆಗೆ ಸತ್ಯವನ್ನು ಬೋಧಿಸಬೇಕೇ ವಿನಾ ಸುಳ್ಳನ್ನಲ್ಲ ಎಂಬ ನಿಲುವಿಗೂ ಬದ್ಧರಾಗೋಣ.

'ಶಿಕ್ಷಣ ವ್ಯವಸ್ಥೆಯ ಗುಣಮಟ್ಟ ಸುಧಾರಣೆ ಹೇಗೆ?' ಎಂಬ ಪ್ರಶ್ನೆ ಬಂದಾಗ, 'ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?' ಎಂದು ಜಾರಿಕೊಳ್ಳುತ್ತಿದ್ದೇವೆ. ಮುಂದಿನ ತಲೆಮಾರಿಗೆ ನಾವು ಉಳಿಸಿ ಹೋಗಬೇಕಾಗಿರುವುದೇನು ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭ ಇದು.

ಹತ್ತನೇ ತರಗತಿಯವರೆಗೆ ಯಾರನ್ನೂ ಅನುತ್ತೀರ್ಣಗೊಳಿಸುವಂತಿಲ್ಲ ಎಂಬ ತಪ್ಪು ನಿರ್ಧಾರದ ಪರಿಣಾಮವನ್ನು ಈಗಾಗಲೆ ನಾವೆಲ್ಲರೂ ಅನುಭವಿಸುತ್ತಿದ್ದೇವೆ. ಬೋಧನೆಯಲ್ಲಿ ತೊಡಗಿರುವವರಿಗೂ ಶಿಸ್ತುಬದ್ಧ ಭಾಷಾ ಬಳಕೆ ಬಾರದೇ ಇರುವುದನ್ನು ಕಾಣುತ್ತಿದ್ದೇವೆ. ಉಚ್ಚಾರಣೆಯಲ್ಲಿ ದೋಷವಿರುವುದನ್ನು ದೂರದಿಂದ ಅಸಹಾಯಕರಾಗಿ ನೋಡುವ ಕರ್ಮ ನಮ್ಮದು. ಹಿಂದೊಮ್ಮೆ ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ 'ಮಾಧ್ಯಮ ವಿಷಯ ಓದುವ ವಿದ್ಯಾರ್ಥಿಗಳಲ್ಲಿ ಇಷ್ಟೊಂದು ಅಕ್ಷರ ತಪ್ಪುಗಳು, ಉಚ್ಚಾರಣೆಯಲ್ಲಿ ದೋಷ ಇದ್ದರೆ ಹೇಗೆ? ತಿದ್ದುವುದು ನಮ್ಮ ಕರ್ತವ್ಯ' ಎಂದದ್ದಕ್ಕೆ 'ಅದು ಪ್ರಾದೇಶಿಕ ಭಾಷಾ ಸೌಂದರ್ಯ ಮೇಡಂ. ಅದನ್ನು ಗುರುತಿಸಲಾಗದೇ ಇರುವುದು ನಿಮ್ಮ ವರ್ಗದ ಸಮಸ್ಯೆ' ಎಂದಿದ್ದರು ಅಲ್ಲಿನ ಮುಖ್ಯಸ್ಥರು. ಆದರೆ ಬರವಣಿಗೆ ಎಂಬುದು ಸಾರ್ವಕಾಲಿಕವಾಗಿ ಅದೇ ಅಲ್ಲವೇ ಮತ್ತು ಮಾಧ್ಯಮದಲ್ಲಿ ಬಳಕೆಯಾಗುವ ಭಾಷಾಕ್ರಮ ಒಂದೇ ಅಲ್ಲವೆ?

ಪತ್ರಿಕೆಗಳ ಸ್ಟೈಲ್‌ಶೀಟ್ ಪ್ರಕಾರ, ಕೆಲವು ಪದ ಪ್ರಯೋಗದಲ್ಲಿ ವ್ಯತ್ಯಾಸವಿರುತ್ತದೆ ವಿನಾ ಅಕ್ಷರ ತಪ್ಪುಗಳಲ್ಲವಲ್ಲ? ನನ್ನ ಈ ಪ್ರಶ್ನೆಗೆ ಅವರಲ್ಲಿ ಉತ್ತರವಿರಲಿಲ್ಲ. ಕಡೆಗೆ ಬಂದು ನಿಲ್ಲುವುದು ಹಳ್ಳಿಯ ಮಕ್ಕಳು, ಹಳ್ಳಿಯ ಶಾಲೆ, ಬಡ ವಿದ್ಯಾರ್ಥಿಗಳು ಎಂಬಲ್ಲಿಗೆ. ಬಹುಶಃ ವ್ಯವಸ್ಥೆ ಸೋಲಲು ಈ ಅರ್ಥಹೀನ ತರ್ಕವೇ ಕಾರಣ.

ನಮ್ಮ ಹಾಗೂ ನಮ್ಮ ಹೆತ್ತವರ ಬಾಲ್ಯದ ದಿನಗಳನ್ನು ಪರಿಗಣಿಸಿದರೆ, ಅವೂ ಬಡತನದ ಕುಲುಮೆಯಲ್ಲಿ ಮುಳುಗೇಳುತ್ತಿದ್ದ ದಿನಗಳೇ. ವಿದ್ಯುತ್ ಸೌಕರ್ಯವಿಲ್ಲದ, ರಸ್ತೆಯಾಗಲೀ ವಾಹನಸೌಕರ್ಯಗಳಾಗಲೀ ಇಲ್ಲದ ಊರು. ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ನಮ್ಮ ಹಿರಿಯರು ಶಿಕ್ಷಣದ ಅವಕಾಶಕ್ಕಾಗಿ ಅದೆಷ್ಟು ಪಾಡುಪಟ್ಟರೋ! ಹಾಗೆಂದು ಅವರ ಭಾಷಾ ಪ್ರೌಢಿಮೆಯನ್ನು ನೋಡಿದರೆ ಇಂದು ಭಾಷಾ ಉಪನ್ಯಾಸಕರಾಗಿರುವ ನಾವೂ ನಾಚಬೇಕು. ಅಂಥ ಪ್ರಬುದ್ಧ ಭಾಷಾ ಬಳಕೆ.

ದಿನಕ್ಕೆ 14 ಕಿ.ಮೀ. ನಡೆದೇ ಶಾಲೆಗೆ ಹೋಗಬೇಕಾಗಿದ್ದನ್ನು ಸಂತೋಷದಿಂದಲೇ ನಡೆದು ಸಾಗಿಬಂದವರು ನಾವು. ನಮ್ಮ ಅಕ್ಕಂದಿರ ತರಗತಿಯಲ್ಲಿದ್ದ ಕೆಲವರು ಅನುತ್ತೀರ್ಣರಾಗಿ ನಮ್ಮ ತರಗತಿಯಲ್ಲಿ ಇರುತ್ತಿದ್ದುದೂ ಇತ್ತು. ಕಲಿಯಲು ಪ್ರಯತ್ನಿಸಿಯೂ ಕಲಿಯಲಾಗದೆ ಹೋದರೂ ತಮ್ಮ ಬುದ್ಧಿವಂತಿಕೆಯ ಕ್ಷೇತ್ರವನ್ನು ತಾವೇ ಗುರುತಿಸಿಕೊಂಡು ಬದುಕು ಕಟ್ಟಿಕೊಂಡು ಗೆಲ್ಲುತ್ತಿದ್ದರು.

ಕೆಲವೇ ವರ್ಷಗಳಲ್ಲಿ ವ್ಯವಸ್ಥೆ ಅದೆಷ್ಟು ಬದಲಾಗಿಹೋಯಿತು! ಶಾಲೆಯ ಮೆಟ್ಟಿಲು ಹತ್ತಿದವರೆಲ್ಲರೂ ಮುಂದಿನ ತರಗತಿಗೆ ಪಾಸಾಗಲೇಬೇಕೆಂಬ ಕಾರಣಕ್ಕೆ ಪಠ್ಯಕ್ರಮವನ್ನೂ ಪರೀಕ್ಷಾಕ್ರಮವನ್ನೂ ಬದಲಾಯಿಸಿದ್ದಾಯಿತು, ಸಡಿಲಿಸಿದ್ದಾಯಿತು. ಪ್ರಸ್ತುತ ಪಿಯುಸಿ ಹಂತಕ್ಕೆ ಬಂದ ಕೆಲವು ಮಕ್ಕಳು ತಮ್ಮ ಹೆಸರನ್ನು ಬರೆಯುವುದಕ್ಕೇ ಒದ್ದಾಡುವ ಪರಿಸ್ಥಿತಿ ಇರುವುದನ್ನೂ ಕಣ್ಣಾರೆ ಕಂಡದ್ದಾಯಿತು. ಇಂಗ್ಲಿಷ್ ಭಾಷೆಯಲ್ಲಿ ಅಗತ್ಯವಿರುವ ಯಾವ ನಿಯಮಗಳನ್ನೂ ಪಾಲಿಸದೆ ಬರೆಯುವ ಮಕ್ಕಳೂ ತೊಂಬತ್ತು ಶೇಕಡ ಅಂಕವೆಂದು ಬೀಗುವುದನ್ನು ಕಾಣುವಾಗ, ಈ ಮಕ್ಕಳಿಗೆ ನಿಜಕ್ಕೂ ಅವರು ಎಲ್ಲಿದ್ದಾರೆ ಎಂದು ಅರ್ಥ ಮಾಡಿಸುವುದು ಹೇಗೆ ಎಂದು ಗೊತ್ತಾಗದೆ ಪರಿತಪಿಸುವ ಹಣೆಬರಹವಷ್ಟೇ ನಮ್ಮದು.

ಇತ್ತ ಭಾಷಾ ಪಠ್ಯಗಳನ್ನು ನೋಡಿದರೆ, ಹಿಂದಿನ ಹತ್ತು ವರ್ಷಗಳಿಗೂ ಮೇಲ್ಪಟ್ಟು ಅದೇ ಪಠ್ಯಕ್ರಮ ಇದೆ. ಇಂಗ್ಲಿಷ್ ಭಾಷೆಯಲ್ಲಂತೂ ಮೂಲ ಇಂಗ್ಲಿಷ್ ಕಥೆ, ಕವನಗಳಿಗಿಂತ ಕನ್ನಡ, ತೆಲುಗುವಿನಂಥ ಭಾಷೆಗಳಿಂದ ಅನುವಾದಿತ ಆಗಿರುವಂತಹವೇ ಇವೆ. ನಮ್ಮ ನೆಲದ ಕಥೆಗಳನ್ನು ನಮ್ಮ ಭಾಷೆಯಲ್ಲಿಯೇ ಓದಿಕೊಳ್ಳುವ ಸುಖವು ಅನುವಾದಿತ ಪಠ್ಯಗಳನ್ನು ಓದುವಲ್ಲಿ ಸಿಗದು. ಅದರ ಬದಲು ಮೂಲ ಇಂಗ್ಲಿಷ್ ಪಠ್ಯಗಳನ್ನೇ ಓದುವ ಅಥವಾ ಓದಿಸುವ ಅವಕಾಶವಿದ್ದರೆ ಕಲಿಕೆಯ ವಿಸ್ತಾರ ಹೆಚ್ಚುತ್ತದೆ.

ಮುಂದಿನ ವರ್ಷ ಪ್ರಥಮ ಪಿಯುಸಿಯ ಭಾಷಾ ಪಠ್ಯಕ್ರಮ ಬದಲಾಗುತ್ತದೆ ಎಂಬ ಸುದ್ದಿಯಂತೂ ಬಂದಿದೆ. ಕಲಿಕೆಗೆ, ಬೋಧನೆಗೆ ಬಹಳಷ್ಟು ಮೆರುಗು ತುಂಬಬಲ್ಲ ಪಠ್ಯಗಳನ್ನು ಆಯ್ಕೆ ಸಮಿತಿ ಒದಗಿಸಲಿ ಎಂಬ ನಿರೀಕ್ಷೆ. ಜೊತೆಗೆ ವ್ಯಾಕರಣದ ಅಂಶಗಳೂ ಬರೀ ಓದಿದ ಪಾಠಗಳ ಸಾಲುಗಳ ಬದಲಾಗಿ ಹೊಸದನ್ನು ನೀಡುವಂತಿರಲಿ. ಪರೀಕ್ಷೆಯೆಂಬುದು ನೆನಪಿನ ಶಕ್ತಿಯನ್ನು ಒರೆಗೆ ಹಚ್ಚುವ ಅಥವಾ ಬಾಯಿಪಾಠದ ಕೌಶಲವನ್ನು ಪರೀಕ್ಷಿಸುವ ಪ್ರಕ್ರಿಯೆಯಾಗದೆ ಭಾಷಾ ಕೌಶಲವನ್ನು ಪರೀಕ್ಷಿಸುವಂತಾಗಲಿ.

ಭಾಷೆಯನ್ನು ಕಡೆಗಣಿಸಿ ಇನ್ನೇನನ್ನೇ ಕೊಟ್ಟರೂ ಹರಿದ ಬಾಳೆಲೆಯಲ್ಲಿ ಮೃಷ್ಟಾನ್ನ ಬಡಿಸಿದಂತಾದೀತು. ಸತ್ವಯುತವಾದದ್ದನ್ನು ಉಳಿಸಿಕೊಳ್ಳಲಾಗದೇ ಗ್ರಹಿಸಿಕೊಳ್ಳಲಾಗದೇ ಹೋದೇವು. ಈ ಪ್ರಜ್ಞೆ ಎಲ್ಲರಲ್ಲೂ ಜಾಗೃತಗೊಳ್ಳಬೇಕಿದೆ.

ವಾಚಕರ ವಾಣಿ

ಪಟಾಕಿ ಬಳಕೆ: ಇರಲಿ ತಿಳಿವಳಿಕೆ

ಬೆಂಗಳೂರಿನ ಹೊರವಲಯದ ಅತ್ತಿಬೆಲೆಯ ಪಟಾಕಿ ಗೋದಾಮಿನಲ್ಲಿ ಶನಿವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ 14 ಮಂದಿ ಸುಟ್ಟು ಕರಕಲಾಗಿರುವುದು, ಹಲವರು ಗಾಯಗೊಂಡು ಸಾವು- ಬದುಕಿನ ನಡುವೆ ಹೋರಾಡುತ್ತಿರುವುದು ನಿಜಕ್ಕೂ ಘೋರ ದುರಂತ. ಅದರಲ್ಲಿ ಕಿರಿಯ ಜೀವಗಳೂ ಅಸುನೀಗಿರುವುದು ಮನ ಕಲಕುವಂತಿದೆ. ಕಾರ್ಮಿಕರ ಬದುಕಿನ ಭದ್ರತೆಗೆ, ಜೀವದ ರಕ್ಷಣೆಗೆ ಸಂಬಂಧಪಟ್ಟವರು ಸಮರ್ಪಕ ಮಾನದಂಡಗಳನ್ನು ಅನುಸರಿಸಿಲ್ಲ ಎಂಬುದು ಒಂದು ಕಡೆಯಾದರೆ, ಬಾಲಕಾರ್ಮಿಕ ಪದ್ಧತಿ ಜ್ವಲಂತವಾಗಿರುವ ಕಟುವಾಸ್ತವ ನಾಗರಿಕ ಸಮಾಜದ ಮುಖಕ್ಕೆ ರಾಚುವಂತಿದೆ. ಈ ಎಲ್ಲ ಸಮಸ್ಯೆಗಳಿಗೂ ತಕ್ಷಣವೇ ಸೂಕ್ತ ಪರಿಹಾರ ಮತ್ತು ಕ್ರಮ ಕೈಗೊಳ್ಳಬೇಕಾದ ಗಂಭೀರ ಹೊಣೆಯನ್ನು ಸರ್ಕಾರಗಳು ಅರಿತು ತುರ್ತಾಗಿ ಕಾರ್ಯಪ್ರವೃತ್ತವಾಗಬೇಕಿದೆ.

ದೀಪಾವಳಿ ಹಬ್ಬವಿರಲಿ, ಇತರ ಶುಭಾಶುಭ ಕಾರಣಗಳಿಗಿರಲಿ ಪಟಾಕಿ ಬಳಕೆಯಿಂದ ವಾಯುಮಾಲಿನ್ಯ, ಶಬ್ದಮಾಲಿನ್ಯ ಉಂಟಾಗುವ ಸಾಮಾನ್ಯ ತಿಳಿವಳಿಕೆಯನ್ನು ನಾವೆಲ್ಲರೂ ಹೊಂದಬೇಕಿದೆ. ಪರಿಸರ ಶೋಷಕ ಪ್ರವೃತ್ತಿಯಿಂದ ದೂರವುಳಿದು ಪಟಾಕಿಯ ಬಳಕೆಯನ್ನು ಸಂಪೂರ್ಣವಾಗಿ ವರ್ಜಿಸಬೇಕಾಗಿದೆ. ಈ ಮೂಲಕ, ಇಂತಹ ದುರಂತಗಳಿಗೆ ಪರೋಕ್ಷವಾಗಿ ನಾವೂ ಕಾರಣರಾಗದೆ ಉಳಿಯುವುದು ವಿವೇಚನಾಶೀಲ ನಡೆಯಾದೀತು.

ದಿನಮಣಿ ಬಿ.ಎಸ್., ಮೈಸೂರು

ಜೀವನಾಂಶ ಕುರಿತ ಆದೇಶ: ಪ್ರಶ್ನೆಗಳಿಗೆ ಮೂಲ

ಅಕ್ರಮ ಸಂಬಂಧ ಹೊಂದಿರುವ ಮಹಿಳೆಯು ವಿಚ್ಛೇದಿತ ಪತಿಯಿಂದ ಜೀವನಾಂಶ ಕೇಳುವುದು ಸಲ್ಲದು ಎಂಬ ಹೈಕೋರ್ಟ್‌ನ ಇತ್ತೀಚಿನ ಆದೇಶದಿಂದ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಒಂದು- ಅಕ್ರಮ ಸಂಬಂಧ ಹೊಂದಿರುವುದಕ್ಕೂ ಜೀವನಾಂಶ ನಿರಾಕರಣೆಗೂ ಏನು ಸಂಬಂಧ? ಅಷ್ಟಕ್ಕೂ ವಿಚ್ಛೇದಿತ ಮಹಿಳೆಗೆ ಅವಳ ಮಾಜಿ ಪತಿಯಿಂದ ಜೀವನಾಂಶ ಕೊಡಿಸುವುದು ಯಾತಕ್ಕಾಗಿ? ಹೆಣ್ಣು ಅಬಲೆಯಾಗಿದ್ದು, ಗಂಡಿನ ಆಸರೆ ಇಲ್ಲದ ಅವಳ ಮುಂದಿನ ಜೀವನ ನಿರ್ವಹಣೆಗೆ ಅನುಕೂಲವಾಗಲಿ ಎಂದಲ್ಲವೇ? ಜೀವನ ನಿರ್ವಹಣೆಯಲ್ಲಿ ಅವಳ ದೈಹಿಕ ಬೇಡಿಕೆಗಳೂ ಸೇರಿರುವುದಿಲ್ಲವೇ? ಅದಕ್ಕಾಗಿ ಅವಳು ಇನ್ನೊಬ್ಬ ಪುರುಷನೊಂದಿಗೆ ಸಂಬಂಧ ಬೆಳೆಸಿದರೆ ತಪ್ಪೇನು?

ಎರಡು- ಈ ಜೀವನಾಂಶ ಕೊಡಿಸುವ ವ್ಯವಸ್ಥೆ ಬರೀ ವಿವಾಹ ವಿಚ್ಛೇದಿತರಿಗೆ ಮಾತ್ರ ಏಕೆ? ವಿವಾಹದ ನಂತರ ಪತಿ ಮರಣ ಹೊಂದಿದರೆ, ಆ ಮಹಿಳೆಗೆ ಜೀವನಾಂಶದ ಗತಿ ಏನು? ಮೂರು- ಮಹಿಳಾ ಸಬಲೀಕರಣ ಆಂದೋಲನ, ಮಹಿಳೆ ಅಬಲೆಯಲ್ಲ, ಆಕೆಗೂ ಸಮಾನ ಹಕ್ಕುಗಳು ಇರಬೇಕು, ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಗೆ ತಕ್ಕ ಪ್ರಾತಿನಿಧ್ಯ ದೊರೆಯಬೇಕು ಎಂಬಂತಹ ಕೂಗು ಕೇಳಿಬರುತ್ತಿರುವ ಈ ಸಮಯದಲ್ಲಿ ಇಂತಹ ಜೀವನಾಂಶ ಪದ್ಧತಿ ಇರಬೇಕೆ?

ಸತೀಶ ಎಂ.ಎಸ್. ಭಟ್ಟ, ಬೆಂಗಳೂರು

ಸಿಗದ ಆಧಾರ್: ಆಗಲಿ ಪರ್ಯಾಯ ವ್ಯವಸ್ಥೆ

ಅಂಗೈಗಳು ಬಿರುಕು ಬಿಟ್ಟಿದ್ದು, ಚರ್ಮ ಸುಲಿದಿರುವುದರಿಂದ ಬಯೊಮೆಟ್ರಿಕ್ ಸಾಧ್ಯವಾಗದೆ, ಅದರಿಂದ ಆಧಾರ್ ಕಾರ್ಡ್ ಪಡೆಯಲಾಗದೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವ ಹಾವೇರಿ ತಾಲ್ಲೂಕಿನ ಕೂಲಿ ಕಾರ್ಮಿಕರ ಸ್ಥಿತಿಯನ್ನು ತಿಳಿದು (ಪ್ರ.ವಾ., ಅ. 8) ವಿಷಾದವೆನಿಸಿತು. ಈಗ ಪ್ರತಿ ಕೆಲಸಕ್ಕೂ ಅತ್ಯಂತ ಮುಖ್ಯವಾದ ಗುರುತಿನ ದಾಖಲೆ ಎಂದರೆ ಆಧಾರ್ ಕಾರ್ಡ್. ಏಳೆಂಟು ವರ್ಷಗಳಿಂದ ಇವರು ಹಳ್ಳಿಯಿಂದ ರಾಜಧಾನಿವರೆಗೆ ಓಡಾಡಿದರೂ ಆಧಾರ್ ಕಾರ್ಡ್ ಪಡೆಯಲು ಆಗಿಲ್ಲ ಎಂದರೆ ಏನನ್ನಬೇಕು? ಯಾರನ್ನು ದೂಷಿಸಬೇಕು?

ಪ್ರಜೆಗಳಿಗೆ ಸರ್ಕಾರದ ಸೌಲಭ್ಯ ಸರಿಯಾಗಿ ಸಿಗುತ್ತಿದೆಯೇ ಎಂದು ನೋಡಲು ಗ್ರಾಮ ಪಂಚಾಯಿತಿ ಸದಸ್ಯರು, ಗ್ರಾಮ ಲೆಕ್ಕಾಧಿಕಾರಿ, ಪಿಡಿಒ, ತಹಶೀಲ್ದಾರ್, ಶಾಸಕರು, ಜಿಲ್ಲಾಧಿಕಾರಿ ಮತ್ತು ಇತರರು ಇರುವುದಲ್ಲವೇ? ಕಷ್ಟಪಡುವ ಶ್ರಮಿಕರಿಗೆ ಒಂದು ಸಣ್ಣ ಕಾರಣದಿಂದ ಉಚಿತ ಪಡಿತರ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿಯಂತಹ ಮಹತ್ತರ ಯೋಜನೆಗಳ ಸೌಲಭ್ಯ ಸಿಗುತ್ತಿಲ್ಲ ಎಂದರೆ, ಇದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತದೆ. ಈ ಕೂಡಲೇ ಇವರ ಸಮಸ್ಯೆಗೆ ಪರ್ಯಾಯ ಮಾರ್ಗದ ಮೂಲಕ ಪರಿಹಾರ ಸಿಗುವಂತೆ ನೋಡಿಕೊಳ್ಳಬೇಕಾಗಿದೆ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಪುಸ್ತಕ ಖರೀದಿ: ಆಯಾ ಸಾಲಿನಲ್ಲೇ ಆಗಲಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮೂಲಕ ಪುಸ್ತಕ ಖರೀದಿಗೆ ವಿಳಂಬ ಸಲ್ಲ ಎಂಬ ಸಂಪಾದಕೀಯ (ಪ್ರ.ವಾ., ಅ. 5) ಸಮಂಜಸವಾಗಿದೆ. ಗ್ರಂಥಾಲಯ ಕರ ಎಂದು ಬೇರೆ ಬೇರೆ ಹಂತಗಳಲ್ಲಿ ಜನರಿಂದ ಹಣ ಕೀಳುತ್ತಾರೆ. ಅದು ಏನಾಗುವುದೋ ತಿಳಿಯುವುದಿಲ್ಲ. ಪ್ರಕಾಶಕರು ಪುಸ್ತಕ ಬರೆಸಲು ಹಲವು ಬರಹಗಾರರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪರಿಪಾಟ ಇದೆ. ಗ್ರಾಮೀಣ ಬರಹಗಾರರತ್ತಲೂ ಪ್ರಕಾಶಕರು ಗಮನಹರಿಸಬೇಕು. ಹೊಸ ಪ್ರತಿಭೆಗಳಿಗೆ ಉತ್ತೇಜನ ನೀಡಬೇಕು. ಹವ್ಯಾಸಿ ಬರಹಗಾರರು, ಆಸಕ್ತಿಯಿಂದ ಸ್ವತಃ ಪುಸ್ತಕ ಪ್ರಕಟಿಸುವವರು ಅನೇಕರಿದ್ದಾರೆ. ಅಂತಹವರ ಪುಸ್ತಕಗಳು ಮನೆಯ ಮೂಲೆಯ ಮೂಟೆಗಳಲ್ಲಿ ಹಾಗೇ ಮಲಗಿವೆ. ಸಾಲ ಮಾಡಿ ಪುಸ್ತಕ ಪ್ರಕಟಿಸಿದವರೂ ಇದ್ದಾರೆ. ಇವರ ಗತಿ ಅಧೋಗತಿ. ಪುಸ್ತಕ ಖರೀದಿ ಪ್ರಕ್ರಿಯೆಗೆ ಕೂಡಲೇ ಚಾಲನೆ ನೀಡಬೇಕು. ಪುಸ್ತಕ ಖರೀದಿ ಆಯಾ ಸಾಲಿನಲ್ಲಿಯೇ ನಡೆಯುವಂತೆ ನೋಡಿಕೊಳ್ಳಬೇಕು.

ಅಕ್ಬರ್ ಸಿ. ಕಾಲಿಮಿರ್ಚಿ, ಕೊಪ್ಪಳ

2 ಕಿ.ಮೀ. ಕ್ರಮಿಸಲು 1 ಗಂಟೆ!

ಶ್ರೀರಂಗಪಟ್ಟಣ- ಪಾಂಡವಪುರ ಮುಖ್ಯರಸ್ತೆಯ ಕಿರಂಗೂರು ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆ ನಡುವೆ ಎರಡು ಕಿ.ಮೀ. ದೂರ ಪ್ರಯಾಣಿಸಲು ಕೆಲವು ಸಲ ಒಂದು ಗಂಟೆಗೂ ಹೆಚ್ಚು ಸಮಯ ಬೇಕಾಗುತ್ತದೆ. ಇದಕ್ಕೆ ಮುಖ್ಯ ಕಾರಣ, ಈ ರಸ್ತೆ ಅತ್ಯಂತ ಕಿರಿದಾಗಿರುವುದು ಮತ್ತು ಇಲ್ಲಿ ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಿಸಲು ಬರುವ ಎತ್ತಿನಗಾಡಿಗಳು, ಲಾರಿ, ಟ್ರ್ಯಾಕ್ಟರ್‌ಗಳು ರಸ್ತೆಯ ಮಧ್ಯದಲ್ಲೇ ಹೋಗಬೇಕಾದ ಅನಿವಾರ್ಯ ಇರುವುದು. ಕಬ್ಬು ತುಂಬಿದ ಎತ್ತಿನಗಾಡಿಗಳು ಅಥವಾ ಲಾರಿಗಳು ಒಂದೇ ಕಡೆ ಕಬ್ಬಿನ ಭಾರ ಹೆಚ್ಚಾಗಿ ಉರುಳಿಬಿದ್ದ ಉದಾಹರಣೆಗಳೂ ಇವೆ. ಈ ಎರಡು ಕಿ.ಮೀ. ರಸ್ತೆಯನ್ನು ವಿಸ್ತರಿಸಿ, ಏಕಮುಖ ಸಂಚಾರ ವ್ಯವಸ್ಥೆ ರೂಪಿಸಿದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಜನಪ್ರತಿನಿಧಿಗಳು ಈ ಬಗ್ಗೆ ಗಮನಹರಿಸಿ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ಯಾಲೆಸ್ಟೀನ್–ಇಸ್ರೇಲ್

ನೆಲೆ ಕಳೆದುಕೊಂಡವರ ನೆಲೆ ಇರದವರ ಕದನ

ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರ ವಿರುದ್ಧ ಇಸ್ರೇಲ್ ಯುದ್ಧ ಘೋಷಿಸಿದೆ. ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ಮಧ್ಯೆ ಸಂಘರ್ಷ ತೀವ್ರಗೊಂಡಿದೆ. ಎರಡೂ ದೇಶಗಳ ನಡುವಣ ಶಸ್ತ್ರಾಸ್ತ್ರ ಸಂಘರ್ಷ 75 ವರ್ಷಗಳಿಗಿಂತಲೂ ಹಳೆಯದು. 1967ರ ನಂತರ ಈಗ ಅತ್ಯಂತ ದೊಡ್ಡ ಮಟ್ಟದ ಸಂಘರ್ಷ ನಡೆದಿದೆ. ಇದು ನೆಲೆ ಕಳೆದುಕೊಂಡವರ ಮತ್ತು ನೆಲೆ ಹುಡುಕಿಕೊಂಡು ಬಂದವರ ನಡುವಣ ಸಂಘರ್ಷ ಎಂಬುದನ್ನು ಐತಿಹಾಸಿಕ ದಾಖಲೆಗಳು ಹೇಳುತ್ತವೆ

• ಜಯಸಿಂಹ ಆರ್., ಸುಕೃತ ಎಸ್.

ಒಂದೆಡೆ ಮೆಡಿಟರೇನಿಯನ್ ಸಮುದ್ರ ಮತ್ತೊಂದೆಡೆ ಜೋರ್ಡನ್ ನದಿಯ ಮಧ್ಯೆ ಹರಡಿರುವ ಒಂದು ಪುಟ್ಟ ಭೂಭಾಗವಿದೆ. ಈ ಭೂಭಾಗದ ರಾಜಕೀಯ ಇತಿಹಾಸ ಕ್ರಿಸ್ತ ಪೂರ್ವ 1,900ರವರೆಗೂ ಚಾಚಿದೆ. ಈಗ ಈ ಭೂಭಾಗದಲ್ಲಿ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಎಂಬ ಎರಡು 'ದೇಶ'ಗಳಿವೆ. ಆದರೆ ಎರಡು ದೇಶಗಳಿಗೂ ಅಧಿಕೃತ ದೇಶಗಳ ಮಾನ್ಯತೆ ಇಲ್ಲ. ಇಸ್ರೇಲ್ ಎಂಬುದು ಯಹೂದಿಗಳ ದೇಶವಾದರೆ, ಪ್ಯಾಲೆಸ್ಟೀನ್ ಅರಬ್ ಮುಸ್ಲಿಮರ ದೇಶ. ಎರಡೂ ದೇಶಗಳಲ್ಲಿ ಕ್ರೈಸ್ತ ಧರ್ಮೀಯರೂ ಇದ್ದಾರೆ. ಇಸ್ರೇಲ್ ಎಂಬುದು ಪುರಾತನವಾದ ಸಾಮ್ರಾಜ್ಯವಲ್ಲ ಅಥವಾ ಈ ಮೊದಲೇ ಇದ್ದ ದೇಶವಾಗಿರಲಿಲ್ಲ. ಯೂರೋಪ್‌ನಲ್ಲಿ ನಿರಾಶ್ರಿತರಾದ ಯಹೂದಿಗಳಿಗೆಂದು ಬ್ರಿಟನ್ ನೇತೃತ್ವದಲ್ಲಿ ಐರೋಪ್ಯ ದೇಶಗಳು ಸೃಷ್ಟಿಸಿದ ಹೊಸ ನೆಲೆಯಷ್ಟೆ. ಇಸ್ರೇಲ್ ಎಂಬ ನೆಲೆ ವಾಸ್ತವದಲ್ಲಿ ಅಸ್ತಿತ್ವಕ್ಕೆ ಬಂದಿದ್ದು 1948ರಲ್ಲಿ.

'ಇಸ್ರೇಲ್ ಯಹೂದಿಗಳ ಮೂಲನೆಲೆ' ಎಂಬುದು ಇಸ್ರೇಲಿಯನ್ನರ ಪ್ರತಿಪಾದನೆ. ಪುರಾತನ ಜೆರುಸಲೇಂನಲ್ಲಿರುವ ವೆಸ್ಟರ್ನ್ ವಾಲ್‌ನ ಜಾಗದಲ್ಲಿ, ಯಹೂದಿಗಳ ಪಿತಾಮಹ ಅಬ್ರಾಹಂ ತನ್ನ ಮಗ ಐಸಾಕ್‌ನನ್ನು ಬಲಿ ನೀಡಿದ್ದ ಎಂದು ಬೈಬಲ್‌ನಲ್ಲಿ ಹೇಳಲಾಗಿದೆ. ಹೀಗಾಗಿ ಇದು ಯಹೂದಿಗಳಿಗೆ ಪವಿತ್ರ ಸ್ಥಳ ಎಂದು ಭಾವಿಸಲಾಗುತ್ತದೆ. ಈ ಗೋಡೆಗೆ ಅಂಟಿಕೊಂಡೇ ಒಂದು ಮಸೀದಿಯಿದ್ದು, ಮೊಹಮ್ಮದ್ ಪೈಗಂಬರರು ಕೊನೆಯುಸಿರೆಳೆದ ಜಾಗವದು. ಇವೆರಡರ ಜತೆಯಲ್ಲೇ ಮತ್ತೊಂದು ಜಾಗವಿದ್ದು, ಯೇಸು ಕ್ರಿಸ್ತರ ಗೋರಿಯದು. ಹೀಗೆ ಯಹೂದಿ, ಇಸ್ಲಾಂ ಮತ್ತು ಕ್ರೈಸ್ತ ಧರ್ಮೀಯರಿಗೆ ಅತ್ಯಂತ ಮಹತ್ವದ ಸ್ಥಳ ಇದಾಗಿದೆ. ಇತಿಹಾಸದುದ್ದಕ್ಕೂ ಜೆರುಸಲೇಂ ಬೇರೆ–ಬೇರೆ ಧರ್ಮಗಳು, ಸಾಮ್ರಾಜ್ಯಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.

ಯಹೂದಿಗಳ ಮೂಲ ಭಾಷೆ ಹೀಬ್ರೂ. ಅಬ್ರಾಹಂ ಯಹೂದಿಗಳ ಪಿತಾಮಹ. ಹೀಬ್ರೂ ಭಾಷೆಯಲ್ಲಿ ಈತನನ್ನು ಇಬ್ರಾಹಂ ಎಂದೂ ಕರೆಯಲಾಗುತ್ತದೆ. ಹೀಬ್ರೂ ಭಾಷೆಯನ್ನಾಡುತ್ತಿದ್ದ ಜನರು, ಅಂದರೆ ಯಹೂದಿಗಳ ಆರಂಭಿಕ ನೆಲೆ ಎಂದು ಗುರುತಿಸುವುದು ಮೆಸಪಟೋಮಿಯಾವನ್ನು (ಇದು ಈಗಿನ ಇರಾಕ್‌ನ ವ್ಯಾಪ್ತಿಯಲ್ಲಿದೆ). ಕ್ರಿಸ್ತ ಪೂರ್ವ 1900ರಲ್ಲಿ (ಅಂದರೆ ಸುಮಾರು 3,900 ವರ್ಷಗಳ ಹಿಂದೆ) ಬದುಕಿದ್ದ ಅಬ್ರಾಹಂ ದೇವವಾಣಿಯ ಆಧಾರದಲ್ಲಿ ಯಹೂದಿ ಧರ್ಮವನ್ನು ಸ್ಥಾಪಿಸಿದ. ಆತನದ್ದೇ ಅವಧಿಯಲ್ಲಿ ಹೀಬ್ರೂ ಭಾಷಿಕರು ಮೆಸಪಟೋಮಿಯಾದಿಂದ ಈಗಿನ ಈಜಿಪ್ಟ್‌ನತ್ತ ಹೊರಟರು. ಸಾಮ್ರಾಜ್ಯ ವಿಸ್ತರಣೆ ಮತ್ತು ಧರ್ಮ ಪ್ರಚಾರವು ಇದರ ಉದ್ದೇಶವಾಗಿತ್ತು ಎಂದು ಮಾನವಶಾಸ್ತ್ರೀಯ ಅಧ್ಯಯನಗಳು ಗುರುತಿಸಿವೆ. ಈ ಎರಡೂ ಪ್ರದೇಶಗಳ ಮಧ್ಯೆ ಪ್ಯಾಲೆಸ್ಟೀನ್ ಇತ್ತು. ಪ್ರಧಾನವಾಗಿ ಕೃಷಿ ಮತ್ತು ಹೈನುಗಾರಿಕೆ ಮಾಡುತ್ತಿದ್ದ ಪ್ರದೇಶವದು. ಜೇನು ಉತ್ಪಾದನೆಯೂ ಈ ಪ್ರದೇಶದಲ್ಲಿ ಹೆಚ್ಚಾಗಿತ್ತು. ಹೀಗಾಗಿಯೇ ಈ ಪ್ರದೇಶವನ್ನು ಪ್ಯಾಲೆಸ್ಟೀನ್ (ಹಾಲು ಮತ್ತು ಜೇನು) ಎಂದು ಕರೆಯಲಾಗಿತ್ತು. ಹೀಬ್ರೂ ಭಾಷೆಯನ್ನಾಡುತ್ತಿದ್ದ ಜನರ ಅತಿಕ್ರಮಣವನ್ನು ಪ್ಯಾಲೆಸ್ಟೀನಿಯನ್ನರು ಹಿಮ್ಮೆಟ್ಟಿಸಿದ್ದರು. ಆದರೂ ಕೆಲವು ಹೀಬ್ರೂ ಜನರು ಪ್ಯಾಲೆಸ್ಟೀನ್ ಪ್ರದೇಶದಲ್ಲಿ ಉಳಿದರು.

ಅಬ್ರಾಹಂಗೆ 12 ಜನ ಮಕ್ಕಳು. ಅವರು ಮೆಸಪಟೋಮಿಯಾದ ಎಲ್ಲಾ ದಿಕ್ಕುಗಳಲ್ಲಿ ಇದ್ದ 12 ವಿವಿಧ ಬುಡಕಟ್ಟುಗಳ ಮುಖ್ಯಸ್ಥರಾಗಿದ್ದರು. ಅಂತಹ ಒಂದು ಬುಡಕಟ್ಟನ್ನು ಐಸಾಕ್ ಮುನ್ನಡೆಸುತ್ತಿದ್ದ. ಸ್ವತಃ ಅಬ್ರಾಹಂ, ಐಸಾಕ್‌ನನ್ನು ಬಲಿ ನೀಡಿದ ಪ್ರದೇಶವೇ ಈಗಿನ ಜೆರುಸಲೇಂನಲ್ಲಿನ ವೆಸ್ಟರ್ನ್ ವಾಲ್. 'ಈ 12 ಜನರ ಮುಂದಿನ ಸಂತತಿಯು ಅಂದರೆ, ಯಹೂದಿಗಳು ಈಗಿನ ಯೂರೋಪ್, ಮಧ್ಯಪ್ರಾಚ್ಯ ಸೇರಿ ದಕ್ಷಿಣ ಏಷ್ಯಾದವರೆಗೂ ವಲಸೆ ಹೋದರು. ಸೌಹಾರ್ದ ಸಂಬಂಧ, ಅನ್ಯಧರ್ಮದ ಮಹಿಳೆಯರನ್ನು ವಿವಾಹವಾಗುವ ಮೂಲಕ ಯಹೂದಿಗಳು ಧರ್ಮ ವಿಸ್ತರಣೆ ಮಾಡುತ್ತಿದ್ದರು' ಎಂದು ಯಹೂದಿಗಳ ಕುಲಶ್ಯಾಸ್ತ್ರೀಯ ಅಧ್ಯಯನ ನಡೆಸಿದ ಮ್ಯಾಥ್ಯೂ ರೋಪರ್ ತಮ್ಮ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಹಲವು ಸಹಸ್ರಮಾನಗಳವರೆಗೆ ಈ ಜನರಿಗೆ ವಿರೋಧ ವ್ಯಕ್ತವಾಗಲಿಲ್ಲ ಅಥವಾ ಅಂತಹ ವಿರೋಧಕ್ಕೆ ಐತಿಹಾಸಿಕ ದಾಖಲೆಗಳಿಲ್ಲ. ಆದರೆ ಕ್ರಿಸ್ತ ಶಕ 18ನೇ ಶತಮಾನದ ವೇಳೆಗೆ ಯೂರೋಪ್‌ನಲ್ಲಿ ಯಹೂದಿಗಳ ವಿರುದ್ಧ ಅಸಹನೆ ಆರಂಭವಾಯಿತು. ಜರ್ಮನಿಯಲ್ಲಿ ಈ ಅಸಹನೆ ತೀವ್ರವಾಗಿತ್ತು. ಇದರಿಂದಾಗಿ ಯಹೂದಿಗಳು ಯೂರೋಪ್‌ನಲ್ಲಿ ನಿರಾಶ್ರಿತರಾಗತೊಡಗಿದರು. ಅವರಿಗೆ ನೆಲೆ ಕಲ್ಪಿಸಲು ಬ್ರಿಟನ್ ಹೊಸ ಜಾಗವನ್ನು ಹುಡುಕಾಡತೊಡಗಿತು. ಆಗ ಬ್ರಿಟನ್ ನೇತೃತ್ವದಲ್ಲಿ ಐರೋಪ್ಯ ದೇಶಗಳು, ಪ್ಯಾಲೆಸ್ಟೀನ್‌ನಲ್ಲಿ ಯಹೂದಿಗಳಿಗೆ ಹೊಸ ನೆಲೆ ಕಲ್ಪಿಸಲು ನಿರ್ಧರಿಸಿದವು. ಅದರ ಭಾಗವಾಗಿಯೇ 20,000ಕ್ಕೂ ಹೆಚ್ಚು ಯಹೂದಿಗಳನ್ನು 1897ರಲ್ಲಿ ಪ್ಯಾಲೆಸ್ಟೀನ್‌ಗೆ ಕಳುಹಿಸಲಾಯಿತು. ಆಗ ಪ್ಯಾಲೆಸ್ಟೀನ್, ಬ್ರಿಟನ್‌ನ ವಸಾಹತುವಾಗಿತ್ತು. ನಂತರದ ವರ್ಷಗಳಲ್ಲಿ ಬ್ರಿಟನ್ ಸರ್ಕಾರವು ಹಲವು ಹಂತಗಳಲ್ಲಿ ಲಕ್ಷಾಂತರ ಯಹೂದಿಗಳಿಗೆ ಪ್ಯಾಲೆಸ್ಟೀನ್‌ನಲ್ಲಿ ನೆಲೆ ಕಲ್ಪಿಸಿತು.

ವಿಸ್ತರಿಸುತ್ತಲೇ ಹೋದ ಇಸ್ರೇಲ್

ಯಹೂದಿಗಳಿಗೆ ಪ್ಯಾಲೆಸ್ಟೀನ್‌ನಲ್ಲಿ ನೆಲೆ ಕಲ್ಪಿಸಲು ಸ್ಥಳೀಯ ಅರಬ್ ಮುಸ್ಲಿಮರು ವಿರೋಧ ವ್ಯಕ್ತಪಡಿಸುತ್ತಲೇ ಇದ್ದರು. ಅವರ ವಿರೋಧದ ಮಧ್ಯೆಯೂ ಯಹೂದಿಗಳಿಗೆ ನೆಲೆ ಕಲ್ಪಿಸಲಾಯಿತು.

- 1880ರ ನಂತರ ಪ್ಯಾಲೆಸ್ಟೀನ್‌ನಲ್ಲಿ ಯಹೂದಿಗಳಿಗೆ ಆಶ್ರಯ ಕಲ್ಪಿಸುವ ಉದ್ದೇಶದಿಂದ ಫ್ರಾನ್ಸ್‌ನ ನೇತೃತ್ವದಲ್ಲಿ ಐರೋಪ್ಯ ರಾಷ್ಟ್ರಗಳು ಒಂದಾದವು. ಯಹೂದಿಗಳಿಗೆ ಆಶ್ರಯ ಕಲ್ಪಿಸಲು ದೇಣಿಗೆ ಒದಗಿಸಿದವು. 1897ರಲ್ಲಿ ಗಣನೀಯ ಸಂಖ್ಯೆಯ ಯಹೂದಿಗಳು ಪ್ಯಾಲೆಸ್ಟೀನ್‌ಗೆ ಬಂದರು. ಪ್ಯಾಲೆಸ್ಟೀನ್ ಅರಬರ ವಿರೋಧ ನಡೆಯುತ್ತಲೇ ಇತ್ತು. 1907ರಲ್ಲಿ ಬ್ರಿಟಿಷ್ ಕಂಪನಿಯು ಯಹೂದಿಗಳಿಗಾಗಿ ಪ್ಯಾಲೆಸ್ಟೀನ್‌ನಲ್ಲಿ ಭೂಮಿ ಖರೀದಿಸಿತು. ಇದರ ಪರಿಣಾಮವಾಗಿ ಅಲ್ಲಿಂದ 60 ಸಾವಿರಕ್ಕೂ ಹೆಚ್ಚು ಅರಬರನ್ನು ಹೊರಗಟ್ಟಲಾಯಿತು
- ಎರಡನೇ ವಿಶ್ವಯುದ್ಧದ ನಂತರ 1948ರಲ್ಲಿ ಬ್ರಿಟಿಷರು ಪ್ಯಾಲೆಸ್ಟೀನ್ ಮೇಲಿನ ನಿಯಂತ್ರಣವನ್ನು ಬಿಟ್ಟುಕೊಟ್ಟರು. ಆಗ ಯಹೂದಿಗಳು ತಮ್ಮ ನಿಯಂತ್ರಣದಲ್ಲಿ ಇದ್ದ ಜಾಗವನ್ನು ಇಸ್ರೇಲ್ ಎಂದು ಘೋಷಿಸಿದರು. ಪ್ಯಾಲೆಸ್ಟೀನ್‌ನ ಬಹುಭಾಗವನ್ನು ಯಹೂದಿಗಳು ನಿಯಂತ್ರಣಕ್ಕೆ ತೆಗೆದುಕೊಂಡರು. ಜೋರ್ಡನ್ ಸಾಮ್ರಾಜ್ಯವು ಜೋರ್ಡನ್ ನದಿಯ ಪಶ್ಚಿಮ ದಂಡೆಯ ಪ್ರದೇಶವನ್ನು (ವೆಸ್ಟ್ ಬ್ಯಾಂಕ್) ವಶಪಡಿಸಿಕೊಂಡಿತು. ಇಸ್ರೇಲ್ ಮತ್ತು ಜೋರ್ಡನ್ ಮಧ್ಯೆ ಜೆರುಸಲೇಂ ಹಂಚಿಹೋಯಿತು
- ಪ್ಯಾಲೆಸ್ಟೀನ್ ಅನ್ನು ಯಹೂದಿಗಳ ಇಸ್ರೇಲ್ ಮತ್ತು ಅರಬರ ಪ್ಯಾಲೆಸ್ಟೀನ್ ಎಂದು ವಿಭಜಿಸುವ ಪ್ರಸ್ತಾವವನ್ನು 1950ರಲ್ಲಿ ವಿಶ್ವಸಂಸ್ಥೆ ಅಂಗೀಕರಿಸಿತು. ಆದರೆ ಜೋರ್ಡನ್‌ನ ವಿರೋಧದಿಂದಾಗಿ ಇದು ಕಾರ್ಯರೂಪಕ್ಕೆ ಬರಲಿಲ್ಲ
- ಜೋರ್ಡನ್‌ನ ವಶದಲ್ಲಿದ್ದ ಜೆರುಸಲೇಂನ ಭಾಗವನ್ನು 1967ರಲ್ಲಿ ಸೇನಾ ಕಾರ್ಯಾಚರಣೆಯ ಮೂಲಕ ಇಸ್ರೇಲ್ ವಶಪಡಿಸಿಕೊಂಡಿತು. ಆದರೆ ವೆಸ್ಟ್ ಬ್ಯಾಂಕ್‌ನಲ್ಲಿ ಪ್ಯಾಲೆಸ್ಟೀನ್ ಅರಬರ ಪ್ರಾಬಲ್ಯವಿದ್ದ ಕಾರಣ, ಸಂಪೂರ್ಣ ನಿಯಂತ್ರಣ ಸಾಧ್ಯವಾಗಲಿಲ್ಲ. ಇಲ್ಲಿನ ಅರಬರು ಇದನ್ನು ಪ್ಯಾಲೆಸ್ಟೀನ್ ಎಂದು ಘೋಷಿಸಿಕೊಂಡಿದ್ದಾರೆ. ಆದರೆ 1991ರಲ್ಲಿ, 1997ರಲ್ಲಿ ಪ್ಯಾಲೆಸ್ಟೀನಿಯನ್ನರ ಹಲವು ಪ್ರದೇಶಗಳನ್ನು ಇಸ್ರೇಲ್ ವಶಪಡಿಸಿಕೊಂಡಿತು
- 1948ರಲ್ಲಿ ಇಸ್ರೇಲ್‌ನ ಅತಿಕ್ರಮಣದಿಂದ ಪ್ಯಾಲೆಸ್ಟೀನಿಯನ್ನರಿಗೆ ಆದ ಆಸ್ತಿ ನಷ್ಟವನ್ನು ತುಂಬಿಕೊಡಲು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ಸಮಿತಿಯೊಂದನ್ನು 1950ರಲ್ಲಿ ರಚಿಸಿತು. ಈ ಸಮಿತಿಯು ಪ್ಯಾಲೆಸ್ಟೀನ್ ಮುಸ್ಲಿಮರಿಂದ ಇಸ್ರೇಲ್ ವಶಪಡಿಸಿಕೊಂಡ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿ, ಅದಕ್ಕೆ ಪರಿಹಾರವನ್ನು ಒದಗಿಸುತ್ತದೆ. ಈ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲದ ಕಾರಣ, ಸಮಿತಿ ಈಗಲೂ ಕಾರ್ಯನಿರ್ವಹಿಸುತ್ತಿದೆ. ಪ್ರತಿ ವರ್ಷ ಭದ್ರತಾ ಮಂಡಳಿಗೆ ಈ ಸಂಬಂಧ ವರದಿ ಸಲ್ಲಿಸುತ್ತಲೇ ಇದೆ

ಯಹೂದಿಗಳ ಸಂಖ್ಯೆ ಏರಿಕೆ





ಐರೋಪ್ಯ ದೇಶಗಳು ದೊಡ್ಡ ಮಟ್ಟದ ಆರ್ಥಿಕ ನೆರವು ನೀಡಿದ ಕಾರಣಕ್ಕೆ, ಯಹೂದಿಗಳು ಪ್ಯಾಲೆಸ್ಟೀನ್‌ನಲ್ಲಿ ನೆಲೆ ಸ್ಥಾಪಿಸಿಕೊಂಡರು. ಸ್ಥಳೀಯ ಪ್ಯಾಲೆಸ್ಟೀನಿಯನ್ನರಿಂದ ರಕ್ಷಣೆ ಪಡೆಯಲು ಯಹೂದಿಗಳು ಅರೆಸೇನಾ ಪಡೆಯೊಂದನ್ನು ಸ್ಥಾಪಿಸಿಕೊಂಡಿದ್ದರು. 1948ರಲ್ಲಿ ಪ್ಯಾಲೆಸ್ಟೀನ್ ಅನ್ನು ಬ್ರಿಟನ್ ತೊರೆಯಿತು. ತಕ್ಷಣವೇ ಯಹೂದಿಗಳು ತಮ್ಮ ಸೇನೆಯನ್ನು ಬಳಸಿಕೊಂಡು ಸ್ಥಳೀಯ ಪ್ಯಾಲೆಸ್ಟೀನಿಯನ್ನರ ಮೇಲೆ ದಾಳಿ ನಡೆಸಿದರು. ಪ್ಯಾಲೆಸ್ಟೀನ್‌ನ ಬಹುತೇಕ ಭಾಗಗಳನ್ನು ವಶಕ್ಕೆ ಪಡೆದುಕೊಂಡರು. ಇಸ್ರೇಲ್, ಯಹೂದಿಗಳ ಹೊಸನೆಲೆ ಎಂದು ಘೋಷಿಸಿಕೊಂಡರು.

ಇಸ್ರೇಲ್‌ನ ಅತಿಕ್ರಮಣವನ್ನು ಎದುರಿಸಲಾಗದೆ ಕೆಲವು ಪ್ಯಾಲೆಸ್ಟೀನಿಯನ್ನರು ಜೋರ್ಡನ್ ನದಿಯ ಪಶ್ಚಿಮ ದಂಡೆಯತ್ತ ಹೋದರು. ಕೆಲವು ಪ್ಯಾಲೆಸ್ಟೀನಿಯನ್ನರು ಮೆಡಿಟರೇನಿಯನ್ ಸಮುದ್ರದ ಕರಾವಳಿಯಾಗಿದ್ದ ಗಾಜಾದಲ್ಲಿ ನೆಲೆ ಕಂಡುಕೊಂಡರು. ಗಾಜಾದಲ್ಲಿ ನೆಲೆ ನಿಂತ ಪ್ಯಾಲೆಸ್ಟೀನಿಯನ್ನರು, ಯಹೂದಿಗಳ ಅತಿಕ್ರಮಣಕ್ಕೆ ಪ್ರತೀಕಾರವಾಗಿ ಇಸ್ರೇಲ್‌ನ ಮೇಲೆ ದಾಳಿ ನಡೆಸುತ್ತಲೇ ಇದ್ದಾರೆ. ಇಸ್ರೇಲ್ ಸಹ ಪ್ರತಿ ದಾಳಿ ನಡೆಸುತ್ತಿದೆ. ಎರಡೂ ದೇಶಗಳು ಕದನ ವಿರಾಮ ಘೋಷಿಸಿಕೊಂಡರೂ ಗಾಜಾಪಟ್ಟಿಯಲ್ಲಿದ್ದ ಹಮಾಸ್ ಹೋರಾಟಗಾರರು ದಾಳಿ ಮುಂದುವರಿಸಿದ್ದರು. ಹೀಗಾಗಿ ಅವರನ್ನು ಬಂಡುಕೋರರು ಎಂದು ಪ್ಯಾಲೆಸ್ಟೀನ್ ಸರ್ಕಾರ ಘೋಷಿಸಿತು. ಇಸ್ರೇಲ್, ಅದರ ಬೆಂಬಲಕ್ಕಿದ್ದ ಬ್ರಿಟನ್ ಮತ್ತು ಅಮೆರಿಕ ಸೇರಿ ಹಲವು ದೇಶಗಳು ಹಮಾಸ್ ಹೋರಾಟಗಾರರನ್ನು ಉಗ್ರರು ಎಂದು ಘೋಷಿಸಿದವು. ಈಗ ಇಸ್ರೇಲ್‌ನ ಮೇಲೆ ವ್ಯವಸ್ಥಿತ ದಾಳಿ ನಡೆಸಿರುವುದು ಇದೇ ಹಮಾಸ್. ಅವರ ವಿರುದ್ಧ ಇಸ್ರೇಲ್ ಸಹ ಯುದ್ಧ ಘೋಷಿಸಿದೆ.

ಭಾರತದ ಬದಲಾದ ನಿಲುವು

ಪ್ಯಾಲೆಸ್ಟೀನ್ ಅರಬರಿಗೆ ಸೇರಿದ್ದು ಎಂಬುದು ಭಾರತದ ನಿಲುವಾಗಿತ್ತು. ಆದರೆ ನಂತರದ ವರ್ಷಗಳಲ್ಲಿ ಈ ನಿಲುವು ಬದಲಾಗುತ್ತಲೇ ಬಂದಿದೆ. ಈಗ ಭಾರತವು ಸಂಪೂರ್ಣವಾಗಿ ಇಸ್ರೇಲ್ ಪರವಾಗಿ ನಿಂತಿದೆ.

'ಇಂಗ್ಲೆಂಡ್ ಇಂಗ್ಲಿಷರಿಗೆ ಸೇರಿದ್ದು, ಫ್ರಾನ್ಸ್ ಫ್ರೆಂಚರಿಗೆ ಸೇರಿದ್ದು ಎನ್ನುವುದು ಎಷ್ಟು ಸತ್ಯವೊ, ಪ್ಯಾಲೆಸ್ಟೀನ್ ಅರಬರಿಗೆ ಸೇರಿದ್ದು ಎನ್ನುವುದೂ ಅಷ್ಟೇ ಸತ್ಯ. ಅರಬರ ಮೇಲೆ ಯಹೂದಿಗಳನ್ನು ಹೇರುವುದು ತಪ್ಪು ಮತ್ತು ಅಮಾನುಷವಾದುದು. ಕ್ರೈಸ್ತರಲ್ಲಿ ಯಹೂದಿಗಳು ಅಸ್ಪೃಶ್ಯರು. ಧರ್ಮವನ್ನು ಮುಂದಿಟ್ಟುಕೊಂಡು ಜರ್ಮನಿಯಲ್ಲಿ ಯಹೂದಿಗಳಿಗೆ ಕಿರುಕುಳ ನೀಡಲಾಗಿದೆ. ಆದರೆ, ಅನುಕಂಪವೇ ಬೇರೆ ನ್ಯಾಯವೇ ಬೇರೆ'. 1938ರ ನ.26 ರಂದು 'ಹರಿಜನ' ಪತ್ರಿಕೆಯ ಸಂಚಿಕೆಯೊಂದರಲ್ಲಿ ಮಹಾತ್ಮ ಗಾಂಧಿ ಅವರು ಈ ರೀತಿಯಲ್ಲಿ ಅಭಿಪ್ರಾಯಪಡುತ್ತಾರೆ. ಜವಾಹರಲಾಲ್ ನೆಹರೂ ಅವರದ್ದೂ ಇದೇ ಅಭಿಪ್ರಾಯವಾಗಿತ್ತು.

ಕೆಲವು ತಿಂಗಳ ಅಂತರದಲ್ಲೇ ಭಾರತ ಹಾಗೂ ಪ್ಯಾಲೆಸ್ಟೀನ್‌ಗೆ ಬ್ರಿಟಿಷರಿಂದ ಸ್ವಾತಂತ್ರ್ಯ ದಕ್ಕಿತು. ನೆಹರೂ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ಹಲವು ದೇಶಗಳ ನಾಯಕರು ಸೇರಿ ಮಾಡಿಕೊಂಡ 'ಅಲಿಪ್ತ ನೀತಿ'ಗೆ ಭಾರತವು ಬದ್ಧವಾಗಿತ್ತು. ಹಾಗಿದ್ದರೂ ಭಾರತವು ಪ್ಯಾಲೆಸ್ಟೀನ್ ಪರ ತನ್ನ ಸೈದ್ಧಾಂತಿಕ ಬೆಂಬಲವನ್ನು ಮುಂದುವರಿಸಿತ್ತು.

1950ರಲ್ಲಿ ಭಾರತವು ಇಸ್ರೇಲ್‌ಗೆ ದೇಶದ ಮಾನ್ಯತೆ ನೀಡಿದೆ. ಕೆಲವೇ ವರ್ಷಗಳಲ್ಲಿ ಮುಂಬೈನಲ್ಲಿ ಯಹೂದಿ ಸಂಸ್ಥೆಯು ವಲಸೆ ಕಚೇರಿಯನ್ನು ಆರಂಭಿಸಿತು. ರಕ್ಷಣೆ, ಅಂತರಿಕ್ಷ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಎರಡೂ ದೇಶಗಳ ಸಂಬಂಧ ಕಾಲ ಕಾಲಕ್ಕೆ ಗಟ್ಟಿಯಾಗುತ್ತಲೇ ಬಂದಿದೆ. ಆದರೆ, 1992ರಲ್ಲಿ ಈ ಸಂಬಂಧವು ದ್ವಿಪಕ್ಷೀಯ ಸಂಬಂಧವಾಯಿತು. ಆದರೆ, ನರೇಂದ್ರ ಮೋದಿ ಅವರು 2014ರಲ್ಲಿ ಪ್ರಧಾನಿಯಾದ ಬಳಿಕ ಎರಡೂ ದೇಶಗಳ ಸಂಬಂಧ ಕೇವಲ ವ್ಯಾವಹಾರಿಕವಾಗಿ ಉಳಿಯದೇ ಸೈದ್ಧಾಂತಿಕವಾಗಿ ಹೆಚ್ಚು ಹತ್ತಿರವಾಯಿತು.

ಮುಸ್ಲಿಂ ಮೂಲಭೂತವಾದದ ವಿರುದ್ಧ ಒಗ್ಗೂಡಿ ಹೋರಾಡಲು, ಗುಪ್ತಚರ ಮಾಹಿತಿ ಹಂಚಿಕೆ ಒಪ್ಪಂದವನ್ನು 2014ರ ಜುಲೈನಲ್ಲಿ ಎರಡೂ ದೇಶಗಳು ಮಾಡಿಕೊಂಡವು. ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯ 2015ರ ಗಾಜಾ ತನಿಖಾ ವರದಿಯನ್ನು ಒಪ್ಪಿಕೊಳ್ಳಬೇಕು ಎಂದು 41 ದೇಶಗಳು ಮತಚಲಾಯಿಸಿದವು. ಆದರೆ ಭಾರತವು ಇಸ್ರೇಲ್ ಪರವಾಗಿ ನಿಂತಿತು. ನಂತರ, ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು ಜಾರಿ ಮಾಡಲು ಮುಂದಾಯಿತು. ಇದಕ್ಕೆ ಜಗತ್ತಿನೆಲ್ಲೆಡೆಯಿಂದ ವಿರೋಧ ವ್ಯಕ್ತವಾಯಿತು. ಆದರೆ, ಇಸ್ರೇಲ್ ಮಾತ್ರ ಭಾರತದ ಪರ ನಿಂತಿತು. ಭಾರತದ ಪ್ರಧಾನಿಯು ಇತಿಹಾಸದಲ್ಲಿಯೇ ಮೊದಲ ಬಾರಿಗೆ 2017ರಲ್ಲಿ ಇಸ್ರೇಲ್ ಪ್ರವಾಸ ಕೈಗೊಂಡರು. 'ನನ್ನ ಸೇಹಿತನಿಗೆ ಸ್ವಾಗತ' ಎಂದು ಅಂದಿನ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಮೋದಿ ಅವರನ್ನು ಸ್ವಾಗತಿಸಿದರು. ಇದೇ ವೇಳೆಯಲ್ಲಿಯೇ ರಕ್ಷಣಾ ಕ್ಷೇತ್ರದ ಸಂಬಂಧ ಎರಡೂ ದೇಶಗಳ ನಡುವೆ ದೊಡ್ಡ ಮಟ್ಟದ ವ್ಯವಹಾರ ನಡೆಯಿತು. ಈ ಹಂತದಲ್ಲಿಯೇ ಭಾರತವು ಇಸ್ರೇಲ್‌ನಿಂದ 'ಪೆಗಾಸಿಸ್' ತಂತ್ರಾಂಶವನ್ನು ಖರೀದಿಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಈ ತಂತ್ರಾಂಶವು ಭಾರತದಲ್ಲಿ ದೊಡ್ಡ ಮಟ್ಟದ ಸಂಚಲನವನ್ನೇ ಸೃಷ್ಟಿಸಿತ್ತು.

ಆಧಾರ: ವಿಶ್ವ ಸಂಸ್ಥೆಯ 'ದಿ ಸ್ಟೇಟಸ್ ಆಫ್ ಜೆರುಸಲೇಂ' ವರದಿ, ಮ್ಯಾಥ್ಯು ರೋಪರ್ ಅವರ 'ಸ್ವಿಮ್ಮಿಂಗ್ ಇನ್ ದಿ ಜೀನ್ ಪೂಲ್: ಇಸ್ರೇಲಿಯಟ್ ಕಿನ್‌ಶಿಪ್' ಕುಲಶ್ಯಾಸ್ತ್ರೀಯ ಅಧ್ಯಯನ ವರದಿ, ಭಾರತ ಹಾಗೂ ಇಸ್ರೇಲ್ ರಾಯಭಾರ ಕಚೇರಿಗಳ ಟಿಪ್ಪಣಿ, ಅಲ್‌ಜಝೀರಾ ವರದಿಗಳು, 'ಜೂಯಿಷ್ ವರ್ಚುವಲ್ ಲೈಬ್ರರಿ'ಯ ಟಿಪ್ಪಣಿ

ಪ್ರಜಾವಾಣಿ ಗ್ರಾಫಿಕ್ಸ್

'ಆಡು ಗಾಡ್'ನ ಏರಿಳಿತದ ದರ್ಶನ

ನಾವು ನೋಡಿದ ಸಿನಿಮಾ

ಚಿತ್ರ : ಆಡೇ ನಮ್ ಗಾಡ್

- **ನಿರ್ಮಾಣ:** ಪ್ರೊ. ಬಿ. ಬಸವರಾಜ್, ರೇಣುಕಾ ಬಸವರಾಜ್
- **ನಿರ್ದೇಶನ:** ಪಿ. ಎಚ್. ವಿಶ್ವನಾಥ್
- **ತಾರಾಗಣ:** ನಟರಾಜ್, ಮಂಜುನಾಥ್ ಜಂಬೆ, ಅಜಿತ್ ಬೊಪ್ಪನಹಳ್ಳಿ, ಬಿ. ಸುರೇಶ್, ಸಾರಿಕಾ ರಾವ್, ಅನೂಪ್ ಶೂನ್ಯ.

ಕವಿ ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ' ಕವನದ ವಸ್ತು ನೆನಪಿಸಿಕೊಳ್ಳೋಣ. ಕತ್ತೆಯೊಂದರ ಸಮಾಧಿ ಧರ್ಮಕ್ಷೇತ್ರವಾಗಿ ಬದಲಾಗುವ ವ್ಯಂಗ್ಯವನ್ನು ಅವರು ಕಾವ್ಯಶಿಲ್ಪದಲ್ಲಿ ಕಟ್ಟಿದ್ದರು. ನಿರ್ದೇಶಕ ಪಿ.ಎಚ್.ವಿಶ್ವನಾಥ್ ಕೂಡ ಅಂಥದ್ದೇ ವಸ್ತುವನ್ನು ಹೊಸಕಾಲದ ನೆಲೆಗಟ್ಟಿನಲ್ಲಿ ಸಿನಿಮಾ ಆಗಿಸಿದ್ದಾರೆ. ಅಲ್ಲಿ ಕತ್ತೆಯ ಸಮಾಧಿ ಇದ್ದರೆ, ಇಲ್ಲಿ ಬದುಕಿರುವ ಆಡು ಇದೆ. ಅದು ದೇವರಾಗಿ ಬದಲಾಗುವ ಪರಿಯನ್ನು ವ್ಯಂಗ್ಯದ ಚೌಕಟ್ಟಿನಲ್ಲಿ ಇಡುವ ಉಮೇದು ಅವರದ್ದು. ಗಂಭೀರವಾದ ವಿಷಯವನ್ನು ಹಾಸ್ಯದ ಧಾಟಿಯಲ್ಲಿ ಹೇಳುವುದು ತುಂಬ ಕಷ್ಟ. ಈ ಸಿನಿಮಾ ವಿಷಯದಲ್ಲೂ ಹಾಗೆಯೇ ಆಗಿದೆ.

ಆಡು ಆಕಸ್ಮಿಕವಾಗಿ ಗಾಡ್ ಆಗುವ ಪ್ರಕ್ರಿಯೆ ಅತಿ ಸಿನಿಮೀಯವಾಗಿದೆ. ಇದೊಂದು ಎಳೆಯನ್ನು ಬೆಳೆಸುವ ಹಟಕ್ಕೆ ಚಿತ್ರಕತೆ ಒಳಗಾಗಿದ್ದು, ಹಾರುತ್ತಾ ಸಾಗುವ ಪಟ ಸೂತ್ರ ಹರಿದುಕೊಂಡು ಸಾಗತೊಡಗುವಂತೆ ಭಾಸವಾಗುತ್ತದೆ.

ಆಡಿನ ದೇವಸ್ಥಾನ ಕಟ್ಟುವುದು ಹಾಗೂ ಅದೇ ರಿಯಲ್ ಎಸ್ಟೇಟ್ ಲಾಬಿಯಾಗಿ ಬದಲಾಗುವುದರ ನಡುವಿನ ತಂತು ಸಿನಿಮೀಯ ತರ್ಕಕ್ಕೂ ಹೊರತಾಗಿದೆ. ಕಾಲಕ್ಕೆ ತಕ್ಕಂತೆ ಅನುಕೂಲಸಿಂಧು ಆಗುವ ಮಾತಾ ಎಂಬ ಪಾತ್ರದ ಬರವಣಿಗೆಯಲ್ಲೂ ಸ್ಥಿರತೆ ಇಲ್ಲ. ಆ ಪಾತ್ರ ಕೆಲವೊಮ್ಮೆ ಸಂತ್ರಸ್ತೆ ತರಹ ಕಂಡರೆ, ಕೆಲವೊಮ್ಮೆ ದಗಲಬಾಜಿ ರೀತಿ ವರ್ತಿಸುತ್ತದೆ. ಆಡನ್ನು ದೇವರಾಗಿಸುವ ವಿದ್ಯಮಾನಗಳ ಕಟ್ಟು ಕೂಡ ಬಹುತೇಕ ಕಡೆ ಸಡಿಲವಾಗಿದೆ.

ಪಿ.ಕೆ. ಎಚ್. ದಾಸ್ ಅವರ ಸಿನಿಮಾಟೋಗ್ರಫಿ ಮಿತಿಯ ಚೌಕಟ್ಟಿನಲ್ಲೇ ಸಂಗತಿಗಳನ್ನು ಕಾಣಿಸಲು ಯತ್ನಿಸಿದೆ. ಆದರೆ, ನಡುನಡುವೆ ಮಾಡಿರುವ ಸಣ್ಣಪುಟ್ಟ ಗ್ರಾಫಿಕ್‌ಗಳು ಸತ್ವ ದಾಟುವ ಕುರಿತು ಸೃಜಿಸಿದವರಿಗೆ ಅನುಮಾನ ಇರುವುದನ್ನು ಎತ್ತಿ ತೋರುತ್ತದೆ. ಸಿನಿಮಾದ ಮೊದಲ ಕೆಲವು ದೃಶ್ಯಗಳು ಸಾಗುವ ರೀತಿಯಲ್ಲಿ ಊಹಿಸಲಾಗದ ನಡೆ ಇದೆ. ಮುಂದೆ ಅದೂ ಮಾಯವಾಗಿ, ಬಹುತೇಕ ಘಟನೆಗಳು ಕಪ್ಪು - ಬಿಳುಪು ಧೋರಣೆಯನ್ನು ಕಾಣಿಸುತ್ತವೆ. ಇದೇ ಕೊನೆಕೊನೆಗೆ ಚಿತ್ರಕಥೆಯನ್ನು ಹಿಂಜಿದ್ದಾರೆ ಎನ್ನಿಸಲು ಕಾರಣವಾಗಿದೆ.

ನಟರಾಜ್, ಮಂಜುನಾಥ್ ಜಂಬೆ, ಅಜಿತ್, ಅನೂಪ್ ಅಭಿನಯ ಚೆನ್ನಾಗಿದೆ. ಬಿ. ಸುರೇಶ್ ಅವರೂ ಮುಖ್ಯವಾದ ಗೋಸುಂಬೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಹುತೇಕ ಕಡೆ ಮಾತೇ ಮುಂದಾಗಿ, ಘಟಿಸುವ ಬೆಳವಣಿಗೆಗಳ ದರ್ಶನ ಸಾವಧಾನಕ್ಕೆ ಬೆನ್ನುಮಾಡಿದೆ.

ಧರ್ಮಸೂಕ್ಷ್ಮದ ಸಿನಿಮಾ ಒಂದಕ್ಕೆ 'ಟ್ರಾನ್ಸ್' ಮಲಯಾಳ ಚಿತ್ರ ಒಳ್ಳೆಯ ಉದಾಹರಣೆ. ದೈವ ಹಾಗೂ ಮುಗ್ಧತೆಯ ಮುಖಾಮುಖಿಗೆ 'ಪೀಕೆ' ಹಿಂದಿ ಚಿತ್ರ ಇನ್ನೊಂದು ಮಾದರಿ. ಈ ಯಾವ ಜಾಯಮಾನವೂ ಇಲ್ಲದ ಆಡಿನ ಗಾಡು, ಏರಿಳಿತ ದರ್ಶನದ ಹಾಸ್ಯ ಚಿತ್ರ.

ವಿಶಾಖ ಎನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



© 2014 by King Features Syndicate, Inc. World Rights reserved
www.Blondie.com

ಮನಸ್ಸೇ ಸಾಧನೆಯ ಮೂಲ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಎವರೆಸ್ಟ್ ಅನ್ನು ಪ್ರಪಂಚದಲ್ಲೇ ಎರಡನೆಯವರಾಗಿ ಏರಿದ ಹೆಗ್ಗಳಿಕೆ ನೇಪಾಳದ ತೇನ್ ಸಿಂಗ್ ನೋರ್ಗೆ ಅವರದ್ದು. ಈ ಸಾಧನೆ ಮಾಡಿದ ವಿಶ್ವದ ಮೊದಲಿಗ ನ್ಯೂಜಿಲೆಂಡ್‌ನ ಎಡ್ಮಂಡ್ ಹಿಲರಿಯ ಸಹಾಯಕನಾಗಿದ್ದ ತೇನ್ ಸಿಂಗ್, ಷೆರ್ಪ ಜನಾಂಗಕ್ಕೆ ಸೇರಿದವರು. ಈ ಜನಾಂಗದ ಮಂದಿ ಎಂತಹ ಕಡಿದಾದ ಪರ್ವತವನ್ನೂ ಭಾರಿ ತೂಕ ಹೊತ್ತು ಲೀಲಾಜಾಲವಾಗಿ ಏರುವ ಸಾಮರ್ಥ್ಯ ಹೊಂದಿರುವವರು. ಪರ್ವತಾರೋಹಿಗಳಿಗೆ ಸಹಾಯ ಮಾಡುವುದೇ ಇವರ ಮುಖ್ಯ ಉದ್ಯೋಗ.

ತೇನ್ ಸಿಂಗ್ ಈ ಅತ್ಯದ್ಭುತ ಸಾಧನೆಯನ್ನು ಮಾಡಿದ ನಂತರ ಪತ್ರಿಕಾ ಮಾಧ್ಯಮದವರು ಅವರ ಸಂದರ್ಶನ ಮಾಡುವಾಗ 'ಎವರೆಸ್ಟ್ ಶಿಖರದ ತುತ್ತತುದಿಯನ್ನು ಏರಿ ನಿಂತ ಸಂದರ್ಭದಲ್ಲಿ ನಿಮಗೆ ಏನು ಅನಿಸಿತು' ಎಂದು ಪ್ರಶ್ನಿಸಿದರು. ಆಗ ಅವರು, 'ನನಗೇನು ಅನ್ನಿಸಲಿಲ್ಲ' ಎಂದರು! ಜೊತೆಗೆ 'ನಾನು 10 ವರ್ಷದ ಬಾಲಕನಾಗಿದ್ದಾಗಲೇ ಎವರೆಸ್ಟ್ ಹತ್ತಿ ಬಿಟ್ಟಿದ್ದೆ' ಎಂದೂ ಹೇಳಿದರು!

ಪತ್ರಕರ್ತರು ಈ ಹೇಳಿಕೆಯನ್ನು ವಿವರಿಸುವಂತೆ ಕೇಳಿದಾಗ: 'ನಾನು ಹತ್ತು ವರ್ಷದ ಬಾಲಕನಾಗಿದ್ದಾಗ ನನ್ನ ತಾಯಿಯ ಜೊತೆಗೆ ಎವರೆಸ್ಟ್ ಶಿಖರದ ಬುಡಕ್ಕೆ ಹಸು ಮೇಯಿಸಲು ಹೋಗುತ್ತಿದ್ದೆ. ಆಗ ನನ್ನ ತಾಯಿ ಎವರೆಸ್ಟ್ ಶಿಖರವನ್ನು ತೋರಿಸಿ 'ಮಗು ಇದೇ ಪ್ರಪಂಚದ ಅತ್ಯಂತ ಎತ್ತರದ ಸಾಗರ್ ಮಾತಾ ಶಿಖರ. ಇದನ್ನು ಏರುವ ಮೊದಲಿಗ ಈ ಜಗತ್ತಿನಲ್ಲೇ ನೀನಾಗಬೇಕು' ಎನ್ನುತ್ತಿದ್ದರು. ಹೀಗಾಗಿ 10 ವರ್ಷದ ಬಾಲಕನಾಗಿದ್ದಾಗಲೇ ನಾನು ಮಾನಸಿಕವಾಗಿ ಮೌಂಟ್ ಎವರೆಸ್ಟ್ ಅನ್ನು ಹತ್ತಿ ಬಿಟ್ಟಿದ್ದೇನೆ. ಈಗ ಮಾಡಿರುವುದು ಕೇವಲ ದೈಹಿಕ ಸಾಧನೆ'.

ಯಾವುದೇ ಸಾಧನೆಯ ಮೂಲ ನಮ್ಮ ಮನಸ್ಸು. ಮಾಡಲೇಬೇಕೆಂದು ಅಂದುಕೊಂಡರೆ ಆ ಸಾಧನೆ ಖಂಡಿತ ಸಾಧ್ಯವಾಗುತ್ತದೆ. 'ಅಸಾಧ್ಯ ಎಂಬ ಪದವನ್ನು ನೀವು ನಿಘಂಟಿನಲ್ಲಿ ಮಾತ್ರ ನೋಡಲು ಸಾಧ್ಯ' ಎಂಬುದಾಗಿ ನೆಪೋಲಿಯನ್ ಹೇಳುತ್ತಾರೆ. ಅದಕ್ಕೇ ನಮ್ಮ ಹಿರಿಯರು 'ಮನಸ್ಸಿದ್ದರೆ ಮಾರ್ಗ' ಎಂದು ಹೇಳಿರುವುದು.

ಪ್ರಪಂಚವನ್ನೇ ಗೆಲ್ಲಬೇಕೆಂದು ಚಿಕ್ಕ ಬಾಲಕನಾಗಿದ್ದಾಗಲೇ ಮಾನಸಿಕವಾಗಿ ನಿರ್ಣಯಿಸಿದ್ದ ಅಲೆಕ್ಸಾಂಡರ್ ಆ ಗುರಿಯೆಡೆಗೆ ಅವಿರತ ಪ್ರಯತ್ನ ಮಾಡಿ ಅರ್ಧ ಜಗತ್ತನ್ನೇ ಜಯಿಸಿದ. ದೈಹಿಕ ವೈಕಲ್ಯವನ್ನು ಮೀರಿ ನಿಂತು ಎವರೆಸ್ಟ್ ಶಿಖರವನ್ನು ಏರಿದ ಪ್ರಪಂಚದ ಮೊದಲ ಮಹಿಳೆ ಎಂಬ ಕೀರ್ತಿಗೆ ಪಾತ್ರರಾದ ಭಾರತೀಯ ಮಹಿಳೆ ಅರುಣಿಮಾ ಸಿನ್ಹಾರದ್ದು ಸಹಾ ಇದೇ ತರದ ಪ್ರೇರಣಾದಾಯಕ ಕಥೆ. ರಾಷ್ಟ್ರೀಯ ವಾಲಿಬಾಲ್ ಆಟಗಾರ್ತಿಯಾಗಿದ್ದ ಈಕೆ ದುಷ್ಕರ್ಮಿಗಳ ದಾಳಿಗೆ ತುತ್ತಾಗಿ ಚಲಿಸುವ ರೈಲಿನಿಂದ ಕೆಳಗೆ ಬಿದ್ದು ತನ್ನ ಒಂದು ಕಾಲನ್ನೇ ಕಳೆದುಕೊಳ್ಳುತ್ತಾರೆ. ಆದರೆ ನಂತರ ಕೃತಕ ಕಾಲನ್ನು ಜೋಡಿಸಿಕೊಂಡು ಎವರೆಸ್ಟ್ ಹತ್ತಲೇಬೇಕೆಂಬ ಛಲದಿಂದ ನಿರಂತರ ಅಭ್ಯಾಸ ಮಾಡಿ, ಎವರೆಸ್ಟ್ ಏರಿ ದಾಖಲೆ ಸ್ಥಾಪಿಸುತ್ತಾರೆ. ಹೀಗಾಗಿ ಸಾಧನೆಯ ಪ್ರಾರಂಭಿಕ ಹೆಜ್ಜೆ, ಸಾಧಿಸಲೇ ಬೇಕೆಂಬ ಸಂಕಲ್ಪವನ್ನು ಮನದಲ್ಲಿ ಮಾಡುವುದೇ ಆಗಿದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಅಕ್ಟೋಬರ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದಶಮಿ ಗಂ. 12-37 ನಕ್ಷತ್ರ: ಆಶ್ಲೇಷ ಗಂ. 29-45 ಯೋಗ: ಸಿದ್ಧ ಗಂ 06-50 ಕರಣ: ವಿಷ್ಟಿ ಗಂ. 12-37, ಕನ್ಯಾ ಮಾಸದ 22 ನೇ ದಿನ, ಮಳೆನಕ್ಷತ್ರ: ಹಸ್ತ 4.
ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-24 ಸೂರ್ಯಾಸ್ತ : 06-12
ಮುಸ್ಲಿಂ ದಿನಾಂಕ : 23 ರಬಿಉಲ್ಲಾವಲ್,
ಅದೃಷ್ಟ ಸಂಖ್ಯೆ : 9, 3

ಮೇಷ: ಅಂಕಣಕಾರರಿಗೆ ಅಥವಾ ವೃತ್ತಿ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆತು ಆದಾಯ ವೃದ್ಧಿಗೊಳ್ಳಲಿದೆ. ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯವಾಗಿದೆ. ಸಾಧನೆಯ ಫಲವಾಗಿ ಆತ್ಮವಿಶ್ವಾಸ ಹೆಚ್ಚುವುದು.

ವೃಷಭ: ತಾಂತ್ರಿಕ ವಿದ್ಯೆಯನ್ನು ವ್ಯಾಸಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸಿ ಸಂತೋಷವಾಗುವುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಚಿಸಿ ಕ್ರಮ ಕೈಗೊಳ್ಳುವುದು ಉತ್ತಮ. ಚಿತ್ರಕಲೆಯಲ್ಲಿ ಆಸಕ್ತಿ ಮೂಡುವುದು.

ಮಿಥುನ: ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶ ಎದುರಾದಲ್ಲಿ ಸದುಪಯೋಗ ಪಡಿಸಿಕೊಳ್ಳಿ. ಒಪ್ಪಂದ ಹಾಗೂ ಹಣದ ಹೂಡಿಕೆ ಈ ದಿನ ಮಾಡದಿರುವುದು ಒಳ್ಳೆಯದು. ಅಬಕಾರಿ ಗುತ್ತಿಗೆದಾರರಿಗೆ ಆದಾಯ ಹೆಚ್ಚಳ.

ಕರ್ಕಾಟಕ: ಜೀವನದಲ್ಲಿ ಮಹತ್ತರ ಬದಲಾವಣೆಯಾಗುವ ಸೂಚನೆಗಳು ಗಮನಕ್ಕೆ ಬರಲಿದೆ. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು. ಸರ್ಕಾರದ ಕೆಲಸದಲ್ಲಿ ಜಯ ಸಿಗಲಿದೆ.

ಸಿಂಹ: ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ಹೊಣೆಗಾರಿಕೆ ಹೊರಲು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ.

ಕನ್ಯಾ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆ ಇತರರ ದುರ್ಬುದ್ಧಿಯಿಂದ ವ್ಯತ್ಯಾಸಗೊಳ್ಳುತ್ತದೆ. ವ್ಯವಹಾರದ ವಿಸ್ತರಣೆಗೆ ಸ್ನೇಹಿತರಿಂದ ಉತ್ತಮ ಸಹಾಯವಿರುವುದು. ಆದಾಯ ಕೂಡಿ ಬರಲಿದೆ.

ತುಲಾ: ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ ಅಥವಾ ರಾಜಕೀಯ ಕ್ಷೇತ್ರದಲ್ಲಿ ಸ್ಥಾನ-ಮಾನ, ಗೌರವಗಳು, ಪುರಸ್ಕಾರ ಲಭಿಸಲಿದೆ. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ.

ವೃಶ್ಚಿಕ: ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ. ಜನರಿಗೆ ಮಾರ್ಗದರ್ಶನ ಮಾಡುವ ವ್ಯಕ್ತಿಯಾಗಿ ನೇಮಕಗೊಳ್ಳುವ ಯೋಗವಿದೆ. ಧಾರ್ಮಿಕ ಕೆಲಸಗಳನ್ನು ಉತ್ತಮವಾಗಿ ಮಾಡುವಿರಿ.

ಧನು: ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗಾವಣೆಯಾಗುವುದು. ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ನೂತನ ವಾಹನ ಖರೀದಿಯ ಯೋಗವಿದೆ.

ಮಕರ: ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ಪ್ರಥಮ ದರ್ಜೆಯ ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿದೆ. ಹೂವು ಹಣ್ಣು ವ್ಯಾಪಾರಿಗಳಿಗೆ ಲಾಭ.

ಕುಂಭ: ದೈಹಿಕ ಮತ್ತು ಆರ್ಥಿಕ ಶಕ್ತಿಯನ್ನು ವ್ಯಯಿಸದೇ ಸಮಯಕ್ಕಾಗಿ ಕಾದು ಸಿಕ್ಕ ಸಮಯದಲ್ಲಿ ಕಾರ್ಯವೆಸಗುವ ಚಾಣಾಕ್ಷತನ ಇರುವುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ.

ಮೀನ: ಗ್ರಹಗಳು ಪೂರಕವಾಗಿದೆ, ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು ಈ ಫಲವನ್ನು ಸದುಪಯೋಗಪಡಿಸಿಕೊಳ್ಳಿರಿ. ಉದ್ಯೋಗದಲ್ಲಿ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವ ಸಂದರ್ಭ ಒದಗಿ ಬರಲಿದೆ.

ಪದಬಂಧ 5465

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಭೆಯಲ್ಲಿರುವ ಸದಸ್ಯ (4)
3.ಹಾಳಾಗುವಂಥದ್ದು ನರನಲ್ಲಿದೆ (3)
4.ಆಯುಧಗಳನ್ನಿಡುವ ಕಟ್ಟಡ (4)
6.ಇಪ್ಪತ್ನಾಲ್ಕು ಗಂಟೆಗಳ ಅವಧಿ (2)
8.ನೀರು ಧುಮ್ಮಿಕ್ಕುವ ಸ್ಥಳ (4)
9.ಎಡಬಿಡದೆ ಸುರಿಯುವ ಮಳೆ (4)
10.ಶಯನ ಸಮಯದಲ್ಲಿ ಸಿಕ್ಕಿರುವ ಕೀರ್ತಿ! (2)
12.ಹಿಡಿತದಿಂದ ಖರ್ಚು ಮಾಡುವಿಕೆ (4)
14.ಈತ ಹಣವಿಲ್ಲದವ (3)
15.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ಸರ ಪಡೆಯಲು ಹಚ್ಚಿರುವ ಪಾಳಿ! (3)
2.ಹತ್ತು ಸಂಖ್ಯೆಯಿದು (2)
3.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
5.ಬೆಳ್ಳಿ ಹಬ್ಬವನ್ನು ಹೀಗೆ ಹೇಳಿ (7)
7.ತುಂಬಾ ನಾಜೂಕಿನ ಎಳೆ (4)
8.ನೀರಿಗೆ ಆಶ್ರಯವಾದುದು (4)
11.ಶರವನ್ನು ಹಿಡಿದಿರುವ ಬೇಡ (3)
13.ಮೃತ್ಯು ದೇವತೆಯಿದು (2)



5464ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಮಂಡಲ
3.ಸಗೋತ್ರ 5.ಪುಳಕ
7.ಉದಯ 8.ಸಮೂಹಗಾನ
11.ಶರಣೆ 12.ಕುಲುಮೆ
15.ಕಂದರ 16.ನವಬಾಳು

ಮೇಲಿಂದ ಕೆಳಕ್ಕೆ:
1.ಕದಪು 2.ಲಜ್ಜೆ
3.ಸಮಯ 4.ತ್ರಯೋದಶಿ
6.ಕಳಶ 7.ಉದಾಹರಣೆ
9.ನಸುಕು 10.ವರಠೀಕಂ
11.ಶರೀರ 13.ಮೆದುಳು
14.ಮೌನ

ಸುಡೊಕು 5851

8	3		6		2		4	
6		2				8		
			3		9		1	
4		8			5		2	
				1		4		7
2		5	4				6	
	5		8		3		9	
7		3				6		5
	8		7		6		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5850 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

ಲೋಪವಿದ್ದರೂ ಲೈಸೆನ್ಸ್‌ಗೆ ಶಿಫಾರಸು • 1 ಸಾವಿರ ಕೆ.ಜಿ ಪಟಾಕಿ ಸಂಗ್ರಹಕ್ಕೆ ಅನುಮತಿ ನೀಡಿದ್ದ ಜಿಲ್ಲಾಧಿಕಾರಿ

ಲಂಚದ ಆಸೆಗೆ ನಿಯಮ ಮೀರಿ ಎನ್‌ಒಸಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಟಾಕಿ ದುರಂತ ಸಂಭವಿಸಿರುವ ಅತ್ತಿಬೆಲೆಯ 'ಶ್ರೀ ಬಾಲಾಜಿ ಟ್ರೇಡರ್ಸ್' ಮಳಿಗೆಯಲ್ಲಿ ಸಾಕಷ್ಟು ಲೋಪವಿದ್ದರೂ ಅಧಿಕಾರಿಗಳು ಪರವಾನಗಿ ನೀಡಿದ್ದ ಸಂಗತಿ ಪೊಲೀಸರ ವಿಶೇಷ ತಂಡದ ತನಿಖೆಯಿಂದ ಗೊತ್ತಾಗಿದೆ.

ಕರ್ನಾಟಕ ಹಾಗೂ ತಮಿಳುನಾಡು ಗಡಿಯಲ್ಲಿರುವ ಅತ್ತಿಬೆಲೆಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ 'ಶ್ರೀ ಬಾಲಾಜಿ ಟ್ರೇಡರ್ಸ್' ಮಳಿಗೆ ಹಾಗೂ ಗೋದಾಮು ತೆರೆಯಲಾಗಿತ್ತು. ಉದ್ಯಮಿ ನವೀನ್ ರೆಡ್ಡಿ ತನ್ನ ಹಾಗೂ ತಂದೆ ರಾಮಸ್ವಾಮಿ ರೆಡ್ಡಿ ಅವರ ಹೆಸರಿನಲ್ಲಿ ಪಟಾಕಿ ವ್ಯವಹಾರ ನಡೆಸಲು ಪರವಾನಗಿ ಪಡೆದಿದ್ದರು.

ತಾತ್ಕಾಲಿಕವಾಗಿ ಪರವಾನಗಿ ನೀಡುವ ಅಧಿಕಾರ ಜಿಲ್ಲಾಧಿಕಾರಿಗೆ ಇದೆ. ಹಲವು ದಿನಗಳಿಂದ ಪರವಾನಗಿ ನೀಡುವ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದೆ. ಪರವಾನಗಿ ನೀಡುವಾಗ ಅಗ್ನಿಶಾಮಕ ದಳ, ಸ್ಥಳೀಯ ಪೊಲೀಸ್ ಠಾಣೆ, ಬೆಸ್ಕಾಂ ಅಧಿಕಾರಿಗಳು ಹಾಗೂ ಪುರಸಭೆ ಅಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದು ಕಡ್ಡಾಯ. ಜತೆಗೆ, ಸ್ಥಳದ ಸುರಕ್ಷತೆ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿ ನೀಡಿದ ವರದಿ ಅನ್ವಯ ಪ್ರಕ್ರಿಯೆ ಮುಂದುವರಿಸಲು ನಿಯಮವಿದೆ. ಈ ನಿಯಮಗಳನ್ನು ಗಾಳಿಗೆ ತೂರಿರುವ ರಾಮಸ್ವಾಮಿ ರೆಡ್ಡಿ-ನವೀನ್ ರೆಡ್ಡಿ, ಎಲ್ಲ ಇಲಾಖೆಗಳಿಂದ ಎನ್‌ಒಸಿ ಪಡೆದು ಅಧಿಕೃತವಾಗಿ ಪರವಾನಗಿ ಪಡೆದುಕೊಂಡಿದ್ದಾರೆ. ಕೆಲ ಅಧಿಕಾರಿಗಳು, ಲಂಚದ ಆಸೆಗಾಗಿ 'ಎನ್‌ಒಸಿ' ಮಾರಾಟ ಮಾಡಿರುವ ಆರೋಪವೂ ಕೇಳಿಬರುತ್ತಿದೆ.

'ಮಳಿಗೆ ಅಕ್ಕ-ಪಕ್ಕದಲ್ಲಿ ಹೋಟೆಲ್-ಬಾರ್ ಆ್ಯಂಡ್ ರೆಸ್ಟೋರೆಂಟ್ ಇದೆ. ಬೀಡಿ ಅಂಗಡಿಗಳೂ ಇವೆ. ಇದೇ ಸ್ಥಳದಲ್ಲಿ ಪಟಾಕಿ ಮಳಿಗೆ ಪರವಾನಗಿ ನೀಡಲಾಗಿದೆ. ಮಾಲೀಕರಿಗೆ ಸ್ಥಳೀಯ ಅಧಿಕಾರಿಗಳ ಬೆಂಬಲವೂ ಇತ್ತು' ಎಂದು ಅತ್ತಿಬೆಲೆಯಲ್ಲಿರುವ ಪಟಾಕಿ ವ್ಯಾಪಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮಾರಾಟಕ್ಕೆ ಮಾತ್ರ ಪರವಾನಗಿ ಪಡೆದಿರುವ ಮಾಲೀಕರು, ದೊಡ್ಡ ಬಾಕ್ಸ್‌ಗಳಲ್ಲಿರುತ್ತಿದ್ದ ಪಟಾಕಿಗಳನ್ನು ಸಣ್ಣ ಬಾಕ್ಸ್‌ಗಳಲ್ಲಿ ಇರಿಸಿ ರೀ ಪ್ಯಾಕಿಂಗ್ ಸಹ ಮಾಡುತ್ತಿದ್ದರು. ಇದಕ್ಕಾಗಿ ತಮಿಳುನಾಡಿನ ಕಾರ್ಮಿಕರನ್ನು ಬಳಸಿಕೊಳ್ಳುತ್ತಿದ್ದರು' ಎಂದರು.

'ಲಕ್ಷ ಲಕ್ಷ ಹಣ ನೀಡಿದವರಿಗಷ್ಟೇ ಪಟಾಕಿ ಮಳಿಗೆ ತೆರೆಯಬಹುದೆಂಬ ಸ್ಥಿತಿ ಇದೆ. ಕೆಲ ಅಧಿಕಾರಿಗಳು ಒಂದು ಎನ್‌ಒಸಿಗೆ ₹ 50 ಸಾವಿರದಿಂದ ₹1 ಲಕ್ಷದವರೆಗೂ ಪಡೆಯುತ್ತಾರೆ. ಎಲ್ಲರಿಗೂ ಹಣ ಕೊಟ್ಟು ಪರವಾನಗಿ ಪಡೆದು ವ್ಯಾಪಾರ ಮಾಡಬೇಕು. ವ್ಯಾಪಾರ ಆಗದಿದ್ದರೆ, ನಷ್ಟ ಖಚಿತ. ಲಂಚಕ್ಕೆ ಹೆದರಿ ಈ ವರ್ಷ ಪಟಾಕಿ ಅಂಗಡಿ ಮುಚ್ಚಿದ್ದೇನೆ' ಎಂದರು.

ಎರಡು ಪರವಾನಗಿ: ಶ್ರೀ ಬಾಲಾಜಿ ಟ್ರೇಡರ್ಸ್ ಹೆಸರಿನಲ್ಲಿ ಪಟಾಕಿ ವ್ಯವಹಾರ ನಡೆಸಲು ಎರಡು ಪ್ರತ್ಯೇಕ ಪರವಾನಗಿ ನೀಡಲಾಗಿದೆ. 2021ರ ಜನವರಿ 18ರಿಂದ 2026ರ ಜನವರಿ 28ರವರೆಗಿನ ಅವಧಿಗೆ ಒಂದು, 2023ರ ಸೆಪ್ಟೆಂಬರ್ 13ರಿಂದ 2028ರ ಅಕ್ಟೋಬರ್ 31ರವರೆಗಿನ ಅವಧಿಗೆ ಮತ್ತೊಂದು ಪರವಾನಗಿ ನೀಡಲಾಗಿದೆ. ಒಂದೇ ಮಳಿಗೆಗೆ ಎರಡು ಪರವಾನಗಿ ನೀಡಿರುವುದು ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಎಚ್‌ಎಸ್‌ಆರ್ ಲೇಔಟ್ ನಿವಾಸಿ ಜಯಮ್ಮ ಹಾಗೂ ಅವರ ಮಗ ಅನಿಲ್ ರೆಡ್ಡಿ ಹೆಸರಿನಲ್ಲಿ ಜಾಗವಿದೆ. ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದ ರಾಮಸ್ವಾಮಿ ಹಾಗೂ ನವೀನ್, ಮಳಿಗೆಗೆ ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ್ದರೆಂಬುದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.

ಮಳಿಗೆ ವಿನ್ಯಾಸ ಅವೈಜ್ಞಾನಿಕ: 'ಮಳಿಗೆಯ ವಿನ್ಯಾಸವೇ ಅವೈಜ್ಞಾನಿಕವಾಗಿದ್ದು, ಇದರಿಂದಾಗಿಯೇ ಮಳಿಗೆಯಿಂದ ಹೊರಬರಲಾಗದೇ ಕೆಲ ಕಾರ್ಮಿಕರು ಮೃತಪಟ್ಟಿರುವುದಾಗಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸಿಮೆಂಟ್ ಬ್ರಿಕ್ಸ್‌ಗಳನ್ನು ಬಳಸಿ ಸುತ್ತಲು ಗೋಡೆಗಳನ್ನು ನಿರ್ಮಿಸಿ, ಚಾವಣಿಯಲ್ಲಿ ತಗಡಿನ ಶೀಟ್‌ಗಳನ್ನು ಹಾಕಲಾಗಿತ್ತು. ರಾಷ್ಟ್ರೀಯ ಹೆದ್ದಾರಿ ಕಡೆ ಒಂದೇ ಶಟರ್ ಇತ್ತು. ಹಿಂಭಾಗದಲ್ಲಿ ಸಣ್ಣದೊಂದು ಬಾಗಿಲು ಇದ್ದರೂ ಅದನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಉಳಿದಂತೆ ಅಂಗಡಿಯೊಳಗೆ ಕಪಾಟುಗಳನ್ನು ನಿರ್ಮಿಸಿ, ಎಲ್ಲ ಕಡೆಯೂ ಪಟಾಕಿ ಬಾಕ್ಸ್‌ಗಳನ್ನು ಸಂಗ್ರಹಿಸಿಡಲಾಗಿತ್ತು' ಎಂದು ಅವರು ತಿಳಿಸಿದರು.

'ತುರ್ತು ಸಂದರ್ಭದಲ್ಲಿ ಹೊರಗೆ ಹೋಗಲು ಶಟರ್ ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ. ಶನಿವಾರ ಶಟರ್ ಭಾಗದಿಂದಲೇ ಬೆಂಕಿ ಹೊತ್ತಿಕೊಂಡಿತ್ತು. ಹೀಗಾಗಿ, ಕಾರ್ಮಿಕರು ಹೊರಗೆ ಬರಲು ಸಾಧ್ಯವಾಗದೇ ಒಳಗೆ ಸಿಲುಕಿ ಮೃತಪಟ್ಟಿದ್ದಾರೆ' ಎಂದು ಹೇಳಿದರು.

ಸುಮಾರು 10 ಟನ್ ಪಟಾಕಿ ಸಂಗ್ರಹ: '1,000 ಕೆ.ಜಿ ಪಟಾಕಿ ಸಂಗ್ರಹಿಸಲು ಮಾತ್ರ ಜಿಲ್ಲಾಧಿಕಾರಿಯು ಮಾಲೀಕರಿಗೆ ಪರವಾನಗಿ ನೀಡಿದ್ದರು. ಆದರೆ, ಮಳಿಗೆಯಲ್ಲಿ ಸುಮಾರು 10 ಟನ್ ಪಟಾಕಿ ಸಂಗ್ರಹಿಸಿಡಲಾಗಿತ್ತೆಂಬ ಮಾಹಿತಿ ಲಭ್ಯವಾಗಿದೆ' ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

ರಕ್ಷಣಾ ಕಾರ್ಯಾಚರಣೆ ಸಂದರ್ಭದಲ್ಲಿ 'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, '10x10 ಅಡಿ ಜಾಗದಲ್ಲಿ ಮಾತ್ರ ಪಟಾಕಿ ಸಂಗ್ರಹಕ್ಕೆ ಅನುಮತಿ ಇದೆ. ಆದರೆ, 40 x 150 ಅಡಿ ಜಾಗದಲ್ಲಿ ಬಾಲಾಜಿ ಟ್ರೇಡರ್ಸ್ ಮಳಿಗೆ ಇತ್ತು. ಜೊತೆಗೆ, ಅದರಲ್ಲೇ ಗೋದಾಮು ಮಾಡಲಾಗಿತ್ತು. 30 ಕಾರ್ಮಿಕರು ಕೆಲಸ ಮಾಡುತ್ತಿದ್ದು. ಮಳಿಗೆ ಎದುರು ವಿದ್ಯುತ್ ತಂತಿ ಇತ್ತು. ಎಲ್ಲ ಸಂಗತಿಗಳನ್ನು ಗಮನಿಸಿದಾಗ ಇದೊಂದು ಅಕ್ರಮ ಮಳಿಗೆ ಎಂಬುದು ಗೊತ್ತಾಗುತ್ತದೆ' ಎಂದು ತಿಳಿಸಿದರು.

ಬೆಂಗಳೂರು ಹೊರವಲಯದಲ್ಲಿರುವ ಅತ್ತಿಬೆಲೆ ಹತ್ತಿರ ಪಟಾಕಿ ಗೋದಾಮಿನಲ್ಲಿ ಶನಿವಾರ ಸಂಭವಿಸಿದ ಬೆಂಕಿ ದುರಂತದಲ್ಲಿ ಸುಟ್ಟು ಕರಕಲು ಆಗಿರುವ ಅವಶೇಷಗಳನ್ನು ಪೊಲೀಸ್ ಅಧಿಕಾರಿ ಪರಿಶೀಲನೆ ನಡೆಸಿದರು –ಪ್ರಜಾವಾಣಿ ಚಿತ್ರ

'ತನಿಖೆಯಾದರೆ ಅಧಿಕಾರಿಗಳ ಲಂಚಾವತಾರ ಬಯಲು'

'ಅತ್ತಿಬೆಲೆ ಸುತ್ತಮುತ್ತ 500 ಕ್ಕೂ ಹೆಚ್ಚು ಪಟಾಕಿ ಅಂಗಡಿಗಳಿವೆ. ನಿಯಮಬದ್ಧವಾಗಿ ಮಳಿಗೆ ತೆರೆಯಲು ಸಾಧ್ಯವೇ ಇಲ್ಲ. ಎಲ್ಲರೂ ಲಂಚ ಕೊಟ್ಟೇ ಪರವಾನಗಿ ಪಡೆದುಕೊಂಡಿದ್ದಾರೆ. ಸೂಕ್ತ ತನಿಖೆ ನಡೆದರೆ, ಅಧಿಕಾರಿಗಳ ಲಂಚಾವತಾರ ಹೊರಕ್ಕೆ ಬರುತ್ತದೆ' ಎಂದು ಸ್ಥಳೀಯ ವ್ಯಾಪಾರಿ 'ಪ್ರಜಾವಾಣಿ'ಗೆ ಹೇಳಿದರು.

'ಬೆಂಕಿ ದುರಂತ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿರುವುದು ಸೂಕ್ತ. ಅಗ್ನಿಶಾಮಕ ದಳ, ಸ್ಥಳೀಯ ಪೊಲೀಸ್ ಠಾಣೆ, ಬೆಸ್ಕಾಂ ಅಧಿಕಾರಿಗಳು ಹಾಗೂ ಪುರಸಭೆ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಬೇಕು. ತಪ್ಪಿತಸ್ಥರನ್ನು ಪತ್ತೆ ಮಾಡಿ ಶಿಕ್ಷೆಗೆ ಗುರಿಪಡಿಸಬೇಕು. ಆಗ ಬಡ ಕಾರ್ಮಿಕರ ಸಾವಿಗೆ ನ್ಯಾಯ ಸಿಗುತ್ತದೆ' ಎಂದರು.

ಅನುಮತಿ ನೀಡಿರುವ ಪರವಾನಗಿ ಹಾಗೂ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವ ಪರವಾನಗಿ ಮಾಹಿತಿ ಬೇರೆ ಬೇರೆ ಯಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು

ಕೆ.ಎ. ದಯಾನಂದ್, ಬೆಂಗಳೂರು ನಗರ ಜಿಲ್ಲಾಧಿಕಾರಿ

'ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ'

ಬೆಂಗಳೂರು: ಅತ್ತಿಬೆಲೆ ಪಟಾಕಿ ದುರಂತಕ್ಕೆ ಸ್ಥಳೀಯ ಜಿಲ್ಲಾಡಳಿತದ ನಿರ್ಲಕ್ಷ್ಯವೇ ಕಾರಣ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹಣಕ್ಕಾಗಿ ಅಕ್ರಮ ಲೈಸೆನ್ಸ್ ಕೊಡುವುದು, ಅಕ್ರಮವಾಗಿ ಶೇಖರಣೆಗೆ ಅವಕಾಶ ಮಾಡಿ ಕೊಟ್ಟಿರುವುದರಿಂದ ದೊಡ್ಡ ದುರಂತ ಆಗಿದೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡರೆ ಅನಾಹುತಗಳು ತಪ್ಪಲಿವೆ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು. ರಾಜ್ಯದಲ್ಲಿ ಪಟಾಕಿ ನಿರ್ವಹಣೆಯ ನಿಯಮಗಳ ಪಾಲನೆ ಆಗುತ್ತಿಲ್ಲ. ಅಧಿಕಾರಿಗಳು ನಿರ್ಲಕ್ಷ್ಯ ತಾಳಿದ್ದಾರೆ. ಇಷ್ಟು ದೊಡ್ಡ ದುರಂತ ಆಗಿದ್ದು, ಸರ್ಕಾರ ಕಣ್ತೆರೆಯದಿದ್ದರೆ ಇನ್ನಷ್ಟು ದುರಂತಗಳು ನಡೆಯಲಿವೆ ಎಂದರು.

'ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ'

'ಪಟಾಕಿ ಮಳಿಗೆ ತೆರೆಯಲು ಪಡೆದಿದ್ದ ಪರವಾನಗಿ ಹಾಗೂ ಅದನ್ನು ನೀಡಲು ಅನುಸರಿಸಿದ್ದ ಪ್ರಕ್ರಿಯೆ ಬಗ್ಗೆ ತನಿಖೆ ನಡೆಸಲಾಗುವುದು. ಪೊಲೀಸ್, ಕಂದಾಯ, ಅಗ್ನಿಶಾಮಕ, ಪುರಸಭೆ ಹಾಗೂ ಇತರೆ ಯಾರೇ ಅಧಿಕಾರಿಗಳು ತಪ್ಪು ಎಸಗಿದ್ದು ಕಂಡುಬಂದರೆ, ಅವರೆಲ್ಲರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ಹೇಳಿದರು.

ಘಟನಾ ಸ್ಥಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಕ್ರಮವಾಗಿ ಗೋದಾಮು ತೆರೆದಿದ್ದರು ಎಂಬುದು ಪ್ರಾಥಮಿಕವಾಗಿ ಕಂಡುಬರುತ್ತಿದೆ. ಯಾವೆಲ್ಲ ಅಧಿಕಾರಿಗಳು ಒಪ್ಪಿಗೆ ನೀಡಿದ್ದರು ಎಂಬ ಮಾಹಿತಿ ಕಲೆಹಾಕಲಾಗುವುದು' ಎಂದರು.

'ಸುರಕ್ಷತಾ ಕ್ರಮವಿಲ್ಲದ ಗೋದಾಮು'

'ಗೋದಾಮಿನಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಪರವಾನಗಿ ಪಡೆದಿದ್ದವರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಘಟನಾ ಸ್ಥಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅಗ್ನಿಶಾಮಕ ದಳ ಹಾಗೂ ಪೊಲೀಸರಿಂದ ನಿರಾಕ್ಷೇಪಣಾ ಪತ್ರ ಪಡೆದು ಪರವಾನಗಿ ನೀಡಿರುವುದಾಗಿ ಜಿಲ್ಲಾಧಿಕಾರಿ ಹೇಳಿದ್ದಾರೆ. ಆದರೆ, ಜಿಲ್ಲಾಧಿಕಾರಿಯವರು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಬೇಕಾಗಿತ್ತು. ನಿರಾಕ್ಷೇಪಣಾ ಪತ್ರ ನೀಡಿದವರು ಸಹ 'ನಿಯಮಗಳ ಅನ್ವಯ ಮಳಿಗೆ ಇದೆಯೇ' ಎಂಬುದನ್ನು ಪರಿಶೀಲಿಸಬೇಕಿತ್ತು. ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆ' ಎಂದರು.

ಸುದ್ದಿ 2 ನಿಮಿಷ

'ಸಮಗ್ರ ತನಿಖೆ ನಡೆಸಿ'

ರಾಮನಗರ: 'ಅತ್ತಿಬೆಲೆ ಪಟಾಕಿ ದುರಂತದ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಮಾಯಕರ ಸಾವಿಗೆ ನ್ಯಾಯ ಕೊಡಿಸಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾರ್ಮಿಕರು ಮೃತಪಟ್ಟಿರುವ ಘಟನೆ ಬಹಳ ನೋವುಂಟು ಮಾಡಿದೆ. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದರು.

'ಪಟಾಕಿ ದಾಸ್ತಾನು ಮತ್ತು ತಯಾರಿಕೆಯು ಜನನಿಬಿಡ ಪ್ರದೇಶದಿಂದ ದೂರವಿರುವಂತೆ ನೋಡಿಕೊಳ್ಳಬೇಕು' ಎಂದು ಹೇಳಿದರು.

ಸಿಎಂ–ಎಚ್‌ಡಿಡಿ ಭೇಟಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಅನಿರೀಕ್ಷಿತವಾಗಿ ಭೇಟಿಯಾದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಲು ವಿಮಾನ ನಿಲ್ದಾಣಕ್ಕೆ ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಂಗಳೂರಿಗೆ ತೆರಳಲು ಬಂದಿದ್ದ ದೇವೇಗೌಡ ಮತ್ತು ಅವರ ಪತ್ನಿ ಚನ್ನಮ್ಮ ಮುಖಾಮುಖಿಯಾದರು.

ದೇವೇಗೌಡ ಮತ್ತು ಚನ್ನಮ್ಮ ಅವರ ಆರೋಗ್ಯ ವಿಚಾರಿಸಿದ ಮುಖ್ಯಮಂತ್ರಿ, ಕೆಲಹೊತ್ತು ದೇವೇಗೌಡರ ಜೊತೆ ಕುಶಲೋಪರಿ ಮಾತುಕತೆ ನಡೆಸಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಕೂಡಾ ಇದ್ದರು.

ನಿರ್ಗತಿಕರಿಗೆ ಆಶ್ರಮ ನಡೆಸುತ್ತಿದ್ದ ರಮೇಶ್ ನಿಧನ

ಮಡಿಕೇರಿ: ನಿರ್ಗತಿಕರಿಗಾಗಿ ಇಲ್ಲಿನ ಸುಂಟಿಕೊಪ್ಪ ಸಮೀಪದ ಏಳನೇ ಹೊಸಕೋಟೆ ಗ್ರಾಮದ ತೊಂಡೂರು ತೋಟದಲ್ಲಿ 'ಜೀವನದಾರಿ' ಆಶ್ರಮ ನಡೆಸುತ್ತಿದ್ದ ಇಲ್ಲಿನ ರಾಣಿಪೇಟೆ ನಿವಾಸಿ ಎಚ್.ಕೆ.ರಮೇಶ್ (42) ಭಾನುವಾರ ನಸುಕಿನಲ್ಲಿ ನಿಧನರಾದರು.

ಕೆಲದಿನದ ಹಿಂದೆ ಮನೆಯಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಉಂಟಾಗಿದ್ದ ಬೆಂಕಿ ಅವಘಡದಲ್ಲಿ ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಾಯಗೊಂಡಿರುವ ಅವರ ಪತ್ನಿ ರೂಪಾ (36), ತಂದೆ ಕರಿಯಪ್ಪ (82) ಅವರಿಗೆ ಚಿಕಿತ್ಸೆ ಮುಂದುವರಿದಿದೆ.

ರಮೇಶ್ ಅವರಿಗೆ ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ ಮಡಿಕೇರಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅನಾಥರಾದ 36 ಮಂದಿ ನಿರ್ಗತಿಕರು!: ವಿಕಾಸ್ ಜನಸೇವಾ ಟ್ರಸ್ಟ್ ಆರಂಭಿಸಿದ್ದ ರಮೇಶ್ ರಸ್ತೆ ಬದಿಯಲ್ಲಿ ಮಲಗುತ್ತಿದ್ದ ನಿರ್ಗತಿಕರಿಗೆ ಆಶ್ರಯ ಕಲ್ಪಿಸುತ್ತಿದ್ದರು. ಅಸಹಾಯಕ ವೃದ್ಧರು, ಅಂಗವಿಕಲರು, ಅಂಧರನ್ನು ಕರೆ ತಂದು ಉಚಿತವಾಗಿ ಊಟ, ಚಿಕಿತ್ಸೆ ಒದಗಿಸುತ್ತಿದ್ದರು.

ಸದ್ಯ, ಈ ಆಶ್ರಮದಲ್ಲಿ 36 ಮಂದಿ ಇದ್ದಾರೆ. ತಮ್ಮನ್ನು ಆರೈಕೆ ಮಾಡುತ್ತಿದ್ದ ವ್ಯಕ್ತಿಯನ್ನು ಕಳೆದುಕೊಂಡು ಅವರು ಮತ್ತೆ ಅನಾಥರಾಗಿದ್ದಾರೆ. ಪಾರ್ಥಿವ ಶರೀರವನ್ನು ಆಶ್ರಮಕ್ಕೆ ತಂದಾಗ ಅಲ್ಲಿದ್ದವರೆಲ್ಲರ ಕಣ್ಣಾಲಿಗಳು ತುಂಬಿಬಂದವು.

ರಮೇಶ್ ಅವರಿಗೆ 'ಪ್ರಜಾವಾಣಿ ಸಾಧಕರು 2023' ಪ್ರಶಸ್ತಿ ಸಂದಿತ್ತು. ಇತರ ಸಂಘ– ಸಂಸ್ಥೆಗಳ ಸನ್ಮಾನಕ್ಕೂ ಅವರು ಪಾತ್ರವಾಗಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	101.20	3,682	3,719
ಹಾರಂಗಿ	2,859	2,856.09	2,240	1,150
ಕಬಿನಿ	2284.00	2,276.65	1972	1,000
ಹೇಮಾವತಿ	2,922	2,900.43	1,634	1,360
ಲಿಂಗನಮಕ್ಕಿ	1,819	1,788.05	3,045	5,897.80
ಸೂಪಾ (ಮೀ)	564	546.24	2,903	5,368
ಮಾಣಿ	595	581.36	445	702
ತುಂಗಭದ್ರಾ	1,633	1,616.28	2,075	9,356
ಮಲಪ್ರಭಾ	2,079.5	2,064.09	-	194
ಘಟಪ್ರಭಾ	2,175	2,170.95	2,039	188
ಭದ್ರಾ	186	158.20	663	2,862
ಆಲಮಟ್ಟಿ (ಮೀ)	519.6	519.14	11,901	605
ನಾರಾಯಣಪುರ (ಮೀ)	492.25	490.98	-	3,076

* ನೆಲಮಟ್ಟದಿಂದ

ಮಣಿಪುರದಲ್ಲಿ ಗ್ರೆನೇಡ್ ದಾಳಿ: ಇಬ್ಬರಿಗೆ ಗಾಯ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯ ಯುಮ್ನಮ್ ಲೈಕೈ ಪ್ರದೇಶದಲ್ಲಿರುವ ಸಚಿವ ಖೇಮಚಂದ್ ಯುಮ್ನಮ್ ಅವರ ನಿವಾಸದ ಬಳಿ ಗ್ರೆನೇಡ್ ಸ್ಫೋಟಗೊಂಡು ಸಿಆರ್‌ಪಿಎಫ್ ಯೋಧ ಸೇರಿ ಇಬ್ಬರು ಗಾಯಗೊಂಡಿದ್ದಾರೆ.

ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಗ್ರೆನೇಡ್ ಎಸೆದು ಪರಾರಿಯಾಗಿದ್ದು, ಅದು ಸಚಿವರ ನಿವಾಸದ ಗೇಟ್‌ನ ಸಮೀಪ ಸ್ಫೋಟಗೊಂಡಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಸಿಆರ್‌ಪಿಎಫ್ ಯೋಧ ದಿನೇಶ್ ಚಂದ್ರದಾಸ್ ಅವರ ಕೈ ಹಾಗೂ ಮಹಿಳೆಯೊಬ್ಬರ ಕಾಲಿಗೆ ಗಾಯಗಳಾಗಿವೆ ಎಂದು ವಿವರಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿರುವ ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರು, ದಾಳಿಯನ್ನು ಖಂಡಿಸಿದ್ದಾರೆ. ಖೇಮಚಂದ್ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರಾಗಿದ್ದಾರೆ.

ಸುಬ್ರಹ್ಮಣ್ಯ: ಭಾರಿ ಮಳೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಭಾನುವಾರ ಸಂಜೆ ವೇಳೆಗೆ ಸುಬ್ರಹ್ಮಣ್ಯ ಪರಿಸರದಲ್ಲಿ ಸುರಿದ ಭಾರಿ ಮಳೆಗೆ ಇಲ್ಲಿಗೆ ಸಮೀಪದ ಕೈಕಂಬ ಎಂಬಲ್ಲಿನ ಕೋಟೆಸಾರು ಹೊಳೆಯ ಸೇತುವೆ ಮುಳುಗಡೆಗೊಂಡಿತು.

ಗುಡುಗು ಸಹಿತ ಅರ್ಧ ತಾಸು ಸುರಿದ ಮಳೆಗೆ ಕೋಟೆಸಾರು ಹೊಳೆ ತುಂಬಿ ಹರಿಯಿತು. ಇದರಿಂದಾಗಿ ಸುಬ್ರಹ್ಮಣ್ಯ-ಉಪ್ಪಿನಂಗಡಿ- ಮಂಗಳೂರು ರಸ್ತೆ ಸಂಚಾರ ಬಂದ್ ಆಯಿತು. ಸೇತುವೆಯ ಇಕ್ಕೆಲದಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

₹600 ಕೂಲಿಗೆ ಬಂದು ಬೆಂದುಹೋದರು

ಒಂದೇ ಗ್ರಾಮದ 8 ಮಂದಿ ಸಜೀವ ದಹನ • ಮದುವೆ ಸಾಲ ತೀರಿಸಲು ಬಂದಿದ್ದ ಪದವೀಧರ

ಪ್ರಜಾವಾಣಿ ವಾರ್ತೆ

ಆಕಾಶ್

ಆದಿಕೇಶವನ್, ಆರ್. ಪ್ರಕಾಶ್, ವಿ. ಗಿರಿ, ಪ್ರಕಾಶ್ ರಾಜ್, ಸಚಿನ್ ಮುಣಿವೇಲ್, ಇಲಂಪರುದಿ, ವೇಡಪ್ಪನ್, ವಿಜಯ್ ರಾಘವನ್

ಆನೇಕಲ್: ಅವರೆಲ್ಲರೂ ಸ್ನೇಹಿತರು. ಅಕ್ಕ–ಪಕ್ಕದ ಊರಿನವರು. ಬಡತನದಲ್ಲೇ ಬೆಳೆದರು. ಜತೆಗೆ ವಿದ್ಯಾಭ್ಯಾಸ ಮಾಡುತ್ತಿದ್ದರು. ಕೆಲವರು ಅರೆಕಾಲಿಕ ಕೆಲಸ ಮಾಡಿ ಕುಟುಂಬದವರಿಗೆ ನೆರವಾಗುತ್ತಿದ್ದರು. ದಿನಕ್ಕೆ ₹ 600 – ₹ 700 ಕೂಲಿಗಾಗಿ ವಾರದ ಹಿಂದೆಯಷ್ಟೇ ಅತ್ತಿಬೆಲೆಗೆ ಬಂದಿದ್ದ 8 ಮಂದಿ ಪಟಾಕಿ ದುರಂತದಲ್ಲಿ ಬದುಕು ಮುಗಿಸಿದ್ದಾರೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಅರೂರು ತಾಲ್ಲೂಕಿನ ಅಮ್ಮಾಪೇಟ್ ಗ್ರಾಮದ ಗಿರಿ, ವಿಜಯ್ ರಾಘವನ್, ಇಲಂಪರುದಿ, ಆರ್. ಆಕಾಶ್, ವೇಡಪ್ಪನ್, ಆದಿಕೇಶವನ್, ಆರ್. ಪ್ರಕಾಶ್ ಹಾಗೂ ಸಚಿನ್ ಮುಣಿವೇಲ್ ಒಟ್ಟಿಗೆ ಕೆಲಸಕ್ಕೆ ಬಂದಿದ್ದರು. ಇವರೆಲ್ಲರೂ ಗೋದಾಮಿನೊಳಗೆ ಸಿಲುಕಿ ಮೃತಪಟ್ಟಿದ್ದಾರೆ. ಎಲ್ಲರ ಮೃತದೇಹಗಳನ್ನು ಅವರ ಗ್ರಾಮಕ್ಕೆ ಕಳುಹಿಸಲಾಗಿದೆ.

ಮದುವೆ ಸಾಲ ತೀರಿಸಲು ಬಂದಿದ್ದ ಪದವೀಧರ: 'ಮೃತ ವೇಡಪ್ಪನ್, ಬಿ.ಎಸ್ಸಿ ಪದವೀಧರ. ಸೆ. 17ರಂದು ಮದುವೆ ಆಗಿದ್ದರು. ಮದುವೆಗೆ ಮಾಡಿದ್ದ ಸಾಲ ತೀರಿಸುವುದಕ್ಕಾಗಿ ಕೂಲಿ ಕೆಲಸಕ್ಕೆ ಬಂದಿದ್ದರು' ಎಂದು ಸಂಬಂಧಿಕರು ಹೇಳಿದರು. 'ದೀಪಾವಳಿ ಹಬ್ಬದವರೆಗೆ ಕೆಲಸ ಮಾಡಿ, ಕೂಲಿ ಹಣವನ್ನು ಪಡೆದುಕೊಂಡು ವಾಪಸು ಊರಿಗೆ ಹೋಗುವುದು ವೇಡಪ್ಪನ್ ಅವರ ಉದ್ದೇಶವಾಗಿತ್ತು' ಎಂದು ತಿಳಿಸಿದರು.

ಮೊಬೈಲ್ ಫೋನ್ ಖರೀದಿಗೆ ಹಣ ಹೊಂದಿಸಲು ಕೆಲಸ: ಕಲ್‌ಕುರ್ಚಿ ಜಿಲ್ಲೆಯ ಚಿನ್ನಸೇಲಂ ತಾಲ್ಲೂಕಿನ ಎಡುತ್ತವೈನಾದಂ ನಿವಾಸಿ ಅಪ್ಪಾಸ್, ಹೊಸ ಮೊಬೈಲ್ ಖರೀದಿಸಲು ಹಣ ಹೊಂದಿಸುತ್ತಿದ್ದರು. ಪಟಾಕಿ ಮಳಿಗೆಯಲ್ಲಿ ಕೆಲಸ ಮಾಡಿದರೆ ಹಣ ಸಿಗುತ್ತದೆ ಎಂದು ಸ್ನೇಹಿತ ತಣಿ ಅಮುದನ್ ಹೇಳಿದ್ದರು. ಹೀಗಾಗಿ, ಅಪ್ಪಾಸ್ ಕೆಲಸಕ್ಕೆ ಬಂದಿದ್ದರು.

ದುರಂತದಲ್ಲಿ ಪಾರಾಗಿರುವ ತಣಿ ಅಮುದನ್, ಸ್ನೇಹಿತರನ್ನು ನೆನೆದು ಕಣ್ಣೀರಿಟ್ಟರು. 'ಅಪ್ಪಾಸ್ ಹಾಗೂ ಇತರರನ್ನು ನಾನೇ ಕರೆದುಕೊಂಡು ಬಂದೆ. ಆದರೆ, ಹೀಗಾಗುತ್ತದೆ ಎಂದು ಊಹಿಸಿರಲಿಲ್ಲ' ಎಂದು ದುಃಖ ತೋಡಿಕೊಂಡರು.

ಪೊಲೀಸ್ ಆಗಲು ತಯಾರಿ ನಡೆಸಿದ್ದ: ಮೃತ ಸಚಿನ್ ಸಹ ಪದವೀಧರ. ಪೊಲೀಸ್ ಆಗಬೇಕೆಂದು ತಯಾರಿ ನಡೆಸುತ್ತಿದ್ದರು. ಕುಟುಂಬಕ್ಕೆ ನೆರವಾಗಲೆಂದು ಸ್ನೇಹಿತರ ಜೊತೆ ಕೆಲಸಕ್ಕೆ ಬಂದಿದ್ದರು. ಆಸ್ಪತ್ರೆ ಎದುರು ಮಗ ಸಚಿನ್‌ನನ್ನು ನೆನೆದು ಕಣ್ಣೀರಿಟ್ಟ ತಾಯಿ ಕುಮಾರಿ, 'ನನ್ನ ಮನೆಯ ಆಧಾರಸ್ತಂಭವೇ ಮುರಿದು ಬಿತ್ತು' ಎಂದು ರೋದಿಸಿದರು.

ಬಿ.ಎ ಮುಗಿಸಿ ಅರೆಕಾಲಿಕ ಕೆಲಸ: 'ಬಿ.ಎ ಪದವೀಧರ ವಿಜಯ್ ರಾಘವನ್, ಸರ್ಕಾರಿ ಕೆಲಸಕ್ಕಾಗಿ ಪ್ರಯತ್ನಿಸುತ್ತಿದ್ದರು. ಸದ್ಯ, ಅರೆಕಾಲಿಕ ಕೆಲಸ ಮಾಡುತ್ತಿದ್ದರು. ದೀಪಾವಳಿ ಹಬ್ಬದ ಆಚರಣೆ ಹೊತ್ತಿಗೆ ಹಣ ಸಂಪಾದಿಸಲು ಬಂದಿದ್ದರು.

'ವಿಜಯ್‌ರಾಘವನ್ ಅವರ ತಂದೆ– ತಾಯಿ ಕೂಲಿ ಮಾಡುತ್ತಿದ್ದಾರೆ. ತಂಗಿ ಮತ್ತು ತಮ್ಮ ಇದ್ದಾರೆ. ಹಿರಿಯ ಮಗನಾಗಿದ್ದ ಈತ, ಕುಟುಂಬದ ಜವಾಬ್ದಾರಿ ಹೊತ್ತುಕೊಂಡಿದ್ದ' ಎಂದು ಸಂಬಂಧಿಕರು ಹೇಳಿದರು.

ಮೃತ ಗಿರಿ, ಪ್ಯಾರಾ ಮೆಡಿಕಲ್ ವ್ಯಾಸಂಗ ಮಾಡಿದ್ದರು. ಕೆಲಸ ಅರಸುತ್ತಿದ್ದರು. ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಹೀಗಾಗಿ, ಸ್ನೇಹಿತರ ಜೊತೆ ಸೇರಿ ಪಟಾಕಿ ಮಳಿಗೆಗೆ ಕೆಲಸಕ್ಕಾಗಿ ಬಂದಿದ್ದರು.

ಮೃತ ಆಕಾಶ್ ಅವರ ತಂದೆ ಮಾನಸಿಕ ಅಸ್ವಸ್ಥರು. ಅಕ್ಕನ ಆಶ್ರಯದಲ್ಲಿ ಬೆಳೆದಿದ್ದ ಆಕಾಶ್, ಉದ್ಯೋಗಕ್ಕೆಂದು ಇಲ್ಲಿಗೆ ಬಂದಿದ್ದರು. ಮೃತದೇಹ ಕೊಂಡೊಯ್ಯಲು ಮಗುವಿನ ಸಮೇತ ಆಸ್ಪತ್ರೆಗೆ ಬಂದಿದ್ದ ಆಕಾಶ್ ಅವರ ಅಕ್ಕ ಕೃತಿಕಾ ಅವರ ಆಕ್ರಂದನ ಮುಗಿಲುಮುಟ್ಟಿತ್ತು.

ಮೊದಲ ಬಾರಿ ಕೆಲಸಕ್ಕೆ: ತಿರುವಣ್ಣಾಮಲೈ ಜಿಲ್ಲೆಯ ಸೆಂಗಂ ತಾಲ್ಲೂಕಿನ ನಿಪ್ಪತ್ತೊರೈ ಗ್ರಾಮದ ಪ್ರಕಾಶ್ ರಾಜ್, ಡಿಪ್ಲೊಮಾ ಮುಗಿಸಿದ್ದರು. ಸ್ನೇಹಿತರು ಕರೆದಿದ್ದರಿಂದ, ಮೊದಲ ಬಾರಿಗೆ ಪಟಾಕಿ ಮಳಿಗೆಗೆ ಕೆಲಸಕ್ಕೆ ಬಂದಿದ್ದರು.

'ಪ್ರಕಾಶ್ ಸೇರಿ ಇಬ್ಬರು ಪುತ್ರರಿದ್ದಾರೆ. ಕೂಲಿ ನಂಬಿ ಬದುಕು ಸಾಗಿಸುತ್ತಿದ್ದೇವೆ. ನನಗೆ ಹೊರೆಯಾಗಬಾರದೆಂದು ಮಗ ಪ್ರಕಾಶ್, ಒಂದು ವಾರದ ಹಿಂದೆಯಷ್ಟೇ ಕೆಲಸಕ್ಕೆಂದು ಅತ್ತಿಬೆಲೆ ಬಂದಿದ್ದ' ಎಂದು ತಂದೆ ರಾಮು ಹೇಳಿದರು. 'ಯಾವ ತಂದೆ–ತಾಯಿಗೂ ಇಂಥ ಸ್ಥಿತಿ ಬರಬಾರದು. ದುಡಿಯಲು ಬಂದ ಮಗ ಹಾಗೂ ಆತನ ಸ್ನೇಹಿತರು, ಗುರುತು ಸಿಗದಷ್ಟು ಬೆಂದಿದ್ದಾರೆ' ಎಂದು ಕಣ್ಣೀರಿಟ್ಟರು.

ಮೃತರ ವಿವರ:

- ವಿ. ಗಿರಿ (17)
- ಟಿ. ವಿಜಯ್ ರಾಘವನ್ (19)
- ಎಸ್. ಇಲಂಪರುದಿ
- ಆರ್. ಆಕಾಶ್ (17)
- ಎಂ. ವೇಡಪ್ಪನ್ (22)
- ಪಿ. ಆದಿಕೇಶವನ್ (17)
- ಆರ್. ಪ್ರಕಾಶ್ (20)
- ಸಚಿನ್ ಮುಣಿವೇಲ್ (22)
- (ಧರ್ಮಪುರಿ ಜಿಲ್ಲೆಯ ಅರೂರು ತಾಲ್ಲೂಕಿನ ಅಮ್ಮಾಪೇಟ್ ಗ್ರಾಮ)
- ಪ್ರಕಾಶ್ ರಾಜ್ (ತಿರುವಣ್ಣಾಮಲೈ ಜಿಲ್ಲೆಯ ಸೆಂಗಂ ತಾಲ್ಲೂಕಿನ ನಿಪ್ಪತ್ತೊರೈ)
- ವಸಂತ್‌ರಾಜ್ (23)
- ಅಪ್ಪಾಸ್ (23)
- ಪ್ರಭಾಕರನ್ (17)
- (ಕಲ್‌ಕುರ್ಚಿ ಜಿಲ್ಲೆಯ ಚಿನ್ನಸೇಲಂ ತಾಲ್ಲೂಕಿನ ಎಡುತ್ತವೈನಾದಂ ಗ್ರಾಮ)
- ಸಂತೋಷ್
- (ತಿರುಪ್ಪತ್ತೂರು ಜಿಲ್ಲೆಯ ವಾಣಿಯಾಂಬಾಡಿ ತಾಲ್ಲೂಕಿನ ವೆಲ್ಲಕುಟ್ಟೈ ಗ್ರಾಮ)
- ಅಂತೋನಿ ಪೌಲ್‌ರಾಜ್
- (ಕೃಷ್ಣಗಿರಿ ಜಿಲ್ಲೆಯ ಹೊಸೂರು)

ಗಾಯಾಳುಗಳು

ಅತ್ತಿಬೆಲೆಯ ನವೀನ್ ರೆಡ್ಡಿ (ಮಾಲೀಕ), ತಮಿಳುನಾಡಿನ ರಾಜೇಶ್, ದಿನೇಶ್, ಸಂಜಯ್, ಚಂದ್ರು, ಬೆಂಗಳೂರು ಗೋರಿಪಾಳ್ಯದ ವೆಂಕಟೇಶ್ (ಆಕ್ಸ್‌ಫರ್ಡ್ ಹಾಗೂ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ)

₹ 3 ಲಕ್ಷ ಪರಿಹಾರಕ್ಕೆ ಆಕ್ರೋಶ: ತಮಿಳುನಾಡು ಸಚಿವರಿಗೆ ತರಾಟೆ

ಮೃತರ ಕುಟುಂಬಗಳಿಗೆ ತಮಿಳುನಾಡು ಸರ್ಕಾರ ತಲಾ ₹ 3 ಲಕ್ಷ ಪರಿಹಾರ ಘೋಷಿಸಿದ್ದು, ಇದಕ್ಕೆ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು.

ಆಕ್ಸ್‌ಫರ್ಡ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿರುವ ಶವಾಗಾರಕ್ಕೆ ಭೇಟಿ ನೀಡಿದ್ದ ತಮಿಳುನಾಡಿನ ಆರೋಗ್ಯ ಸಚಿವ ಮಾ ಸುಬ್ರಹ್ಮಣ್ಯನ್ ಅವರನ್ನು ಸುತ್ತುವರೆದಿದ್ದ ಸಂಬಂಧಿಕರು, 'ಕರ್ನಾಟಕ ಸರ್ಕಾರ ₹ 5 ಲಕ್ಷ ಪರಿಹಾರ ಘೋಷಿಸಿದೆ. ಕರ್ನಾಟಕಕ್ಕೆ ಇರುವವಷ್ಟು ಕರುಣೆ ನಿಮಗಿಲ್ಲವೇ?' ಎಂದು ತರಾಟೆಗೆ ತೆಗೆದುಕೊಂಡರು.

ಆಂಬುಲೆನ್ಸ್ ಅಡ್ಡಗಟ್ಟಿ ಪ್ರತಿಭಟನೆ: '₹ 3 ಲಕ್ಷ ಪರಿಹಾರಕ್ಕಿಂತ ಹೆಚ್ಚಿನ ಪರಿಹಾರ ನೀಡಬೇಕು. ಮೃತರ ಕುಟುಂಬದ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಿಸಬೇಕು' ಎಂದು ಆಗ್ರಹಿಸಿದ ಸಂಬಂಧಿಕರು, ಆಂಬುಲೆನ್ಸ್‌ಗಳನ್ನು ಅಡ್ಡಗಟ್ಟಿ ಪ್ರತಿಭಟನೆ ನಡೆಸಿದರು. ಪ್ರತಿಭಟನಕಾರರನ್ನು ಚದುರಿಸಿದ ಪೊಲೀಸರು, ಆಂಬುಲೆನ್ಸ್‌ಗೆ ದಾರಿ ಮಾಡಿಕೊಟ್ಟರು.

ಸಿಕ್ಕಿಂ: 56 ಜನರ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಮೇಘಸ್ಫೋಟ ಹಾಗೂ ನಂತರ ತೀಸ್ತಾ ನದಿಯಲ್ಲಿ ಉಂಟಾಗಿದ್ದ ಪ್ರವಾಹದಿಂದಾಗಿ ಉತ್ತರ ಸಿಕ್ಕಿಂನಲ್ಲಿ ಸಂಕಷ್ಟಕ್ಕೆ ಸಿಲುಕಿದ್ದವರಲ್ಲಿ 56 ಜನರನ್ನು ಇಂಡೊ ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಯು ರಕ್ಷಿಸಿದೆ.

'ಚುಂಗ್‌ತಾಂಗ್‌ನಲ್ಲಿ ರೋಪ್‌ವೇ ನೆರವಿನಲ್ಲಿ ನಾಲ್ವರು ಮಹಿಳೆಯರು ಸೇರಿ 56 ಜನರನ್ನು ರಕ್ಷಿಸಲಾಗಿದೆ' ಎಂದು ಐಟಿಬಿಪಿಯು 'ಎಕ್ಸ್' ಜಾಲತಾಣದಲ್ಲಿ ಸಂದೇಶವನ್ನು ಪೋಸ್ಟ್ ಮಾಡಿದೆ.

'ಮೇಘಸ್ಫೋಟದಿಂದಾಗಿ ಬುಧವಾರ ಪ್ರವಾಹ ಉಂಟಾಗಿತ್ತು. ಇದರಿಂದಾಗಿ ಸಿಕ್ಕಿಂನ ನಾಲ್ಕು ಜಿಲ್ಲೆಗಳಲ್ಲಿ ಸುಮಾರು 41,870 ಜನರು ಬಾಧಿತರಾಗಿದ್ದಾರೆ' ಎಂದು ಸಿಕ್ಕಿಂನ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರವು (ಎಸ್‌ಎಸ್‌ಡಿಎಂಎ) ತಿಳಿಸಿದೆ.

ಶೋಧ ಕಾರ್ಯಕ್ಕಾಗಿ ವಿಶೇಷ ರಾಡಾರ್, ಡ್ರೋನ್ ಬಳಸಲಾಗಿದೆ. ಶ್ವಾನದಳದ ನೆರವು ಪಡೆಯಲಾಗಿದೆ. ಇದುವರೆಗೂ 2,563 ಜನರನ್ನು ರಕ್ಷಿಸಲಾಗಿದೆ. 6,875 ಜನರು ವಿವಿಧ ಶಿಬಿರಗಳಲ್ಲಿ ರಕ್ಷಣೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರವಾಹದದಿಂದಾಗಿ ರಾಜ್ಯದಲ್ಲಿ 1,320 ಮನೆಗಳು ಹಾನಿಗೊಂಡಿವೆ. ಸುಮಾರು 13 ಸೇತುವೆಗಳು ಕೊಚ್ಚಿಹೋಗಿವೆ. ಮಂಗನ್ ಜಿಲ್ಲೆಯ ಲಾಚೆನ್, ಲಾಚುಂಗ್‌ನಲ್ಲಿ ಸುಮಾರು 3 ಸಾವಿರ ಪ್ರವಾಸಿಗರು ಅತಂತ್ರರಾಗಿದ್ದಾರೆ ಎಂದು ವಿವರಿಸಿದ್ದಾರೆ.

ಒಂದೇ ಕುಟುಂಬದ ಮೂವರ ಸಜೀವ ದಹನ

ಕಂಕೊಳ್ಳಿಯಲ್ಲಿ ಘಟನೆ: ಕಾರಣ ನಿಗೂಢ • ಸುಟ್ಟು ಕರಕಲಾದ ದೇಹಗಳು

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ (ಶಿವಮೊಗ್ಗ): ತಾಲ್ಲೂಕಿನ ಅರಳಸುರಳಿ ಸಮೀಪದ ಕಂಕೊಳ್ಳಿ ಗ್ರಾಮದಲ್ಲಿ ಭಾನುವಾರ ರಾತ್ರಿ ಮನೆಯಲ್ಲಿ ಮಲಗಿರುವಾಗ ಕುಟುಂಬದ ಮೂವರು ಸದಸ್ಯರು ಸಜೀವ ದಹನವಾಗಿದ್ದಾರೆ.

ರಾಘವೇಂದ್ರ ಕೇಕೂಡ (65), ಅವರ ಪತ್ನಿ ನಾಗರತ್ನಾ (55), ಹಿರಿಯ ಪುತ್ರ ಶ್ರೀರಾಮ್ (30) ಮೃತಪಟ್ಟವರು. ದೇಹಗಳು ಸುಟ್ಟು ಕರಕಲಾಗಿದ್ದು, ಗುರುತು ಸಿಗದಂತಾಗಿದೆ. ಕಿರಿಯ ಪುತ್ರ ಭರತ್ (28) ಅವರಿಗೆ ಶೇ 50ರಷ್ಟು ಸುಟ್ಟ ಗಾಯಗಳಾಗಿವೆ. ಗಂಭೀರವಾಗಿ ಗಾಯಗೊಂಡ ಅವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಕೋಣೆಯೊಳಗೆ ಕಟ್ಟಿಗೆಗಳನ್ನು ರಾಶಿ ಹಾಕಿ, ಕುಟುಂಬ ಸದಸ್ಯರೇ ಬೆಂಕಿ ಹಚ್ಚಿಕೊಂಡಿರುವ ಶಂಕೆ ಇದೆ. ಸುಟ್ಟಗಾಯದಿಂದ ನರಳಿದ ಭರತ್ ಅಂಗಳಕ್ಕೆ ಬಂದಿದ್ದಾರೆ ಎನ್ನಲಾಗುತ್ತಿದೆ. ಅಂದಾಜು 7.30ರ ಸಮಯದಲ್ಲಿ ಮನೆಯಿಂದ ಹೊಗೆ ಬರುತ್ತಿರುವುದು, ಜನರ ಚೀರಾಟ ಗಮನಿಸಿದ ಗ್ರಾಮಸ್ಥರು ರಕ್ಷಣೆಗೆ ಮುಂದಾದರು. ಅಗ್ನಿಶಾಮಕ ದಳದ ಸಿಬ್ಬಂದಿ ಕೂಡಾ ಧಾವಿಸಿದ್ದರು. ಆದರೆ, ಮೂವರ ರಕ್ಷಣೆ ಸಾಧ್ಯವಾಗಲಿಲ್ಲ.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್‌ಕುಮಾರ್ ಜಿ.ಕೆ., ಡಿವೈಎಸ್‌ಪಿ ಗಜಾನನ ವಾಮನ ಸುತಾರ ಸ್ಥಳಕ್ಕೆ ಭೇಟಿ ನೀಡಿದ್ದರು. ಶಾಸಕ ಆರಗ ಜ್ಞಾನೇಂದ್ರ, ಮಾಜಿ ಸಚಿವ ಕಿಮ್ಮನೆ ರತ್ನಾಕರ ಸ್ಥಳಕ್ಕೆ ಭೇಟಿ ನೀಡಿ ಘಟನೆಯ ವಿವರ ಪಡೆದರು.

ತನಿಖೆ ನಂತರ ನಿರ್ಧಾರ: ಸ್ಥಳ ಮಹಜರು ಮಾಡಿದ್ದು ಕೆಲವು ದಾಖಲೆಗಳು ಲಭ್ಯವಾಗಿದೆ. ವಿಧಿವಿಜ್ಞಾನ ತಜ್ಞರು, ಶ್ವಾನದಳ ಭೇಟಿ ನೀಡಿದ್ದಾರೆ. ತನಿಖೆ ಪೂರ್ಣಗೊಂಡ ನಂತರ, ಘಟನೆಗೆ ಸ್ಪಷ್ಟ ಕಾರಣ ತಿಳಿದುಬರಲಿದೆ ಎಂದು ಮಿಥುನ್‌ಕುಮಾರ್ ತಿಳಿಸಿದ್ದಾರೆ.

'ಸೌರ ನಗರ'ವಾಗಲಿರುವ ಅಯೋಧ್ಯೆ

ಅಯೋಧ್ಯೆ (ಉತ್ತರಪ್ರದೇಶ) (ಪಿಟಿಐ): ಅಯೋಧ್ಯೆಯನ್ನು ಉತ್ತರಪ್ರದೇಶದ ಮೊದಲ 'ಸೌರ ನಗರ'ವನ್ನಾಗಿ ಅಭಿವೃದ್ಧಿಪಡಿಸುವ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ.

'ಉತ್ತರಪ್ರದೇಶದ ನೂತನ ಮತ್ತು ನವೀಕರಿಸಬಹುದಾದ ಇಂಧನ ಇಲಾಖೆ (ಯುಪಿಎನ್‌ಇಡಿಎ) ಈ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಈ ಕಾರ್ಯಗಳ ಮೇಲ್ವಿಚಾರಣೆಯನ್ನು ಖುದ್ದಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೇ ನಡೆಸುತ್ತಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನವರಿಯಲ್ಲಿ ರಾಮಮಂದಿರ ಉದ್ಘಾಟನೆ ನಡೆಯಬಹುದು. ಹೀಗಾಗಿ, ಅಯೋಧ್ಯೆಯನ್ನು 'ಸೌರ ನಗರ'ವಾಗಿ ಮಾಡುವ ಅಭಿವೃದ್ಧಿ ಕಾರ್ಯಗಳಿಗೆ ವೇಗ ಸಿಕ್ಕಿದೆ.

ಸರಯೂ ನದಿಯ ದಡದಲ್ಲಿ ಸೌರ ಉದ್ಯಾನವನ್ನು ಅಭಿವೃದ್ಧಿಪಡಿಸುವುದು, ಸೌರಶಕ್ತಿ ಚಾಲಿತ ದೋಣಿಗಳನ್ನು ಒದಗಿಸುವುದು, ಸೌರ ಬೀದಿದೀಪಗಳನ್ನು ಅಳವಡಿಸುವುದು, ಸಾರ್ವಜನಿಕ ಸಾರಿಗೆಯಲ್ಲಿ ಸೌರಶಕ್ತಿ ಮೂಲಗಳನ್ನು ಅಳವಡಿಸುವುದು, ಸರ್ಕಾರಿ ಕಟ್ಟಡಗಳು ಮತ್ತು ಗೃಹಬಳಕೆಗಾಗಿ ಸೌರಶಕ್ತಿಯನ್ನು ಅಭಿವೃದ್ಧಿಪಡಿಸುವ ಕ್ರಮಗಳನ್ನು ಈ ಯೋಜನೆ ಒಳಗೊಂಡಿದೆ.

₹900 ಕೋಟಿ ವೆಚ್ಚ

'ರಾಮ ಮಂದಿರ ನಿರ್ಮಾಣಕ್ಕಾಗಿ 2020ರ ಫೆಬ್ರುವರಿಯಿಂದ ಈ ವರ್ಷದ ಮಾರ್ಚ್ 31ರವರೆಗೆ ₹ 900 ಕೋಟಿಯಷ್ಟು ಮೊತ್ತವನ್ನು ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ವ್ಯಯ ಮಾಡಿದೆ' ಎಂದು ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರೈ ತಿಳಿಸಿದ್ದಾರೆ.



1. ಗಾಜಾ ನಗರದಿಂದ ಹಾರಿಸಿದ ರಾಕೆಟ್‌ಗಳನ್ನು ಇಸ್ರೇಲ್‌ನ 'ಐರನ್ ಡೋಮ್ ಕ್ಷಿಪಣಿ ರಕ್ಷಣಾ ವ್ಯವಸ್ಥೆ'ಯು ಹೊಡೆದುರುಳಿಸಿದೆ 2. ಗಾಜಾ ನಗರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕಟ್ಟಡವೊಂದು ಧ್ವಂಸಗೊಂಡಿದೆ. 3. ಹಮಾಸ್ ಬಂಡುಕೋರರ ಮೃತದೇಹದ ಪಕ್ಕದಲ್ಲಿ ನಿಂತಿರುವ ಇಸ್ರೇಲ್ ಪೊಲೀಸರು —ಎಎಫ್‌ಪಿ/ಎಪಿ/ಪಿಟಿಐ ಚಿತ್ರ

ತನ್ನದೇ ನೆಲವನ್ನು ಉಪೇಕ್ಷಿಸಿತೇ ಇಸ್ರೇಲ್? • ದಾಳಿಗೆ ಬಹುಕಾಲದಿಂದಲೂ ಹಮಾಸ್ ಯೋಜನೆ • ಇಸ್ರೇಲ್‌ನ ಶಿನ್ ಬೆಟ್, ಮೊಸಾದ್ ವೈಫಲ್ಯಕ್ಕೆ ಅಚ್ಚರಿ

'ಹಮಾಸ್ ಹಠಾತ್ ದಾಳಿ ಗುಪ್ತದಳದ ವೈಫಲ್ಯ'

ಜೆರುಸಲೇಂ (ಪಿಟಿಐ/ರಾಯಿಟರ್ಸ್): ಹಮಾಸ್ ಬಂಡುಕೋರರು ಇಸ್ರೇಲಿನ ದಕ್ಷಿಣ ಭಾಗದಲ್ಲಿ ನಡೆಸಿರುವ ಅನಿರೀಕ್ಷಿತ ದಾಳಿಯು 'ಗುಪ್ತದಳದ ಬಹುದೊಡ್ಡ ವೈಫಲ್ಯ'ದ ಪರಿಣಾಮ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್ ದೇಶವು ತನ್ನ ಆಂತರಿಕ ಗುಪ್ತದಳ 'ಶಿನ್ ಬೆಟ್' ಹಾಗೂ ಬೇರೆ ಬೇರೆ ದೇಶಗಳಲ್ಲಿ ಕಾರ್ಯಾಚರಣೆ ನಡೆಸುವ 'ಮೊಸಾದ್' ಬಗ್ಗೆ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಆದರೆ ಯಹೂದಿಯರ ಪಾಲಿಗೆ ರಜಾ ದಿನವಾದ 'ಸುಕ್ಕೊತ್'ನಂದು ಹಮಾಸ್ ಬಂಡುಕೋರರು ವಾಯುಮಾರ್ಗ, ಜಲಮಾರ್ಗ ಹಾಗೂ ಭೂಮಾರ್ಗದ ಮೂಲಕ ಇಸ್ರೇಲಿನೊಳಕ್ಕೆ ನುಸುಳಿ ಐದು ಸಾವಿರಕ್ಕೂ ಹೆಚ್ಚು ರಾಕೆಟ್‌ಗಳನ್ನು ಬಳಸಿ ದಾಳಿ ನಡೆಸಿದ್ದಾರೆ.

ಇಸ್ರೇಲ್ ಸೇನೆಯು ಈ ಪ್ರದೇಶದಲ್ಲಿನ ಅತ್ಯಂತ ಬಲಿಷ್ಠ ಸೇನೆಗಳ ಪೈಕಿ ಒಂದು. ಗಡಿಗಳಲ್ಲಿ ಭದ್ರತೆಗೆ ಕ್ಯಾಮೆರಾ ಅಳವಡಿಸಲಾಗಿದೆ, ಶಿನ್ ಬೆಟ್ ಹಾಗೂ ಮೊಸಾದ್‌ನ ಸಿಬ್ಬಂದಿಯ ಕಣ್ಗಾವಲು ಇಲ್ಲಿರುತ್ತದೆ, ಯಾವುದೇ ಚಲನವಲನವನ್ನು ಗುರುತಿಸುವ ಅತ್ಯಾಧುನಿಕವಾದ ಉಪಕರಣಗಳನ್ನು ಅಳವಡಿಸಲಾಗಿದೆ ಹಾಗೂ ಗಡಿಯಲ್ಲಿ ಹಾಕಿರುವ ಬೇಲಿ ಕೂಡ ಆಧುನಿಕವಾಗಿದೆ. ಹೀಗಿದ್ದರೂ ಈ ದಾಳಿ ನಡೆದಿದೆ.

ಇಸ್ರೇಲ್ ದೇಶವು ಇರಾನ್‌ಅನ್ನು ಎದುರಿಸುವಲ್ಲಿ ಹಾಗೂ ಆ ದೇಶದ ಅಣ್ವಸ್ತ್ರ ಯೋಜನೆಯನ್ನು ವಿಫಲಗೊಳಿಸುವಲ್ಲಿ ಅದೆಷ್ಟು ಮಗ್ನವಾಗಿತ್ತೆಂದರೆ ತನ್ನದೇ ನೆಲವನ್ನು ಅದು ಉಪೇಕ್ಷಿಸಿತ್ತು ಎಂದು ಕೆಲವು ತಜ್ಞರು ಹೇಳಿದ್ದಾರೆ. 'ಗುಪ್ತದಳದ ವೈಫಲ್ಯಕ್ಕೆ ಮಿಲಿಟರಿಯು ಉತ್ತರ ನೀಡಬೇಕು ಎಂದು ಇಸ್ರೇಲ್ ಸಚಿವರು ಶನಿವಾರ ನಡೆದ ಭದ್ರತಾ ಮಂಡಳಿಯ ಸಭೆಯಲ್ಲಿ ಹೇಳಿದ್ದಾರೆ' ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

'ಶಿನ್ ಬೆಟ್, ಮೊಸಾದ್ ಮತ್ತು ಇಸ್ರೇಲ್ ಭದ್ರತಾ ದಳದ ಸಾಮೂಹಿಕ ತಾಕತ್ತು ಇದ್ದೂ ಇಂಥದ್ದೊಂದು ದಾಳಿಯನ್ನು ಯಾರೂ ಮುಂಗಾಣದೆ ಇದ್ದುದು ಆಶ್ಚರ್ಯಕರ' ಎಂದು ಬಿಬಿಸಿ ವರದಿಯೊಂದು ಹೇಳಿದೆ. 'ಒಂದು ವೇಳೆ ದಾಳಿಯ ಬಗ್ಗೆ ಗೊತ್ತಿತ್ತು ಎಂದಾದರೆ, ಅದನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ' ಎಂದು ಅದು ಹೇಳಿದೆ.

ಹಮಾಸ್ ಬಂಡುಕೋರರನ್ನು ಇಸ್ರೇಲ್ ಯಾವತ್ತಿನಿಂದಲೂ ತನ್ನ ಶತ್ರುವಾಗಿಯೇ ಕಂಡಿದೆ. ಆದರೆ 2021ರ 10 ದಿನಗಳ ಯುದ್ಧದ ನಂತರದಲ್ಲಿ ಅದು ಗಾಜಾದ ಜನರಿಗೆ ತನ್ನ ವಶದಲ್ಲಿರುವ ಪಶ್ಚಿಮ ದಂಡೆಯಲ್ಲಿ ಕೆಲಸ ಮಾಡಲು ಅವಕಾಶ ನೀಡಿದೆ. ಇದರ ಜೊತೆಯಲ್ಲೇ ವೈಮಾನಿಕ ದಾಳಿಯನ್ನು ಬೆದರಿಕೆಯ ತಂತ್ರವಾಗಿ ಬಳಸಿಕೊಳ್ಳುವುದನ್ನು ಕೂಡ ಮುಂದುವರಿಸಿದೆ.

ಮಧ್ಯಪ್ರಾಚ್ಯದಲ್ಲಿ ಅಮೆರಿಕದ ರಾಷ್ಟ್ರೀಯ ಗುಪ್ತದಳ ಅಧಿಕಾರಿ ಆಗಿದ್ದ ಜೊನಾಥನ್ ಪನಿಕಾಫ್ ಅವರು, 'ಇದು ಗುಪ್ತದಳದ ವೈಫಲ್ಯವಲ್ಲದೆ ಬೇರೇನೂ ಅಲ್ಲ' ಎಂದು ಹೇಳಿದ್ದಾರೆ. 'ಈ ದಾಳಿಗಾಗಿ ಹಮಾಸ್ ಬಹುಕಾಲದಿಂದ ಯೋಜನೆ ರೂಪಿಸಿತ್ತು. ಇದು ಬಹಳ ಸಮನ್ವಯದಿಂದ ನಡೆಸಿರುವ ದಾಳಿ' ಎಂದು ಇಸ್ರೇಲ್‌ನ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಎಯಲ್ ಹುಲಾತಾ ಹೇಳಿದ್ದಾರೆ.

ಗಾಜಾ ಪಟ್ಟಿಯಲ್ಲಿನ ಖಾನ್ ಯೂನಿಸ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮಸೀದಿಯೊಂದು ಧ್ವಂಸಗೊಂಡಿದೆ —ಪಿಟಿಐ/ಎಪಿ ಚಿತ್ರ

ಇಸ್ರೇಲ್, ಗಾಜಾದಲ್ಲಿ ಭಾರತೀಯರು ಸುರಕ್ಷಿತ

ಜೆರುಸಲೇಂ (ಪಿಟಿಐ): ಇಸ್ರೇಲ್‌ನಲ್ಲಿನ ಭಾರತೀಯರಿಗೆ ಈಗಿನ ಸಂಘರ್ಷದ ಸಂದರ್ಭದಲ್ಲಿ ಇದುವರೆಗೆ ಯಾವುದೇ ತೊಂದರೆ ಆಗಿಲ್ಲ. ಆದರೆ, ಇಸ್ರೇಲ್‌ಗೆ ಭಾರತದಿಂದ ಪ್ರವಾಸಕ್ಕೆ ತೆರಳಿರುವವರು ಹಾಗೂ ಅಲ್ಲಿಗೆ ಇತರ ಉದ್ದೇಶಗಳಿಗಾಗಿ ಹೋಗಿರುವವರು ತಮಗೆ ಸುರಕ್ಷಿತವಾಗಿ ವಾಪಸ್ಸಾಗಲು ನೆರವು ಒದಗಿಸಬೇಕು ಎಂದು ಭಾರತೀಯ ರಾಯಭಾರ ಕಚೇರಿಗೆ ಮನವಿ ಮಾಡುತ್ತಿದ್ದಾರೆ.

ಇಸ್ರೇಲ್‌ನಲ್ಲಿ 18 ಸಾವಿರ ಮಂದಿ ಭಾರತೀಯರು ಇದ್ದಾರೆ. ಅವರಲ್ಲಿ ಯಾರಿಗೂ ತೊಂದರೆ ಆಗಿರುವ ವರದಿ ಇದುವರೆಗೆ ಇಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ.

ಭಾರತದಿಂದ ಇಸ್ರೇಲ್‌ಗೆ ಪ್ರವಾಸಕ್ಕೆ ತೆರಳಿರುವವರಲ್ಲಿ ಹೆಚ್ಚಿನವರು ಗುಂಪಾಗಿ ಸಂಚರಿಸುತ್ತಿದ್ದಾರೆ. ಕೆಲವು ಭಾರತೀಯ ಉದ್ಯಮಿಗಳು ಕೂಡ ಈ ಹೊತ್ತಿನಲ್ಲಿ ಇಸ್ರೇಲ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಅವರು ಕೂಡ ವಾಪಸ್ಸಾಗಲು ನೆರವಿಗೆ ಕಾಯುತ್ತಿದ್ದಾರೆ.

ಇಸ್ರೇಲ್‌ನಲ್ಲಿರುವ ಭಾರತೀಯರ ಪೈಕಿ ಹೆಚ್ಚಿನವರು ಇತರರನ್ನು ಆರೈಕೆ ಮಾಡುವ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಸರಿಸುಮಾರು ಒಂದು ಸಾವಿರ ಮಂದಿ ವಿದ್ಯಾರ್ಥಿಗಳಿದ್ದಾರೆ. ಐ.ಟಿ. ಉದ್ಯೋಗಿಗಳು ಹಾಗೂ ವಜ್ರದ ವ್ಯಾಪಾರಿಗಳು ಕೂಡ ಅಲ್ಲಿದ್ದಾರೆ.

ಪಿಟಿಐ ಜೊತೆ ಮಾತನಾಡಿದ ಹೀಬ್ರೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಬಿಂದು, 'ರಾಯಭಾರ ಕಚೇರಿಯ ನಿರ್ದೇಶನಗಳನ್ನು ಸಂಪೂರ್ಣವಾಗಿ ಪಾಲಿಸಿದ್ದೇನೆ. ಸುರಕ್ಷಿತ ಎಂಬ ಭಾವನೆ ಮೂಡಿದೆ' ಎಂದು ಹೇಳಿದ್ದಾರೆ. ಭಾರತದ ಎಲ್ಲ ವಿದ್ಯಾರ್ಥಿಗಳು ಪರಸ್ಪರ ಸಂಪರ್ಕದಲ್ಲಿದ್ದಾರೆ, ಪರಿಸ್ಥಿತಿಯ ಮೇಲೆ ನಿಗಾ ಇರಿಸಿದ್ದಾರೆ ಎಂದು ತಿಳಿಸಿದ್ದಾರೆ. ಭಾರತದ ವಿದ್ಯಾರ್ಥಿಗಳು ವಾಟ್ಸ್‌ಆ್ಯಪ್ ಮೂಲಕ ಭಾರತದ ರಾಯಭಾರ ಸಿಬ್ಬಂದಿಯ ಜೊತೆಗೂ ಸಂಪರ್ಕದಲ್ಲಿದ್ದಾರೆ.

ಸಂಘರ್ಷ ಹೆಚ್ಚಿರುವ ಆಸ್ಕೆಲಾನ್‌ನಲ್ಲಿ ಕೆಲಸ ಮಾಡುತ್ತಿರುವ ಎಲ್ಲೆ ಪ್ರಸಾದ್ ಎನ್ನುವವರು, 'ನಾವು ಕಟ್ಟೆಚ್ಚರದಿಂದ ಇರಬೇಕಾಗಿದೆ' ಎಂದಿದ್ದಾರೆ. ಗಾಜಾದಲ್ಲಿ ವಾಸಿಸುತ್ತಿರುವ ಭಾರತೀಯರೊಬ್ಬರು, 'ಇಲ್ಲಿ ಪರಿಸ್ಥಿತಿ ಭಯ ಹುಟ್ಟಿಸುವಂತಿದೆ. ಆದರೆ ನಮಗೆ ತೊಂದರೆ ಆಗಿಲ್ಲ' ಎಂದು ಹೇಳಿದ್ದಾರೆ.

ಕನ್ನಡಿಗರ ರಕ್ಷಣೆಗೆ ಸಹಾಯವಾಣಿ

ಬೆಂಗಳೂರು: ಇಸ್ರೇಲ್‌ನಲ್ಲಿ ಕನ್ನಡಿರು ನೆಲೆಸಿದ್ದು, ಸಂಕಷ್ಟಕ್ಕೆ ಸಿಲುಕಿರುವ ಅವರ ರಕ್ಷಣೆಗೆ ರಾಜ್ಯ ಸರ್ಕಾರ ಸಹಾಯವಾಣಿ ಸಂಖ್ಯೆಯನ್ನು ಬಿಡುಗಡೆ ಮಾಡಿದೆ.

ಈ ಬಗ್ಗೆ 'ಎಕ್ಸ್' (ಟ್ವೀಟ್) ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕರ್ನಾಟಕದಿಂದ ಇಸ್ರೇಲ್ ಹೋಗಿರುವ ಕನ್ನಡಿಗರಿಗೆ ನೆರವಿನ ಅಗತ್ಯ ಇದ್ದರೆ, ಕರ್ನಾಟಕ ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದ ಸಹಾಯವಾಣಿ ಸಂಖ್ಯೆಗಳನ್ನು 080–22340676, 080–22253707 ಸಂಪರ್ಕಿಸಬಹುದು' ಎಂದಿದ್ದಾರೆ.

ಸರ್ವಪಕ್ಷ ಸರ್ಕಾರ ರಚನೆಗೆ ಮಾತುಕತೆ

ಹಮಾಸ್ ಬಂಡುಕೋರರು ದೇಶದ ಮೇಲೆ ನಡೆಸಿರುವ ಹಠಾತ್ ದಾಳಿಯಿಂದ ಸೃಷ್ಟಿಯಾಗಿರುವ ಸಂಕೀರ್ಣ ಪರಿಸ್ಥಿತಿಯನ್ನು ನಿಭಾಯಿಸುವ ಉದ್ದೇಶದಿಂದ ಇಸ್ರೇಲ್‌ನಲ್ಲಿ 'ಸರ್ವಪಕ್ಷಗಳ ಸರ್ಕಾರವನ್ನು' ತುರ್ತಾಗಿ ರಚಿಸುವ ಸಾಧ್ಯತೆಯ ಬಗ್ಗೆ ರಾಜಕೀಯ ನಾಯಕರು ಚರ್ಚೆ ನಡೆಸಿದ್ದಾರೆ. ಈ ಉದ್ದೇಶಕ್ಕಾಗಿ ಅವರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಲು ತೀರ್ಮಾನಿಸಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ವಿರೋಧ ಪಕ್ಷಗಳ ನಾಯಕರಾದ ಯಾಯಿರ್ ಲಾಪಿಡ್ ಮತ್ತು ಬೆನ್ನಿ ಗಾಂಟ್ಸ್ ಅವರು ಶನಿವಾರ ಪರಸ್ಪರ ಮಾತುಕತೆ ನಡೆಸಿದ್ದಾರೆ. ನೆತನ್ಯಾಹು ನೇತೃತ್ವದ ಸರ್ಕಾರವನ್ನು ಸೇರುವ ಬಗ್ಗೆ ವಿರೋಧ ಪಕ್ಷಗಳ ಇಬ್ಬರೂ ಪ್ರಮುಖರು ಚರ್ಚಿಸಿದ್ದಾರೆ ಎಂದು ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ.

ವಿರೋಧ ಪಕ್ಷಗಳ ಇಬ್ಬರೂ ನಾಯಕರು ಸರ್ಕಾರ ಸೇರಲು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ತೀವ್ರ ಬಲಪಂಥೀಯ ನಿಲುವು ಹೊಂದಿರುವ ಕೆಲವು ಸಚಿವರನ್ನು ಕೈಬಿಡಬೇಕು ಎಂದು ಆಗ್ರಹಿಸಿದ್ದಾರೆ ಎಂದು ವರದಿಯು ಹೇಳಿದೆ.

ಈಗಿನ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿ ಇರಿಸಿಕೊಂಡು ರಚನೆಯಾಗಲಿರುವ ಸರ್ಕಾರವನ್ನು ಸೇರುವ ಪ್ರಸ್ತಾವವನ್ನು ಪೂರಕವಾಗಿ ಪರಿಗಣಿಸುತ್ತಿರುವುದಾಗಿ ಗಾಂಟ್ಸ್ ಹೇಳಿದ್ದಾರೆ.

ತುರ್ತು ಸಂದರ್ಭವನ್ನು ನಿಭಾಯಿಸುವ ಉದ್ದೇಶದ ಸರ್ಕಾರವು, ಇಸ್ರೇಲಿನ ಬಹುಪಾಲು ಮಂದಿ ರಕ್ಷಣಾ ಪಡೆಗಳ ಬೆನ್ನಿಗಿದ್ದಾರೆ ಎಂಬುದನ್ನು ಶತ್ರುಗಳಿಗೆ ಸ್ಪಷ್ಟಪಡಿಸಲಿದೆ ಎಂದು ಲಾಪಿಡ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನೇಪಾಳದ 10 ವಿದ್ಯಾರ್ಥಿಗಳು ಸಾವು

ಕಠ್ಮಂಡು: ಇಸ್ರೇಲ್‌ನ ದಕ್ಷಿಣ ಭಾಗದ ಕುಬುಝ್ ಅಲುಮಿಮ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ನೇಪಾಳದ 10 ವಿದ್ಯಾರ್ಥಿಗಳು ಹಮಾಸ್ ದಾಳಿಯಲ್ಲಿ ಮೃತಪಟ್ಟಿದ್ದಾರೆ ಎಂದು ಇಸ್ರೇಲ್‌ನಲ್ಲಿರುವ ನೇಪಾಳ ರಾಯಭಾರ ಕಚೇರಿಯ ಅಧಿಕಾರಿ ಅರ್ಜುನ್ ಘಿಮಿರೆ ಅವರ ಹೇಳಿಕೆ ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಜಾತಿಗಣತಿಯಿಂದ ಜಾತಿ ದ್ವೇಷ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು: 'ಕಾಂಗ್ರೆಸ್ ಪಕ್ಷವು ಜಾತಿಗಣತಿ ವರದಿ ಮುಂದಿಟ್ಟುಕೊಂಡು ಜಾತಿ, ಜಾತಿಗಳ ಮಧ್ಯೆ ವಿಷಬೀಜ ಬಿತ್ತಲು ಹೊರಟಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಬಿಡದಿಯ ಕೇತಗಾನಹಳ್ಳಿಯಲ್ಲಿನ ತಮ್ಮ ತೋಟದ ಮನೆಯಲ್ಲಿ ಭಾನುವಾರ ಪಕ್ಷದ ಮುಖಂಡರ ಸಭೆ ನಡೆಸಿದ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರವು ಜಾತಿಗಣತಿಯನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಹೊರಟಿದೆ. ತಮ್ಮದು ಜಾತ್ಯತೀತ ಸಿದ್ಧಾಂತ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷದವರು ಜಾತಿಗಳ ನಡುವೆ ದ್ವೇಷ ಬಿತ್ತುತ್ತಿದ್ದಾರೆ' ಎಂದರು.

'ದೇಶಕ್ಕೆ ಸ್ವಾತಂತ್ರ್ಯ ಬಂದ ದಿನಗಳಿಂದಲೂ ಕಾಂಗ್ರೆಸ್ ಪಕ್ಷ ಜಾತಿ ರಾಜಕೀಯ ಮಾಡಿಕೊಂಡು ಬಂದಿದೆ. ಈಗ ಜಾತಿಗಣತಿ ನಡೆಸಿ ಯಾವ ಸಾಧನೆ ಮಾಡುತ್ತಾರೆ? ಸಮಾಜ ಒಡೆಯಲು ಜಾತಿಗಣತಿ ಮಾಡುತ್ತಿದ್ದಾರೆಯೆ? ಜಾತ್ಯತೀತ ಸಿದ್ಧಾಂತದ ಬಗ್ಗೆ ಭಾಷಣ ಬಿಗಿಯುವ ಇವರು ಜಾತಿ ವ್ಯವಸ್ಥೆಯನ್ನೇ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರಿಂದ ವರದಿ ಕೊಡಿಸಿದರೂ ಕುಮಾರಸ್ವಾಮಿ ಒಪ್ಪಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಆಯೋಗದ ಸದಸ್ಯ ಕಾರ್ಯದರ್ಶಿಯ ಸಹಿಯೇ ಇಲ್ಲದೆ ವರದಿ ಸಲ್ಲಿಸಿದರೆ ಸ್ವೀಕಾರ ಮಾಡುವುದು ಹೇಗೆ? ಎನ್ನುವ ಅರಿವು ಅವರಿಗೆ ಇಲ್ಲ' ಎಂದು ಅವರು ಟೀಕಿಸಿದರು.

ಜೆಡಿಎಸ್–ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಿದ್ದರಾಮಯ್ಯ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದರು. 14 ತಿಂಗಳ ಅವಧಿಯಲ್ಲಿ ಒಮ್ಮೆಯೂ ಜಾತಿಗಣತಿ ವರದಿ ಕುರಿತು ನನ್ನ ಜತೆ ಚರ್ಚಿಸಿಲ್ಲ. ಪ್ರತಿ ಬಾರಿಯೂ ಸಭೆ ನಡೆದಾಗ ಟವೆಲ್ ಕೊಡವಿಕೊಂಡು ಎದ್ದು ಹೋಗುತ್ತಿದ್ದರು. ವರದಿ ಕುರಿತು ಒಮ್ಮೆಯಾದರೂ ಪ್ರಸ್ತಾಪಿಸಿದ್ದರೆ ಹೇಳಲಿ' ಎಂದು ಸವಾಲು ಹಾಕಿದರು.

ವರದಿ ಬಿಡುಗಡೆ: ಬಿಜೆಪಿ ನಾಯಕರ ಭಿನ್ನ ರಾಗ

ವಿ. ಶ್ರೀನಿವಾಸ ಪ್ರಸಾದ್

ವಿ. ಸೋಮಣ್ಣ

ಮೈಸೂರು: ಜಾತಿಗಣತಿ ವರದಿ ಬಿಡುಗಡೆ ಕುರಿತು ಬಿಜೆಪಿಯವರೇ ಆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಮಾಜಿ ಸಚಿವ ವಿ.ಸೋಮಣ್ಣ ಭಿನ್ನ ಅಭಿಪ್ರಾಯ ಮಂಡಿಸಿದ ಪ್ರಸಂಗ ಇಲ್ಲಿನ ಕಲಾಮಂದಿರದಲ್ಲಿ ಭಾನುವಾರ ನಡೆಯಿತು.

ವೀರಶೈವ ಮಹಾಸಭಾ ಹಾಗೂ ಬಳಸ ಬಳಗಗಳ ಒಕ್ಕೂಟ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ವಿ.ಸೋಮಣ್ಣ, 'ಬಿಹಾರದಲ್ಲಿ ಜಾತಿಗಣತಿ ವರದಿ ಬಿಡುಗಡೆಯಾಗಿದ್ದು, ಕರ್ನಾಟಕದಲ್ಲೂ ತಯಾರಿ ನಡೆದಿದೆ. ರಾಜ್ಯದ ಆಡಳಿತಕ್ಕೆ ಲಿಂಗಾಯತ ಮುಖ್ಯಮಂತ್ರಿಗಳ ಕೊಡುಗೆ ಹೆಚ್ಚಿದೆ. ಆದರೆ, ಇಂದು ನಮ್ಮದೇ ಸಮಾಜ ಡೋಲಾಯಮಾನ ಸ್ಥಿತಿ ತಲುಪುತ್ತಿದೆ' ಎಂದು ಹೇಳಿದರು.

'1912ರಲ್ಲಿ ಮಿಲ್ಲರ್ ಆಯೋಗ ಮೊದಲು ಜಾತಿಗಣತಿ ನಡೆಸಿದಾಗ ವೀರಶೈವ ಲಿಂಗಾಯತರ ಪ್ರಮಾಣ ಶೇ 12ರಷ್ಟಿತ್ತು. 1975ರಲ್ಲಿ ಹಾವನೂರು ಆಯೋಗದ ವರದಿಯಂತೆ ಶೇ 16ರಷ್ಟಿರುವುದು ಗೊತ್ತಾಯಿತು. ಚಿನ್ನಪ್ಪ ರೆಡ್ಡಿ ಆಯೋಗವು ಶೇ 18ರಷ್ಟಿದೆ ಎಂದು ವರದಿ ನೀಡಿತ್ತು.

ಆದರೆ, 2015ರಲ್ಲಿ ಮತ್ತೊಂದು ಗಣತಿಗೆ ಆದೇಶಿಸಿದ ನಂತರ ನಮ್ಮ ಸಮುದಾಯ ಕವಲುದಾರಿ ಹಿಡಿಯುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅಸಮಾಧಾನ ಹಾಕಿದ್ದಾರೆ' ಎಂದು ದೂರಿದರು.

'ನಮ್ಮಲ್ಲಿ ಯಾರಿಗೆ ಅರ್ಹತೆ ಇದೆಯೋ ಅವರಿಗೆ ಅವಕಾಶ ಸಿಗಬೇಕು. ಅದಕ್ಕಾಗಿ ಒಗ್ಗಟ್ಟಾಗಬೇಕು. ಮಠಾಧೀಶರು ಧ್ವನಿಯಾಗಬೇಕು. ಸಮಾಜಕ್ಕಿಂತ ದೊಡ್ಡವರು ಯಾರೂ ಇಲ್ಲ' ಎಂದು ಹೇಳಿದರು.

ಏಕೆ ವಿರೋಧಿಸುತ್ತೀರಿ?: ನಂತರ ಮಾತನಾಡಿದ ಸಂಸದ ವಿ.ಶ್ರೀನಿವಾಸ ಪ್ರಸಾದ್, 'ಜಾತಿಗಣತಿಯನ್ನು ಏಕೆ ವಿರೋಧಿಸುತ್ತೀರಿ?. ಈ ಹಿಂದೆ ಹಾವನೂರು ವರದಿಯನ್ನು ಕೆಲವರು ಆನೆ ಮೇಲೆ, ಇನ್ನೂ ಕೆಲವರು ಕತ್ತೆ ಮೇಲೆ ಮೆರವಣಿಗೆ ಮಾಡಿದ್ದರು. ವಿಶಾಲ ದೃಷ್ಟಿಕೋನ ಇಟ್ಟುಕೊಳ್ಳಿ. ಈ ಬಗ್ಗೆ ಚರ್ಚಿಸೋಣ' ಎಂದು ಕಿವಿಮಾತು ಹೇಳಿದರು.

'ಲಿಂಗಾಯತ ಧರ್ಮದ ಹೋರಾಟ ಬೀದಿಗೆ ಬಂದಿರುವುದು ತಲೆ ತಗ್ಗಿಸುವ ವಿಚಾರ. ಒಳ ಪಂಗಡಗಳನ್ನು ಒಗ್ಗೂಡಿಸುವ ಕೆಲಸವನ್ನು ಶಾಮನೂರು ಅಂತಹ ಪ್ರಭಾವಿಗಳು ಮಾಡಬೇಕಿತ್ತು. ಯಾವುದೋ ಅಧಿಕಾರಿಗೆ ಹುದ್ದೆ ಕೊಟ್ಟಿಲ್ಲ ಎಂದು ಯೋಚನೆ ಮಾಡಬೇಡಿ. ಈ ಹಿಂದೆ ಸಾಕಷ್ಟು ಬಾರಿ ರಾಜ್ಯ ಆಳಿದ್ದೀರಿ. ಬೇರೆಯವರಿಗೂ ಅವಕಾಶ ಕೊಡಿ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸೋಮಣ್ಣ, 'ನಾನು ಆ ಅರ್ಥದಲ್ಲಿ ಹೇಳಿಲ್ಲ' ಎಂದು ಸಮಜಾಯಿಷಿ ನೀಡಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

20ರಂದು 'ಕೈ' ಹಿಡಿಯಲಿರುವ ಪೂರ್ಣಿಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಜಿಲ್ಲೆ ಹಿರಿಯೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಇದೇ 20ರಂದು ಕಾಂಗ್ರೆಸ್ ಸೇರಲಿದ್ದಾರೆ.

ಮುಖ್ಯಮಂತ್ರಿಯವರ ನಿವಾಸ 'ಕಾವೇರಿ'ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭಾನುವಾರ ಭೇಟಿ ಮಾಡಿ ಅವರು ಚರ್ಚೆ ನಡೆಸಿದರು.

ಈ ಹಿಂದೆ ಕಾಂಗ್ರೆಸ್‌ನಿಂದ ಬಿಬಿಎಂಪಿ ಸದಸ್ಯರಾಗಿ ಆಯ್ಕೆಯಾಗಿದ್ದ ಪೂರ್ಣಿಮಾ ಮರಳಿ ಕಾಂಗ್ರೆಸ್ ಸೇರುತ್ತಾರೆ ಎನ್ನುವ ಊಹಾಪೋಹ ಇತ್ತೀಚೆಗೆ ಹರಡಿತ್ತು. ಅದಕ್ಕೆ ಪೂರಕ ಎನ್ನುವಂತೆ, ಶ್ರೀ ಕೃಷ್ಣ ಜನ್ಮಾಷ್ಟಮಿ ಹಬ್ಬದ ನೆಪದಲ್ಲಿ ಕೆ.ಆರ್. ಪುರ ಕ್ಷೇತ್ರದ ದೇವಸಂದ್ರದಲ್ಲಿರುವ ಅವರ ನಿವಾಸಕ್ಕೆ ಡಿ.ಕೆ. ಶಿವಕುಮಾರ್ ತೆರಳಿ ಚರ್ಚೆ ನಡೆಸಿದ್ದರು.

2018ರಲ್ಲಿ ಹಿರಿಯೂರು ಕ್ಷೇತ್ರದಿಂದ ಸ್ಪರ್ಧಿಸಿದ್ದ ಪೂರ್ಣಿಮಾ, ಕಾಂಗ್ರೆಸ್‌ನ ಡಿ. ಸುಧಾಕರ್ ವಿರುದ್ಧ ಜಯ ಗಳಿಸಿದ್ದರು. 2023ರ ಚುನಾವಣೆಯಲ್ಲೂ ಬಿಜೆಪಿಯಿಂದ ಸ್ಪರ್ಧಿಸಿದ್ದ ಪೂರ್ಣಿಮಾ, ಸುಧಾಕರ್ ವಿರುದ್ಧ ಸೋಲು ಅನುಭವಿಸಿದ್ದರು.

'ಮೈತ್ರಿ ಸರ್ಕಾರ ಪತನಕ್ಕೆ ಡಿಕೆಶಿಯೇ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2018ರಲ್ಲಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಗೊಳ್ಳಲು ಡಿ.ಕೆ. ಶಿವಕುಮಾರ್ ನೇರ ಕಾರಣ. ಸರ್ಕಾರ ಪತನವಾಗುವುದಕ್ಕೆ ನಾನು ಕಾರಣನಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಬಿಡದಿಯ ಕೇತಗಾನಹಳ್ಳಿಯಲ್ಲಿ ಭಾನುವಾರ ಪಕ್ಷದ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ರಮೇಶ ಜಾರಕಿಹೊಳಿ ಅವರಿಗೂ ನನಗೂ ವೈಷಮ್ಯ ಇರಲಿಲ್ಲ. ಬೆಳಗಾವಿಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ರಾಜಕೀಯಕ್ಕೆ ನಾನು ಬಲಿಪಶುವಾದೆ. ಶಿವಕುಮಾರ್ ಬೆಳಗಾವಿಯ ರಾಜಕೀಯಕ್ಕೆ ಕೈ ಹಾಕಿದ್ದೇಕೆ' ಎಂದು ಕೇಳಿದರು.

'ಜೋಡೆತ್ತು ಎಂದು ಬಲವಂತವಾಗಿ ನನ್ನ ಕೈ ಎತ್ತಿಸಿದವರು, ಒಳಗೊಳಗೇ ರಾಜಕೀಯ ಮಾಡಿದರು. ಕುಮಾರಸ್ವಾಮಿ ಸರ್ಕಾರ ಉಳಿಸೋಕೆ ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದು ಮೊಸಳೆ ಕಣ್ಣೀರು ಹಾಕಿದರು. ಅವರನ್ನು ನಂಬಿ ನಾನು ಕುತ್ತಿಗೆ ಕೊಯ್ದುಕೊಂಡಿದ್ದೇನೆ. ನಿಮ್ಮ ಕುತ್ತಿಗೆಯನ್ನೂ ಕೊಯ್ದಿದ್ದೇನೆ' ಎಂದು ಪಕ್ಷದ ಮುಖಂಡರನ್ನುದ್ದೇಶಿಸಿ ಹೇಳಿದರು.

'ಜೀವನದಲ್ಲಿ ಯಾವತ್ತೂ ಡಿ.ಕೆ. ಶಿವಕುಮಾರ್ ಜತೆ ರಾಜಿ ಆಗಿಲ್ಲ. ಒಮ್ಮೆ ಅವರ ಜತೆ ಸೇರಿ ಸರ್ಕಾರ ರಚಿಸಿ ಈಗಲೂ ನೋವು ಅನುಭವಿಸುವಂತಾಗಿದೆ. ಅವರು ಒಮ್ಮೆ ತಿಹಾರ್ ಜೈಲು ನೋಡಿಕೊಂಡು ಬಂದಿದ್ದಾರೆ. ಕಾಯಂ ಆಗಿ ಅಲ್ಲಿಗೆ ಹೋದರೂ ಆಶ್ಚರ್ಯವಿಲ್ಲ. ನಮ್ಮನ್ನು ಹಾಸನಕ್ಕೆ ಓಡಿಸಬಹುದು. ಆದರೆ, ಶಿವಕುಮಾರ್ ತಿಹಾರ್ ಜೈಲಿಗೆ ಓಡುವ ಕಾಲ ಸಮೀಪಿಸುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

'2024ರಲ್ಲೇ ಕಾಂಗ್ರೆಸ್ ಸರ್ಕಾರ ಪತನ ಆಗಲಿದೆ. ಮತ್ತೊಮ್ಮೆ ಚುನಾವಣೆ ಬರಲಿದೆ. ಆಗ ಶಿವಕುಮಾರ್ ಅಭ್ಯರ್ಥಿಯಾಗುವುದರ ಬಗ್ಗೆಯೇ ಅನುಮಾನವಿದೆ' ಎಂದು ಹೇಳಿದರು.

ಶಾಮನೂರು ಹೇಳಿಕೆ ಸತ್ಯ: ಶ್ರೀಶೈಲ ಶ್ರೀ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಿಂಗಾಯತ ಅಧಿಕಾರಿಗಳ ಕಡೆಗಣನೆ ಬಗ್ಗೆ ಶಾಸಕ ಶಾಮನೂರು ಶಿವಶಂಕರಪ್ಪ ಧ್ವನಿ ಎತ್ತಿದ್ದಾರೆ. ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಶ್ರೀಶೈಲ ಪೀಠದ ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಇಲ್ಲಿ ಭಾನುವಾರ ಏರ್ಪಡಿಸಿದ್ದ 'ವೀರಭದ್ರೇಶ್ವರ ಜಯಂತ್ಯುತ್ಸವ' ಕಾರ್ಯಕ್ರಮದಲ್ಲಿ ಅವರು, 'ಶಾಮನೂರು ಅವರು ಹೇಳಿದ್ದು ಅಸತ್ಯವಲ್ಲ. ವೀರಶೈವ ಲಿಂಗಾಯತ ಅಧಿಕಾರಿಗಳಿಗೆ ನಿರೀಕ್ಷಿತ ಸ್ಥಾನಮಾನ ನೀಡಲಾಗಿಲ್ಲ' ಎಂದರು.

'ಸಮುದಾಯದ ಎಲ್ಲ ಉಪ ಪಂಗಡಗಳು ರಾಜ್ಯದ ಒಬಿಸಿ ಪಟ್ಟಿಯಲ್ಲಿವೆ. ಕೇಂದ್ರದ ಒಬಿಸಿ ಪಟ್ಟಿಯಲ್ಲಿ 17 ಉಪ ಪಂಗಡಗಳಷ್ಟೇ ಇವೆ. ಉಳಿದ ಉಪ ಪಂಗಡಗಳನ್ನು ಪಟ್ಟಿಗೆ ಸೇರಿಸಬೇಕು. ಇದಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಬೇಕು' ಎಂದು ಒತ್ತಾಯಿಸಿದರು.

ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು, ಮಾತನಾಡಿ, 'ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆ ಕುರಿತು ಸಮುದಾಯದ ಸಚಿವರು, ಶಾಸಕರು, ಸಂಸದರು ಸದನಗಳಲ್ಲಿ ಧ್ವನಿ ಎತ್ತಿ ಹೋರಾಟಕ್ಕೆ ಬಲ ತುಂಬಬೇಕು. ಇಲ್ಲದಿದ್ದರೆ, ಅವರನ್ನೇ ಬಹಿಷ್ಕರಿಸಲಾಗುವುದು' ಎಂದರು.

'ಸಮಾಜದ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ, ಲಕ್ಷ್ಮಣ ಸವದಿ ಸೇರಿ ಇತರ ನಾಯಕರ ದಮನ ಯತ್ನ ಹಾಗೂ ಸಮುದಾಯದ ಮಠಗಳು, ಮಠಾಧೀಶರ ಮೇಲೆ ದಾಳಿಗಳು ನಡೆದಿವೆ. ಆದರೂ ನಮ್ಮವರನ್ನು ರಕ್ಷಿಸಿಕೊಳ್ಳುವಲ್ಲಿ ಹಿಂದೆ ಬಿದ್ದೆವು' ಎಂದು ಅಭಿಪ್ರಾಯಪಟ್ಟರು.

'ಧೈರ್ಯದಿಂದ ಮಾತನಾಡಿದ್ದಾರೆ'

ಬೆಂಗಳೂರು: 'ಈ ಸರ್ಕಾರದಲ್ಲಿ ಹಲವು ಸಮುದಾಯಗಳ ಅಧಿಕಾರಿಗಳ ಪರಿಸ್ಥಿತಿ ಏನಾಗಿದೆ ಎನ್ನುವುದು ಗೊತ್ತಿದೆ. ಅದಕ್ಕೆ ಯಾವ ಮಾನದಂಡ ಎಂಬುದೂ ತಿಳಿದಿದೆ. ಈ ಬಗ್ಗೆ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಧೈರ್ಯದಿಂದ ಮಾತನಾಡಿದ್ದಾರೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯ ಕೇತಗಾನಹಳ್ಳಿಯಲ್ಲಿ ಭಾನುವಾರ ಪಕ್ಷದ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಅಧಿಕಾರಿಗಳು ಮತ್ತು ನೌಕರ ವರ್ಗದವರಲ್ಲಿ ಸರ್ಕಾರದ ವಿರುದ್ಧ ಅಸಮಾಧಾನ ಇದೆ. ಅದು ಚುನಾವಣೆ ಸಂದರ್ಭದಲ್ಲಿ ಸ್ಫೋಟಗೊಳ್ಳಲಿದೆ' ಎಂದು ಹೇಳಿದರು.

'ವೀರಶೈವ–ಲಿಂಗಾಯತ ಅಧಿಕಾರಿಗಳಿಗೆ ಎಷ್ಟು ಸ್ಥಾನ ಕೊಟ್ಟಿದ್ದೀರಿ ಎನ್ನುವುದಕ್ಕಿಂತ ಯಾವ ಸ್ಥಾನ ಕೊಟ್ಟಿದ್ದೀರಿ ಎನ್ನುವುದು ಮುಖ್ಯ. ಕೆಲಸಕ್ಕೆ ಬಾರದ ಜಾಗ ಕೊಟ್ಟು ಇಂತಹ ಸಮುದಾಯಕ್ಕೆ ಇಷ್ಟು ಸಂಖ್ಯೆ ಕೊಟ್ಟಿದ್ದೇವೆ ಎಂದರೆ ಏನು ಉಪಯೋಗ' ಎಂದು ಪ್ರಶ್ನಿಸಿದರು.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಾ ಮತ್ತು ಪಾ ವಲಯ, "ವಿದ್ಯುತ್ ಭವನ", ಎಂಆರ್‌ಎಸ್. ಕಾಲೋನಿ, ಶಿವಮೊಗ್ಗ – 577203
ದೂರವಾಣಿ: 08182–220445/446 CIN: U40109 KA 2002 SGC 030425
ಸಂಖ್ಯೆ: ಮುಇಂ(ವಿ)/ಅಇಂ(ಕ)/ಸಕಾನಿಇಂ(ಕ)/ಕಿ.ಇಂ(ತಾಂ)–2/2023–24/1238 ದಿನಾಂಕ: 26.09.2023
ಟೆಂಡರ್ ಪ್ರಕಟಣೆ (ಎರಡನೇ ಕರೆ)
ಮ.ವಿ.ಸ.ಕಂ.ನ ಶಿವಮೊಗ್ಗ ವಲಯ ವ್ಯಾಪ್ತಿಯ ಶಿವಮೊಗ್ಗ ಮತ್ತು ಚಿಕ್ಕಮಗಳೂರು ವೃತ್ತಗಳ ಕಛೇರಿಗಳಿಗೆ ಅವಶ್ಯವಿರುವ ಸ್ಟೇಷನರಿ ಮತ್ತು ರಿಜಿಸ್ಟರ್‌ಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್‌ನ್ನು ವಿದ್ಯುನ್ಮಾನ ಟೆಂಡರಿಂಗ್ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ಮೂಲಕ ಮಾತ್ರ ಸ್ವೀಕರಿಸಲಾಗುವುದು. ವಿವರವಾದ ಟೆಂಡರ್ ಪ್ರಕಟಣೆ ಬಗ್ಗೆ ಮಾಹಿತಿಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ದಿನಾಂಕ 09.10.2023ರಂದು ಅಥವಾ ನಂತರ ಲಾಗಿನ್ ಮಾಡಿ ವಿವರ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಈ ಕೆಳ ಸಹಿದಾರರ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.
ಸಹಿ/– ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಮಂ.ವಿ.ಸ.ಕಂ., ಶಿವಮೊಗ್ಗ
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
E.S.I.S.M. SERVICES KARNATAKA
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು–10.
ಸಂ: Tie-up/01/2023-24 ದಿನಾಂಕ: 05.10.2023
ಪ್ರಕಟಣೆ
ಕಾರಾವಿ ಯೋ ವೈ ಸೇವೆಗಳ ಇಲಾಖೆಯಿಂದ ವಿಮಾದಾರರು ಮತ್ತು ಅವರ ಕುಟುಂಬದವರಿಗೆ ದ್ವಿತೀಯ ಹಂತದ ಚಿಕಿತ್ಸೆಯನ್ನು (Secondary Care Treatment) ಒದಗಿಸಲು ಕಾರಾವಿ ಯೋ ವೈ ಸೇವೆಗಳ ಇಲಾಖೆಯ ಜೊತೆ ಸರ್ಕಾರಿ/ಖಾಸಗಿ ಆಸ್ಪತ್ರೆಗಳೊಂದಿಗೆ: (ದಿನಾಂಕ: 01–12–2023 ರಿಂದ 30–11–2024) 01 ವರ್ಷದ ಅವಧಿಗೆ ಹೊಂದಾಣಿಕೆ ಮಾಡಿಕೊಳ್ಳುವ (Tie-up) ಸಂಬಂಧ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ನಮೂನೆ ವಿವರಗಳಿಗೆ ಹಾಗೂ ದಾಖಲೆಗಳನ್ನು ಸಲ್ಲಿಸಲು ಸಂಪರ್ಕಿಸಬೇಕಾದ ವಿಳಾಸ ಮತ್ತು ವೆಬ್‌ಸೈಟ್: ನಿರ್ದೇಶಕರು, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ, 2ನೇ ಬ್ಲಾಕ್, ಬೆಂಗಳೂರು–560010. ಇ–ಮೇಲ್: dir-esi@karnataka.gov.in ವೆಬ್‌ಸೈಟ್: https://esisms.karnataka.gov.in
ದಾಖಲಾತಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 25.10.2023ರ ಸಂಜೆ 5.30 ಗಂಟೆಯೊಳಗಾಗಿ. ಅರ್ಜಿಗಳನ್ನು ಸಲ್ಲಿಸಬೇಕಾದ ವಿಳಾಸ: Directorate of Employees State Insurance Scheme Medical Services, S. Nijalingappa Road, 2nd Block, Rajajinagar, Bangalore-560010.
Ph. No: 080-23324216
ಸಹಿ/– ನಿರ್ದೇಶಕರು,
ಕಾರಾವಿ. ಯೋಜನೆ ವೈದ್ಯಕೀಯ ಸೇವೆಗಳು
DIPR/CP/1613/SPAN/2023-24

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಳಿಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ(ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
	ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009				
1.	ದಕ್ಷಿಣ–1	ಬೆಂಜಮಂ/ಕಾನಿಅ(ದ–1)/ಸಅ/1306/ 2023–24 ದಿನಾಂಕ: 29.09.2023	ರೂ.63,66,577/– ರೂ.1,27,400/–	17.10.2023ರ ಸಂಜೆ 4:00 ಗಂಟೆಯವರೆಗೆ	19.10.2023ರ ಮಧ್ಯಾಹ್ನ 03:00 ಗಂಟೆಯ ನಂತರ
2.		ಬೆಂಜಮಂ/ಕಾನಿಅ(ದ–1)/ಸಅ/1307/ 2023–24 ದಿನಾಂಕ: 29.09.2023	ರೂ.17,62,844/– ರೂ.44,100/–		
3.		ಬೆಂಜಮಂ/ಕಾನಿಅ(ದ–1)/ಸಅ/1349/ 2023–24 ದಿನಾಂಕ: 03.10.2023	ರೂ.33,52,510/– ರೂ.67,100/–		
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ–1)				
	ಮುಖ್ಯ ಅಭಿಯಂತರರ ಕಛೇರಿ (ತ್ಯಾ.ನೀ.ನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009				
4.	(ತ್ಯಾ.ನೀ.ನಿ–ಎನ್) ವಿ.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/ 444/2023–24 ದಿನಾಂಕ: 03.10.2023 (ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದೆ)	ರೂ.14.36 ಲಕ್ಷಗಳು ರೂ.21,200/–	23.10.2023ರ ಸಂಜೆ 5:30 ಗಂಟೆಯವರೆಗೆ	25.10.2023ರ ಸಂಜೆ 04:00 ಗಂಟೆಗೆ
5.		ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/ 444/2023–24 ದಿನಾಂಕ: 03.10.2023	ರೂ.22.98 ಲಕ್ಷಗಳು ರೂ.54,500/–		
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ತ್ಯಾ.ನೀ.ನಿ–ಎನ್) ವಿ.ವ್ಯಾಲಿ				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/KAVITA/1620/2023-24

ರಿಲಯನ್ಸ್ ಇನ್ಶೂರೆನ್ಸ್ ಕಂಪನಿಗೆ ನೋಟಿಸ್

₹922 ಕೋಟಿ ಜಿಎಸ್‌ಟಿ ಕಟ್ಟಿ

ನವದೆಹಲಿ (ಪಿಟಿಐ): ರಿಲಯನ್ಸ್ ಕ್ಯಾಪಿಟಲ್ ಲಿ.ನ ಭಾಗವಾಗಿರುವ ರಿಲಯನ್ಸ್ ಜನರಲ್ ಇನ್ಶೂರೆನ್ಸ್ ಕಂಪನಿಗೆ (ಆರ್‌ಜೆಐಸಿ) ಜಿಎಸ್‌ಟಿ ಗುಪ್ತಚರ ವಿಭಾಗದ ಮಹಾ ನಿರ್ದೇಶನಾಲಯವು ₹922.58 ಕೋಟಿ ತೆರಿಗೆ ಪಾವತಿಸುವಂತೆ ಹಲವು ನೋಟಿಸ್‌ಗಳನ್ನು ನೀಡಿದೆ.

ಕಂಪನಿಗೆ ನಾಲ್ಕು ನೋಟಿಸ್‌ಗಳನ್ನು ನೀಡಲಾಗಿದೆ. ಮರು-ವಿಮೆ (ಮೊದಲ ವಿಮೆಯ ಎಲ್ಲ ಅಥವಾ ಕೆಲವು ಹೊಣೆಗಾರಿಕೆಗಳನ್ನು ಬೇರೊಂದು ವಿಮಾ ಕಂಪನಿಗೆ ವರ್ಗಾಯಿಸುವುದು) ಮತ್ತು ಸಹ-ವಿಮೆಯ (ಸಾಮಾನ್ಯವಾಗಿ ಆರೋಗ್ಯ ವಿಮೆಯಲ್ಲಿ ವಿಮಾ ಸಂಸ್ಥೆಯ ಹೊರತಾಗಿ ಇತರರು ಪಾವತಿಸಬೇಕಾದ ಮೊತ್ತ) ಮೇಲೆ ಈ ಮೊತ್ತವನ್ನು ಆರ್‌ಜೆಐಸಿ ಪಾವತಿಸಬೇಕಾಗಿದೆ ಎಂದು ನೋಟಿಸ್‌ಗಳಲ್ಲಿ ಹೇಳಲಾಗಿದೆ.

₹478.84 ಕೋಟಿ, ₹359.70 ಕೋಟಿ, ₹78.66 ಕೋಟಿ ಮತ್ತು ₹5.38 ಕೋಟಿ ಮೊತ್ತ ಪಾವತಿಸುಂತೆ ನಾಲ್ಕು ನೋಟಿಸ್‌ಗಳಲ್ಲಿ ಸೂಚಿಸಲಾಗಿದೆ.

ಸೆಪ್ಟೆಂಬರ್ 30ಕ್ಕೆ ಕೊನೆಗೊಂಡ ತ್ರೈಮಾಸಿಕದ ಲೆಕ್ಕ ಪರಿಶೋಧನೆ ವರದಿಯಲ್ಲಿ ಈ ಮೊತ್ತವನ್ನು ತೋರಿಸಬೇಕಾಗಿದೆ ಎಂದು ತರಿಗೆ ಪರಿಣತರು ಹೇಳಿದ್ದಾರೆ.

ಸದ್ಯ, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಮೂಲಕ ಪೂರ್ಣ ಸಾಲ ಮರುಪಾವತಿ ಪ್ರಕ್ರಿಯೆಯನ್ನು ಆರ್‌ಜೆಐಸಿ ನಡೆಸುತ್ತಿದೆ.

ಇದು ರಿಲಯನ್ಸ್ ಕ್ಯಾಪಿಟಲ್‌ನ ಪ್ರಮುಖ ಕಂಪನಿಯಾಗಿದೆ. ರಿಲಯನ್ಸ್ ಕ್ಯಾಪಿಟಲ್‌ನ ಒಟ್ಟು ಮೌಲ್ಯದಲ್ಲಿ ಈ ಕಂಪನಿಯ ಪಾಲು ಸುಮಾರು ಶೇ 70ರಷ್ಟಿದೆ.

ನೋಟಿಸ್‌ಗೆ ಕಾರಣಗಳೇನು?

- ಭಾರತ ಮತ್ತು ವಿದೇಶದ ವಿವಿಧ ಕಂಪನಿಗಳಿಗೆ ಮರು-ವಿಮೆ ಸೇವೆಗಳನ್ನು ಆರ್‌ಜೆಐಸಿ ಒದಗಿಸಿದೆ. ಅದಕ್ಕೆ ಕಮಿಷನ್ ಪಡೆದುಕೊಂಡಿದೆ. ಮರು-ವಿಮೆಯಿಂದ ಬರುವ ವರಮಾನಕ್ಕೆ ಜಿಎಸ್‌ಟಿ ಪಾವತಿಸಬೇಕಾಗುತ್ತದೆ ಎಂದು ಮೂಲಗಳು ಹೇಳಿವೆ. ಈ ಮೊತ್ತವು ₹478.84 ಕೋಟಿ. ಈ ಮೊತ್ತ ಪಾವತಿಸುವಂತೆ ಸೆ.28ರಂದು ನೋಟಿಸ್ ನೀಡಲಾಗಿದೆ
- ಸಹ-ವಿಮೆಯ ಕಂತುಗಳನ್ನು ಕಂಪನಿಯು ಪಡೆದುಕೊಂಡಿದೆ. ಅದಕ್ಕೆ ಜಿಎಸ್‌ಟಿ ಪಾವತಿಸಬೇಕಾಗುತ್ತದೆ. ಈ ಮೊತ್ತವು ₹359.70 ಕೋಟಿಯಷ್ಟಾಗಿದೆ. ಇದನ್ನು ಪಾವತಿಸುವಂತೆ ಸೆ.28ರಂದು ನೀಡಿದ ನೋಟಿಸ್‌ನಲ್ಲಿ ಹೇಳಲಾಗಿದೆ
- ಜಿಎಸ್‌ಟಿಯನ್ನು ಈಗಾಗಲೇ ಪಾವತಿಸಲಾಗಿದೆ ಎಂದು ವಾದಿಸಬಹುದು. ಆದರೆ, ಒಬ್ಬ ವ್ಯಕ್ತಿಯು ಇನ್ನೊಬ್ಬರ ಪರವಾಗಿ ಜಿಎಸ್‌ಟಿ ಸಂಗ್ರಹಿಸಿ ಪಾವತಿಸುವುದಕ್ಕೆ ಜಿಎಸ್‌ಟಿ ಕಾಯ್ದೆಯಲ್ಲಿ ಅವಕಾಶ ಇಲ್ಲ

ಕಂಪನಿಯ ವಾದವೇನು?

- ಮುಖ್ಯ ವಿಮಾದಾರ ಸಂಸ್ಥೆಯು ಕಂತಿನ ಪೂರ್ಣ ಮೊತ್ತಕ್ಕೆ ಜಿಎಸ್‌ಟಿ ಪಾವತಿಸಿರುತ್ತದೆ. ಹಾಗಾಗಿ, ಇದಕ್ಕೆ ಸಂಬಂಧಿಸಿ ನಂತರ ನಡೆಯುವ ವಹಿವಾಟಿಗೆ ಜಿಎಸ್‌ಟಿ ಪಾವತಿಸುವ ಅಗತ್ಯ ಇಲ್ಲ

ಜಾತಿ ತಾರತಮ್ಯ ವಿರೋಧಿ ಮಸೂದೆ ಅಂಕಿತಕ್ಕೆ ಗವರ್ನರ್ ನಿರಾಕರಣೆ

ವಾಷಿಂಗ್ಟನ್ (ಪಿಟಿಐ): ಕ್ಯಾಲಿಫೋರ್ನಿಯಾದ ಸರ್ಕಾರ ರೂಪಿಸಿದ್ದ ಜಾತಿ ತಾರತಮ್ಯ ವಿರೋಧಿ ಮಸೂದೆಗೆ ಅಂಕಿತ ಹಾಕಲು ಗವರ್ನರ್ ಗೇವಿನ್ ನ್ಯೂಸಮ್ ನಿರಾಕರಿಸಿದ್ದಾರೆ.

‘ಈ ಮಸೂದೆ ಅನಗತ್ಯವಾಗಿತ್ತು. ಜಾತಿ ಆಧಾರಿತ ತಾರತಮ್ಯ ನಿಷೇಧಿಸುವ ಕಾಯ್ದೆ ಈಗಾಗಲೇ ಜಾರಿಯಲ್ಲಿದೆ’ ಎಂದು ಗವರ್ನರ್ ಹೇಳಿದ್ದಾರೆ.

ಕ್ಯಾಲಿಫೋರ್ನಿಯಾದ ಜನಪ್ರತಿನಿಧಿಗಳ ಸಭೆ ಮತ್ತು ಸೆನೆಟ್ ಬಹುಮತದಿಂದ ಮಸೂದೆಯನ್ನು ಈಚೆಗೆ ಅಂಗೀಕರಿಸಿದ್ದವು.

ಮಸೂದೆಗೆ ಅಂಕಿತ ಹಾಕಲು ನಿರಾಕರಿಸಿರುವ ಗವರ್ನರ್ ಅವರ ನಿರ್ಧಾರವನ್ನು ರಾಜ್ಯದಲ್ಲಿರುವ ಹಿಂದೂಗಳು, ಭಾರತ ಮೂಲದ ಅಮೆರಿಕನ್ನರು ಸ್ವಾಗತಿಸಿದ್ದಾರೆ. ದಲಿತಪರ ಸಂಘಟನೆ ಸೇರಿದಂತೆ ಹಲವು ಸಂಘಟನೆಗಳು ಕೂಡ ಸ್ವಾಗತಿಸಿವೆ.

‘ರಾಜ್ಯದಲ್ಲಿ ಪ್ರತಿಯೊಬ್ಬರು ಘನತೆ, ಗೌರವ ಪಡೆಯಲು ಅರ್ಹರಿದ್ದಾರೆ ಎಂದು ನಾವು ಭಾವಿಸುತ್ತೇವೆ. ಅವರು ಯಾರು, ಎಲ್ಲಿಂದ ಬಂದರು, ಯಾರನ್ನು ಪ್ರೀತಿಸುತ್ತಾರೆ, ಎಲ್ಲಿ ವಾಸವಿದ್ದಾರೆ ಎಂಬುದು ಮುಖ್ಯವಲ್ಲ’ ಎಂದು ಗವರ್ನರ್ ನ್ಯೂಸಮ್ ಅವರು ಈ ಸಂಬಂಧ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಗೇವಿನ್ ನ್ಯೂಸಮ್

‘ಇದೇ ಕಾರಣದಿಂದ ಕ್ಯಾಲಿಫೋರ್ನಿಯಾದಲ್ಲಿ ಈಗಾಗಲೇ ಲಿಂಗ, ವರ್ಣ, ಜನಾಂಗ, ಧರ್ಮ, ಕೌಟುಂಬಿಕ ಹಿನ್ನೆಲೆ, ರಾಷ್ಟ್ರೀಯತೆ, ಅಂಗವೈಕಲ್ಯ, ಲಿಂಗತ್ವ ಮತ್ತು ಇತರೆ ಅಂಶಗಳ ಆಧಾರದಲ್ಲಿ ತಾರತಮ್ಯ ಎಸಗುವುದನ್ನು ನಿಷೇಧಿಸಲಾಗಿದೆ. ಈ ವಿಷಯದಲ್ಲಿ ಜನರ ಹಕ್ಕುಗಳ ರಕ್ಷಣೆಯಾಗಬೇಕು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿದೆ. ಹಾಲಿ ಕಾಯ್ದೆಯಲ್ಲಿ ಜಾತಿ ಆಧಾರಿತ ತಾರತಮ್ಯ ನಿಷೇಧಿಸಿರುವ ಕಾರಣ ಈ ಮಸೂದೆ ಅನಗತ್ಯ. ಹೀಗಾಗಿ, ‘ಎಸ್‌ಬಿ403’ ಹೆಸರಿನ ಮಸೂದೆಗೆ ಅಂಕಿತ ಹಾಕಲಾಗದು’ ಎಂದು ಅವರು ವಿವರಿಸಿದ್ದಾರೆ.

ಡೆಮಾಕ್ರಟಿಕ್ ಪಕ್ಷದ ನಾಯಕ ಅಜಯ್ ಭುಟೋರಿಯಾ ಅವರು ಈ ಕುರಿತು ನೀಡಿರುವ ಹೇಳಿಕೆಯಲ್ಲಿ, ‘ಇದು, ಸ್ಮರಣೀಯ ಬೆಳವಣಿಗೆ. ಇದಕ್ಕಾಗಿ ಗವರ್ನರ್ ಅವರಿಗೆ ಕೃತಜ್ಞತೆಗಳು’ ಎಂದು ಹೇಳಿದ್ದಾರೆ.

ಗೃಹ ಸಾಲ ಬೇಗ ತೀರಿಸುವುದು ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

2020ರಲ್ಲಿ, ಅಂದರೆ ಕೋವಿಡ್ ಸಮಯದಲ್ಲಿ ಶೇ 6.7ರಷ್ಟಿದ್ದ ಗೃಹ ಸಾಲದ ಮೇಲಿನ ಬಡ್ಡಿ ದರ ಈಗ ಶೇ 9ರ ಆಸುಪಾಸಿನಲ್ಲಿದೆ. ಆಗ ಸಾಲ ಪಡೆದಿರುವ ಹೆಚ್ಚಿನವರಿಗೆ ಈಗ ಮಾಸಿಕ ಕಂತಿನ ಮೊತ್ತ ಜಾಸ್ತಿಯಾಗಿದೆ. ₹50 ಲಕ್ಷ ಸಾಲವನ್ನು ಶೇ 6.7ರ ಬಡ್ಡಿ ದರದಲ್ಲಿ 20 ವರ್ಷಗಳಿಗೆ ಪಡೆದಿದ್ರೆ ಮಾಸಿಕ ಕಂತು ₹37,870 ಪಾವತಿಸಬೇಕಿತ್ತು. ಆದರೆ ಈಗ ಅದೇ ಸಾಲಕ್ಕೆ ಬಡ್ಡಿ ದರ ಶೇ 9 ಆಗಿರುವುದರಿಂದ ಮಾಸಿಕ ಕಂತು ₹44,986 ಆಗಿದೆ. ಈ ಹೊತ್ತಿನಲ್ಲಿ ಸಾಲದ ಹೊರೆಯನ್ನು ಬೇಗ ಇಳಿಸಿಕೊಳ್ಳೋದು ಹೇಗೆ ಎಂದು ಸಾಲಗಾರರು ಆಲೋಚನೆ ಮಾಡುತ್ತಿದ್ದಾರೆ. ಸಾಲ ಮರುಪಾವತಿ ಪ್ರಕ್ರಿಯೆಯಲ್ಲಿ ಸಣ್ಣ ಬದಲಾವಣೆ ಮಾಡಿಕೊಂಡರೆ ಹೇಗೆ ಸಾಲದ ಮೇಲಿನ ಬಡ್ಡಿ ಕಡಿಮೆ ಮಾಡಿಕೊಳ್ಳುವ ಜೊತೆಗೆ ಮರುಪಾವತಿ ಅವಧಿಯನ್ನೂ ತಗ್ಗಿಸಿಕೊಳ್ಳಬಹುದು ಎನ್ನುವುದರ ಪ್ರಾಯೋಗಿಕ ವಿವರಣೆ ಈ ಲೇಖನದಲ್ಲಿದೆ.

ಆರಂಭದಲ್ಲಿ ಬಡ್ಡಿಗೇ ಸಿಂಹಪಾಲು: ಗೃಹ ಸಾಲದ ಆರಂಭಿಕ ವರ್ಷಗಳಲ್ಲಿ ಪಾವತಿಸುವ ಕಂತುಗಳ ಸಿಂಹಪಾಲು ಬಡ್ಡಿಗೇ ಹೋಗುತ್ತದೆ. ಅಸಲಿನ ಮೊತ್ತಕ್ಕೆ ಹೋಗುವ ಪಾಲು ತೀರಾ ಕಡಿಮೆ. ಉದಾಹರಣೆಗೆ ಶೇ 9ರ ಬಡ್ಡಿ ದರದಲ್ಲಿ 20 ವರ್ಷಗಳಿಗೆ ₹50 ಲಕ್ಷ ಗೃಹ ಸಾಲ ಪಡೆದಿದ್ದು ಮಾಸಿಕ ₹44,986 ಕಂತು ಪಾವತಿಸುತ್ತಿದ್ದೀರಿ ಎಂದು ಭಾವಿಸಿ. ಇದರಂತೆ ಮೊದಲ ವರ್ಷ ₹5 ಲಕ್ಷ 40 ಸಾವಿರ ಪಾವತಿಸಿರುತ್ತೀರಿ. ಈ ಪೈಕಿ ₹4 ಲಕ್ಷ 46 ಸಾವಿರ ಬಡ್ಡಿಗೆ ಹೋಗುತ್ತದೆ. ಉಳಿದ ₹94 ಸಾವಿರ ಮಾತ್ರ ಅಸಲಿನ ಮೊತ್ತಕ್ಕೆ ಸೇರ್ಪಡೆಯಾಗುತ್ತದೆ. ಎರಡನೇ ವರ್ಷ ₹4 ಲಕ್ಷದ 38 ಸಾವಿರ ಬಡ್ಡಿಗೆ ಹೋಗುತ್ತದೆ. ₹1 ಲಕ್ಷದ 2 ಸಾವಿರ ಮಾತ್ರ ಅಸಲಿನ ಬಾಬ್ತಿಗೆ ಸೇರುತ್ತದೆ. ಈ ಲೆಕ್ಕಾಚಾರದಂತೆ ₹50 ಲಕ್ಷದ ಸಾಲದ ಬಾಬ್ತಿನಲ್ಲಿ ಅರ್ಧದಷ್ಟು ಸಾಲ ತೀರಿಸಲು 13 ವರ್ಷಗಳು ಬೇಕಾಗುತ್ತದೆ. ಹಾಗಾಗಿ ಗೃಹ ಸಾಲ ಪಡೆದವರು ಎಷ್ಟು ಸಾಧ್ಯವೋ ಅಷ್ಟು ಅವಧಿಪೂರ್ವ ಹೆಚ್ಚುವರಿ ಪಾವತಿಗಳನ್ನು ಮಾಡಿದರೆ ಒಳಿತು. ಗೃಹ ಸಾಲದ ಮೇಲಿನ ಬಡ್ಡಿಯನ್ನು ಒಟ್ಟು ಬಾಕಿಯ ಮೊತ್ತದ ಮೇಲೆ ಲೆಕ್ಕ ಹಾಕುವುದರಿಂದ ಅಸಲಿನ ಮೊತ್ತ ಎಷ್ಟು ಕಡಿಮೆ ಮಾಡಲು ಪ್ರಯತ್ನಿಸುವಿರೋ ಅಷ್ಟು ನಿಮಗೆ ಲಾಭವಾಗುತ್ತದೆ. ವಾರ್ಷಿಕವಾಗಿ ಹೆಚ್ಚಳವಾಗುವ ವೇತನ, ಬೋನಸ್ ಹಣ, ಇನ್ನ್ಯಾವುದಾದರೂ ಹೂಡಿಕೆಯಿಂದ ಬಂದ ಲಾಭದ ಹಣ, ಹೆಚ್ಚುವರಿ ಉಳಿತಾಯದ ಹಣವನ್ನು ಗೃಹ ಸಾಲದ ಅಸಲಿಗೆ ಕಟ್ಟಿದರೆ ಬೇಗ ಸಾಲ ತೀರಿಸಲು ಸಾಧ್ಯವಾಗುತ್ತದೆ.

ಬೇಗ ತೀರಿಸುವುದು ಹೇಗೆ?: ₹50 ಲಕ್ಷ ಸಾಲವನ್ನು ಶೇ 9ರ ಬಡ್ಡಿ ದರದಲ್ಲಿ 20 ವರ್ಷಗಳ ಅವಧಿಗೆ ತೆಗೆದುಕೊಂಡರೆ ಮಾಸಿಕ ಕಂತು (ಇಎಂಐ) ₹44,986 ಪಾವತಿಸಬೇಕಾಗುತ್ತದೆ. ಇದೇ ರೀತಿ ಮಾಸಿಕ ₹44,986 ಅನ್ನು 20 ವರ್ಷಗಳ ಕಾಲ ಪಾವತಿಸಿದರೆ ಅಸಲಿನ ಮೊತ್ತ ₹50 ಲಕ್ಷ ಮತ್ತು ಬಡ್ಡಿಯ ಮೊತ್ತ ₹57 ಲಕ್ಷದ 97 ಸಾವಿರ ಸೇರಿ ಒಟ್ಟು ₹1 ಕೋಟಿ 8 ಲಕ್ಷ ಕಟ್ಟಬೇಕಾಗುತ್ತದೆ. ಉದಾಹರಣೆಗೆ ಪ್ರತಿ ವರ್ಷ 12 ಮಾಸಿಕ ಕಂತುಗಳೊಂದಿಗೆ ಒಂದು ಹೆಚ್ಚುವರಿ ಕಂತು (₹44986 X 1 ಇಎಂಐ) ಪಾವತಿಸಲು ಮುಂದಾಗುತ್ತೀರಿ ಎಂದು ಭಾವಿಸಿ. ಆಗ ನಿಮಗೆ ಬರೋಬ್ಬರಿ ₹13 ಲಕ್ಷ ಬಡ್ಡಿ ಹಣ ಉಳಿತಾಯವಾಗುತ್ತದೆ. ಇಷ್ಟೇ ಅಲ್ಲ, ನಿಮ್ಮ ಸಾಲದ ಮರುಪಾವತಿ ಅವಧಿ 3 ವರ್ಷಗಳು ಕಡಿಮೆಯಾಗಿ 17 ವರ್ಷಗಳಿಗೇ ಸಾಲ ತೀರುತ್ತದೆ. ಪ್ರತಿ ವರ್ಷ ಒಂದರ ಬದಲಿಗೆ 2 ಹೆಚ್ಚುವರಿ ಕಂತು (₹44,986 X 2 ಇಎಂಐ) ಪಾವತಿಸಲು ಮುಂದಾಗುತ್ತೀರಿ ಎಂದುಕೊಳ್ಳಿ. ಆಗ ನಿಮಗೆ ₹21 ಲಕ್ಷ ಬಡ್ಡಿ ಹಣ ಉಳಿಯುತ್ತದೆ. ಸಾಲದ ಮರುಪಾವತಿ ಅವಧಿಯೂ 5 ವರ್ಷಗಳಷ್ಟು ಕಡಿಮೆಯಾಗಿ 15 ವರ್ಷಗಳಿಗೇ ಸಾಲ ಕೊನೆಗೊಳ್ಳುತ್ತದೆ. ವಾರ್ಷಿಕ ಎರಡರ ಬದಲಿಗೆ 3 ಹೆಚ್ಚುವರಿ ಕಂತು (₹44,986 X 3 ಇಎಂಐ) ಪಾವತಿಸಿದರೆ ₹25 ಲಕ್ಷದ 50 ಸಾವಿರ ಬಡ್ಡಿ ಹಣ ಉಳಿತಾಯವಾಗಿ 13 ವರ್ಷಗಳ ಅವಧಿಗೇ ಸಾಲ ಮುಗಿಯುತ್ತದೆ. ಒಂದು ವರ್ಷದಲ್ಲಿ 4 ಹೆಚ್ಚುವರಿ ಕಂತು ಕಟ್ಟಿದರೆ (₹44,986 X 4 ಇಎಂಐ) ₹30 ಲಕ್ಷದ 50 ಸಾವಿರ ಬಡ್ಡಿ ಮೊತ್ತ ಉಳಿತಾಯವಾಗಿ 10 ವರ್ಷಗಳಲ್ಲೇ ಸಾಲ ತೀರುತ್ತದೆ.

ಅವಧಿಗೂ ಮುನ್ನ ಪಾವತಿ ಅವಕಾಶ: ಆರ್‌ಬಿಐ ನಿಯಮದ ಪ್ರಕಾರ ಗೃಹ ಸಾಲವನ್ನು ಅವಧಿಗೆ ಮುನ್ನ ಮರುಪಾವತಿಸಲು ಅವಕಾಶವಿದೆ. ಕೆಲ ಬ್ಯಾಂಕ್‌ಗಳು ಮೊದಲ 6 ತಿಂಗಳು ಮಾತ್ರ ಸಾಲ ಮರುಪಾವತಿಗೆ ನಿರ್ಬಂಧ ಹೇರುತ್ತವೆ. ಆದರೆ ನಂತರದಲ್ಲಿ ಯಾವುದೇ ಅಡೆತಡೆಯಿಲ್ಲದೆ ಹೆಚ್ಚುವರಿ ಸಾಲದ ಕಂತುಗಳನ್ನು ಪಾವತಿ ಮಾಡಬಹುದು. ಒಂದೇ ಬಾರಿ ಪೂರ್ತಿ ಸಾಲವನ್ನು ತೀರಿಸಲು ಕೂಡ ಅವಕಾಶವಿದೆ. ಇತ್ತೀಚೆಗೆ ಅಂದರೆ ಅಗಸ್ಟ್ ನಲ್ಲಿ ಹೊರಡಿಸಿರುವ ಆದೇಶದಲ್ಲಿ ಗ್ರಾಹಕರಿಗೆ ಸಾಲದ ಇಎಂಐ ಮೊತ್ತ ಹೆಚ್ಚಿಸಿಕೊಳ್ಳಲು ಮತ್ತು ಅವಧಿಗೂ ಮುನ್ನ ಸಾಲ ಮರುಪಾವತಿಸಲು ಬ್ಯಾಂಕ್‌ಗಳು ಅವಕಾಶ ಕಲ್ಪಿಸಬೇಕು ಎಂದು ಸೂಚಿಸಿದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಅಲ್ಪ ಗಳಿಕೆ ಕಂಡ ಷೇರುಪೇಟೆ ಸೂಚ್ಯಂಕಗಳು

ಅಕ್ಟೋಬರ್ 6ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಮೊತ್ತದ ಗಳಿಕೆ ಕಂಡಿವೆ. 65,995 ರಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.3ರಷ್ಟು ಜಿಗಿದಿದೆ. 19,653 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.1ರಷ್ಟು ಹೆಚ್ಚಳ ಕಂಡಿದೆ.ಅಮೆರಿಕ ಬಾಂಡ್ ಗಳಿಕೆಯಲ್ಲಿ ಹೆಚ್ಚಳ, ರೂಪಾಯಿ ಮೌಲ್ಯ ಕುಸಿತ, ಆರ್‌ಬಿಐ ಬಡ್ಡಿ ದರ ಯಥಾಸ್ಥಿತಿ, ತೈಲ ಬೆಲೆಯಲ್ಲಿ ಇಳಿಕೆ ಸೇರಿದಂತೆ ಇನ್ನೂ ಕೆಲ ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2, ಮಾಹಿತಿ ತಂತ್ರಜ್ಞಾನ ಶೇ 1.8, ಬಿಎಸ್ ಇ ಕ್ಯಾಪಿಟಲ್ ಗೂಡ್ಸ್ ಶೇ 1 ರಷ್ಟು ಗಳಿಸಿಕೊಂಡಿವೆ. ಬಿಎಸ್‌ಇ ಪವರ್ ಶೇ 2.5, ಮೆಟಲ್ ಶೇ 2.3 ಮತ್ತು ಟೆಲಿಕಾಂ ಶೇ 2ರಷ್ಟು ಕುಸಿದಿವೆ. ಈ ವಾರ ನಿಫ್ಟಿಯಲ್ಲಿ ಬಜಾಜ್ ಫಿನ್ ಸರ್ವ್ ಶೇ 6.13, ಟೈಟನ್ ಶೇ 5.11, ಬಜಾಜ್ ಫಿನ್ ಸರ್ವ್ ಶೇ 4.58, ಇನ್ಫೊಸಿಸ್ ಶೇ 3.01, ಅದಾನಿ ಎಂಟರ್ ಪ್ರೈಸಸ್ ಶೇ 2.66, ಟಿಸಿಎಸ್ ಶೇ 2.63 ಮತ್ತು ಎಲ್ ಆ್ಯಂಡ್ ಟಿ ಶೇ 2.32ರಷ್ಟು ಗಳಿಕೆ ಕಂಡಿವೆ. ಒಎನ್‌ಜಿಸಿ ಶೇ 5.42, ಎನ್‌ಟಿಪಿಸಿ ಶೇ 4.07, ಹಿಂಡಾಲ್ಕೋ ಶೇ 4.07, ಎಕ್ಸಿಸ್ ಬ್ಯಾಂಕ್ ಶೇ 3.45, ಮಾರುತಿ ಶೇ 2.91, ಡಾ ರೆಡ್ಡೀಸ್ ಲ್ಯಾಬೊರೇಟರಿಸ್ ಶೇ 2.9 ಸನ್ ಫಾರ್ಮಾ ಶೇ 2.71 ಮತ್ತು ಕೋಲ್ ಇಂಡಿಯಾ ಶೇ 2.51ಷ್ಟು ಕುಸಿತ ದಾಖಲಿಸಿವೆ.

ಮುನ್ನೋಟ: ಟಿಸಿಎಸ್, ಎಚ್‌ಸಿಎಲ್ ಟೆಕ್, ಇನ್ಫೊಸಿಸ್, ಡೆಲ್ಟಾ ಕಾರ್ಪ್, ಸೇರಿದಂತೆ ಪ್ರಮುಖ ಕಂಪನಿಗಳ ತ್ರೈಮಾಸಿಕ ಫಲಿತಾಂಶ ಈ ವಾರ ಹೊರಬೀಳಲಿದೆ. ಜಾಗತಿಕ ಮಾರುಕಟ್ಟೆಗಳ ಸ್ಥಿತಿಗತಿ ದೇಶಿಯ ಮಾರುಕಟ್ಟೆಗಳ ಮೇಲೆ ನೇರ ಪರಿಣಾಮ ಬೀರಲಿದೆ. ಸದ್ಯದ ಸ್ಥಿತಿಯಲ್ಲಿ ಹೂಡಿಕೆದಾರರು ಆಯ್ದ ಉತ್ತಮ ಕಂಪನಿಗಳ ಮೇಲೆ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು.

20 ವರ್ಷಗಳ ಸಾಲವನ್ನು 10 ವರ್ಷಗಳಲ್ಲೇ ತೀರಿಸುವುದು ಹೇಗೆ?

ಸಾಲದ ಮೊತ್ತ	ಸಾಲ ಪಡೆದಿರುವ ಅವಧಿ	ಮಾಸಿಕ ಕಂತು	ಪಾವತಿಸಬೇಕಿರುವ ಅಸಲು ಮೊತ್ತ	ಪಾವತಿಸಬೇಕಿರುವ ಬಡ್ಡಿ ಮೊತ್ತ	ಅಸಲು+ ಬಡ್ಡಿ ಸೇರಿ ಪಾವತಿಸುವ ಮೊತ್ತ	ವಾರ್ಷಿಕ ಹೆಚ್ಚುವರಿ ಕಂತು	ಹೆಚ್ಚುವರಿ ಕಂತು ಪಾವತಿಸಿದಾಗ ತಗ್ಗುವ ಬಡ್ಡಿ ಹೊರೆ	ಇಳಿಕೆಯಾಗುವ ಸಾಲ ಮರುಪಾವತಿ ವರ್ಷಗಳು
₹50 ಲಕ್ಷ	20 ವರ್ಷಗಳು	₹44,986	₹50 ಲಕ್ಷ	₹58 ಲಕ್ಷ	₹1 ಕೋಟಿ 8 ಲಕ್ಷ	₹44,986 x1 (1ಹೆಚ್ಚುವರಿ ಕಂತು)	₹13 ಲಕ್ಷ	3 ವರ್ಷ
						₹44,986 x2 (2ಹೆಚ್ಚುವರಿ ಕಂತು)	₹21 ಲಕ್ಷ	5 ವರ್ಷ
						₹44,986 x3 (3ಹೆಚ್ಚುವರಿ ಕಂತು)	₹26 ಲಕ್ಷ 50 ಸಾವಿರ	7 ವರ್ಷ
						₹44,986x4 (4ಹೆಚ್ಚುವರಿ ಕಂತು)	₹30 ಲಕ್ಷ 50 ಸಾವಿರ	10 ವರ್ಷ

ಗಮನಿಸಿ: ₹50 ಲಕ್ಷ ಗೃಹ ಸಾಲದ ಬಡ್ಡಿ ದರ ಶೇ 9 ಎಂದು ಭಾವಿಸಲಾಗಿದೆ. ಓದುಗರಿಗೆ ಗೊಂದಲ ಆಗದಿರಲಿ ಎನ್ನುವ ಕಾರಣದಿಂದ ಹತ್ತಿರದ ಅಂಕಿ- ಸಂಖ್ಯೆಗಳನ್ನು ರೌಂಡಾಫ್ ಮಾಡಲಾಗಿದೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕೆನಡಾ: ಭಾರತೀಯರ ಉದ್ಯೋಗಕ್ಕೂ ಪೆಟ್ಟು?

ಟೊರಾಂಟೊ (ಪಿಟಿಐ): ಖಾಲಿಸ್ತಾನ ಪರ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿದಂತೆ ಎರಡು ದೇಶಗಳ ನಡುವೆ ಸೃಷ್ಟಿಯಾಗಿರುವ ದ್ವಿಪಕ್ಷೀಯ ಬಿಕ್ಕಟ್ಟು, ಕೆನಡಾದಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಉದ್ಯೋಗದ ಮೇಲೂ ಪರಿಣಾಮ ಬೀರುವ ಆತಂಕ ಕಾಡುತ್ತಿದೆ.

ಕೆನಡಾದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು 8,07,750 ಆಗಿದೆ. ಈ ಪೈಕಿ 2,26,450 ಭಾರತೀಯ ವಿದ್ಯಾರ್ಥಿಗಳಿದ್ದಾರೆ.‘ಈ ಬಿಕ್ಕಟ್ಟಿನ ಬಗ್ಗೆ ನಾನು ಚಿಂತಿಸುವುದಿಲ್ಲ. ಆದರೆ, ನನ್ನ ಭವಿಷ್ಯದ ಬಗ್ಗೆ ಭಯ ಕಾಡುತ್ತಿದೆ. ಈಗಾಗಲೇ, ಇಲ್ಲಿ ಸಾಕಷ್ಟು ಉದ್ಯೋಗದ ಅಭಾವ ಸೃಷ್ಟಿಯಾಗಿದೆ. ಈ ನಡುವೆಯೇ ನನ್ನ ವಿದ್ಯಾಭ್ಯಾಸ ಪೂರ್ಣಗೊಂಡ ಬಳಿಕ ಇಲ್ಲಿ ಸುರಕ್ಷಿತ ಕೆಲಸ ಸಿಗುತ್ತದೆಯೇ ಎಂಬ ಭರವಸೆ ನನಗಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಿದ್ಯಾರ್ಥಿಯೊಬ್ಬರು ಹೇಳಿದರು.

ಷೇರು ಮಾರಾಟಕ್ಕೆ 28 ಕಂಪನಿ ಸಜ್ಜು: ₹38 ಸಾವಿರ ಕೋಟಿ ಸಂಗ್ರಹದ ಗುರಿ

ವರ್ಷದ ಕೊನೆಗೆ ಐಪಿಒ ಸಂಭ್ರಮ

ಮುಂಬೈ (ಪಿಟಿಐ): ಈ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ 31 ಕಂಪನಿಗಳು ತಮ್ಮ ಆರಂಭಿಕ ಷೇರು ಮಾರಾಟ (ಕಂಪನಿ ಷೇರುಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸುವುದು–ಐಪಿಒ) ನಡೆಸುವ ಮೂಲಕ ದಾಖಲೆ ಬರೆದಿವೆ. ಮುಂದಿನ ಆರು ತಿಂಗಳಲ್ಲಿ 28 ಕಂಪನಿಗಳು ಆರಂಭಿಕ ಷೇರು ಮಾರಾಟ ನಡೆಸುವ ಚಿಂತನೆಯಲ್ಲಿವೆ. ಈ ಕಂಪನಿಗಳು ₹38 ಸಾವಿರ ಕೋಟಿ ಸಂಗ್ರಹಿಸುವ ಗುರಿ ಹೊಂದಿವೆ. ಇನ್ನೂ 41 ಕಂಪನಿಗಳು ಐಪಿಒ ಮೂಲಕ ₹44 ಸಾವಿರ ಕೋಟಿ ಸಂಗ್ರಹಿಸಲು ಭಾರತೀಯ ಷೇರು ನಿಯಂತ್ರಣ ಮಂಡಳಿಯ (ಸೆಬಿ) ಅನುಮತಿಗಾಗಿ ಕಾದಿವೆ ಎಂದು ವರದಿಯೊಂದು ಹೇಳಿದೆ.

ಈ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಆರಂಭಿಕ ಷೇರು ಮಾರಾಟ ನಡೆಸಿದ ಕಂಪನಿಗಳ ಸಂಖ್ಯೆ ಕಳೆದ ಆರ್ಥಿಕ ವರ್ಷದ ಈ ಅವಧಿಗೆ ಹೋಲಿಸಿದರೆ ದುಪ್ಪಟ್ಟುಗಿಂತಲೂ ಹೆಚ್ಚಾಗಿದೆ. ಕಳೆದ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ 14 ಕಂಪನಿಗಳು ಮಾತ್ರ ಐಪಿಒ ನಡೆಸಿದ್ದವು. ಈ ಆರ್ಥಿಕ ವರ್ಷದಲ್ಲಿ ಈ ಸಂಖ್ಯೆ 31ಕ್ಕೆ ಏರಿಕೆ ಆಗಿದೆ. ಆದರೆ, ಕಳೆದ ವರ್ಷದ ಈ ಅವಧಿಗೆ ಹೋಲಿಸಿದರೆ ಈ ವರ್ಷದಲ್ಲಿ ಸಂಗ್ರಹವಾದ ಮೊತ್ತ ಕಡಿಮೆ ಇದೆ. ಕಳೆದ ವರ್ಷದಲ್ಲಿ ₹35,456 ಕೋಟಿ ಸಂಗ್ರಹವಾಗಿದ್ದರೆ ಈ ಬಾರಿ ಈ ಮೊತ್ತವು ₹26,300 ಕೋಟಿಗೆ ಇಳಿದಿದೆ ಎಂದು ಪ್ರೈಮ್‌ಡಾಟಾಬೇಸ್ ಡಾಟ್‌ಕಾಂ ವಿವರಿಸಿದೆ.

ಐಪಿಒಗೆ ಮುಂದಾಗಿರುವ ಒಟ್ಟು 69 ಕಂಪನಿಗಳ ಪೈಕಿ ಮೂರು ಕಂಪನಿಗಳು ಹೊಸ ಯುಗದ ತಂತ್ರಜ್ಞಾನ ಕಂಪನಿಗಳಾಗಿವೆ. ಈ ಕಂಪನಿಗಳು ಒಟ್ಟು ₹12 ಸಾವಿರ ಕೋಟಿ ಸಂಗ್ರಹಿಸುವ ಗುರಿ ಹೊಂದಿವೆ ಎಂದು ಬಂಡವಾಳ ಮಾರುಕಟ್ಟೆ ವಿಶ್ಲೇಷಣಾ ಸಂಸ್ಥೆ ಪ್ರೈಮ್‌ಡಾಟಾಬೇಸ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರಣವ್ ಹಲ್ದಿಯಾ ಹೇಳಿದ್ದಾರೆ.

ಇವುಗಳ ಪೈಕಿ ಓಯೊ ಕಂಪನಿಯೊಂದೇ ₹8,300 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಈ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಐಪಿಒ ನೀಡಿದ ಕಂಪನಿಗಳ ಪೈಕಿ ತಂತ್ರಜ್ಞಾನ ಕಂಪನಿ ಇದ್ದಿದ್ದು ಯಾತ್ರಾ ಮಾತ್ರ. ಈ ಕಂಪನಿ ಐಪಿಒ ಮೂಲಕ ಸಂಗ್ರಹಿಸಿದ ಮೊತ್ತ ₹775 ಕೋಟಿ.

2024ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ಯಾವುದೇ ಐಪಿಒ ಬಿಡುಗಡೆ ಸಾಧ್ಯತೆ ಇಲ್ಲ. ಆದರೆ, ಅದಕ್ಕೂ ಮುಂಚೆ ಷೇರು ಮಾರುಕಟ್ಟೆಯಲ್ಲಿ ಚಟುವಟಿಕೆ ಗರಿಗೆದರಬಹುದು ಎಂಬುದು ಹಲ್ದಿಯಾ ಅವರ ಅಭಿಪ್ರಾಯ.

ಕಂಪನಿಗಳು ಯಾವುವು?

ಐಪಿಒ ನೀಡಲಿರುವ ಪ್ರಮುಖ ಕಂಪನಿಗಳು ಹೀಗಿವೆ: ಒಯೊ, ಟಾಟಾ ಟೆಕ್ನಾಲಜೀಸ್, ಜೆಎನ್‌ಕೆ ಇಂಡಿಯಾ, ಡಾಮ್ ಇಂಡಸ್ಟ್ರೀಸ್, ಎಪೀಜೆ ಸುರೇಂದ್ರ ಪಾರ್ಕ್ ಹೋಟೆಲ್ಸ್, ಇಪ್ಯಾಕ್ ಡ್ಯೂರೆಬಲ್ಸ್, ಬಿಎಲ್‌ಎಸ್ ಇ-ಸರ್ವಿಸಸ್, ಇಂಡಿಯಾ ಶೆಲ್ಟರ್ ಫಿನಾನ್ಸ್ ಕಾರ್ಪೊರೇಷನ್, ಸೆಲ್ಲೊ ವರ್ಲ್ಡ್, ಆರ್.ಕೆ. ಸ್ವಾಮಿ, ಫ್ಲ್ಯಾರ್ ರೈಟಿಂಗ್ ಇಂಡಸ್ಟ್ರೀಸ್, ಗೊ ಡಿಜಿಟ್ ಇನ್ಶೂರೆನ್ಸ್, ಕ್ರೀಡೊ ಬ್ರ್ಯಾಂಡ್ಸ್ ಮಾರ್ಕೆಟಿಂಗ್

ಟಾಟಾ ಟೆಕ್ನಾಲಜೀಸ್

ಟಾಟಾ ಮೋಟರ್ಸ್‌ನ ಅಂಗಸಂಸ್ಥೆ ಟಾಟಾ ಟೆಕ್ನಾಲಜೀಸ್. ಇದು ಆಟೊಮೊಬೈಲ್ ಎಂಜಿನಿಯರಿಂಗ್, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಪ್ರಮುಖ ಸಂಸ್ಥೆಯಾಗಿದೆ. ಬಿಡಿಭಾಗ ತಯಾರಿಸುವ 35 ಕಂಪನಿಗಳು ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದ 12 ಕಂಪನಿಗಳು ಈ ಸಂಸ್ಥೆಯ ಗ್ರಾಹಕರಾಗಿವೆ.

ಟಾಟಾ ಸಮೂಹದ ಕಂಪನಿಯೊಂದು 19 ವರ್ಷಗಳ ಬಳಿಕ ಐಪಿಒ ಬಿಡುಗಡೆ ಮಾಡಲಿದೆ. 19 ವರ್ಷಗಳ ಹಿಂದೆ, ಅಂದರೆ 2004ರಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಐಪಿಒ ಬಿಡುಗಡೆ ಮಾಡಿತ್ತು.

ಜೀರಿಗೆ ಮೆಣಸಿಗೆ ದಾಖಲೆ ಬೆಲೆ

ಕೆ.ಜಿಗೆ ₹1,500 ದರ, ಇಳುವರಿ ಗಣನೀಯವಾಗಿ ಇಳಿಕೆ

• ಎಚ್.ಎನ್. ಸತೀಶ್ ಜೈನ್

ಬಾಳೆಹೊನ್ನೂರು (ಚಿಕ್ಕಮಗಳೂರು ಜಿಲ್ಲೆ): ಮಲೆನಾಡು ಭಾಗದಲ್ಲಿ ಬೆಳೆಯುವ ಅತಿ ಹೆಚ್ಚು ಖಾರ ಹೊಂದಿರುವ ಜೀರಿಗೆ ಮೆಣಸಿಗೆ (ಗಾಂಧಾರಿ ಮೆಣಸು) ಇದೇ ಮೊದಲ ಬಾರಿಗೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹1,500 ದಾಖಲೆ ಬೆಲೆ ಬಂದಿದೆ.

ಇಂಗ್ಲಿಷ್‌ನಲ್ಲಿ ‘ಬರ್ಡ್ ಐ ಚಿಲ್ಲಿ’ ಎಂದು ಕರೆಯಲಾಗುವ ಈ ಮೆಣಸಿಗೆ ಈಗ ಎಲ್ಲಿಲ್ಲದ ಬೇಡಿಕೆ. ಹಪ್ಪಳ, ಉಪ್ಪಿನಕಾಯಿ, ಕಷಾಯ, ಸಾಂಬಾರಿನಲ್ಲಿ ಬಳಸಲಾಗುತ್ತದೆ. ಗರಿಷ್ಠ ಔಷಧ ಗುಣ ಹೊಂದಿರುವ ಈ ಮೆಣಸನ್ನು ಹಣ್ಣಾದಾಗ ಕೊಯ್ದು ಒಣಗಿಸಿ ಮಾರಾಟ ಮಾಡಲಾಗುತ್ತದೆ. ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರದಿಂದಲೂ ಬೇಡಿಕೆ ಇದೆ.

ಜೀರಿಗೆ ಮೆಣಸಿಗೆ ಕೆ.ಜಿಗೆ ಸಾಮಾನ್ಯವಾಗಿ ₹600 ರಿಂದ ₹800ರ ಆಸುಪಾಸಿನಲ್ಲಿ ದರ ಇರುತ್ತಿತ್ತು. ಆದರೆ, ಈ ಬಾರಿ ಮಳೆ ಕೊರತೆಯಿಂದಾಗಿ ಬೆಳೆ ನಾಶವಾಗಿದ್ದು, ಇಳುವರಿ ಕುಂಠಿತವಾಗಿದೆ. ತೋಟಗಳಲ್ಲಿ ಕಳೆನಾಶಕ ಸಿಂಪಡಣೆ, ಯಂತ್ರಗಳ ಸಹಾಯದಿಂದ ಕಳೆ ತೆಗೆಯುವ ಸಂದರ್ಭದಲ್ಲಿ ಮೆಣಸಿನ ಗಿಡಗಳು ನಾಶವಾಗಿದೆ. ಕಳಸ, ಶೃಂಗೇರಿ, ಕೊಪ್ಪ, ಜಯಪುರದ ಮಾರುಕಟ್ಟೆಯಲ್ಲಿ ಈ ಹಿಂದೆ ತಿಂಗಳಿಗೆ ಕ್ವಿಂಟಲ್‌ಗಟ್ಟಲೆ ಸಂಗ್ರಹವಾಗುತ್ತಿದ್ದ ಗಾಂಧಾರಿ ಮೆಣಸು ಈ ವರ್ಷ ಕೆ.ಜಿ. ಲೆಕ್ಕಕ್ಕೆ ಇಳಿದಿದೆ.

ಜೀರಿಗೆ ಮೆಣಸು

ಕೊಡಗು ಜಿಲ್ಲೆಯಲ್ಲೂ ಸ್ವಲ್ಪ ಪ್ರಮಾಣದಲ್ಲಿ ಗಾಂಧಾರಿ ಮೆಣಸು ಬೆಳೆಯಲಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಳೆಹೊನ್ನೂರು ಅತಿ ದೊಡ್ಡ ಮಾರುಕಟ್ಟೆಯಾಗಿದ್ದು ಹಾವೇರಿ, ಸಕಲೇಶಪುರ, ಶಿರಸಿ, ಆಂಧ್ರಪ್ರದೇಶದಿಂದ ವ್ಯಾಪಾರಿಗಳು ಬಂದು ಇಲ್ಲಿಂದ ಮೆಣಸು ಖರೀದಿಸುತ್ತಾರೆ. ಕೇರಳ, ತಮಿಳುನಾಡಿನಿಂದಲೂ ಸಣ್ಣ ವ್ಯಾಪಾರಿಗಳೂ ಜೀರಿಗೆ ಮೆಣಸು ತಂದು, ಇಲ್ಲಿನ ಸಗಟು ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ.

‘ಬಾಳೆಹೊನ್ನೂರಿನಿಂದ ವಿವಿಧ ರಾಜ್ಯಗಳಿಗೆ ಹಾಗೂ ರಾಜ್ಯದೊಳಗೆ ವರ್ಷಕ್ಕೆ ಸುಮಾರು 80 ರಿಂದ 90 ಕ್ವಿಂಟಲ್‌ನಷ್ಟು ಜೀರಿಗೆ ಮೆಣಸು ಮಾರಾಟವಾಗುತ್ತದೆ. ಆದರೆ, ಈ ಬಾರಿ ಮಾರುಕಟ್ಟೆಯಲ್ಲಿ ಈ ಮೆಣಸಿನ ತೀವ್ರ ಕೊರತೆ ಇರುವುದಿಂದ ಬೆಲೆಯಲ್ಲಿ ಏರಿಕೆಯಾಗಿದೆ. ಉತ್ತರ ಭಾರತದಲ್ಲಿ ಗಣೇಶ ಹಬ್ಬದಿಂದ ದೀಪಾವಳಿ ಹಬ್ಬದ ಅವಧಿಯಲ್ಲಿ ಈ ಮೆಣಸಿಗೆ ಹೆಚ್ಚು ಬೇಡಿಕೆ ಇರುತ್ತದೆ. ನಂತರ ದರ ಸರಾಸರಿ ಮಟ್ಟಕ್ಕೆ ಇಳಿಯುತ್ತದೆ’ ಎನ್ನುತ್ತಾರೆ ಪಟ್ಟಣದ ಜೀರಿಗೆ ಮೆಣಸಿನ ವ್ಯಾಪಾರಿ ನಯಾಜ್ ಅಹಮ್ಮದ್.

ಮೊದಲ ಖಾಸಗಿ ಚಿನ್ನದ ಗಣಿ ಮುಂದಿನ ವರ್ಷ ಆರಂಭ

ನವದೆಹಲಿ (ಪಿಟಿಐ): ಖಾಸಗಿ ವಲಯದ ಅತಿ ದೊಡ್ಡ ಚಿನ್ನದ ಗಣಿಯು ಮುಂದಿನ ವರ್ಷದ ಕೊನೆಯ ಹೊತ್ತಿಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಲಿದೆ ಎಂದು ಡೆಕ್ಕನ್ ಗೋಲ್ಡ್ ಮೈನ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹನುಮ ಪ್ರಸಾದ್ ತಿಳಿಸಿದ್ದಾರೆ.

ಡೆಕ್ಕನ್ ಗೋಲ್ಡ್ ಮೈನ್ಸ್ ಲಿ. (ಡಿಜಿಎಂಎಲ್) ಮುಂಬೈ ಷೇರು ಪೇಟೆಯಲ್ಲಿ ನೋಂದಣಿಯಾಗಿರುವ ದೇಶದ ಏಕೈಕ ಚಿನ್ನ ಶೋಧ ಸಂಸ್ಥೆಯಾಗಿದೆ. ಖಾಸಗಿ ಕ್ಷೇತ್ರದ ಮೊದಲ ಚಿನ್ನದ ಗಣಿಯನ್ನು ಜಿಯೊಮೈಸೂರ್ ಸರ್ವಿಸಸ್ ಲಿ. ಕಂಪನಿಯು ಅಭಿವೃದ್ಧಿಪಡಿಸುತ್ತಿದೆ. ಈ ಗಣಿಯು ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಜೊನ್ನಗಿರಿಯಲ್ಲಿದೆ.

2013ರಲ್ಲಿ ಗಣಿ ಮಂಜೂರು ಆಗಿತ್ತು. ಯೋಜನೆಯನ್ನು ಜಾರಿಗೊಳಿಸಲು 8–10 ವರ್ಷಗಳು ಬೇಕಾದವು. ಡಿಜಿಎಂಎಲ್‌ನ ಇನ್ನೊಂದು ಚಿನ್ನದ ಗಣಿ ಯೋಜನೆ ಕಿರ್ಗಿಸ್ತಾನದಲ್ಲಿದೆ. ಈ ಯೋಜನೆಯಲ್ಲಿ ಡಿಜಿಎಂಎಲ್ ಶೇ 60ರಷ್ಟು ಪಾಲು ಹೊಂದಿದೆ. ಇದು 2024ರ ನವೆಂಬರ್ ಒಳಗೆ ಕಾರ್ಯಾಚರಣೆ ಆರಂಭಿಸಲಿದೆ ಎಂದು ಪ್ರಸಾದ್ ವಿವರಿಸಿದ್ದಾರೆ.

ವಿಮಾನ ಪತನ: ಮೂವರ ಸಾವು

ಟೊರಾಂಟೊ (ಪಿಟಿಐ): ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದಲ್ಲಿ ಲಘು ವಿಮಾನ ಪತನಗೊಂಡು ಇಬ್ಬರು ಭಾರತೀಯ ತರಬೇತಿ ನಿರತ ಪೈಲಟ್‌ಗಳು ಸೇರಿ ಮೂವರು ಮೃತಪಟ್ಟಿದ್ದಾರೆ.

ಚಿಲ್ಲಿವಾಕ್ ನಗರದ ವಿಮಾನ ನಿಲ್ದಾಣದ ಬಳಿ ಸ್ಕೈಕ್ವೆಸ್ಟ್ ವಿಮಾನಯಾನ ಸಂಸ್ಥೆಗೆ ಸೇರಿದ ಎರಡು ಎಂಜಿನ್‌ಗಳ ಲಘುವಿಮಾನ ಪತನಗೊಂಡು ಮುಂಬೈನ ಅಭಯ್ ಗದ್ರು (25) ಮತ್ತು ಯಶ್ ರಾಮುಗಡೆ (25) ಎನ್ನುವವರು ಮೃತಪಟ್ಟಿದ್ದಾರೆ. ವಿಮಾನದ ಪೈಲಟ್‌ನ ಗುರುತು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಭಯ್ ಅವರು ಪೈಲಟ್ ತರಬೇತಿ ಪೂರ್ಣಗೊಳಿಸುವ ಸಲುವಾಗಿ ಮೂರು ವರ್ಷಗಳ ಹಿಂದೆ ಕೆನಡಾಕ್ಕೆ ತೆರಳಿದ್ದರು ಎಂದು ಅವರ ಸಂಬಂಧಿಕರು ತಿಳಿಸಿದ್ದಾರೆ.

ಯಶ್ ಅವರ ಬಗ್ಗೆ ಹೆಚ್ಚಿನ ಮಾಹಿತಿ ಲಭಿಸಿಲ್ಲ.ವಿಮಾನ ಪತನಕ್ಕೆ ಕಾರಣ ಏನೆಂಬುದು ತಿಳಿದುಬಂದಿಲ್ಲ. ಈ ಕುರಿತು ತನಿಖೆ ನಡೆಯುತ್ತಿದೆ ಎಂದು ಕೆನಡಾದ ಸಾರಿಗೆ ಸುರಕ್ಷತಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹555

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

NO FEE (labour contractor) ಬೇಕಾಗಿದ್ದಾರೆ TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 13,000 - 17,000. 8951315839, 7022770052

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ವ್ಯಾಪಾರ

Business to Business

Others

ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

ಶಿವನಂದಿ ಟ್ರಾವಲ್ಸ್, ಹನುಮಂತನಗರ, ಬೆಂಗಳೂರು.ಕಾಶಿಯಾತ್ರ ವಿಮಾನದಲ್ಲಿ 10ದಿನ 30.10.2023ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ವಾರಾಣಸಿ,ಪ್ರಯಾಗ್ ರಾಜ್. 9036056352, 9481027363.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/10 ಶಿರಡಿ, ಪಂಡರಪುರ ಪ್ಯಾಕೇಜ್. 6/11 ಕಾಶಿ ಪ್ಯಾಕೇಜ್. 16/11 ದೆಹಲಿ, ವೈಷ್ಣೋದೇವಿ ಪ್ಯಾಕೇಜ್.9591017782,9964527782

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ರೆಂಟಲ್ ಪ್ರಾಪರ್ಟೀಸ್

Accommodation Available

Commercial

4FLOOR COMMERCIAL Building For Rent Next to By-Pass on Hyd Main Rd Contact-9986670488/whats app

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಏಷ್ಯನ್ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕಲಾವಿದರಿಂದ ನೃತ್ಯ ಪ್ರದರ್ಶನ (ಎಡಚಿತ್ರ). ಪಥಸಂಚಲನದಲ್ಲಿ ಭಾರತ ತಂಡವನ್ನು ಮುನ್ನಡೆಸಿದ ಹಾಕಿ ಆಟಗಾರ ಪಿ.ಆರ್.ಶ್ರೀಜೇಶ್ –ಪಿಟಿಐ ಚಿತ್ರಗಳು

ಮೇಳೈಸಿದ ಸಂಸ್ಕೃತಿ ವೈಭವ, ತಂತ್ರಜ್ಞಾನದ ಚಮತ್ಕಾರ; ಮುಂದಿನ ಕೂಟಕ್ಕೆ ಜಪಾನ್ ಆತಿಥ್ಯ

ಏಷ್ಯನ್ ಕ್ರೀಡಾಕೂಟಕ್ಕೆ ವರ್ಣರಂಜಿತ ತೆರೆ

ಹಾಂಗ್‌ಝೌ (ಪಿಟಿಐ): ಭಾರತದ ಕ್ರೀಡಾಪಟುಗಳ ಪಾಲಿಗೆ ಅವಿಸ್ಮರಣೀಯವಾದ 19ನೇ ಏಷ್ಯನ್ ಕ್ರೀಡಾಕೂಟಕ್ಕೆ ಭಾನುವಾರ ತೆರೆಬಿತ್ತು. ಸಂಜೆ ನಡೆದ ವರ್ಣರಂಜಿತ ಸಮಾರೋಪ ಸಮಾರಂಭದಲ್ಲಿ ಚೀನಾದ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ತಂತ್ರಜ್ಞಾನದ ಚಮತ್ಕಾರಗಳು ಮೇಳೈಸಿದವು.

80,000 ಪ್ರೇಕ್ಷಕರಿಗೆ ಸ್ಥಳಾವಕಾಶವಿರುವ 'ಬಿಗ್ ಲೋಟಸ್' ಕ್ರೀಡಾಂಗಣದಲ್ಲಿ 75 ನಿಮಿಷಗಳವರೆಗೆ ನಡೆದ ಧ್ವನಿ, ಬೆಳಕಿನ ಅದ್ಭುತ ಪ್ರದರ್ಶನ, ಲೇಸರ್ ಷೋ, ಡಿಜಿಟಲ್ ಟರ್ಫ್ ಮೇಲಿನ ತ್ರಿಡಿ ಮೋಡಿ ಗಮನ ಸೆಳೆದವು.

45 ರಾಷ್ಟ್ರಗಳ ಅಥ್ಲೀಟುಗಳು ಎರಡು ವಾರಗಳ ಕಾಲ ನಡೆದ ಕ್ರೀಡಾ ಹಬ್ಬಕ್ಕೆ ವಿದಾಯ ಹೇಳಿದರು. ಸಮಾರೋಪ ಸಮಾರಂಭ, ಕ್ರೀಡೆ ಮತ್ತು ಸಂಸ್ಕೃತಿಯ ಸಮ್ಮಿಳಿತದಂತೆ ಇತ್ತು.

ಚೀನಾ ಪ್ರಧಾನಿ ಷಿ ಜಿನ್ ಪಿಂಗ್ ಮತ್ತು ಗಣ್ಯರ ಸಮ್ಮುಖದಲ್ಲಿ ಏಷ್ಯ ಒಲಿಂಪಿಕ್ ಕೌನ್ಸಿಲ್‌ನ (ಒಸಿಎ) ಹಂಗಾಮಿ ಮುಖ್ಯಸ್ಥ ರಣಧೀರ್ ಸಿಂಗ್ ಅವರು 19ನೇ ಕ್ರೀಡೆಗಳ ಮುಕ್ತಾಯವನ್ನು ಘೋಷಿಸಿದರು.

'ಏಷ್ಯದ ಯುವಜನತೆ ಏಷ್ಯನ್ ಕ್ರೀಡಾಕೂಟವನ್ನು ಭ್ರಾತೃತ್ವದ ಸ್ಫೂರ್ತಿ ಮತ್ತು ಮಾನವೀಯತೆಯ ಒಳಿತಿಗಾಗಿ ಆಚರಿಸಲಿ' ಎಂದು ಸಿಂಗ್ ಹೇಳಿದರು.

ಸೆಪ್ಟೆಂಬರ್ 23ರ ಉದ್ಘಾಟನೆ ಸಮಾರಂಭಕ್ಕೆ ಹೋಲಿಸಿದರೆ, ಸಮಾರೋಪ ಸಮಾರಂಭದಲ್ಲಿ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗಿತ್ತು.

ಭಾಗವಹಿಸಿದ ರಾಷ್ಟ್ರಗಳ ಧ್ವಜಧಾರಿಗಳು ಮೊದಲು ಸಾಲಿನಲ್ಲಿ ಕ್ರೀಡಾಂಗಣಕ್ಕೆ ಬಂದರು. ನಂತರ ಅಥ್ಲೀಟುಗಳು, ಅಧಿಕಾರಿಗಳು ಅವರ ಜೊತೆಗೂಡಿದರು. ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರು ಭಾರತದ ಧ್ವಜಧಾರಿಯಾಗಿದ್ದರು. ಭಾರತದ ಸುಮಾರು 100 ಅಥ್ಲೀಟುಗಳು ಮತ್ತು ಅಧಿಕಾರಿಗಳು ಪರೇಡ್‌ನಲ್ಲಿ ಭಾಗಿಯಾದರು. ಹಲವರು ಈ ಮೊದಲೇ ತವರಿಗೆ ಹೋಗಿದ್ದರು.

ಹಬ್ಬ ಮುಗಿದ ನಂತರ ಕಾಣುವ ವಿಷಣ್ಣ ರೀತಿಯ ವಾತಾವರಣದಲ್ಲಿ, ಮೊದಲ ಏಷ್ಯನ್ ಗೇಮ್ಸ್‌ನ ಧ್ವಜ, ಜ್ಯೋತಿ ಮತ್ತು ಒಸಿಎ ಧ್ವಜವನ್ನು ಜಪಾನ್‌ನ ನಗೋಯಾ ಐಚಿ ಗವರ್ನರ್ ಅವರಿಗೆ ಹಸ್ತಾಂತರಿಸಲಾಯಿತು. ನಗೋಯಾ ಮುಂದಿನ ಕ್ರೀಡೆಗಳ ಆತಿಥ್ಯ ವಹಿಸಲಿದೆ.

ಕೂಟದಲ್ಲಿ 13 ವಿಶ್ವ ದಾಖಲೆ

ಈ ಕ್ರೀಡೆಗಳಲ್ಲಿ ಒಟ್ಟು 13 ವಿಶ್ವದಾಖಲೆಗಳು, 26 ಏಷ್ಯನ್ ದಾಖಲೆಗಳು ಹಾಗೂ 97 ಕೂಟದಾಖಲೆಗಳು ನಿರ್ಮಾಣವಾದವು ಎಂದು ಏಷ್ಯಾ ಒಲಿಂಪಿಕ್ ಕೌನ್ಸಿಲ್‌ನ ಹಂಗಾಮಿ ಮಹಾನಿರ್ದೇಶಕ ವಿನೋದ್ ಕುಮಾರ್ ತಿವಾರಿ ತಿಳಿಸಿದರು.

ಕೋವಿಡ್ ಪಿಡುಗಿನಿಂದ ಒಂದು ವರ್ಷ ಮುಂದಕ್ಕೆ ಹೋಗಿದ್ದ ಈ ಕೂಟದಲ್ಲಿ 45 ರಾಷ್ಟ್ರಗಳ 12,047 ಕ್ರೀಡಾಪಟುಗಳು 40 ಕ್ರೀಡೆಗಳಲ್ಲಿ ಪಾಲ್ಗೊಂಡರು.

ಚಿನ್ನದ ದಾಖಲೆ ಸ್ಥಾಪಿಸಿದ ಚೀನಾ

'ಅತಿ ದೊಡ್ಡದೆನಿಸಿದ ಈ ಬಾರಿಯ ಏಷ್ಯನ್ ಕ್ರೀಡಾಕೂಟದಲ್ಲಿ ಚೀನಾ ಸಿಂಹಪಾಲು ಪದಕಗಳನ್ನು ಪಡೆಯಿತು. ಅದರಲ್ಲೂ ಅದು ಗೆದ್ದುಕೊಂಡ 201 ಚಿನ್ನ ದಾಖಲೆ ಎನಿಸಿತು. 2010ರ ಗುವಾಂಗ್‌ಝೌ (ಚೀನಾ) ಕ್ರೀಡಾಕೂಟದಲ್ಲಿ ಅದು 199 ಚಿನ್ನದ ಪದಕಗಳನ್ನು ಗೆದ್ದುಕೊಂಡಿತ್ತು. ದಾಖಲೆ ಸ್ವರ್ಣ ಪದಕಗಳ ಜೊತೆಗೆ ಆತಿಥೇಯರು 111 ಬೆಳ್ಳಿ, 71 ಕಂಚಿನ ಪದಕಗಳನ್ನೂ ಬಾಚಿಕೊಂಡರು.

ಜಪಾನ್ ಎರಡನೇ, ದಕ್ಷಿಣಕೊರಿಯಾ ಮೂರನೇ ಸ್ಥಾನ ಪಡೆದವು. ಪದಕಗಳ ಗಳಿಕೆಯಲ್ಲಿ ಸಾರ್ವಕಾಲಿಕ ದಾಖಲೆ ಬರೆದ ಭಾರತ ನಾಲ್ಕನೇ ಸ್ಥಾನಕ್ಕೆ ಬಡ್ತಿಪಡೆಯಿತು.

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	201	111	71	383
2	ಜಪಾನ್	52	67	69	188
3	ದಕ್ಷಿಣ ಕೊರಿಯಾ	42	59	89	190
4	**ಭಾರತ**	28	38	41	107
5	ಉಜ್ಬೇಕಿಸ್ತಾನ	22	18	31	71
6	ಚೀನಾ ತೈಪೆ	19	20	28	67
7	ಇರಾನ್	13	21	20	54
8	ಥಾಯ್ಲೆಂಡ್	12	14	32	58
9	ಬಹರೇನ್	12	3	5	20
10	ಉತ್ತರ ಕೊರಿಯಾ	11	18	10	39

ರಿಲಯನ್ಸ್ ಫೌಂಡೇಷನ್ ಕ್ರೀಡಾಪಟುಗಳ ಸಾಧನೆ

ಮುಂಬೈ: ರಿಲಯನ್ಸ್ ಫೌಂಡೇಷನ್ ಜತೆ ಗುರುತಿಸಿಕೊಂಡಿರುವ ಕ್ರೀಡಾಪಟುಗಳು ಚೀನಾದ ಹಾಂಗ್‌ಝೌನಲ್ಲಿ ಭಾನುವಾರ ಕೊನೆಗೊಂಡ ಏಷ್ಯನ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿದ್ದಾರೆ.

ಈ ಕೂಟದಲ್ಲಿ ಭಾರತ 107 ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದೆ. ಇದರಲ್ಲಿ ರಿಲಯನ್ಸ್ ಫೌಂಡೇಷನ್‌ನ ಅಥ್ಲೀಟ್‌ಗಳು ಗೆದ್ದ 12 ಪದಕಗಳೂ ಸೇರಿವೆ.

'ಜ್ಯೋತಿ ಯರ‍್ರಾಜಿ, ಕಿಶೋರ್ ಕುಮಾರ್ ಜೇನಾ ಮತ್ತು ಪಲಕ್ ಗುಲಿಯಾ ಸೇರಿದಂತೆ ಫೌಂಡೇಷನ್ ಜತೆ ಗುರುತಿಸಿಕೊಂಡಿರುವ ಅಥ್ಲೀಟ್‌ಗಳು ಉತ್ತಮ ಸಾಧನೆ ತೋರಿ ಪದಕ ಗೆದ್ದಿದ್ದಾರೆ. ಈ ಕೂಟದಲ್ಲಿ 100ಕ್ಕೂ ಅಧಿಕ ಪದಕ ಗೆದ್ದಿರುವ ಭಾರತ ತಂಡಕ್ಕೆ ಅಭಿನಂದನೆಗಳು. ನಮ್ಮ ಫೌಂಡೇಷನ್ ಸದಾ ಭಾರತ ತಂಡದ ಜತೆಗಿದೆ' ಎಂದು ರಿಲಯನ್ಸ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷರಾದ ನೀತಾ ಅಂಬಾನಿ ತಿಳಿಸಿದ್ದಾರೆ.

ಮ್ಯಾರಥಾನ್: ಅಕ್ಷಯ್, ಅಶ್ವಿನಿಗೆ ಎರಡನೇ ಸ್ಥಾನ

ಅನೀಶ್, ಜ್ಯೋತಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಿಸಸ್‌ನ ಅನೀಶ್ ಥಾಪಾ ಮತ್ತು ಮಹಾರಾಷ್ಟ್ರದ ಜ್ಯೋತಿ ಗಾವಟೆ ಅವರು ಭಾನುವಾರ ನಡೆದ ಬೆಂಗಳೂರು ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆದರು.

ಈ ಹಿಂದೆ ದೆಹಲಿ ಮ್ಯಾರಥಾನ್ ಜಯಿಸಿದ್ದ ಅನೀಶ್, 2 ಗಂಟೆ 18.06 ನಿಮಿಷಗಳೊಂದಿಗೆ ಅಗ್ರಸ್ಥಾನ ಪಡೆದರು. ಸರ್ವಿಸಸ್‌ನ ಅಕ್ಷಯ್ ಸೈನಿ (2 ಗಂಟೆ 25.04 ನಿ.) ಮತ್ತು ಉತ್ತರ ಪ್ರದೇಶದ ಕುಲದೀಪ್ ಸಿಂಗ್ (2 ಗಂಟೆ 26.38 ನಿ.) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ತುರುಸಿನ ಪೈಪೋಟಿ ನಡೆದ ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನಗಳನ್ನೂ ಮಹಾರಾಷ್ಟ್ರದ ಅಥ್ಲೀಟ್‌ಗಳು ತಮ್ಮದಾಗಿಸಿಕೊಂಡರು.

ಪ್ರಶಸ್ತಿ ಜಯಿಸಿದ ಜ್ಯೋತಿ ಅವರು 3 ಗಂಟೆ 8.53 ನಿಮಿಷಗಳಲ್ಲಿ ಗುರಿ ತಲುಪಿದರು. ಅಶ್ವಿನಿ ಜಾಧವ್ (3 ಗಂಟೆ 9 ನಿ.) ಎರಡನೇ ಸ್ಥಾನ ಪಡೆದರೆ, ಪ್ರಾಚಿ (4 ಗಂಟೆ 13.17 ನಿ.) ಮೂರನೇ ಸ್ಥಾನ ಗಳಿಸಿದರು.

ಪುರುಷರ ಹಾಫ್ ಮ್ಯಾರಥಾನ್ ಸ್ಪರ್ಧೆಯಲ್ಲಿ ವೈಭವ್ ಪಾಟೀಲ್ ಚಾಂಪಿಯನ್ ಆದರು. ಅವರು ನಿಗದಿತ ದೂರವನ್ನು 1 ಗಂಟೆ 11.50 ನಿ.ಗಳಲ್ಲಿ ಕ್ರಮಿಸಿದರು. ನಂಜುಂಡಪ್ಪ ಮುನಿಯಲ್ಲಪ್ಪ ಮತ್ತು ಗುರುಪ್ರಸಾದ್ ಅವರು ಬಳಿಕದ ಸ್ಥಾನಗಳನ್ನು ಪಡೆದುಕೊಂಡರು. ಮಹಿಳೆಯರ ವಿಭಾಗದಲ್ಲಿ ಬಿಜೋಯ ಬರ್ಮನ್ (1 ಗಂಟೆ 34.39 ಸೆ.) ಪ್ರಶಸ್ತಿ ಗೆದ್ದರು. ದೀಪಾ ನಾಯಕ್ ಮತ್ತು ಕೋಮಲಾ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಅನೀಶ್ ಥಾಪಾ (ಎಡ) ಮತ್ತು ಜ್ಯೋತಿ ಗಾವಟೆ –ಪ್ರಜಾವಾಣಿ ಚಿತ್ರ

ಬಾಲಕಿ ಶಾಲಾ ಶುಲ್ಕ ಭರಿಸಿದ ಕ್ರಿಕೆಟಿಗ ರಾಹುಲ್

ಹುಬ್ಬಳ್ಳಿ: ಧಾರವಾಡ ತಾಲ್ಲೂಕಿನ ತಡಸಿನಕೊಪ್ಪ ಗ್ರಾಮದ ಗ್ಲೋಬಲ್ ಎಕ್ಸಲೆನ್ಸ್ ಇಂಗ್ಲಿಷ್ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಶ್ರುತಿ ಕುಲಾವಿ ಅವರ ಶುಲ್ಕ ₹ 21 ಸಾವಿರ ಭರಿಸಲು ಕ್ರಿಕೆಟಿಗ ಕೆ.ಎಲ್. ರಾಹುಲ್ ನೆರವಾಗಿದ್ದಾರೆ. ಶಾಲೆಯ ಬ್ಯಾಂಕ್ ಖಾತೆಗೆ ಶನಿವಾರ ಹಣ ಜಮೆಯಾಗಿದೆ.

ಹುಬ್ಬಳ್ಳಿಯ ಸಾಮಾಜಿಕ ಕಾರ್ಯಕರ್ತ ಮಂಜುನಾಥ ಹೆಬಸೂರು ಅವರು ಈ ಹಿಂದೆ ವಿದ್ಯಾರ್ಥಿಯೊಬ್ಬನಿಗೆ ಹುಬ್ಬಳ್ಳಿಯ ಬಿವಿಬಿ ಕಾಲೇಜಿನಲ್ಲಿ ಪ್ರವೇಶ ಪಡೆಯಲು ರಾಹುಲ್ ಅವರಿಂದ ಆರ್ಥಿಕ ನೆರವು ಕೊಡಿಸಿದ್ದರು. ಅದನ್ನು ಅರಿತ ಶ್ರುತಿ ಕುಟುಂಬದವರು ಮಂಜುನಾಥ ಅವರನ್ನು ಸಂಪರ್ಕಿಸಿ, ನೆರವು ಕೋರಿದ್ದರು. ಮಂಜುನಾಥ್ ತಮ್ಮ ಸ್ನೇಹಿತನ ಮೂಲಕ ರಾಹುಲ್ ಅವರನ್ನು ಸಂಪರ್ಕಿಸಿ ನೆರವು ಕೊಡಿಸಿದ್ದಾರೆ.

ಶ್ರುತಿ ಅವರ ತಂದೆ ಹನುಮಂತಪ್ಪ ಕುಲಾವಿ ಕಿರಾಣಿ, ಡಬರಿ ಅಂಗಡಿ ನಡೆಸುತ್ತಾರೆ. ಸುಡುಗಾಡು ಸಿದ್ಧರ ಜನಾಂಗದ ಹನುಮಂತಪ್ಪ ಅವರಿಗೆ ಪುತ್ರ, ಮೂರು ಪುತ್ರಿಯರು ಇದ್ದಾರೆ.

ಅಥ್ಲೆಟಿಕ್ಸ್: ಕೊಪ್ಪಳದ ಸಚಿನ್‌ಗೆ ಕೊನೆಗೂ ಅವಕಾಶ

ವರದಿ ಪರಿಣಾಮ

ಪ್ರಜಾವಾಣಿ ವಾರ್ತೆ

ಕೊಪ್ಪಳ: ರಾಜ್ಯ ಓಪನ್ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಸ್ಥಾನ ಗಳಿಸಿದ್ದರೂ ರಾಷ್ಟ್ರೀಯ ಟೂರ್ನಿಗೆ ಅವಕಾಶವಂಚಿತರಾಗಿದ್ದ ಕೊಪ್ಪಳದ ಸಚಿನ್ ಮತ್ತು ಯಾದಗಿರಿಯ ಲೋಕೇಶ್ ರಾಠೋಡ್ ಅವರಿಗೆ ಕೊನೆಗೂ ರಾಜ್ಯ ತಂಡದಲ್ಲಿ ಸ್ಥಾನ ಲಭಿಸಿದೆ.

ಸಚಿನ್ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ, ಲೋಕೇಶ್ ಡೆಕಥ್ಲಾನ್‌ನಲ್ಲಿ ಸಾಧನೆ ಮಾಡಿದ್ದರು. ರಾಜ್ಯ ಅಥ್ಲೆಟಿಕ್ ಸಂಸ್ಥೆ ರಾಷ್ಟ್ರೀಯ ಟೂರ್ನಿಗೆ ಮೊದಲು ಪ್ರಕಟಿಸಿದ್ದ ಪಟ್ಟಿಯಲ್ಲಿ ಇವರಿಗೆ ಸ್ಥಾನ ನೀಡಿರಲಿಲ್ಲ. ಈ ಎರಡು ವಿಭಾಗದಿಂದ ಯಾರನ್ನೂ ಕಳುಹಿಸದಿರಲು ಸಂಸ್ಥೆ ನಿರ್ಧರಿಸಿತ್ತು. ಇದರ ಬಗ್ಗೆ 'ಪ್ರಜಾವಾಣಿ' ಅ. 4ರಂದು 'ಪ್ರತಿಭೆಯಿದ್ದರೂ ಸಿಗದ ಅವಕಾಶ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು.

ಬಳಿಕ ತಂಡದ ಪಟ್ಟಿ ಪರಿಷ್ಕರಿಸಿದ ಅಥ್ಲೆಟಿಕ್ ಸಂಸ್ಥೆ ಹೆಚ್ಚುವರಿಯಾಗಿ ಪುರುಷರ ವಿಭಾಗದಲ್ಲಿ ಲಾಂಗ್‌ಜಂಪ್, 800 ಮೀಟರ್ ಓಟ, 400 ಮೀ. ಓಟ, ಡೆಕಥ್ಲಾನ್, ಹ್ಯಾಮರ್ ಥ್ರೋ, ಮಹಿಳಾ ವಿಭಾಗದಲ್ಲಿ ಹೈಜಂಪ್, 800 ಮೀ. ಓಟ ಮತ್ತು 400 ಮೀ. ಹರ್ಡಲ್ಸ್‌ಗೆ ಅಥ್ಲೀಟ್‌ಗಳನ್ನು ಕಳುಹಿಸಲು ಮುಂದಾಗಿದೆ. ಒಟ್ಟು 35 ಕ್ರೀಡಾಪಟುಗಳ ಪಟ್ಟಿ ಪ್ರಕಟಿಸಿದೆ.

ಸ್ಥಳಾಂತರ: '62ನೇ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ತಂಡವನ್ನು ಪರಿಷ್ಕರಣೆ ಮಾಡಿ ರಾಜ್ಯ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡಿದ ಇನ್ನಷ್ಟು ಕ್ರೀಡಾಪಟುಗಳಿಗೆ ಸ್ಥಾನ ನೀಡಿದ್ದೇವೆ. ಅ. 11ರಂದು 14ರವರೆಗೆ ಜೆಮ್‌ಷೆಡ್‌ಪುರದಲ್ಲಿ ಆಯೋಜನೆಯಾಗಿದ್ದ ಟೂರ್ನಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಲಾಗಿದೆ. ಇದಕ್ಕಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ರಾಜ್ಯ ಅಥ್ಲೆಟಿಕ್ ಸಂಸ್ಥೆ ಗೌರವ ಕಾರ್ಯದರ್ಶಿ ರಾಜವೇಲು 'ಪ್ರಜಾವಾಣಿ'ಗೆ ತಿಳಿಸಿದರು.

ಐಎಎಫ್‌ನ ಹೊಸ ಪತಾಕೆಯ ಅನಾವರಣ

ಪ್ರಯಾಗರಾಜ್ (ಪಿಟಿಐ): ಭಾರತೀಯ ವಾಯುಪಡೆಯು (ಐಎಎಫ್) ತನ್ನ ಹೊಸ ಪತಾಕೆಯನ್ನು ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಭಾನುವಾರ ಅನಾವರಣ ಮಾಡಿತು. 72 ವರ್ಷಗಳ ಬಳಿಕ ಇಂಥದ್ದೊಂದು ಬದಲಾವಣೆಯನ್ನು ತಂದಿರುವ ಐಎಎಫ್, ತನ್ನ ಮೌಲ್ಯಗಳನ್ನು ಎತ್ತಿಹಿಡಿಯುವ ರೀತಿಯಲ್ಲಿ ಪತಾಕೆಯನ್ನು ವಿನ್ಯಾಸಗೊಳಿಸಿದೆ.

ಇಲ್ಲಿ ನಡೆದ ಭಾರತೀಯ ವಾಯುಪಡೆಯ 91ನೇ ದಿನಾಚರಣೆಯಲ್ಲಿ ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಅವರು ಹೊಸ ಪತಾಕೆ ಬಿಡುಗಡೆಗೊಳಿಸಿದರು. 'ಐಎಎಫ್‌ನ ಇತಿಹಾಸದಲ್ಲಿ ಇದು ಅವಿಸ್ಮರಣೀಯ ದಿನ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡುವ ಮೂಲಕ ಐಎಎಫ್ ಸಂಭ್ರಮ ಹಂಚಿಕೊಂಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಐಎಎಫ್, 'ಭಾರತೀಯ ವಾಯುಪಡೆಯ ಮೌಲ್ಯಗಳನ್ನು ಪ್ರತಿಫಲಿಸುವಂತೆ ಪತಾಕೆಯನ್ನು ವಿನ್ಯಾಸಗೊಳಿಸಲಾಗಿದೆ. ಅದರ ದ್ಯೋತಕವಾಗಿ ಪತಾಕೆ ಹಾರಾಡುವ ಜಾಗದಲ್ಲಿ (ಬಲಭಾಗದ ಮೂಲೆಯಲ್ಲಿ) ಐಎಎಫ್‌ನ ಲಾಂಛನವನ್ನು ಚಿತ್ರಿಸಲಾಗಿದೆ' ಎಂದಿದೆ.

ಇಷ್ಟು ದಿನಗಳು ಬಳಕೆಯಲ್ಲಿದ್ದ ಐಎಎಫ್ ಧ್ವಜವನ್ನು 1950ರಲ್ಲಿ ಅಂಗೀಕರಿಸಲಾಗಿತ್ತು. ಅಲ್ಲಿಂದ ಈಚೆಗೆ ಇಂಥದ್ದೊಂದು ಬದಲಾವಣೆ ನಡೆದಿರಲಿಲ್ಲ.

ವಾಯುಪಡೆ ಮುಖ್ಯಸ್ಥ ವಿ.ಆರ್. ಚೌಧರಿ ಅವರು ಐಎಎಫ್‌ನ ನೂತನ ಪತಾಕೆಯನ್ನು ಭಾನುವಾರ ಅನಾವರಣಗೊಳಿಸಿದರು –ಪಿಟಿಐ ಚಿತ್ರ

ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿರುವ ದೇಶವಾಗುವ ನಿಟ್ಟಿನಲ್ಲಿ ಸಾಗುತ್ತಿದೆ. ಆ ವೇಳೆಗೆ ಅತ್ಯುನ್ನತ ವಾಯುಪಡೆಗಳಲ್ಲಿ ಐಎಎಫ್ ಕೂಡಾ ಸೇರಿರಬೇಕು

ವಿ.ಆರ್. ಚೌಧರಿ, ಐಎಎಫ್ ಮುಖ್ಯಸ್ಥ

ವಿನ್ಯಾಸ ಹೀಗಿದೆ: ಐಎಎಫ್‌ನ ಹೊಸ ಪತಾಕೆಯು ನೀಲಿ ಬಣ್ಣದ್ದಾಗಿದ್ದು, ಅದು ತ್ರಿವರ್ಣ ಧ್ವಜ, ಐಎಎಫ್ ಲಾಂಛನ, ತ್ರಿವರ್ಣದ ವೃತ್ತಾಕಾರ ವಿನ್ಯಾಸವನ್ನು ಒಳಗೊಂಡಿದೆ.

ಪಥಸಂಚಲನ: ಇದಕ್ಕೂ ಮೊದಲು, ಬಮ್‌ರೌಲಿಯ ವಾಯುನೆಲೆಯಲ್ಲಿ ವಾಯುಪಡೆ ದಿನಾಚರಣೆ ಅಂಗವಾಗಿ ಪಥಸಂಚಲನ ನಡೆಯಿತು. ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್, ಚೌಧರಿ ಮತ್ತಿತರ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಗ್ರೂಪ್ ಕ್ಯಾಪ್ಟನ್ ಶಾಲಿಜಾ ಧಾಮಿ ಪಥಸಂಚಲನವನ್ನು ಮುನ್ನಡೆಸಿದ್ದರು. ಮಹಿಳಾ ಅಧಿಕಾರಿಯೊಬ್ಬರು ಮುನ್ನಡೆಸಿದ್ದ ಮೊದಲ ವಾಯುಪಡೆ ದಿನಾಚರಣೆ ಪಥಸಂಚಲನ ಇದಾಗಿತ್ತು.

ವಾಯುಪಡೆ ದಿನಾಚರಣೆಯ ಪಥಸಂಚಲನವನ್ನು 2021ರ ವರೆಗೆ ದೆಹಲಿಯ ಹಿಂಡನ್ ವಾಯುನೆಲೆಯಲ್ಲಿ ನಡೆಸಲಾಗುತ್ತಿತ್ತು. 2022ರಲ್ಲಿ ಚಂಡೀ ಗಢದಲ್ಲಿ ನಡೆಸಲಾಯಿತು. ಈ ಬಾರಿ ಪ್ರಯಾಗರಾಜ್‌ನಲ್ಲಿ ನಡೆಸಲಾಯಿತು.

'ಮೇರೆ ಮೀರಿ ಶಕ್ತಿ ಪ್ರದರ್ಶಿಸುತ್ತಿದೆ': ವಾಯುಪಡೆ ದಿನಾಚರಣೆ ಅಂಗವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಅವರು ಭಾನುವಾರ ಶುಭ ಹಾರೈಸಿದ್ದಾರೆ.

'ಭಾರತೀಯ ವಾಯುಪಡೆಯು ಇಂದು ಘಾತಕ ಮತ್ತು ಬಲಿಷ್ಠವಾದ ಪಡೆಯಾಗಿದೆ. ಮೇರೆ ಮೀರಿ ಅದರ ಶಕ್ತಿ ಪ್ರದರ್ಶಿಸುತ್ತಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಹೇಳಿದ್ದಾರೆ.

'ದೇಶಕ್ಕೆ ವಾಯುಪಡೆಯು ಸುಮಾರು ಒಂದು ಶತಮಾನದಿಂದ ಬದ್ಧತೆಯೊಂದಿಗೆ ಮತ್ತು ಸಾಟಿಯಿಲ್ಲದ ಸೇವೆಯನ್ನು ನೀಡುತ್ತಿದೆ' ಎಂದು ಸಿಡಿಎಸ್ ಜನರಲ್ ಅನಿಲ್ ಚೌಹಾಣ್ ಹೇಳಿದ್ದಾರೆ.

ಐಎಎಫ್ ಪತಾಕೆಯ ಇತಿಹಾಸ

ಭಾರತೀಯ ವಾಯುಪಡೆಯನ್ನು 1932ರ ಅಕ್ಟೋಬರ್ 8ರಂದು ಅಧಿಕೃತವಾಗಿ ಸ್ಥಾಪಿಸಲಾಯಿತು. ಎರಡನೆ ಮಹಾಯುದ್ಧದಲ್ಲಿ ಭಾರತೀಯ ಯೋಧರು ತೋರಿದ ವೃತ್ತಿಪರ ದಕ್ಷತೆ ಮತ್ತು ಸಾಹಸವನ್ನು ಪರಿಗಣಿಸಿ 1945ರಲ್ಲಿ ಬ್ರಿಟಿಷ್ ಆಡಳಿತವು 'ರಾಯಲ್' ಎಂಬ ಉಪಮೆ ನೀಡಿತು. ನಂತರ ಭಾರತೀಯ ವಾಯುಪಡೆಯನ್ನು 'ರಾಯಲ್ ಇಂಡಿಯನ್ ಏರ್ ಫೋರ್ಸ್' (ಆರ್‌ಐಎಎಫ್) ಎಂದು ಕರೆಯಲಾಯಿತು.

ವಸಾಹತುಶಾಹಿ ಗುರುತಾಗಿದ್ದ 'ರಾಯಲ್' ಎಂಬ ಉಪಮೆಯನ್ನು ಭಾರತ ಸ್ವತಂತ್ರಗೊಂಡ ಬಳಿಕ 1950ರಲ್ಲಿ ಕೈಬಿಡಲಾಯಿತು. ಆರ್‌ಐಎಎಫ್‌ನ ಲಾಂಛನವನ್ನೂ ಕೈಬಿಟ್ಟ ಭಾರತ ಸರ್ಕಾರವು, ದೇಶದ ಧ್ವಜದ ಬಣ್ಣಕ್ಕೆ ಅನುಗುಣವಾಗಿ ಹೊಸ ಪತಾಕೆಯನ್ನು ವಿನ್ಯಾಸಗೊಳಿಸಿತು.

ಟಿಎಂಸಿ ಸಚಿವನ ನಿವಾಸದಲ್ಲಿ ಸಿಬಿಐ ಶೋಧ

ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ನಗರಾಭಿವೃದ್ಧಿ ಸಚಿವ ಫಿರ್ಹಾದ್ ಹಕೀಂ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಶಾಸಕ ಮದನ್ ಮಿತ್ರ ಅವರ ನಿವಾಸಗಳು ಸೇರಿ 12 ಸ್ಥಳಗಳಲ್ಲಿ ಸಿಬಿಐ ಭಾನುವಾರ ಶೋಧ ಕಾರ್ಯ ನಡೆಸಿದೆ.

ಸ್ಥಳೀಯಾಡಳಿತ ಸಂಸ್ಥೆಗಳಿಗೆ ನಡೆಸಿದ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಈ ಶೋಧ ನಡೆದಿದೆ.

ಕೋಲ್ಕತ್ತದ ಚೆಟ್ಲಾ ಪ್ರದೇಶದಲ್ಲಿರುವ ಫಿರ್ಹಾದ್ ಹಕೀಂ ಅವರ ನಿವಾಸಕ್ಕೆ ಕೇಂದ್ರೀಯ ಪಡೆಗಳ ಜೊತೆಗೆ ಬಂದ ಸಿಬಿಐ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಈ ವೇಳೆ ಸಚಿವರ ನಿವಾಸದ ಹೊರಗಡೆ ಬೆಂಬಲಿಗರು ಪ್ರತಿಭಟನೆ ನಡೆಸಿದರು.

ಕಮರ್‌ಹಟಿ ಪುರಸಭೆಯಲ್ಲಿ ನಡೆದ ನೇಮಕಾತಿ ಹಗರಣದಲ್ಲಿ ಮದನ್ ಮಿತ್ರ ಅವರು ಶಾಮೀಲಾಗಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಸಿಬಿಐ ಅಧಿಕಾರಿಗಳು ಆರೋಪಿಸಿದ್ದಾರೆ.

'ಕೇಂದ್ರದ ಅನುದಾನಕ್ಕೆ ಆಗ್ರಹಿಸಿ ರಾಜಭವನದ ಮುಂಭಾಗದಲ್ಲಿ ಪಕ್ಷದ ವತಿಯಿಂದ ಹಮ್ಮಿಕೊಂಡಿರುವ ಪ್ರತಿಭಟನೆಯಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಈ ಶೋಧ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಟಿಎಂಸಿ ಸಂಸದ ಸೌಗತ ರಾಯ್ ಆರೋಪಿಸಿದ್ದಾರೆ.

ಸೇನೆಗೆ ಮ್ಯಾಂಡರಿನ್ ಭಾಷಾತಜ್ಞರು

ನವದೆಹಲಿ (ಪಿಟಿಐ): ಮ್ಯಾಂಡರಿನ್ ಭಾಷೆಯ ಪರಿಣತರ ತಂಡವೊಂದನ್ನು ಭಾರತೀಯ ಪ್ರಾದೇಶಿಕ ಸೇನೆಯು ನೇಮಿಸಿಕೊಂಡಿದೆ.

ಚೀನಾ ಜತೆಗಿನ ಗಡಿಯಲ್ಲಿ ಈ ತಂಡವನ್ನು ನಿಯೋಜಿಸಿದೆ. ಗಡಿಯಲ್ಲಿ ಚೀನಾದ ಸೇನೆ ಜೊತೆಗಿನ ಮಾತುಕತೆ ವೇಳೆ ಪ್ರಾದೇಶಿಕ ಸೇನೆಯ ಸಂವಹನ ಸಾಮರ್ಥ್ಯವನ್ನು ವೃದ್ಧಿಸುವುದು ಈ ನೇಮಕಾತಿಯ ಉದ್ದೇಶವಾಗಿದೆ.

ಪ್ರಾದೇಶಿಕ ಸೇನೆಯು ಸೋಮವಾರದಂದು ತನ್ನ 75ನೇ ಸ್ಥಾಪನಾ ದಿನವನ್ನು ಆಚರಿಸಿಕೊಳ್ಳುತ್ತಿದೆ. ಮ್ಯಾಂಡರಿನ್ ಭಾಷೆಯ ಐವರು ಪರಿಣತರು ನೇಮಕಗೊಂಡಿದ್ದು, ಭಾರತ– ಚೀನಾ ಸೇನೆ ನಡುವಿನ ಚರ್ಚೆಯ ವೇಳೆ ಸಂವಹನ ಸಹಾಯಕರಾಗಿ ಪ್ರಾದೇಶಿಕ ಸೇನೆಗೆ ನೆರವಾಗುವರು ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

ಚೀನಾ ಸೇನೆಯ ಪ್ರತಿನಿಧಿಗಳು ನಿಖರವಾಗಿ ಏನು ಹೇಳಲು ಬಯಸುತ್ತಿದ್ದಾರೆ ಎಂಬುದನ್ನು ಭಾರತೀಯ ಸೇನೆಯ ಅಧಿಕಾರಿಗಳಿಗೆ ಪರಿಣತರು ಮನವರಿಕೆ ಮಾಡಿಕೊಡುವರು. ಇದು, ವಸ್ತುಸ್ಥಿತಿಯ ವಿಶ್ಲೇಷಣೆಗೆ ನೆರವಾಗಲಿದೆ. ಇವರನ್ನು ಸಂವಾದಕ್ಕೆ ನೆರವು ಹೊರತುಪಡಿಸಿ, ಇತರೆ ಸೇವೆಗಳಿಗೂ ನಿಯುಕ್ತಿಗೊಳಿಸಬಹುದಾಗಿದೆ ಎಂದು ಮೂಲಗಳು ತಿಳಿಸಿವೆ.

2020ರ ಮೇ 5ರಂದು ಲಡಾಖ್‌ನ ಪೂರ್ವಭಾಗದಲ್ಲಿ ಭಾರತ–ಚೀನಾ ಸೇನಾ ತುಕಡಿಗಳ ನಡುವೆ ಸಂಘರ್ಷವಾಗಿದ್ದು, ಹಿಂಸೆಗೆ ತಿರುಗಿತ್ತು. ಆ ಬೆಳವಣಿಗೆಯ ಮೂರು ವರ್ಷಗಳ ನಂತರ ಭಾಷಾ ಪರಿಣತರ ನೇಮಕವಾಗುತ್ತಿದೆ.

ಬಿಜೆಪಿ ಅಭ್ಯರ್ಥಿ ಪಾದಕ್ಕೆರಗಿದ ಶಾಸಕ

ಇಂದೋರ್ (ಪಿಟಿಐ): ವಿಧಾನಸಭಾ ಚುನಾವಣೆ ಘೋಷಣೆಗೆ ಕೆಲವೇ ತಿಂಗಳು ಬಾಕಿ ಉಳಿದಿರುವ ಬೆನ್ನಲ್ಲೇ, ಮಧ್ಯಪ್ರದೇಶದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಪರಸ್ಪರ ಕೆಸರೆರಚಾಟ ನಡೆದಿದೆ.

ಇದಕ್ಕೆ ಅಪವಾದ ಎನ್ನುವಂತೆ ಎರಡೂ ಪಕ್ಷದ ಸಂಭಾವ್ಯ ಅಭ್ಯರ್ಥಿಗಳು ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮತದಾರರ ಮುಂದೆಯೇ ಸ್ನೇಹಪರತೆ ಮೆರೆದರು.

ಕಾಂಗ್ರೆಸ್ ಶಾಸಕ ಸಂಜಯ್ ಶುಕ್ಲಾ ಅವರು ಇಂದೋರ್ –1 ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ. ಮತ್ತೆ ಅವರನ್ನೇ ಕಣಕ್ಕಿಳಿಸಲು ಕೈಪಾಳಯ ಸಿದ್ಧತೆ ನಡೆಸಿದೆ. ಈ ಕ್ಷೇತ್ರಕ್ಕೆ ಬಿಜೆಪಿಯಿಂದ ಈಗಾಗಲೇ ಕೈಲಾಸ ವಿಜಯವರ್ಗೀಯ ಅವರ ಹೆಸರು ಘೋಷಣೆಯಾಗಿದೆ. ಇಬ್ಬರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಸಂಜಯ್ ಅವರು, ವಿಜಯವರ್ಗೀಯ ಅವರ ಪಾದ ಮುಟ್ಟಿ ನಮಸ್ಕರಿಸಿದರು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಇಬ್ಬರ ಒಳ್ಳೆಯತನಕ್ಕೆ ಸಭಿಕರು ಮೆಚ್ಚುಗೆ ಸೂಚಿಸಿದ್ದಾರೆ.

ಎವರೆಸ್ಟ್ ಬೇಸ್ ಕ್ಯಾಂಪ್ ಏರಿದ ಬಾಲೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ವಸೈ-ವಿರಾರ್ ನಗರದ ಬಾಲಕಿ ಸ್ವರಾ ಪಾಟೀಲ, ನೇಪಾಳದ ಮೌಂಟ್ ಎವರೆಸ್ಟ್‌ನ ಬೇಸ್ ಕ್ಯಾಂಪ್ ಟ್ರೆಕಿಂಗ್ ಪೂರ್ಣಗೊಳಿಸಿದ ಶ್ರೇಯಕ್ಕೆ ಪಾತ್ರಳಾಗಿದ್ದಾಳೆ.

ಸಮುದ್ರಮಟ್ಟದಿಂದ 17,500 ಅಡಿ (5,364 ಮೀ.) ಎತ್ತರದಲ್ಲಿರುವ ಈ ಬೇಸ್ ಕ್ಯಾಂಪ್‌ಅನ್ನು ಯಶಸ್ವಿಯಾಗಿ ಏರಿದ್ದಾಳೆ. ಈ ಸಾಧನೆ ಮಾಡಿದ ಪಾಲ್ಘರ್ ಜಿಲ್ಲೆಯ ಅತಿಕಿರಿಯ ಬಾಲಕಿ ಎಂಬುದು ಆಕೆಯ ಹೆಗ್ಗಳಿಕೆ.

ಸ್ವರಾ ಹುಟ್ಟೂರು ವಸೈ ಉಮೇಲ್ಮನ್. ಆಕೆಗೆ ಈಗ ಒಂಬತ್ತು ವರ್ಷ. ತನ್ನ ಅಪ್ಪ ದಿಗಂಬರ ಪಾಟೀಲ, ಶೇರ್ಪಾ ಜಂಗ ಹಾಗೂ ಸಹಾಯಕ ಪ್ರೇಮನ್ ಅವರೊಟ್ಟಿಗೆ 12 ದಿನಗಳ ಚಾರಣ ಕೈಗೊಂಡಿದ್ದಳು.

ಹಲವು ಪರ್ವತಾರೋಹಣ ಯಾತ್ರೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಹಿರಿಮೆ ಹೊಂದಿದ್ದಾಳೆ. ಈ ಪೈಕಿ ಮಹಾರಾಷ್ಟ್ರದ ಅತಿದೊಡ್ಡ ಶಿಖರವಾದ ಕಲ್ಸುಬಾಯಿ (1,646 ಮೀ.), ಹಿಮಾಲಯದ ಸರ್ಪಾಸ್ ಶಿಖರವನ್ನೂ (4,220 ಮೀ.) ಏರಿದ್ದಾಳೆ. ಅಲ್ಲದೇ, ಮಹಾರಾಷ್ಟ್ರದ ಹಲವು ಕೋಟೆಗಳನ್ನು ಹತ್ತಿದ್ದಾಳೆ.

ವಸೈನ ಕಾರ್ಮೆಲೈಟ್ ಕಾನ್ವೆಂಟ್ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ 4ನೇ ತರಗತಿ ಓದುತ್ತಿರುವ ಆಕೆಯ ಪರ್ವತಾರೋಹಣ ಸಾಹಸಕ್ಕೆ ಪ್ರಾಂಶುಪಾಲರ ಬೆಂಬಲವೂ ಇದೆ. ಈ ಸಣ್ಣ ಪರ್ವತಾರೋಹಿ ತನ್ನ ಹುಟ್ಟೂರಿನಲ್ಲಷ್ಟೇ ಪ್ರಸಿದ್ಧಿ ಪಡೆದಿಲ್ಲ. ಇಡೀ ಮಹಾರಾಷ್ಟ್ರದಲ್ಲಿ ಆಕೆಯ ಖ್ಯಾತಿ ಹಬ್ಬಿದೆ.

ಮೌಂಟ್ ಎವರೆಸ್ಟ್‌ನ ಬೇಸ್ ಕ್ಯಾಂಪ್ ಏರಿದ ಬಾಲಕಿ ಸ್ವರಾ ಪಾಟೀಲ –ಪ್ರಜಾವಾಣಿ ಚಿತ್ರ

ಕಾಶ್ಮೀರ ಕಣಿವೆಯಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದ ಬೆಸುಗೆ

ರಾವಣನಿಗೆ ಜೀವ ತುಂಬುವ ಮುಸ್ಲಿಮರು!

ಜಮ್ಮು (ಪಿಟಿಐ): ದೇಶದೆಲ್ಲೆಡೆ ನವರಾತ್ರಿ ನಿಮಿತ್ತ ರಾವಣನ ಪ್ರತಿಕೃತಿ ದಹಿಸುವ ಸಂಪ್ರದಾಯವಿದೆ. ಕಾಶ್ಮೀರ ಕಣಿವೆಯಲ್ಲೂ ಇದನ್ನು ಅನೂಚಾನವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ.

ಕೆಡುಕು ಸೂಚಿಸುವ ರಾವಣಾಸುರನ ಬೃಹತ್ ಪ್ರತಿಕೃತಿಗಳನ್ನು ಸುಟ್ಟು ದಸರಾ ಆಚರಿಸುವುದು ವಾಡಿಕೆ. ಹಿಂದೂಗಳು ಆಚರಿಸುವ ಈ ಹಬ್ಬದೊಟ್ಟಿಗೆ ಮುಸ್ಲಿಂ ಕುಶಲಕರ್ಮಿಗಳ ಶ್ರಮವೂ ಮಿಳಿತವಾಗಿರುವುದು ಹೆಮ್ಮೆಯ ಸಂಗತಿ.

ರಾವಣ ಸೇರಿದಂತೆ ಆತನ ಸಹೋದರರಾದ ಮೇಘನಾದ, ಕುಂಭಕರ್ಣನ ಪ್ರತಿಕೃತಿಗಳನ್ನು ತಯಾರಿಸಲು ಉತ್ತರಪ್ರದೇಶದಿಂದ ಮುಸ್ಲಿಂ ಕುಶಲಕರ್ಮಿಗಳು ಜಮ್ಮುವಿಗೆ ಬರುತ್ತಾರೆ. ಕಣಿವೆ ಪ್ರದೇಶದ ಜೊತೆ ಅವರ ಈ ನಂಟು ಬೆಸೆದುಕೊಂಡು ಹಲವು ದಶಕಗಳೇ ಉರುಳಿವೆ.

ಶ್ರೀಸನಾತಮ್ ಧರ್ಮ ಸಭಾ ಗೀತಾ ಭವನವು ಪ್ರತಿವರ್ಷವೂ ಇವರನ್ನು ಆಹ್ವಾನಿಸುತ್ತದೆ. ಸೆಪ್ಟೆಂಬರ್ 23ರಂದೇ ಮೀರತ್ ಜಿಲ್ಲೆಯ ಒಂದೇ ಗ್ರಾಮಕ್ಕೆ ಸೇರಿದ 50ಕ್ಕೂ ಹೆಚ್ಚು ಕುಶಲಕರ್ಮಿಗಳು ಜಮ್ಮುವಿಗೆ ಬಂದಿಳಿದಿದ್ದು, ಪ್ರತಿಕೃತಿಗಳ ತಯಾರಿಕೆಯಲ್ಲಿ ತೊಡಗಿದ್ದಾರೆ.

'38 ವರ್ಷದಿಂದಲೂ ದಸರಾ ವೇಳೆ ಪ್ರತಿಕೃತಿಗಳನ್ನು ತಯಾರಿಸಲು ನಾವು ಬರುತ್ತಿದ್ದೇವೆ. ಜಮ್ಮು ಮತ್ತು ಕಾಶ್ಮೀರ, ಲಡಾಕ್‌ನ ಲೇಹ್‌ಗಳಿಗೂ ಪೂರೈಸುತ್ತೇವೆ' ಎನ್ನುತ್ತಾರೆ ತಂಡದ ಮುಖ್ಯಸ್ಥ ಮೊಹಮ್ಮದ್ ರೆಹಾನ್.

ಶ್ರೀನಗರದಲ್ಲಿ ರಾವಣನ ಪ್ರತಿಕೃತಿ ನಿರ್ಮಾಣದಲ್ಲಿ ತೊಡಗಿರುವ ಮುಸ್ಲಿಂ ಮತ್ತು ಹಿಂದೂ ಸಮುದಾಯಕ್ಕೆ ಸೇರಿದ ಕುಶಲಕರ್ಮಿಗಳು –ಪಿಟಿಐ ಚಿತ್ರ

ಅಂದಹಾಗೆ ದಸರಾದ ಮುಖ್ಯ ಕಾರ್ಯಕ್ರಮವು ಜಮ್ಮುವಿನ ಪರೇಡ್ ಮೈದಾನದಲ್ಲಿ ನಡೆಯುತ್ತದೆ. ಅಲ್ಲದೇ ಅಖ್ನೂರ್, ಆರ್.ಎಸ್. ಪುರ, ಅಂತರ ರಾಷ್ಟ್ರೀಯ ಗಡಿ ಭಾಗದ ಬಿಷ್ನಾ, ಗಾಂಧಿನಗರ, ರೈಲು ನಿಲ್ದಾಣ, ಚನ್ನಿ ಹಾಗೂ ಸೈನಿಕ್ ಕಾಲೊನಿಗಳಲ್ಲೂ ಪ್ರತಿಕೃತಿಗಳ ದಹನ ನಡೆಯಲಿದೆ.

ಬಿದಿರಿನ ಕಡ್ಡಿಗಳನ್ನು ಬಳಸಿ 50 ಅಡಿಗೂ ಹೆಚ್ಚು ಎತ್ತರದ ಪ್ರತಿಕೃತಿಗಳನ್ನು ನಿರ್ಮಿಸುವುದರಲ್ಲಿ ಈ ಕುಶಲಕರ್ಮಿಗಳು ಸಿದ್ಧಹಸ್ತರು.

'ರಾವಣಾಸುರ ಹಾಗೂ ಆತನ ಸಹೋದರರ ಪ್ರತಿಕೃತಿಗಳ ನಿರ್ಮಾಣದಲ್ಲಿ ಮುಸ್ಲಿಂ ಕುಶಲಕರ್ಮಿಗಳಷ್ಟೇ ತೊಡಗಿಕೊಳ್ಳುವುದಿಲ್ಲ. 40ಕ್ಕೂ ಹೆಚ್ಚು ಹಿಂದೂ ಸಮುದಾಯದ ಕುಶಲಕರ್ಮಿಗಳು ಇದರಲ್ಲಿ ಕೈಜೋಡಿಸುತ್ತಾರೆ. ನಾವು ಸೌಹಾರ್ದದಿಂದ ಈ ಕೆಲಸ ಮಾಡುತ್ತೇವೆ' ಎಂಬುದು ರೆಹಾನ್ ಅವರ ವಿವರಣೆ. 'ನಾವೆಲ್ಲರೂ ಯಾವುದೇ ತಾರತಮ್ಯ ಇಲ್ಲದೆ ಒಟ್ಟಾಗಿ ನಮ್ಮ ಪಾಲು ಹಂಚಿಕೊಳ್ಳುತ್ತೇವೆ' ಎನ್ನುತ್ತಾರೆ.

ರೆಹಾನ್ ಅವರ ಅಳಿಯ ಮೊಹಮ್ಮದ್ ಗಿಯಾಸುದ್ದೀನ್ ಅವರನ್ನು ಮಾತಿಗೆಳೆದಾಗ, ತಮ್ಮ ಅಜ್ಜನ ಕಾಲಕ್ಕೆ ಜಾರಿದರು.

'ನನ್ನ ತಾತನ ಕಾಲದಿಂದಲೂ ಇಲ್ಲಿಗೆ ಬರುತ್ತಿದ್ದೇವೆ. ಈ ಸಂಪ್ರದಾಯವನ್ನು ಜೀವಂತವಾಗಿ ಇಡಲು ಶ್ರಮಿಸುತ್ತಿದ್ದೇವೆ. ಜಮ್ಮುವಿನ ಜನತೆ ನಮಗೆ ಅದ್ದೂರಿ ಸ್ವಾಗತ ಕೋರುತ್ತಾರೆ. ಇಂತಹ ಅವಕಾಶವನ್ನು ನಾವು ಕೂಡ ಎದುರು ನೋಡುತ್ತೇವೆ' ಎಂದರು.

'ನಮ್ಮಲ್ಲಿ ದ್ವೇಷಕ್ಕೆ ಅವಕಾಶವಿಲ್ಲ. ಇದು ಕಲೆಯ ರೂಪವಷ್ಟೇ. ಯಾರು ಬೇಕಾದರೂ ಇದನ್ನು ಮಾಡಬಹುದು. ಕಳೆದ ವರ್ಷವೂ ನಾವು ಶ್ರೀನಗರಕ್ಕೆ ಪ್ರತಿಕೃತಿಗಳನ್ನು ರವಾನಿಸಿದ್ದೆವು' ಎಂದು ಹೇಳುವುದನ್ನು ಅವರು ಮರೆಯಲಿಲ್ಲ.

ರಾಹುಲ್– ವಿರಾಟ್ ಅಮೋಘ ಬ್ಯಾಟಿಂಗ್, ಜಡೇಜ, ಯಾದವ್ ಮೋಡಿ; ಆಸ್ಟ್ರೇಲಿಯಾಗೆ ತುಟ್ಟಿಯಾಯಿತು ಬಿಟ್ಟ ಕ್ಯಾಚ್

ರೋಹಿತ್ ಬಳಗ ಜಯದ ಆರಂಭ

ಪ್ರಜಾವಾಣಿ ವಾರ್ತೆ

ಚೆನ್ನೈ: ಚೆಪಾಕ್ ಕ್ರೀಡಾಂಗಣದಲ್ಲಿ ಭಾನುವಾರ ಆಸ್ಟ್ರೇಲಿಯಾದ ಫೀಲ್ಡರ್ ಮಿಚೆಲ್ ಮಾರ್ಷ್ ಕ್ಯಾಚ್ ಕೈಚೆಲ್ಲುವ ಮೂಲಕ ಪಂದ್ಯ ಜಯಿಸುವ ಅವಕಾಶವನ್ನೂ ಮಣ್ಣುಪಾಲು ಮಾಡಿದರು!

ಹೌದು; ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಮಾರ್ಷ್ ಅವರು ಕೈಬಿಟ್ಟಿದ್ದು ಭಾರತದ ವಿರಾಟ್ ಕೊಹ್ಲಿ ಅವರದ್ದು. ಆ ಹೊತ್ತಿನಲ್ಲಿ ಭಾರತ ತಂಡವು 200 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿತ್ತು ಹಾಗೂ 7.3 ಓವರ್‌ಗಳಲ್ಲಿ 20 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು.

ಆದರೆ ಮಾರ್ಷ್ ಕೊಟ್ಟ ಜೀವದಾನ ಪಡೆದ ವಿರಾಟ್ ಮತ್ತು ಕೆ.ಎಲ್. ರಾಹುಲ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. 6 ವಿಕೆಟ್‌ಗಳಿಂದ ಗೆದ್ದ ಭಾರತ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು 49.3 ಓವರ್‌ಗಳಲ್ಲಿ 199 ರನ್ ಗಳಿಸಿತು. ತಂಡವನ್ನು ಈ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ್ದು ಭಾರತದ ಎಡಗೈ ಸ್ಪಿನ್ ಜೋಡಿ ರವೀಂದ್ರ ಜಡೇಜ (28ಕ್ಕೆ3) ಮತ್ತು ಕುಲದೀಪ್ ಯಾದವ್ (42ಕ್ಕೆ2) ಅವರು.

ಆದರೆ ಈ ಗುರಿ ಬೆನ್ನಟ್ಟಿದ ಆತಿಥೇಯ ಭಾರತ ಆರಂಭದಲ್ಲಿಯೇ ದೊಡ್ಡ ಆಘಾತ ಅನುಭವಿಸಿತು. ಎರಡು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಇಬ್ಬರೂ ಖಾತೆ ತೆರೆಯದೇ ನಿರ್ಗಮಿಸಿದರು. ಮಿಚೆಲ್ ಸ್ಟಾರ್ಕ್ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಕಿಶನ್ ಅವರು ಕ್ಯಾಮರಾನ್ ಗ್ರೀನ್‌ಗೆ ಕ್ಯಾಚಿತ್ತರು. ಜೋಷ್ ಹ್ಯಾಜಲ್‌ವುಡ್ ಹಾಕಿದ ಎರಡನೇ ಓವರ್‌ನಲ್ಲಿ ರೋಹಿತ್ ಅವರು ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಅದೇ ಓವರ್‌ನ ಕೊನೆಯ ಎಸೆತದಲ್ಲಿ ಶ್ರೇಯಸ್ ಅಯ್ಯರ್, ಫೀಲ್ಡರ್ ಡೇವಿಡ್ ವಾರ್ನರ್‌ಗೆ ಸುಲಭ ಕ್ಯಾಚ್ ಕೊಟ್ಟು ಸೊನ್ನೆ ಸುತ್ತಿದರು. ಆಗ ಕ್ರೀಸ್‌ನಲ್ಲಿ ವಿರಾಟ್ ಇದ್ದರು.

ಅವರೊಂದಿಗೆ ಸೇರಿದ ಕನ್ನಡಿಗ ರಾಹುಲ್ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಕೊಹ್ಲಿಗೆ ಸಿಕ್ಕ ಜೀವದಾನದಿಂದ ಇಬ್ಬರೂ ಸೇರಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 165 ರನ್ ಸೇರಿಸಿದರು. ಶತಕದತ್ತ ಹೆಜ್ಜೆ ಇಟ್ಟಿದ ಕೊಹ್ಲಿ 36ನೇ ಓವರ್‌ನಲ್ಲಿ ಹ್ಯಾಜಲ್‌ವುಡ್ ಎಸೆತವನ್ನು ಆಡಲು ಸ್ವಲ್ಪ ಗಡಿಬಿಡಿ ಮಾಡಿ ದಂಡ ತೆತ್ತರು.

ರಾಹುಲ್ ಜೊತೆಗೂಡಿದ ಹಾರ್ದಿಕ್ ಪಾಂಡ್ಯ ಒಂದು ಸಿಕ್ಸರ್ ಹೊಡೆದರು. ಇನ್ನೊಂದೆಡೆ ರಾಹುಲ್ ಕೂಡ ತಾಳ್ಮೆಯ ಕವಚ ಕಳಚಿಟ್ಟು ಬ್ಯಾಟ್ ಬೀಸಿದರು. ಪ್ಯಾಟ್ ಕಮಿನ್ಸ್ ಹಾಕಿದ 42ನೇ ಓವರ್‌ನಲ್ಲಿ ವಿಜಯದ ಸಿಕ್ಸರ್ ಹೊಡೆದರು.

ಕುಸಿದ ಆಸ್ಟ್ರೇಲಿಯಾ: ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾಕ್ಕೆ 3ನೇ ಓವರ್‌ನಲ್ಲಿಯೇ ಮಿಚೆಲ್ ಮಾರ್ಷ್ ವಿಕೆಟ್ ಗಳಿಸಿದ ಜಸ್‌ಪ್ರೀತ್ ಬೂಮ್ರಾ ಆಘಾತ ನೀಡಿದರು. ಈ ಹಂತದಲ್ಲಿ ಅನುಭವಿಗಳಾದ ಡೇವಿಡ್ ವಾರ್ನರ್ (41; 52ಎ) ಮತ್ತು ಸ್ಟೀವ್ ಸ್ಮಿತ್ (46 ರನ್) ಅವರು ಸ್ವಲ್ಪ ಚೇತರಿಕೆ ನೀಡಿದರು. ವಾರ್ನರ್ ವಿಕೆಟ್ ಗಳಿಸಿದ ಕುಲದೀಪ್ ಈ ಜೊತೆಯಾಟ ಮುರಿದರು. ಇನ್ನೊಂದು ಬದಿಯಿಂದ ಜಡೇಜ ದಾಳಿಯೂ ಕಳೆಗಟ್ಟಿತು. ಆರ್. ಅಶ್ವಿನ್ ಕೂಡ ಕಣಕ್ಕಿಳಿದರು. ಕ್ಯಾಮರಾನ್ ಗ್ರೀನ್ ಅವರ ವಿಕೆಟ್ ಕಬಳಿಸಿದರು. ಸ್ಟಾರ್ಕ್ 35 ಎಸೆತಗಳಲ್ಲಿ 28 ರನ್ ಗಳಿಸಿ ತಂಡದ ಮೊತ್ತ ಸ್ವಲ್ಪ ಹೆಚ್ಚಿಸಿದರು. ಈ ಹಂತದಲ್ಲಿ ಭಾರತದ ಫೀಲ್ಡರ್‌ಗಳೂ ಕೂಡ ಪ್ಯಾಟ್ ಕಮಿನ್ಸ್ ಅವರ ಎರಡು ಕ್ಯಾಚ್ ಮತ್ತು ಆ್ಯಡಂ ಜಂಪಾ ಅವರ ಒಂದು ಕ್ಯಾಚ್ ಕೈಚೆಲ್ಲಿದರು.

ಕೆ.ಎಲ್.ರಾಹುಲ್ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ರವೀಂದ್ರ ಜಡೇಜ

ದಾಖಲೆಗಳು...

- ಡೇವಿಡ್ ವಾರ್ನರ್ ಏಕದಿನ ವಿಶ್ವಕಪ್‌ನಲ್ಲಿ ಅತಿವೇಗದಲ್ಲಿ (19 ಇನಿಂಗ್ಸ್) 1,000 ರನ್ ಪೂರೈಸಿದರು. ಸಚಿನ್ ಮತ್ತು ಡಿವಿಲಿಯರ್ಸ್ (20 ಇನಿಂಗ್ಸ್) ಅವರ ದಾಖಲೆ ಮುರಿದರು.
- ವಿರಾಟ್ ಕೊಹ್ಲಿ ಏಕದಿನ ವಿಶ್ವಕಪ್‌ನಲ್ಲಿ ಭಾರತದ ಪರ ಅತ್ಯಧಿಕ ಕ್ಯಾಚ್ (16) ಪಡೆದ ಆಟಗಾರ ಎನಿಸಿಕೊಂಡರು. ಅನಿಲ್ ಕುಂಬ್ಳೆ (14 ಕ್ಯಾಚ್) ಅವರನ್ನು ಹಿಂದಿಕ್ಕಿದರು.

ಬಿಗಿಭದ್ರತೆ ಉಲ್ಲಂಘಿಸಿ ಮೈದಾನಕ್ಕೆ ನುಗ್ಗಿದ ಜಾರ್ವೊ!

ಸಾಮಾಜಿಕ ಜಾಲತಾಣದ ‘ಕುಖ್ಯಾತ’ ಇನ್‌ಫ್ಲುಯೆನ್ಸರ್ ಡೇನಿಯಲ್ ಜಾರ್ವಿಸ್ (ಜಾರ್ವೊ) ಭಾರತ ಮತ್ತು ಆಸ್ಟ್ರೇಲಿಯಾ ಪಂದ್ಯದ ವೇಳೆ ಮೈದಾನದೊಳಗೆ ಅಕ್ರಮ ಪ್ರವೇಶ ಮಾಡಿ ಗೊಂದಲ ಮೂಡಿಸಿದರು.

ಭಾರತ ತಂಡವನ್ನು ಬೆಂಬಲಿಸುವ ನೀಲಿ ಪೋಷಾಕು ತೊಟ್ಟಿದ್ದ ಜಾರ್ವೊ ಎಂ.ಎ. ಚಿದಂಬರಂ ಕ್ರೀಡಾಂಗಣ ಪ್ರವೇಶಿಸಿದರು. ಪಂದ್ಯ ಆರಂಭವಾಗಲು ಕೆಲವು ನಿಮಿಷಗಳಿದ್ದಾಗ ಪಿಚ್‌ನತ್ತ ಸಾಗಲು ಲೈನ್ ಅಪ್ ಮಾಡಿದ್ದ ಭಾರತ ತಂಡದ ಆಟಗಾರರ ಸಾಲಿನಲ್ಲಿ ಜಾರ್ವೊ ಸೇರಿಕೊಂಡ. ವಿರಾಟ್ ಕೊಹ್ಲಿ ಅವರಿಗೆ ನಿಕಟವಾಗಿ ನಿಲ್ಲುವ ಪ್ರಯತ್ನ ನಡೆಸಿದ್ದನ್ನು ತಂಡದ ಭದ್ರತಾ ಅಧಿಕಾರಿ ಗಮನಿಸಿದರು. ಕೂಡಲೇ ಧಾವಿಸಿ ಜಾರ್ವೊನನ್ನು ಹೊರಹೋಗುವಂತೆ ಎಚ್ಚರಿಸಿದರು. ಆಗ ಘಟನೆಯನ್ನು ಅರಿತ ವಿರಾಟ್ ಕ್ಷಣಕಾಲ ಅವಾಕ್ಕಾಗಿ ನಿಂತರು. ನಂತರ ಜಾರ್ವೊನನ್ನು ಕ್ರೀಡಾಂಗಣದಿಂದ ಹೊರಹಾಕಲಾಯಿತು.

ಬಿಗಿಭದ್ರತೆಯನ್ನು ದಾಟಿ ಅತಿ ಗಣ್ಯರ ಸ್ಥಳಕ್ಕೆ ಜಾರ್ವೊ ಪ್ರವೇಶಿಸಿದ್ದು ಅಚ್ಚರಿ ಮೂಡಿಸಿದೆ. ಇದು ಐಸಿಸಿ ಮತ್ತು ಬಿಸಿಸಿಐಗೆ ಮುಜುಗರವನ್ನೂ ಉಂಟುಮಾಡಿದೆ.

ಈ ಟೂರ್ನಿಯ ಉಳಿದೆಲ್ಲ ಪಂದ್ಯಗಳ ಪ್ರವೇಶದಿಂದ ಜಾರ್ವೊನನ್ನು ನಿರ್ಬಂಧಿಸಲಾಗಿದೆ. ಇಂಗ್ಲೆಂಡ್ ದೇಶದ ಜಾರ್ವೊ ಈ ರೀತಿ ಮಾಡುತ್ತಿರುವುದು ಇದೇ ಮೊದಲಲ್ಲ. ಇಂಗ್ಲೆಂಡ್‌ನಲ್ಲಿ ನಾಲ್ಕು ಬಾರಿ ಭದ್ರತೆಯನ್ನು ಉಲ್ಲಂಘಿಸಿದ್ದರು.



ಅಮುಲ್ ಅಫಘಾನಿಸ್ತಾನ ಕ್ರಿಕೆಟ್ ತಂಡದ ಪ್ರಾಯೋಜಕತ್ವ ವಹಿಸಿದೆ!

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 199 (49.3 ಓವರ್‌ಗಳಲ್ಲಿ)
ವಾರ್ನರ್ ಸಿ ಮತ್ತು ಬಿ ಕುಲದೀಪ್ ಯಾದವ್ 41 (52ಎ, 4X6)
ಮಾರ್ಷ್ ಸಿ ಕೊಹ್ಲಿ ಬಿ ಬೂಮ್ರಾ 0 (6ಎ)
ಸ್ಮಿತ್ ಬಿ ಜಡೇಜ 46 (71ಎ, 4X5)
ಲಾಬುಷೇನ್ ಸಿ ರಾಹುಲ್ ಬಿ ಜಡೇಜ 27 (41ಎ, 4X1)
ಮ್ಯಾಕ್ಸ್‌ವೆಲ್ ಬಿ ಕುಲದೀಪ್ 15 (25ಎ, 4X1)
ಅಲೆಕ್ಸ್ ಎಲ್‌ಬಿ ಬಿ ಜಡೇಜ 0 (2ಎ)
ಗ್ರೀನ್ ಸಿ ಹಾರ್ದಿಕ್ ಬಿ ಅಶ್ವಿನ್ 8 (20ಎ)
ಕಮಿನ್ಸ್ ಸಿ ಶ್ರೇಯಸ್ ಬಿ ಬೂಮ್ರಾ 15 (24ಎ, 4X1, 6X1)
ಸ್ಟಾರ್ಕ್ ಸಿ ಶ್ರೇಯಸ್ ಬಿ ಸಿರಾಜ್ 28 (35ಎ, 4X2, 6X1)
ಜಂಪಾ ಸಿ ಕೊಹ್ಲಿ ಬಿ ಹಾರ್ದಿಕ್ 6 (20ಎ)
ಹ್ಯಾಜಲ್‌ವುಡ್ ಔಟಾಗದೆ 1 (1ಎ)
ಇತರೆ: 12 (ಲೆಗ್‌ಬೈ 6, ವೈಡ್ 6)
ವಿಕೆಟ್ ಪತನ: 1–5 (ಮಿಚೆಲ್ ಮಾರ್ಷ್;2.2), 2–74 (ಡೇವಿಡ್ ವಾರ್ನರ್; 16.3), 3–110 (ಸ್ಟೀವನ್ ಸ್ಮಿತ್; 27.1), 4–119 (ಮಾರ್ನಸ್ ಲಾಬುಷೇನ್; 29.2), 5–119 (ಅಲೆಕ್ಸ್ ಕ್ಯಾರಿ; 29.4), 6–140 (ಗ್ಲೆನ್ ಮ್ಯಾಕ್ಸ್‌ವೆಲ್; 35.5), 7–140 (ಕ್ಯಾಮರಾನ್ ಗ್ರೀನ್;36.2), 8–165 (ಪ್ಯಾಟ್ ಕಮಿನ್ಸ್; 42.2), 9–189 (ಆ್ಯಡಂ ಜಂಪಾ; 48.2), 10–199 (ಮಿಚೆಲ್ ಸ್ಟಾರ್ಕ್; 49.3)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–0–35–2, ಮೊಹಮ್ಮದ್ ಸಿರಾಜ್ 6.3–1–26–1, ಹಾರ್ದಿಕ್ ಪಾಂಡ್ಯ 3–0–28–1, ಆರ್. ಅಶ್ವಿನ್ 10–1–34–1, ಕುಲದೀಪ್ ಯಾದವ್ 10–0–42–2, ರವೀಂದ್ರ ಜಡೇಜ 10–2–28–3

ಭಾರತ 4ಕ್ಕೆ201 (41.2 ಓವರ್‌ಗಳಲ್ಲಿ)
ರೋಹಿತ್ ಎಲ್‌ಬಿಡಬ್ಲ್ಯು ಬಿ ಹ್ಯಾಜಲ್‌ವುಡ್ 0 (6ಎ)
ಇಶಾನ್ ಸಿ ಗ್ರೀನ್ ಬಿ ಸ್ಟಾರ್ಕ್ 0 (1ಎ)
ವಿರಾಟ್ ಸಿ ಲಾಬುಷೇನ್ ಬಿ ಹ್ಯಾಜಲ್‌ವುಡ್ 85 (116ಎ, 4X6)
ಶ್ರೇಯಸ್ ಸಿ ವಾರ್ನರ್ ಬಿ ಹ್ಯಾಜಲ್‌ವುಡ್ 0 (3ಎ)
ರಾಹುಲ್ ಅಜೇಯ 97 (115ಎ, 4X8, 6X2)
ಹಾರ್ದಿಕ್ ಔಟಾಗದೆ 11 (8ಎ, 6X1)
ಇತರೆ: 8 (ಬೈ 1, ಲೆಗ್‌ಬೈ 1, ವೈಡ್ 5, ನೋಬಾಲ್ 1)
ವಿಕೆಟ್ ಪತನ: 1–2 (ಇಶಾನ್ ಕಿಶನ್; 0.4), 2–2 (ರೋಹಿತ್ ಶರ್ಮಾ; 1.3), 3–2 (ಶ್ರೇಯಸ್ ಅಯ್ಯರ್; 1.6), 4–167 (ವಿರಾಟ್ ಕೊಹ್ಲಿ; 37.4),
ಬೌಲಿಂಗ್: ಮಿಚೆಲ್ ಸ್ಟಾರ್ಕ್ 8–0–31–1, ಜೋಷ್ ಹ್ಯಾಜಲ್‌ವುಡ್ 9–1–38–3, ಪ್ಯಾಟ್ ಕಮಿನ್ಸ್ 6.2–0–33–0, ಗ್ಲೆನ್ ಮ್ಯಾಕ್ಸ್‌ವೆಲ್ 8–0–33–0, ಕ್ಯಾಮರಾನ್ ಗ್ರೀನ್ 2–0–11–0, ಆ್ಯಡಂ ಜಂಪಾ 8–0–53–0.

ಫಲಿತಾಂಶ: ಭಾರತಕ್ಕೆ 6 ವಿಕೆಟ್‌ಗಳ ಜಯ

ಹೈದರಾಬಾದಿನಲ್ಲಿ ಇಂದು ನೆದರ್ಲೆಂಡ್ಸ್ ವಿರುದ್ಧ ಹಣಾಹಣಿ; ಕಾನ್ವೆ, ರಚಿನ್ ಮೇಲೆ ಚಿತ್ತ

ಸುಲಭ ಜಯದ ನಿರೀಕ್ಷೆಯಲ್ಲಿ ನ್ಯೂಜಿಲೆಂಡ್

ಹೈದರಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಸೋಲಿಸುವುದರೊಂದಿಗೆ ಈ ಬಾರಿ ವಿಶ್ವಕಪ್ ಅಭಿಯಾನ ಅರಂಭಿಸಿರುವ ನ್ಯೂಜಿಲೆಂಡ್ ಸೋಮವಾರ ನೆದರ್ಲೆಂಡ್ಸ್ ಎದುರು ಆಡಲಿದೆ.

ಅಹಮದಾಬಾದಿನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಯುವಪ್ರತಿಭೆ ರಚಿನ್ ರವೀಂದ್ರ ಮತ್ತು ಡೇವೊನ್ ಕಾನ್ವೆ ಅವರು ಇಂಗ್ಲೆಂಡ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದರು. ದ್ವಿಶತಕದ ಜೊತೆಯಾಟವಾಡಿದ್ದರು. 2019ರಲ್ಲಿ ರನ್ನರ್ಸ್ ಅಪ್ ಆಗಿರುವ ತಂಡದಲ್ಲಿ ಅನುಭವಿ ಆಟಗಾರರು ಇದ್ದಾರೆ. ಆದ್ದರಿಂದ ಸ್ಕಾಟ್ ಎಡ್ವರ್ಡ್ಸ್ ನಾಯಕತ್ವದ ನೆದರ್ಲೆಂಡ್ಸ್ ಎದುರು ಕಿವೀಸ್ ಬಳಗವು ಸುಲಭ ಜಯ ಸಾಧಿಸುವ ಸಾಧ್ಯತೆ ಹೆಚ್ಚಿದೆ.

ಸ್ಕಾಟ್ ಬಳಗವು ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಸೋತಿತ್ತು. ಆದರೆ ತಂಡದ ಬೌಲರ್‌ಗಳು ಆ ಪಂದ್ಯದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಗುರಿ ಬೆನ್ನಟ್ಟಿದ್ದ ನೆದರ್ಲೆಂಡ್ಸ್ ತಂಡದ ಆರಂಭಿಕ ಬ್ಯಾಟರ್ ವಿಕ್ರಂಜೀತ್ ಸಿಂಗ್ ಮತ್ತು ಬಾಸ್ ಡಿ ಲೀಡ್ ಅರ್ಧಶತಕ ಗಳಿಸಿದ್ದರು.

ಆದರೆ ಉತ್ತಮ ಲಯದಲ್ಲಿರುವ ಕಿವೀಸ್ ತಂಡದ ಟ್ರೆಂಟ್ ಬೌಲ್ಟ್, ಮ್ಯಾಟ್ ಹೆನ್ರಿ ಮತ್ತು ಮಿಚೆಲ್ ಸ್ಯಾಂಟನರ್ ಅವರ ದಾಳಿಯನ್ನು ಎದುರಿಸುವ ಸವಾಲು ನೆದರ್ಲೆಂಡ್ಸ್ ಬ್ಯಾಟರ್‌ಗಳಿಗೆ ಇದೆ.

ಈ ಪಂದ್ಯದಲ್ಲಿಯೂ ಕೇನ್ ವಿಲಿಯಮ್ಸನ್ ಕಣಕ್ಕಿಳಿಯುತ್ತಿಲ್ಲ. ಅವರು ಗಾಯಗೊಂಡಿದ್ದು ಮೊದಲ ಪಂದ್ಯದಲ್ಲಿಯೂ ಆಡಿರಲಿಲ್ಲ. ಆದ್ದರಿಂದ ಟಾಮ್ ಲಥಾಮ್ ತಂಡವನ್ನು ಮುನ್ನಡೆಸಲಿದ್ದಾರೆ.

ಕಿವೀಸ್ ಪಾರಮ್ಯ: ಉಭಯ ತಂಡಗಳೂ ಏಕದಿನ ಕ್ರಿಕೆಟ್‌ನಲ್ಲಿ 4ಬಾರಿ ಮುಖಾಮುಖಿಯಾಗಿವೆ. ಎಲ್ಲ ಪಂದ್ಯಗಳಲ್ಲಿಯೂ ನ್ಯೂಜಿಲೆಂಡ್ ಗೆದ್ದಿದೆ.

ಪಿಚ್ ಹೇಗಿದೆ?: ರಾಜೀವಗಾಂಧಿ ಕ್ರೀಡಾಂಗಣದ ಪಿಚ್ ಮಧ್ಯಮ ವೇಗಿಗಳಿಗೇ ಹೆಚ್ಚು ನೆರವು ನೀಡುವ ಸ್ವಭಾವ ಹೊಂದಿದೆ. ಸಂಜೆ ತುಸು ಇಬ್ಬನಿ ಕೂಡ ಬೀಳುವುದರಿಂದ ಟಾಸ್ ಗೆದ್ದ ತಂಡದ ನಾಯಕ ಕೈಗೊಳ್ಳುವ ನಿರ್ಧಾರವೂ ಮುಖ್ಯವಾಗಲಿದೆ.

ನ್ಯೂಜಿಲೆಂಡ್ ತಂಡದ ರಚಿನ್ (ಎಡ) ತಾಲೀಮು ನಡೆಸಿದರು –ಪಿಟಿಐ ಚಿತ್ರ

ತಂಡಗಳು

ನ್ಯೂಜಿಲೆಂಡ್: ಟಾಮ್ ಲಥಾಮ್ (ನಾಯಕ–ವಿಕೆಟ್‌ಕೀಪರ್), ಡೆವೊನ್ ಕಾನ್ವೆ, ವಿಲ್ ಯಂಗ್, ರಚಿನ್ ರವೀಂದ್ರ, ಡೆರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪಮನ್, ಜೇಮ್ಸ್ ನಿಶಾಮ್, ಮಿಚೆಲ್ ಸ್ಯಾಂಟನರ್, ಮ್ಯಾಟ್ ಹೆನ್ರಿ, ಟ್ರೆಂಟ್ ಬೌಲ್ಟ್, ಈಶ ಸೋಧಿ, ಲಾಕಿ ಫರ್ಗ್ಯುಸನ್, ಟಿಮ್ ಸೌಥಿ

ನೆದರ್ಲೆಂಡ್ಸ್: ಸ್ಕಾಟ್ ಎಡ್ವರ್ಡ್ಸ್(ನಾಯಕ–ವಿಕೆಟ್‌ಕೀಪರ್), ವಿಕ್ರಂಜೀತ್ ಸಿಂಗ್, ಮ್ಯಾಕ್ಸ್ ಒಡೋವ್ಡ್, ಕಾಲಿನ್ ಎಕರ್ಮನ್, ಬಾಸ್ ಡಿ ಲೀಡ್, ತೇಜಾ ನಿಡಮಾನೂರು, ಸಕೀಬ್ ಝುಲ್ಫಿಕರ್, ರೊಲಾಫ್ ವ್ಯಾನ್ ಡೆರ್ ಮರ್ವೆ, ಲೊಗಾನ್ ವ್ಯಾನ್ ಬೀಕ್, ಆರ್ಯನ್ ದತ್, ಪಾಲ್ ವ್ಯಾನ್ ಮೀಕೆರೆನ್, ರಿಯಾನ್ ಕ್ಲೀನ್, ಶಾರೀಝ್ ಅಹಮದ್, ವೆಸ್ಲಿ ಬೆರೆಸಿ, ಸೈಬ್ರಾಂಡ್

ಪಂದ್ಯ ಆರಂಭ: ಮಧ್ಯಾಹ್ನ 2; ನೇರಪ್ರಸಾರ : ಸ್ಟಾರ್ ಸ್ಪೋರ್ಟ್ಸ್

ಮ್ಯಾರಥಾನ್: ಕಿಪ್ಟಮ್ ವಿಶ್ವದಾಖಲೆ

ಷಿಕಾಗೊ (ಎಎಫ್‌ಪಿ): ಕೆನ್ಯಾದ ಕೆಲ್ವಿನ್ ಕಿಪ್ಟಮ್ ಅವರು ಭಾನುವಾರ ನಡೆದ ಷಿಕಾಗೊ ಮ್ಯಾರಥಾನ್ ಓಟವನ್ನು 2 ಗಂಟೆ 35 ಸೆಕೆಂಡಗಳಲ್ಲಿ ಪೂರೈಸಿ ನೂತನ ವಿಶ್ವದಾಖಲೆ ಸ್ಥಾಪಿಸಿದರು. ಮಹಿಳಾ ವಿಭಾಗದಲ್ಲಿ ನೆದರ್ಲೆಂಡ್ಸ್ ಓಟಗಾರ್ತಿ ಸಿಫಾನ್ ಹಸನ್ ಇತಿಹಾಸದಲ್ಲೇ ಎರಡನೇ ಅತಿ ವೇಗದ ಅವಧಿ ದಾಖಲಿಸಿದರು.

ಕಿಪ್ಟಮ್ ಈ ಹಿಂದೆ ಸ್ವದೇಶದ ಇಲ್ಯುಡ್ ಕಿಪ್ಚೋಗೆ ಸ್ಥಾಪಿಸಿದ್ದ 2ಗಂ:01ನಿ:09 ಸೆ.ಗಳ ದಾಖಲೆಯನ್ನು ಮುರಿದರು. ಕಿಪ್ಚೋಗೆ 2022ರ ಬರ್ಲಿನ್ ಮ್ಯಾರಥಾನ್‌ನಲ್ಲಿ ಆ ದಾಖಲೆ ಸ್ಥಾಪಿಸಿದ್ದರು.

26.2 ಮೈಲು ದೂರದ ಈ ಓಟದಲ್ಲಿ ಕಿಪ್ಟಮ್, ಮೂರನೇ ಗೆಲುವು ದಾಖಲಿಸಿದ್ದಾರೆ. ವಲೆನ್ಸಿಯಾದಲ್ಲಿ ನಡೆದ ತಮ್ಮ ಮೊದಲ ಮ್ಯಾರಥಾನ್ ಓಟದಲ್ಲೇ ಅವರು ಗೆದ್ದಿದ್ದರು.

ಇಥಿಯೋಪಿಯಾ ಸಂಜಾತೆ ಹಸನ್ 2ಗಂಟೆ 12 ನಿಮಿಷ 44 ಸೆ.ಗಳಲ್ಲಿ ಓಟ ಪೂರೈಸಿ ಮಹಿಳಾ ವಿಭಾಗದಲ್ಲಿ ಕೂಟ ದಾಖಲೆ ಸ್ಥಾಪಿಸಿದರು.

ಬ್ಯಾಡ್ಮಿಂಟನ್: ಆಯುಷ್‌ಗೆ ಕಂಚು

ನವದೆಹಲಿ: ಭಾರತದ ಆಯುಷ್ ಶೆಟ್ಟಿ ಅವರು ಅಮೆರಿಕದಲ್ಲಿ ನಡೆದ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡರು.

ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅಯುಷ್ 18–21, 15–21 ರಿಂದ ಇಂಡೋನೇಷ್ಯಾದ ಅಲ್ವಿ ಫರ್ಹಾನ್ ಎದುರು ಸೋತರು.

ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಭಾರತದ 10ನೇ ಆಟಗಾರ ಎಂಬ ಗೌರವ ಆಯುಷ್‌ಗೆ ಒಲಿಯಿತು. ಈ ಟೂರ್ನಿಯಲ್ಲಿ ಭಾರತ ಇದುವರೆಗೆ 11 ಪದಕಗಳನ್ನು ಜಯಿಸಿದೆ. ಸೈನಾ ನೆಹ್ವಾಲ್ ಅವರು ಎರಡು ಸಲ (2006 ರಲ್ಲಿ ಬೆಳ್ಳಿ ಮತ್ತು 2008 ರಲ್ಲಿ ಚಿನ್ನ) ಪದಕ ಗೆದ್ದುಕೊಂಡಿದ್ದರು.

2022 ರಲ್ಲಿ ಸ್ಪೇನ್‌ನಲ್ಲಿ ನಡೆದಿದ್ದ ಚಾಂಪಿಯನ್‌ಷಿಪ್‌ನಲ್ಲಿ ಎಸ್.ಶಂಕರ್ ಮುತ್ತುಸ್ವಾಮಿ ಸುಬ್ರಮಣ್ಯನ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಜಯಿಸಿದ್ದರು.

ಆಯುಷ್ ಶೆಟ್ಟಿ

ಫುಟ್‌ಬಾಲ್: ಎಎಸ್‌ಸಿಗೆ ಗೆಲುವು

ಬೆಂಗಳೂರು: ಎಎಸ್‌ಸಿ ಸೆಂಟರ್ ಎಫ್‌ಸಿ ತಂಡದವರು ರಾಜ್ಯ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 2–1 ಗೋಲುಗಳಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವನ್ನು ಮಣಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಗೋಲು ಗಳಿಸಿದ ಜೇಕಬ್ ವನಲ್ (31ನೇ ನಿ.) ಮತ್ತು ದೀಪ್ ಮಜುಮ್ದಾರ್ (35) ಅವರು ಎಎಸ್‌ಸಿ ಗೆಲುವಿನಲ್ಲಿ ಗಮನ ಸೆಳೆದರು. ಮತ್ತೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 3–1 ಗೋಲುಗಳಿಂದ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಏಕದಿನ: ಲಿಸ್ಟ್ ‘ಎ’ ಪಂದ್ಯದಲ್ಲಿ 29 ಎಸೆತಗಳಲ್ಲಿ ಶತಕ

ಅಡಿಲೇಡ್ (ಎಪಿ): ದಕ್ಷಿಣ ಆಸ್ಟ್ರೇಲಿಯಾದ ಜೇಕ್ ಫ್ರೇಸರ್–ಮೆಕ್‌ಗುರ್ಕ್ ಅವರು ಆಸ್ಟ್ರೇಲಿಯಾದ ದೇಶೀಯ ಕ್ರಿಕೆಟ್ ಪಂದ್ಯದಲ್ಲಿ ಭಾನುವಾರ ಟಾಸ್ಮೇನಿಯಾ ವಿರುದ್ಧ ಕೇವಲ 29 ಎಸೆತಗಳಲ್ಲಿ ಶತಕ ಗಳಿಸಿದರು. ಆ ಮೂಲಕ ಲಿಸ್ಟ್ ‘ಎ’ ಕ್ರಿಕೆಟ್ ಪಂದ್ಯದಲ್ಲಿ ಅತಿ ವೇಗದ ಶತಕ ದಾಖಲಿಸಿದ ಗೌರವಕ್ಕೆ ಪಾತ್ರರಾದರು.

ಕರೆನ್ ರೋಲ್ಟನ್ ಓವಲ್‌ನಲ್ಲಿ ನಡೆದ ಪಂದ್ಯದಲ್ಲಿ ಅವರು ಎಂಟನೇ ಓವರ್‌ನಲ್ಲೇ ಶತಕ ಬಾರಿಸಿ, 31 ಎಸೆತಗಳಲ್ಲಿ ಶತಕ ಬಾರಿಸಿದ್ದ ದಕ್ಷಿಣ ಆಫ್ರಿಕಾದ ಎಬಿ ಡಿ ವಿಲಿಯರ್ಸ್ ಹೆಸರಿನಲ್ಲಿದ್ದ ದಾಖಲೆ ಸುಧಾರಿಸಿದರು. ಡಿ ವಿಲಿಯರ್ಸ್, 2015ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಈ ಮೈಲಿಗಲ್ಲು ಸ್ಥಾಪಿಸಿದ್ದರು.

21 ವರ್ಷದ ಜೇಕ್ ಫ್ರೇಸರ್ 18 ಎಸೆತಗಳಲ್ಲಿ ಅರ್ಧ ಶತಕ ದಾಟಿದ್ದು, ನಂತರದ 11 ಎಸೆತಗಳಲ್ಲಿ ಮೂರಂಕಿ ತಲುಪಿದರು. ಒಂದೇ ಓವರ್‌ನಲ್ಲಿ 32 ರನ್ ಕೂಡ ಚಚ್ಚಿದ ಅವರು ಅಂತಿಮವಾಗಿ 38 ಎಸೆತಗಳಲ್ಲಿ 125 ರನ್ ಗಳಿಸಿ ಔಟಾದರು. ಅವರ ಮಿಂಚಿನ ಇನಿಂಗ್ಸ್‌ನಲ್ಲಿ 10 ಬೌಂಡರಿ, 13 ಸಿಕ್ಸರ್‌ಗಳಿದ್ದವು.

ಆದರೆ ಈ ಸ್ಫೋಟಕ ಬ್ಯಾಟಿಂಗ್ ದಕ್ಷಿಣ ಆಸ್ಟ್ರೇಲಿಯಾ ನೆರವಿಗೆ ಬರಲಿಲ್ಲ ಟಾಸ್ಮೇನಿಯಾದ ಭಾರಿ ಮೊತ್ತಕ್ಕೆ (435/9) ಉತ್ತರವಾಗಿ ಆ ತಂಡ 46.4 ಓವರುಗಳಲ್ಲಿ 398 ರನ್‌ಗಳಿಗೆ ಆಲೌಟ್ ಆಯಿತು.

ಟಿ20 ವಿಶ್ವಕಪ್‌ಗೆ ಕೆನಡಾ ಅರ್ಹತೆ

ಮಾಂಟ್ರಿಯಲ್ (ಎಎಫ್‌ಪಿ): ಕೆನಡಾ ತಂಡ ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಅರ್ಹತೆ ಪಡೆದುಕೊಂಡಿದೆ.

ಅರ್ಹತಾ ಹಂತದ ತನ್ನ ಕೊನೆಯ ಪಂದ್ಯದಲ್ಲಿ 39 ರನ್‌ಗಳಿಂದ ಬರ್ಮುಡಾ ತಂಡವನ್ನು ಮಣಿಸಿ ಈ ಸಾಧನೆ ಮಾಡಿತು. ಕೆನಡಾ ತಂಡ ಟಿ20 ವಿಶ್ವಕಪ್‌ಗೆ ಅರ್ಹತೆ ಪಡೆದಿರುವುದು ಇದೇ ಮೊದಲು. ಈ ಹಿಂದೆ ಏಕದಿನ ವಿಶ್ವಕಪ್‌ನಲ್ಲಿ ಆಡಿದ್ದ ತಂಡ, 2011ರ ಬಳಿಕ ಯಾವುದೇ ಪ್ರಮುಖ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಭಾಗವಹಿಸಿಲ್ಲ.